ಬುಧವಾರ, ಫೆಬ್ರುವರಿ 12, 2025 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವೀಕ್ಷಣೆ...

ಯಲಹಂಕದಲ್ಲಿ ನಡೆಯುತ್ತಿರುವ ಏರೊ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ಮಂಗಳವಾರ ಮಹಿಳೆಯೊಬ್ಬರು ವಿಮಾನಗಳ ಕಸರತ್ತು ವೀಕ್ಷಿಸಿದರು



ಅನುಕ್ರಮ ನೋಂದಣಿ ಸಂಖ್ಯೆ- ಕೆಪಿಎಸ್‌ಸಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿಯ 384 ಹುದ್ದೆಗಳ ಆಯ್ಕೆಗೆ ನಡೆದ ಪೂರ್ವಭಾವಿ ಮರು ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:15 ಅನುಪಾತದಲ್ಲಿ ಅರ್ಹರಾಗಿರುವ ಕೆಲವು ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಅನುಕ್ರಮವಾಗಿರಲು ಅಂಗವಿಕಲ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಕಾರಣ ಎಂದು ಕೆಪಿಎಸ್‌ಸಿ ಸ್ಪಷ್ಟನೆ ನೀಡಿದೆ.

ಅನುಕ್ರಮವಾಗಿ ನೋಂದಣಿ ಸಂಖ್ಯೆಯ ಅಭ್ಯರ್ಥಿಗಳು ಆಯ್ಕೆ ಆಗಿರುವುದಕ್ಕೆ ಕೆಲವು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅದಕ್ಕೆ ಸ್ಪಷ್ಟನೆ ನೀಡಿರುವ ಕೆಪಿಎಸ್‌ಸಿ, 'ಅಂಗವಿಕಲ ಅಭ್ಯರ್ಥಿಗಳಿಗೆ ಅವರ ಅಗತ್ಯಗಳಿಗೆ ಅನುಗುಣವಾಗಿ ಪರೀಕ್ಷೆ ಬರೆಯಲು ಅನುಕೂಲವಾಗುವಂತೆ ಪ್ರತಿ ಜಿಲ್ಲೆಯಲ್ಲಿ ವಿಶೇಷ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ಪರೀಕ್ಷೆಗೆ ಹಾಜರಾಗುವ ಅಂತಹ ಅಂಗವಿಕಲ ಅಭ್ಯರ್ಥಿಗಳ ಸಂಖ್ಯೆ ಸೀಮಿತ ಆಗಿರುವುದರಿಂದ, ಪರೀಕ್ಷೆಯಿಂದ ವಂಚಿತರಾಗದಂತೆ ನೋಡಿಕೊಳ್ಳಲು ಈ ವ್ಯವಸ್ಥೆ ಮಾಡಲಾಗಿತ್ತು' ಎಂದು ತಿಳಿಸಿದೆ.

'ಇತರೆ ಪರೀಕ್ಷಾ ಕೇಂದ್ರಗಳಿಗೆ ಹೋಲಿಸಿದರೆ ಇಂತಹ ಪರೀಕ್ಷಾ ಕೇಂದ್ರಗಳಲ್ಲಿನ ಅಂಗವಿಕಲ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಅರ್ಹತಾ ಪಟ್ಟಿಯಲ್ಲಿ ಕೆಲವು ಕಡೆಗಳಲ್ಲಿ ನೋಂದಣಿ ಸಂಖ್ಯೆಗಳು ಅನುಕ್ರಮವಾಗಿದೆ. ಕೆಲವು ಅಂಗವಿಕಲ ವರ್ಗದಲ್ಲಿ (ದೃಷ್ಟಿಹೀನತೆ) ಅಗತ್ಯಕ್ಕಿಂತ ಕಡಿಮೆ ಸಂಖ್ಯೆಯ ಅಭ್ಯರ್ಥಿಗಳಿದ್ದಾರೆ' ಎಂದಿದೆ.

ಕೇಂದ್ರ–ರಾಜ್ಯ ಸರ್ಕಾರದ ವಿರುದ್ಧ ಕಿಡಿ

'ನಮ್ಮ ಮೆಟ್ರೊ' ಪ್ರಯಾಣ ದರವನ್ನು ಎಷ್ಟು ಹೆಚ್ಚಳ ಮಾಡಿದೆ ಎಂಬ ಬಗ್ಗೆ ಲೆಕ್ಕಾಚಾರ ಇಲ್ಲದೇ ಮೆಟ್ರೊದಲ್ಲಿ ಪ್ರಯಾಣಿಸಿದಾಗ ಬೆಲೆ ದುಪ್ಪಟ್ಟಾಗಿರುವುದನ್ನು ಕಂಡು ಪ್ರಯಾಣಿಕರು ಅವಕ್ಕಾಗಿದ್ದಾರೆ. ದುಬಾರಿ ದರ ನಿಗದಿ ಮಾಡಿರುವುದನ್ನು ಖಂಡಿಸಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.



ಮೆಟ್ರೊ ಪ್ರಯಾಣ ದರ ಹೆಚ್ಚಳ

ನಮ್ಮ ಮೆಟ್ರೊ ನಷ್ಟದಲ್ಲಿದೆಯೇ ?



'ನಮ್ಮ ಮೆಟ್ರೊ' ಪ್ರಯಾಣ ದರ ಶೇಕಡ 47ರಷ್ಟಲ್ಲ, ಕೆಲವು ಕಡೆ ಶೇ 80 ರಿಂದ 100ರಷ್ಟು ಏರಿಕೆ ಯಾಗಿದೆ. ನಾನು ಪ್ರತಿ ದಿನ ಮೆಟ್ರೊ ರೈಲಿನಲ್ಲಿ ಮೈಸೂರು ರಸ್ತೆ ನಿಲ್ದಾಣದಿಂದ ವಿಶ್ವೇಶ್ವರಯ್ಯ ನಿಲ್ದಾಣಕ್ಕೆ ₹26 ಕೊಟ್ಟು ಪ್ರಯಾಣಿಸುತ್ತಿದ್ದೆ. ಈಗ ಇಷ್ಟೇ ದೂರಕ್ಕೆ ₹47 ಕೊಡಬೇಕಾಗಿದೆ. ಅಂದರೆ ದರ ಶೇ 80ರಷ್ಟು ಏರಿಕೆಯಾದಂತಾಯಿತು. ದರ ಏರಿಕೆಗೆ ರಾಜ್ಯ ಸರ್ಕಾರ ಕಾರಣ ಎಂದು ಬಿಜೆಪಿಯವರು, ಕೇಂದ್ರ ಸರ್ಕಾರ ಕಾರಣವೆಂದು ಕಾಂಗ್ರೆಸ್‌ನವರು ದೂಷಿಸುತ್ತಾ ಜನರನ್ನು ಮಂಗ ಮಾಡುತ್ತಿದ್ದಾರೆ. ಬಡವರು, ಮಧ್ಯಮ ವರ್ಗದವರನ್ನು ಹೀಗೆ ಲೂಟಿ ಮಾಡಲು ಹೊರಟಿರುವುದು ಸರಿಯಾದ ಕ್ರಮವಲ್ಲ. ಅಷ್ಟಕ್ಕೂ ನಮ್ಮ ಮೆಟ್ರೊ ನಷ್ಟದಲ್ಲಿದೆಯೇ?

ಜವರಾಯಿಗೌಡ, ನಾಗರಬಾವಿ ಬಡಾವಣೆ

'ಒಳ್ಳೆಯ ಕ್ರಮವಲ್ಲ'



ಸಾರ್ವಜನಿಕ ಸಾರಿಗೆ ಸಂಚಾರ ಯಾವಾಗಲೂ ಕಡಿಮೆ ದರದಲ್ಲಿ ಇದ್ದರೆ ಅದು ಜನರಿಗೆ ಅನುಕೂಲ ಕರ. ನಗರದ ದಟ್ಟಣೆ ಮತ್ತು ಮಾಲಿ ನ್ಯ ನಿಯಂತ್ರ ಣಕ್ಕೂ ಸಹಕಾರಿಯಾಗುತ್ತದೆ. ಯಾವುದೇ ಸರ್ಕಾರವಾಗಲಿ ಜನರಿಗೆ ಸಾರ್ವಜನಿಕ ಸಾರಿಗೆಯನ್ನು ಬಳಸಲು ಉತ್ತೇಜನ ನೀಡಬೇಕು. ಅದಕ್ಕೆ ಪೂರಕವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಹೀಗೆ ಮೆಟ್ರೊ ರೈಲು, ಬಸ್ ಪ್ರಯಾಣ ದರವನ್ನು ಹೆಚ್ಚಿಸುವ ಕ್ರಮ ಒಳ್ಳೆಯದಲ್ಲ.

ಸಿದ್ದಣ್ಣ ಪೂಜಾರಿ,

'ಸಂಚಾರ ದಟ್ಟಣೆ ಹೆಚ್ಚಾಗುತ್ತದೆ'



ಮೆಟ್ರೊ ರೈಲು ಪ್ರಯಾಣ ದರವನ್ನು ಪ್ರತಿ ವರ್ಷ ಶೇಕಡ 5ರಷ್ಟು ಏರಿಕೆ ಮಾಡುತ್ತಾ ಬಂದಿದ್ದರೆ ಜನರಿಗೆ ಇಷ್ಟೊಂದು ಹೊರೆ ಅನಿಸುತ್ತಿರಲಿಲ್ಲ. ಏಕಾಏಕಿ ಇಷ್ಟೊಂದು ದರ ಏರಿಸಿರುವುದು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದರಿಂದ ಸಾರ್ವಜನಿಕರು ಸ್ವಂತ ವಾಹನದಲ್ಲಿ ಓಡಾಡುವ ಪ್ರವೃತ್ತಿ ಹೆಚ್ಚು ಮಾಡುತ್ತಾರೆ. ಇದರಿಂದ ಮತ್ತಷ್ಟು ಸಂಚಾರ ದಟ್ಟಣೆ ಉಂಟಾಗುತ್ತದೆ. ಜನಪ್ರತಿನಿಧಿಗಳು, ಅಧಿಕಾರಿಗಳು ಈ ಬಗ್ಗೆ ಚಿಂತಿಸಿ ಆದಷ್ಟು ಬೇಗ ದರ ಕಡಿಮೆ ಮಾಡಬೇಕು.

ಬಸವರಾಜು ಎಂ.ಎನ್., ರಾಜರಾಜೇಶ್ವರಿ ನಗರ

'ಆರೋಗ್ಯ ಸಮಸ್ಯೆಗೆ ಕಾರಣ'



ವಿವೇಚನಾರಹಿತ 'ಪಂಚ ಗ್ಯಾರಂಟಿ'ಗಳ ಜಾರಿಯಿಂದ ಉಂಟಾಗಿರುವ ಹಣದ ಕೊರತೆಯನ್ನು ಸರಿದೂಗಿಸಲು ಸರ್ಕಾರ ಮತ್ತೆ ವಿವೇಚನಾರಹಿತ ಹಾಗೂ ಅವೈಜ್ಞಾನಿಕವಾಗಿ ಮೆಟ್ರೊ ರೈಲು ಪ್ರಯಾಣ ದರ ಏರಿಸಿದೆ. ಇದು ಸರಿಯಲ್ಲ. ಇದುವರೆಗೂ ಪ್ರಯಾಣಿಕ ಸ್ನೇಹಿ ದರಕ್ಕೆ ಒಗ್ಗಿಕೊಂಡ ಲಕ್ಷಾಂತರ ಮಂದಿ ಇನ್ನು ಈ ದರ ಏರಿಕೆಯಿಂದಾಗಿ ಸಾರ್ವಜನಿಕ ಸಾರಿಗೆಯಿಂದ ವಿಮುಖರಾಗಿ, ಸ್ವಂತ ವಾಹನಗಳನ್ನು ಅವಲಂಬಿಸುತ್ತಾರೆ. ಇದರಿಂದ ವಾಹನ ದಟ್ಟಣೆ ಹೆಚ್ಚಾಗಿ, ನಗರದಲ್ಲಿ ಆರೋಗ್ಯ ಸಮಸ್ಯೆಯೂ ಕಾಡಬಹುದು.

ಬಿ.ರಮೇಶ್, ಸಪ್ತಗಿರಿ ಲೇಔಟ್, ಉತ್ತರಹಳ್ಳಿ

'ಪರ್ಯಾಯ ವ್ಯವಸ್ಥೆ ಅನಿವಾರ್ಯ'



ಮೆಟ್ರೊ ಪ್ರಯಾಣದಿಂದ ಸಮಯ ಉಳಿತಾಯವಾಗುವ ಜೊತೆಗೆ ಸಕಾಲಕ್ಕೆ ಗಮ್ಯ ತಲುಪುವ ಭರವಸೆ ಇರುತ್ತದೆ. ಹಾಗಾಗಿ ನಾನು ತುರ್ತು ಸಂದರ್ಭಗಳಲ್ಲಿ ಮೆಟ್ರೊ ರೈಲಿನಲ್ಲಿ ಸಂಚರಿಸುತ್ತಿದ್ದೆ. ಈಗ ಪ್ರಯಾಣ ದರ ಏರಿಸಿದ್ದಾರೆ. ಇನ್ನು ಮುಂದೆ ಇದೇ ಖರ್ಚಲ್ಲಿ ಆಟೊದಲ್ಲಿ ಓಡಾಡಬಹುದು. ಅದೇ ಹಣದಲ್ಲಿ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಸ್ವಲ್ಪ ಮುಂಚಿತವಾಗಿ ಮನೆಯಿಂದ ಹೊರಡುತ್ತೇನೆ. ಹೀಗೆ ಬರೆಯ ಮೇಲೆ ಬರೆ ಹಾಕುವ ಸರ್ಕಾರದ ನಿಲುವು ಎಷ್ಟು ಸರಿ?

ಮಂಜುಳಾ ಎಚ್.ವಿ, ಬೆಂಗಳೂರು

'ಸರ್ಕಾರಗಳ ವರ್ತನೆ ನಾಚಿಕೆಗೇಡು'



'ನಮ್ಮ ಮೆಟ್ರೊ' ನ್ಯಾಯಯುತವಾಗಿ ಟಿಕೆಟ್ ದರ ನಿಗದಿಪಡಿಸಿದಾಗ ಅದು ಸಾರ್ವಜನಿಕ ಸೇವೆ ಎಂದೆನಿಸಿಕೊಳ್ಳುತ್ತದೆ. ಈ ರೀತಿ, ಬೇಕಾಬಿಟ್ಟಿಯಾಗಿ ಟಿಕೆಟ್ ದರ ಏರಿಸಿದರೆ ಅದು ಯಾರದ್ದೋ ಹಿತಾಸಕ್ತಿಗಾಗಿ ನಡೆಸುತ್ತಿರುವ ಉದ್ಯಮದಂತೆ ತೋರುತ್ತದೆ. ಬಡ ಮತ್ತು ಮಧ್ಯಮ ವರ್ಗದ ಹಿತ ಕಾಯಬೇಕಿದ್ದ ಸರ್ಕಾರಗಳು ಈ ರೀತಿ ವರ್ತಿಸುತ್ತಿರುವುದು ನಾಚಿಕೆಗೇಡು.

ಸುರೇಶ, ಹುಳಿಮಾವು

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: **96060 38256**

ಬಿಎಂಆರ್‌ಸಿಎಲ್ ಸ್ವಾಯತ್ತ ಸಂಸ್ಥೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

'ಪ್ರಯಾಣ ದರ ಹೆಚ್ಚಳ ನಮ್ಮ ಕೈಯಲ್ಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಳದ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿ ಇಲ್ಲ. ಕೇಂದ್ರ ಮತ್ತು ಕರ್ನಾಟಕ ಸರ್ಕಾರ ಜೊತೆಗೂಡಿ ಸ್ಥಾಪಿಸಿರುವ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಪ್ರಯಾಣ ದರ ಹೆಚ್ಚಿಸಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ.

'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಳಕ್ಕೆ ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ, 'ಬಿಎಂಆರ್‌ಸಿಎಲ್ ಸ್ವಾಯತ್ತ ಸಂಸ್ಥೆಯಾಗಿದ್ದು ಅದರ ಮೇಲೆ ರಾಜ್ಯ ಸರ್ಕಾರಕ್ಕೆ ಪೂರ್ಣ ನಿಯಂತ್ರಣಾಧಿಕಾರ ಇಲ್ಲ. ಪ್ರಯಾಣ ದರ ಹೆಚ್ಚಳದ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿ ಇರುತ್ತಿದ್ದರೆ ಬಿಎಂಆರ್‌ಸಿಎಲ್ ನಮಗೆ ಪತ್ರ ಬರೆಯದೆ, ಕೇಂದ್ರಕ್ಕೆ ಯಾಕೆ ಪತ್ರ ಬರೆಯುತ್ತಿತ್ತು' ಎಂದು ಪ್ರಶ್ನಿಸಿದ್ದಾರೆ.

'ಕೇಂದ್ರ ನಗರ ಮತ್ತು ವಸತಿ ವ್ಯವಹಾರ ಇಲಾಖೆಯ ಕಾರ್ಯದರ್ಶಿ ಶ್ರೀನಿವಾಸ ಕಟಿಕಿಥಲ ಅವರು ಬಿಎಂಆರ್‌ಸಿಎಲ್ ಅಧ್ಯಕ್ಷರು. ವ್ಯವಸ್ಥಾಪಕ ನಿರ್ದೇಶಕ ಮತ್ತು ನಿರ್ದೇಶಕರ ಸ್ಥಾನದಲ್ಲಿ ಕೇಂದ್ರ ಮತ್ತು ರಾಜ್ಯದ ಅಧಿಕಾರಿಗಳಿದ್ದಾರೆ. 2017ರ ನಂತರ ಮೆಟ್ರೊ ರೈಲಿನ ಪ್ರಯಾಣ ದರ ಪರಿಷ್ಕರಿಸಿಲ್ಲ. ಹೀಗಾಗಿ, ದರ ಪರಿಷ್ಕರಿಸುವಂತೆ ಕೇಂದ್ರ ಸರ್ಕಾರಕ್ಕೆ ಬಿಎಂಆರ್‌ಸಿಎಲ್ ಪತ್ರ ಬರೆದಿತ್ತು' ಎಂದು ಅವರು ವಿವರಿಸಿದ್ದಾರೆ.

'ಕೇಂದ್ರ ಸರ್ಕಾರವು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್. ಥರಾನಿ ಅವರ ಅಧ್ಯಕ್ಷತೆಯಲ್ಲಿ ದರ ಪರಿಷ್ಕರಣಾ ಸಮಿತಿ ರಚಿಸಿ, ಮೂರು ತಿಂಗಳ ಒಳಗೆ ಶಿಫಾರಸು ಸಲ್ಲಿಸುವಂತೆ ತಿಳಿಸಿತ್ತು. ಬಿಎಂಆರ್‌ಸಿಎಲ್ ಅಧಿಕಾರಿಗಳು ಮತ್ತು ದೆಹಲಿ ಹಾಗೂ ಚೆನ್ನೈ ಮೆಟ್ರೊ ಸಂಸ್ಥೆಗಳ ಅಧಿಕಾರಿಗಳ ಜೊತೆ ಕಾರ್ಯಾಚರಣೆ ಮತ್ತು ಪ್ರಯಾಣ ದರದ ಬಗ್ಗೆ ಸಮಾಲೋಚನೆ ನಡೆಸಿ ಈ ಸಮಿತಿ 2024ರ ಡಿ. 16ರಂದು ವರದಿ ಸಲ್ಲಿಸಿತ್ತು' ಎಂದಿದ್ದಾರೆ.

'ಸದ್ಯ ನಮ್ಮ ಮೆಟ್ರೊ ಪ್ರಯಾಣ ದರ ಕನಿಷ್ಠ ₹10 ಮತ್ತು ಗರಿಷ್ಠ ₹90. ಮುಂಬೈ ಮೆಟ್ರೊ ರೈಲಿನ ಕನಿಷ್ಠ ಪ್ರಯಾಣ ದರ ₹10 ಮತ್ತು ಗರಿಷ್ಠ ಪ್ರಯಾಣ ದರ ₹80 ಆಗಿದೆ. ದೆಹಲಿ ಮೆಟ್ರೊ ಹೊರತುಪಡಿಸಿ ಉಳಿದೆಲ್ಲ ರಾಜ್ಯಗಳಲ್ಲಿ ಮೊದಲ ಹಂತದ ಪ್ರಯಾಣ ದರವನ್ನು ಆಯಾ ರಾಜ್ಯಗಳ ಮೆಟ್ರೊ ನಿಗಮಗಳೇ ನಿಗದಿಪಡಿಸಿತ್ತು. ಈಗ ಪ್ರಯಾಣ ದರವನ್ನು ಕೇಂದ್ರ ಸರ್ಕಾರ ನೇಮಿಸುವ ಸಮಿತಿ ನಿಗದಿಪಡಿಸುತ್ತದೆ. ಮೆಟ್ರೊ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆಯ ಸೆಕ್ಷನ್ 37ರ ಪ್ರಕಾರ ಪ್ರಯಾಣ ದರ ನಿಗದಿ ಸಮಿತಿ ನೀಡಿದ ವರದಿಯನ್ನು ಮೆಟ್ರೊ ರೈಲು ನಿಗಮಗಳು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿದೆ' ಎಂದೂ ಅವರು ತಿಳಿಸಿದ್ದಾರೆ.

'ಆತ್ಮವಂಚಕ ನಡವಳಿಕೆ'



'ರಾಜ್ಯದ ಬಿಜೆಪಿ ನಾಯಕರು ರಾಜಕೀಯ ದುರುದ್ದೇಶದಿಂದ ಸುಳ್ಳು ಮಾಹಿತಿಗಳನ್ನು ನೀಡಿ ಸಾರ್ವಜನಿಕರ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿರುವುದು ಅಕ್ಷಮ್ಯ. ಒಂದೆಡೆ ಮೆಟ್ರೊ ರೈಲು ನಿರ್ಮಾಣದ ಸಾಧನೆ ಕೇಂದ್ರದ ಬಿಜೆಪಿ ಸರ್ಕಾರದ್ದು ಎಂದು ಡಂಗುರ ಬಾರಿಸುತ್ತಿರುವ ಬಿಜೆಪಿ ನಾಯಕರು, ದರ ಪರಿಷ್ಕರಣೆ ವಿರುದ್ಧ ಜನಾಕ್ರೋಶ ವ್ಯಕ್ತವಾಗುತ್ತಿರುವುದನ್ನು ಕಂಡು ಅದರ ಜವಾಬ್ದಾರಿಯನ್ನು ರಾಜ್ಯ ಸರ್ಕಾರದ ಮೇಲೆ ಹೊರಿಸುತ್ತಿರುವುದು ಆತ್ಮವಂಚಕ ನಡವಳಿಕೆ' ಎಂದು ಮುಖ್ಯಮಂತ್ರಿ ಟೀಕಿಸಿದ್ದಾರೆ.

ದರ ಇಳಿಸಿ: ತೇಜಸ್ವಿ ಸೂರ್ಯ



ನವದೆಹಲಿ: ಬೆಂಗಳೂರಿನ ನಮ್ಮ ಮೆಟ್ರೊ ಪ್ರಯಾಣ ದರವನ್ನು ಭಾರಿ ಪ್ರಮಾಣದಲ್ಲಿ ಏರಿಸಿರುವುದು ಅವೈಜ್ಞಾನಿಕ. ಅದನ್ನು ಕೂಡಲೇ ಮರುಪರಿಶೀಲನೆ ಮಾಡಬೇಕು ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಆಗ್ರಹಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ನಮ್ಮ ಮೆಟ್ರೊ ಪ್ರಯಾಣ ದರ ಪರಿಷ್ಕರಿಸಲು ಶುಲ್ಕ ನಿಗದಿ ಸಮಿತಿ ರಚಿಸುವಂತೆ ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿತ್ತು. ಆ ಸಮಿತಿಯು ದರ ಹೆಚ್ಚಳಕ್ಕೆ ಅನುಮತಿ ನೀಡಿದೆ. ಕೆಲವು ಕಡೆಗಳಲ್ಲಿ ಶೇ 100ರಷ್ಟು ಪ್ರಯಾಣ ದರ ಹೆಚ್ಚಳ ಮಾಡಲಾಗಿದೆ' ಎಂದು ದೂರಿದರು.

ನಂತರ, ಅವರು ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಸಾರ್ವಜನಿಕ ಸಾರಿಗೆ ಕೈಗೆಟುಕುವ ದರದಲ್ಲಿರಬೇಕು ಮತ್ತು ಅದು ಸಾಮಾನ್ಯ ಜನರಿಗೆ ಸುಲಭವಾಗಿ ಲಭ್ಯವಾಗಬೇಕು ಎಂದು ಸೂರ್ಯ ಹೇಳಿದರು.



'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಿಸಿರುವುದನ್ನು ವಿರೋಧಿಸಿ ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೌಮ್ಯಾ ರೆಡ್ಡಿ ನೇತೃತ್ವದಲ್ಲಿ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು

ದರ ಹೆಚ್ಚಳ: ಮಹಿಳಾ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಿಸಿರುವುದನ್ನು ವಿರೋಧಿಸಿ ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೌಮ್ಯಾ ರೆಡ್ಡಿ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಜಯನಗರ ಮೆಟ್ರೊ ನಿಲ್ದಾಣ ಬಳಿ ಪ್ರಯಾಣಿಕರಿಗೆ ಗುಲಾಬಿ ಕೊಡುವುದರ ಮೂಲಕ ದರ ಹೆಚ್ಚಳ ವಿರುದ್ಧ ಪ್ರತಿಭಟಿಸಿದರು.

'ಕೇಂದ್ರದ ಶಿಫಾರಸ್ಸಿನಂತೆ ಶೇ.46 ರಷ್ಟು ಟಿಕೆಟ್ ದರ ಹೆಚ್ಚಿಸಿ, ಬಡವರ ಹೊಟ್ಟೆ ಮೇಲೆ ಹೊಡೆಯುವ ಕೆಲಸ ಮಾಡಲಾಗಿದೆ. ಪ್ರತಿ ಬಾರಿ ತಪ್ಪು ಮಾಡಿ, ಕಾಂಗ್ರೆಸ್ ತಲೆಗೆ ಕಟ್ಟುವುದು ಬಿಜೆಪಿ ಚಾಳಿ' ಎಂದು ಸೌಮ್ಯಾ ರೆಡ್ಡಿ ಆರೋಪಿಸಿದರು. ಬಳಿಕ ಸೌಮ್ಯಾ ರೆಡ್ಡಿ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
'ಸೋರಾ' ಕೃತಕ ಬುದ್ಧಿಮತ್ತೆಯ ನೆರವಿನಿಂದ ಸಂಪೂರ್ಣ ಚಲನಚಿತ್ರವನ್ನೇ ನಿರ್ಮಿಸಬಹುದು!



ಆಳ-ಅಗಲ: ಕ್ರೆಡಿಟ್ ಸ್ಕೋರ್: ಬ್ಯಾಂಕಿಂಗ್ ಕ್ಷೇತ್ರಕ್ಕೆ ಅನಿವಾರ್ಯ ಏಕೆ?
ಹೈಕೋರ್ಟ್‌ಗೆ ನ್ಯಾಕುನ್ಹಾ ವರದಿ ಸಲ್ಲಿಕೆ 9
ಅಧಿಕಾರಿಗೆ ಬೆದರಿಕೆ, ಮೂವರ ಬಂಧನ 6

ಸೆನ್ಸೆಕ್ಸ್	ನಿಫ್ಟಿ	₹/$
76,293	23,071	86.79

'ಇನ್ವೆಸ್ಟ್ ಕರ್ನಾಟಕ–2025'ಕ್ಕೆ ಚಾಲನೆ • ಮೊದಲ ದಿನವೇ ₹3.14 ಲಕ್ಷ ಕೋಟಿ ಹೂಡಿಕೆ ಒಪ್ಪಂದ

ಬಂಡವಾಳ ಹರಿವಿಗೆ ತೆರೆದ ಬಾಗಿಲು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 'ಇನ್ವೆಸ್ಟ್ ಕರ್ನಾಟಕ–2025' ಜಾಗತಿಕ ಹೂಡಿಕೆದಾರರ ಸಮಾವೇಶದ ಮೊದಲ ದಿನವಾದ ಮಂಗಳವಾರ ಅಂದಾಜು ₹3.14 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಹೆಸರಾಂತ ಕಂಪನಿಗಳು ಒಪ್ಪಂದಕ್ಕೆ ಸಹಿ ಹಾಕಿದವು. ಸಮಾವೇಶದ ಉಳಿದ ದಿನಗಳಲ್ಲಿ ಇನ್ನಷ್ಟು ಕಂಪನಿಗಳು ದೊಡ್ಡ ಮೊತ್ತದ ಬಂಡವಾಳ ಹೂಡಿಕೆಗೆ ಮುಂದೆ ಬರಲಿವೆ ಎಂಬ ನಿರೀಕ್ಷೆಗಳೂ ಗರಿಗೆದರಿದವು.

ದೇಶ–ವಿದೇಶಗಳ ಉದ್ಯಮಿಗಳು, ಸಚಿವರ ಸಮ್ಮುಖದಲ್ಲಿ ಇಲ್ಲಿ ಆರಂಭಗೊಂಡ ಸಮಾವೇಶಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಚಾಲನೆ ನೀಡುವ ಮೂಲಕ ಬಂಡವಾಳದ ಹರಿವಿನ ಬಾಗಿಲನ್ನು ತೆರೆದರು.ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸೇರಿದಂತೆ ಸಚಿವರು, 5,000ಕ್ಕೂ ಹೆಚ್ಚು ಉದ್ಯಮ ಪ್ರತಿನಿಧಿಗಳು, 16 ದೇಶಗಳ ರಾಯಭಾರಿಗಳು ಹೂಡಿಕೆಯ ಒಪ್ಪಂದಗಳಿಗೆ ಸಾಕ್ಷಿಯಾದರು.

ಉದ್ಯಮಿಗಳಾದ ಆನಂದ್ ಮಹೀಂದ್ರ, ಸಜ್ಜನ್ ಜಿಂದಾಲ್, ಕಿರಣ್ ಮಜುಂದಾರ್ ಷಾ, ಗೀತಾಂಜಲಿ ಕಿರ್ಲೋಸ್ಕರ್, ರಾಹುಲ್ ಬಜಾಜ್, ಶೇಷ ವರದರಾಜನ್, ಪ್ರಶಾಂತ್ ಪ್ರಕಾಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಉಪಸ್ಥಿತರಿದ್ದರು.

ಇನ್ನಷ್ಟು ಸುದ್ದಿಗಳು 8

ಭಾರತದ ಭವಿಷ್ಯಕ್ಕೆ ಬೆಂಗಳೂರೇ ಕನ್ನಡಿ: ರಾಜನಾಥ್ ಸಿಂಗ್

ಭಾರತದ ಭವಿಷ್ಯದ ಬಗ್ಗೆ ಅನುಮಾನ ಇರುವವರು ಬೆಂಗಳೂರಿಗೆ ಬಂದು ಒಮ್ಮೆ ನೋಡಬೇಕು. ಅವರ ಸಂಶಯ ನಿವಾರಣೆಯಾಗುತ್ತವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಶ್ವ ದರ್ಜೆಯ ಮೂಲಸೌಕರ್ಯ, ಪರಿಸರ ಹೊಂದಿರುವ ಕರ್ನಾಟಕವು ಬಂಡವಾಳ ಹೂಡಿಕೆಗೆ ಪ್ರಶಸ್ತ ತಾಣವಾಗಿದೆ. ದೇಶದಲ್ಲಿನ ರಾಜಕೀಯ ಏನೇ ಇರಲಿ, ಕರ್ನಾಟಕದಲ್ಲಿ ಹೂಡಿಕೆ ಮಾಡುವವರ ಬೆನ್ನಿಗೆ ಇಡೀ ದೇಶವೇ ನಿಲ್ಲಲಿದೆ ಎಂದು ಹೂಡಿಕೆದಾರರಿಗೆ ಭರವಸೆ ತುಂಬಿದರು.

'ರಾಜ್ಯದ ಮಹತ್ವಾಕಾಂಕ್ಷೆ ಮತ್ತು ನಿರ್ಣಾಯಕ ಕೆಲಸಗಳು ದೇಶವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುತ್ತಿವೆ. ಸದ್ಯದಲ್ಲೇ ಕೃತಕ ಬುದ್ಧಿಮತ್ತೆ ಕ್ಷೇತ್ರದ ಪ್ರಥಮ ಮಾದರಿ ಕೂಡ ಹೊರಬರಲಿದೆ. ಇದಕ್ಕೆಲ್ಲ ಇಲ್ಲಿರುವ ಮಾನವ ಸಂಪನ್ಮೂಲ ಮತ್ತು ಸನ್ನದ್ಧವಾಗಿರುವ ಪ್ರತಿಭೆ ಕಾರಣ' ಎಂದು ಕರ್ನಾಟಕವನ್ನು ಹಾಡಿಹೊಗಳಿದರು.

ಬೆಂಗಳೂರಿನ ಮಾಹಿತಿ ತಂತ್ರಜ್ಞಾನ, ನವೋದ್ಯಮ ಮತ್ತು ಇನ್ನಿತರ ಕ್ರಾಂತಿಕಾರಕ ಸಂಶೋಧನೆಗಳನ್ನು ನೋಡಿದ ನಂತರ ಭಾರತದ ಬಗೆಗಿನ ಅಭಿಪ್ರಾಯ ಖಂಡಿತ ಬದಲಾಗುತ್ತದೆ ಎಂದರು.

ಕರ್ನಾಟಕ ಹೂಡಿಕೆದಾರರ ಸ್ವರ್ಗವಾಗಿದೆ. ಕಾನೂನು ಸುವ್ಯವಸ್ಥೆ ಪಾಲನೆಯನ್ನೂ ಒಳಗೊಂಡು ಸುಭದ್ರವಾದ ಉದ್ಯಮ ಸ್ನೇಹಿ ವಾತಾವರಣ ಕಲ್ಪಿಸಲು ಸರ್ಕಾರ ಬದ್ಧವಾಗಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಹೂಡಿಕೆಯ ವಿಚಾರದಲ್ಲಿ ನೆರೆ ರಾಜ್ಯಗಳಿಂದ ಸ್ಪರ್ಧೆ ಇದೆ. ವಿವಿಧ ಪ್ರಕ್ರಿಯೆಗಳು ಸುಲಭವೂ, ತ್ವರಿತವೂ ಆಗಿರಬೇಕು. ಇಲ್ಲದಿದ್ದರೆ, ಅವಕಾಶಗಳು ಬೇರೆಯವರ ಪಾಲಾಗುತ್ತವೆ
ಎಂ.ಬಿ. ಪಾಟೀಲ, ಬೃಹತ್ ಕೈಗಾರಿಕಾ ಸಚಿವ

2025–30ರ ಕೈಗಾರಿಕಾ ನೀತಿ ಮುಖ್ಯಾಂಶ

- ₹7.50 ಲಕ್ಷ ಕೋಟಿ ಬಂಡವಾಳ ಹೂಡಿಕೆ
- 5 ವರ್ಷದಲ್ಲಿ 20 ಲಕ್ಷ ಉದ್ಯೋಗ ಸೃಷ್ಟಿ
- ಕೈಗಾರಿಕಾ ಬೆಳವಣಿಗೆಗೆ 3 ವಲಯಗಳ ಸೃಷ್ಟಿ
- ಸನ್‌ರೈಸ್ ವಲಯ, ಸ್ಥಳೀಯ ತಯಾರಿಕೆಗೆ ಆದ್ಯತೆ
- ಖಾಸಗಿ ಕೈಗಾರಿಕಾ ಪಾರ್ಕ್ ಅಭಿವೃದ್ಧಿಗೆ ಅವಕಾಶ
- ಮಧ್ಯಮ, ಸಣ್ಣ, ಸೂಕ್ಷ್ಮ ಕೈಗಾರಿಕೆಗೆ ಶೇ 30ರಷ್ಟು ಜಾಗ
- ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕಾ ವಲಯ ಸ್ಥಾಪನೆ
- ಸಂಶೋಧನಾ ವಲಯಕ್ಕೆ ವಿಶೇಷ ಹೂಡಿಕೆ
- ಉತ್ಪಾದನೆ ಆಧರಿತ ಪ್ರೋತ್ಸಾಹ ಭತ್ಯೆ, ಶೇ 30 ಸಬ್ಸಿಡಿ
- ಖಾಸಗಿ ಕೈಗಾರಿಕಾ ಪ್ರದೇಶಗಳಿಗೂ ಅವಕಾಶ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ದಲಿತ ಸಚಿವರ ಚಟುವಟಿಕೆ ಬಿರುಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮಾವೇಶದ ಕುರಿತು ಹೈಕಮಾಂಡ್ ಎಚ್ಚರಿಕೆ ಬಳಿಕ ಮೌನ ತಾಳಿದ್ದ ಕಾಂಗ್ರೆಸ್‌ನ ದಲಿತ ಸಚಿವರು ಮತ್ತೆ ಚಟುವಟಿಕೆ ಆರಂಭಿಸಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಮವಾರ ರಾತ್ರಿ ಭೇಟಿ ಮಾಡಿ ಸುಮಾರು ಒಂದು ಗಂಟೆ ಚರ್ಚಿಸಿದರು. ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿ ಸಮಾಲೋಚಿಸಿದರು.

ರಾಜ್ಯದಾದ್ಯಂತ ಪರಿಶಿಷ್ಟ ಜಾತಿ, ಪಂಗಡದ ಸಮಾವೇಶವನ್ನು ಆಯೋಜಿಸಲು ಸಚಿವರಾದ ಕೆ.ಎನ್. ರಾಜಣ್ಣ, ಸತೀಶ ಜಾರಕಿಹೊಳಿ, ಜಿ. ಪರಮೇಶ್ವರ, ಎಚ್.ಸಿ. ಮಹದೇವಪ್ಪ ಯೋಜಿಸಿದ್ದಾರೆ. ಪರಮೇಶ್ವರ ಅವರ ನಿವಾಸದಲ್ಲಿ ಸಮುದಾಯದ ಸಚಿವರು, ಶಾಸಕರು ಮತ್ತು ಮುಖಂಡರಿಗೆ ಇತ್ತೀಚೆಗೆ ಆಯೋಜಿಸಲು ಉದ್ದೇಶಿಸಿದ್ದ ಔತಣಕೂಟಕ್ಕೆ ಹೈಕಮಾಂಡ್ ತಡೆ ಒಡ್ಡಿತ್ತು.

'ಸಮಾವೇಶದ ಬಗ್ಗೆ ಹೈಕಮಾಂಡ್ ನಾಯಕರೊಂದಿಗೆ ಚರ್ಚಿಸಿಲ್ಲ. ಬೀದರ್‌ನಿಂದ ಚಾಮರಾಜನಗರದ ವರೆಗಿನ ವಿಷಯದ ಕುರಿತು ಚರ್ಚೆ ಮಾಡಿದ್ದೇವೆ. ರಾಜ್ಯದ ರಾಜಕೀಯ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದ್ದೇನೆ' ಎಂದು ಸತೀಶ ಜಾರಕಿಹೊಳಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಶಾಸಕರೊಂದಿಗೆ ವಿದೇಶ ಪ್ರವಾಸ ಕೈಗೊಳ್ಳುವ ಕುರಿತು ಪ್ರತಿಕ್ರಿಯಿಸಿದ ಅವರು, '40 ಮಂದಿ ವಿದೇಶ ಪ್ರವಾಸ ಮಾಡಲಿದ್ದೇವೆ ಎಂದು ನೀವೆಲ್ಲ ಬರೆದಿರಿ. ನಮ್ಮ ಪಕ್ಷದ ಹಲವು ಶಾಸಕರು ವಿದೇಶಕ್ಕೆ ಹೋಗಿ ಬಂದರು. ನಾನು ಸಹ ಹೋಗಬೇಕಿತ್ತು. ನಿಮ್ಮ ಕಾರಣದಿಂದ ಹೋಗಲು ಸಾಧ್ಯವಾಗಲಿಲ್ಲ' ಎಂದರು.

6ನೇ ಪುಟ ನೋಡಿ

ಅದಾನಿ ನಿರಾಳ?

ವಾಷಿಂಗ್ಟನ್ (ಪಿಟಿಐ): ಅರ್ಧ ಶತಮಾನದಷ್ಟು ಹಳೆಯದಾದ ವಿದೇಶಿ ಭ್ರಷ್ಟಾಚಾರ ಚಟುವಟಿಕೆ ತಡೆ ಕಾಯ್ದೆ- (ಎಫ್‌ಸಿಪಿಎ) 1977ಕ್ಕೆ ಆರು ತಿಂಗಳವರೆಗೆ ತಾತ್ಕಾಲಿಕ ತಡೆ ನೀಡುವ ಕಾರ್ಯಾದೇಶಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಂಕಿತ ಹಾಕಿದ್ದಾರೆ.


ಗೌತಮ್ ಅದಾನಿ

ಇದರಿಂದ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಉದ್ಯಮಿ ಗೌತಮ್ ಅದಾನಿ ಅವರಿಗೆ ನಿರಾಳತೆ ದೊರೆಯಲಿದೆ ಎಂದು ಹೇಳಲಾಗಿದೆ.

12ನೇ ಪುಟ ನೋಡಿ



ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ಆಯೋಜನೆ

ಇಂದಿನಿಂದ ರಜತ ಮಹೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನವು ಇದೇ 12ರಿಂದ 16ರವರೆಗೆ ಬನಶಂಕರಿ ಎರಡನೇ ಹಂತದ ದೇವಗಿರಿಯ ವರಪ್ರದ ವೆಂಕಟೇಶ್ವರ ದೇವಸ್ಥಾನದ ವೆಂಕೋಬಾಚಾರ್ಯ ಸ್ಮೃತಿ ಮಂಟಪದಲ್ಲಿ ರಜತ ಮಹೋತ್ಸವ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ಬುಧವಾರ ಸಂಜೆ 4.30ಕ್ಕೆ ಪುರಂದರದಾಸರ ಆರಾಧನಾ ಮಹೋತ್ಸವ ಹಮ್ಮಿಕೊಂಡಿದ್ದು, ವಿದ್ಯಾಸಾಗರ ಮಾಧವತೀರ್ಥ ಸ್ವಾಮೀಜಿ ಹಾಗೂ ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಗಾಯಕ ಆರ್.ಕೆ. ಪದ್ಮನಾಭ ಅವರ ಶಿಷ್ಯವೃಂದದಿಂದ 'ಪುರಂದರ ನಮನ' ಕರ್ನಾಟಕ ಶಾಸ್ತ್ರೀಯ ಸಂಗೀತ ಗೋಷ್ಠಿ ನಡೆಯಲಿದೆ.

ಸಂಜೆ 6ರಿಂದ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಆರ್. ಕೆ. ಪದ್ಮನಾಭ ಅವರಿಗೆ 'ಜೀವಮಾನ ಸಂಗೀತ ಸಾಧನಾ ಪ್ರಶಸ್ತಿ' ಹಾಗೂ 'ರಾಘವೇಂದ್ರ ಭಕ್ತಿ ಸಂಗೀತ ವಿಶಾರದ ಬಿರುದು' ಪ್ರದಾನ ಮಾಡಲಾಗುತ್ತದೆ.



ಆರ್.ಕೆ.ಪದ್ಮನಾಭ

ವೇದಾಂತ ಪಂಡಿತ ದಿವಂಗತ ಪಿ. ಅನಂತ ಪದ್ಮನಾಭಾಚಾರ್ಯ ಅವರನ್ನು 'ವ್ಯಾಸ ಪ್ರಶಸ್ತಿ'ಗೆ ಮರಣೋತ್ತರವಾಗಿ ಆಯ್ಕೆ ಮಾಡಲಾಗಿದೆ. ಇದೇ ಪ್ರಶಸ್ತಿಗೆ ನಿವೃತ್ತ ವೇದಾಂತ ಪ್ರಾಧ್ಯಾಪಕ ಜಿ. ಶಿವರಾಂ ಅಗ್ನಿಹೋತ್ರಿ ಭಾಜನರಾಗಿದ್ದಾರೆ. 'ಗುರುರಾಘವೇಂದ್ರ ಸಂಸ್ಮರಣ ಪ್ರಶಸ್ತಿ'ಗೆ ಹಿಂದೂಸ್ತಾನಿ ಸಂಗೀತ ಕಲಾವಿದೆ ಅರ್ಚನಾ ಕುಲಕರ್ಣಿ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಗೌರಿ ನಾಗರಾಜ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಆರ್.ಕೆ. ಪದ್ಮನಾಭ ಅವರ ಶಿಷ್ಯವೃಂದದಿಂದ 'ಪುರಂದರ ನಮನ' ಕರ್ನಾಟಕ ಶಾಸ್ತ್ರೀಯ ಸಂಗೀತ ಗೋಷ್ಠಿ
- 'ಜೀವಮಾನ ಸಂಗೀತ ಸಾಧನಾ ಪ್ರಶಸ್ತಿ' ಹಾಗೂ 'ರಾಘವೇಂದ್ರ ಭಕ್ತಿ ಸಂಗೀತ ವಿಶಾರದ ಬಿರುದು' ಪ್ರದಾನ

ಪ್ರತಿಭಾ ಪುರಸ್ಕಾರಕ್ಕೆ ಇಲ್ಲಿನ ವೇದ ವಿ. ಎಸ್. ಹಾಗೂ 'ಧ್ರುವ ಪ್ರಶಸ್ತಿ'ಗೆ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ದೇವರಾತ ಜೋಶಿ ಭಾಜನರಾಗಿದ್ದಾರೆ. ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ, ವಿದ್ವಾಂಸ ಎಸ್. ರಂಗನಾಥ್ ಹಾಗೂ ಸಂಗೀತ ನಿರ್ದೇಶಕ ರಾಯಚೂರು ಶೇಷಗಿರಿದಾಸ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ ಎಂದಿದ್ದಾರೆ.

ಗುರುವಾರದಂದು ಹರಿದಾಸ ಕೃತಿಗಳ ಗಾನ ಸಂಭ್ರಮ ಹಾಗೂ ಪುರಂದರ ವೈಭವ ನೃತ್ಯ ರೂಪಕ ಪ್ರದರ್ಶನ, ಶುಕ್ರವಾರದಂದು ಕನಕದಾಸರ ಆರಾಧನಾ ಮಹೋತ್ಸವ ಹಾಗೂ ಕನಕ ವೈಭವಂ ನೃತ್ಯರೂಪಕ, ಶನಿವಾರದಂದು ತ್ಯಾಗರಾಜರ ಆರಾಧನಾ ಮಹೋತ್ಸವ ಹಾಗೂ ತ್ಯಾಗರಾಜರು ವಿರಚಿತ ಪಂಚರತ್ನ ಕೃತಿಗಳ ನೃತ್ಯವೈಭವ, ಭಾನುವಾರದಂದು ಬಿ.ಎಸ್. ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಬೆಳಗೆರೆ ಲಕ್ಷ್ಮೀ ರಂಗನಾಥ ಸ್ವಾಮಿಯ ನೃತ್ಯ ರೂಪಕ (ದಶಾವತಾರ) ಪ್ರದರ್ಶನ ಕಾಣಲಿದೆ.

ಕಲಾವಿದೆ ಕಮಲಾ ಶ್ರೀನಿವಾಸ ಅವರು 'ಬಿ.ಎಸ್. ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ'ಗೆ ಆಯ್ಕೆಯಾಗಿ ದ್ದಾರೆ. 13ರಿಂದ 16ರವರೆಗೆ ಪ್ರತಿನಿತ್ಯ ಸಂಜೆ 5 ಗಂಟೆಯಿಂದ ಕಾರ್ಯಕ್ರಮಗಳು ಪ್ರಾರಂಭವಾಗಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿಂಗಳಲ್ಲಿ ಶೇ 10ರಷ್ಟು ಕಾಮಗಾರಿ

ಈಜಿಪುರ ಮೇಲ್ಸೇತುವೆ: ಕಾಮಗಾರಿ ಪರಿಶೀಲಿಸಿದ ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟು ವರ್ಷಗಳ ಹಿಂದೆ ಆರಂಭವಾಗಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿ ಮೊದಲ ಬಾರಿಗೆ ಒಂದೇ ತಿಂಗಳಲ್ಲಿ ಶೇಕಡ 10ರಷ್ಟು ಪ್ರಗತಿ ಕಂಡಿದೆ.

ಬಿಬಿಎಂಪಿ ಅಧಿಕಾರಿಗಳು ಹಾಗೂ ಹೊಸ ಗುತ್ತಿಗೆದಾರರ ನಡುವೆ ಸಮನ್ವಯದ ಕೊರತೆಯಿಂದ 2023ರ ನವೆಂಬರ್‌ನಿಂದಲೂ ಕಾಮಗಾರಿ ಕುಂಟುತ್ತಲೇ ಸಾಗಿತ್ತು. ಅಂದಿನಿಂದ ಜನವರಿವರೆಗೆ ಶೇ 35ರಷ್ಟು ಮಾತ್ರ ಕಾಮಗಾರಿ ನಡೆದಿತ್ತು. ಆದರೆ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಸ್ಪಷ್ಟ ಸೂಚನೆಯಿಂದ ಜನವರಿ 8ರಿಂದ ಫೆಬ್ರುವರಿ 11ರವರೆಗೆ ಶೇ 10ರಷ್ಟು ಪ್ರಗತಿಯಾಗಿದೆ.

2024ರ ನವೆಂಬರ್‌ನಲ್ಲಿ ಅಳವಡಿಸಲಾಗಿದ್ದ, ಹಿಂದಿನ ಗುತ್ತಿಗೆದಾರರು ನಿರ್ಮಿಸಿದ್ದ ಮೂರು ಸೆಗ್‌ಮೆಂಟ್‌ನಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಅಂದಿನಿಂದ ಕಾಮಗಾರಿ ಬಹುತೇಕ ಸ್ಥಗಿತಗೊಂಡಿತ್ತು.

ಜನವರಿ 7ರಂದು ಸಭೆ ನಡೆಸಿದ್ದ ಸಚಿವ ರಾಮಲಿಂಗಾರೆಡ್ಡಿ ಅವರು, ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದರು. ಯೋಜನೆ ವಿಭಾಗದ ಎಂಜಿನಿಯರ್‌ಗಳನ್ನು ತರಾಟೆಗೆ ತೆಗೆದುಕೊಂಡು, ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರ ಅವರಿಗೆ 15 ದಿನಕ್ಕೊಮ್ಮೆ ಪರಿಶೀಲನೆಗೆ ಸೂಚಿಸಿದ್ದರು.

ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಮಂಗಳವಾರ ಪರಿಶೀಲಿಸಿದ ರಾಮಲಿಂಗಾರೆಡ್ಡಿ ಅವರು, ಕೆಲಸದ ಪ್ರಗತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಸಚಿವ ರಾಮಲಿಂಗಾರೆಡ್ಡಿ ಅವರು ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಮಂಗಳವಾರ ಪರಿಶೀಲಿಸಿದರು

'ಇದೇ ರೀತಿ ಸಮನ್ವಯದಿಂದ ಕಾಮಗಾರಿ ನಡೆಸಿ, ಶೀಘ್ರವಾಗಿ ಪೂರ್ಣಗೊಳಿಸಬೇಕು' ಎಂದು ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

'ಮೇಲ್ಸೇತುವೆ ಕಾಮಗಾರಿಯಲ್ಲಿ ಒಂದು ತಿಂಗಳಲ್ಲಿ 43 ಸೆಗ್‌ಮೆಂಟ್‌ಗಳನ್ನು ಅಳವಡಿಸಲಾಗಿದೆ. ಸುಮಾರು 135 ಮೀಟರ್‌ನಷ್ಟು ಪ್ರಗತಿಯಾಗಿದೆ. ಕಟ್ಟಡ ತ್ಯಾಜ್ಯವನ್ನೂ ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಕಳೆದ ಸಭೆಯಲ್ಲಿ ಆಶ್ವಾಸನೆ ನೀಡಿರುವಂತೆ ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಮುಗಿಸಲು ಎಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಸಕಾಲಕ್ಕೆ ಬಿಲ್ ಪಾವತಿಸಲೂ ಹೇಳಲಾಗಿದೆ' ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಯೋಜನೆ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರ, ಮುಖ್ಯ ಎಂಜಿನಿಯರ್ ಲೋಕೇಶ್ ಉಪಸ್ಥಿತರಿದ್ದರು.

'ಭೂಸ್ವಾಧೀನ: ಶೀಘ್ರ ಪರಿಹಾರ'

'ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳ್ಳಲಿದೆ. 25 ಪ್ರಕರಣಗಳಲ್ಲಿ ಸಣ್ಣ ಪ್ರಮಾಣದಲ್ಲಿ ಜಮೀನು ಕಳೆದುಕೊಳ್ಳುವವರಿಗೆ ಕೂಡಲೇ ನಗದು ಪರಿಹಾರ ಪಾವತಿಸುವಂತೆ ಬಿಬಿಎಂಪಿಯ ಭೂಸ್ವಾಧೀನ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸೇಂಟ್ ಜಾನ್ ಆಸ್ಪತ್ರೆಗೆ ಸಂಬಂಧಿಸಿದ ಭೂಸ್ವಾಧೀನದ ಬಗ್ಗೆ ಇತ್ಯರ್ಥವಾಗಬೇಕಿದೆ. ಪರ್ಯಾಯ ಜಮೀನು ನೀಡುವ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಆಸ್ಪತ್ರೆಯವರೊಂದಿಗೆ ಸಭೆ ನಡೆಸಿ ಅದನ್ನೂ ಅಂತಿಮಗೊಳಿಸಲಾಗುತ್ತದೆ. ಇನ್ನೆರಡು ತಿಂಗಳಲ್ಲಿ ಭೂಸ್ವಾಧೀನದ ಎಲ್ಲ ಪ್ರಕರಣಗಳನ್ನೂ ಇತ್ಯರ್ಥಪಡಿಸುವುದಾಗಿದೆ ಅಧಿಕಾರಿಗಳು ತಿಳಿಸಿದ್ದಾರೆ' ಎಂದರು.

10 ಮಂದಿಗೆ ಎಲ್‌.ಎಸ್‌.ಎಸ್‌. ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗದ 'ಎಲ್.ಎಸ್.ಎಸ್. ಜನ್ಮ ಶತಮಾನೋತ್ಸವ ಗೌರವ'ಕ್ಕೆ ವಿವಿಧ ಕ್ಷೇತ್ರಗಳ ಹತ್ತು ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, 'ಮಾಜಿ ಮುಖ್ಯ ಮಂತ್ರಿ ಎಂ. ವೀರಪ್ಪ ಮೊಯಿಲಿ, ವಿಮರ್ಶಕ ಸಿ.ಎನ್. ರಾಮಚಂದ್ರನ್, ಸಾಹಿತಿ ದೊಡ್ಡರಂಗೇಗೌಡ, ಲೇಖಕಿ ನಾಗಮಣಿ ಎಸ್. ರಾವ್, ಪತ್ರಕರ್ತ ಬಾಬು ಕೃಷ್ಣಮೂರ್ತಿ, ವಿದ್ವಾಂಸ ಪ್ರಧಾನ ಗುರುದತ್ತ, ಶಿಕ್ಷಣ ತಜ್ಞ ವೂಡೇ ಪಿ. ಕೃಷ್ಣ, ಸಪ್ನ ಬುಕ್ ಹೌಸ್ ಮಾಲೀಕ ನಿತಿನ್ ಷಾ, ಕನ್ನಡ ಪರ ಹೋರಾಟಗಾರ ವ.ಚ. ಚನ್ನೇಗೌಡ ಹಾಗೂ ಎಲ್.ಎಸ್. ಶೇಷಗಿರಿ ರಾವ್ ಅವರ ಹಲವು ಪುಸ್ತಕಗಳ ಬೆರಳಚ್ಚು ಮಾಡಿ, ಪುಟ ವಿನ್ಯಾಸ ಮಾಡಿರುವ ಆರ್. ರಾಮಕೃಷ್ಣ ಅವರನ್ನು 'ಎಲ್.ಎಸ್.ಎಸ್. ಜನ್ಮ ಶತಮಾನೋತ್ಸವ ಗೌರವ'ಕ್ಕೆ ಆಯ್ಕೆ ಮಾಡಲಾಗಿದೆ. ಇವರಿಗೆ ಗೌರವ ಸನ್ಮಾನ ಮಾಡಲಾಗುವುದು' ಎಂದು ಹೇಳಿದರು.

'ಇದೇ 17ರಂದು ಸಂಜೆ 5 ಗಂಟೆಗೆ ಇಲ್ಲಿನ ನಯನ ಸಭಾಂಗಣದಲ್ಲಿ ಪ್ರೊ. ಎಲ್.ಎಸ್. ಶೇಷಗಿರಿ ರಾವ್ ಜನ್ಮ ಶತಮಾನೋತ್ಸವದ ಸಮಾರೋಪ ಸಮಾರಂಭ ನಡೆಯಲಿದೆ. ಎಂ. ವೀರಪ್ಪ ಮೊಯಿಲಿ ಅವರು ಸಮಾರಂಭ ಉದ್ಘಾಟಿಸುತ್ತಾರೆ.



ಎಲ್.ಎಸ್. ಶೇಷಗಿರಿ ರಾವ್

ಟಿ.ಎನ್. ವಾಸುದೇವಮೂರ್ತಿ ಅವರು ಸಂಪಾದಿಸಿರುವ ನೆನಪಿನ ಸಂಪುಟ 'ಕನ್ನಡ ವಿಶೇಷ ಸಾಹಿತ್ಯ ಗಿರಿ'ಯನ್ನು ಸಿ.ಎನ್. ರಾಮಚಂದ್ರನ್ ಬಿಡುಗಡೆ ಮಾಡುತ್ತಾರೆ. ಇದೇ ವೇಳೆ ಎಲ್.ಎಸ್.ಎಸ್. ಜಾಲತಾಣವನ್ನು ಲೋಕಾರ್ಪಣೆ ಮಾಡಲಾಗುತ್ತದೆ. ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅಧ್ಯಕ್ಷತೆ ವಹಿಸುತ್ತಾರೆ. ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ ಅವರು ಸಮಾರೋಪ ಭಾಷಣ ಮಾಡುತ್ತಾರೆ' ಎಂದು ತಿಳಿಸಿದರು.

'ರಿಜಿಸ್ಟರ್ಡ್ ಪಾರ್ಸೆಲ್' ಸೇವೆ ಪುನರಾರಂಭಿಸಲು ಮನವಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಪುಸ್ತಕಗಳ ರವಾನೆಗೆ ಭಾರತೀಯ ಅಂಚೆ ಇಲಾಖೆಯ 'ರಿಜಿಸ್ಟರ್ಡ್ ಪಾರ್ಸೆಲ್' ಸೇವೆಯು ಸಹಕಾರಿಯಾಗಿದೆ. ಆದ್ದರಿಂದ ಈ ಸೇವೆ ಸ್ಥಗಿತದ ನಿರ್ಧಾರವನ್ನು ಮರು ಪರಿಶೀಲಿಸಬೇಕು' ಎಂದು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂದಿಯಾ ಅವರಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, 'ಇಲಾಖೆಯ 'ರಿಜಿಸ್ಟರ್ಡ್ ಪಾರ್ಸೆಲ್' ಸೇವೆಯ ಮೂಲಕ ಪ್ರಕಾಶಕರು ಓದುಗರಿಗೆ ಪುಸ್ತಕ ರವಾನೆ ಮಾಡುತ್ತಿದ್ದರು. ಇದು ಪ್ರಕಾಶಕರಿಗೆ ಆರ್ಥಿಕವಾಗಿಯೂ ಸಹಕಾರಿಯಾಗಿತ್ತು. ಈಗ ಇಲಾಖೆಯು ಈ ಸೇವೆ ಸ್ಥಗಿತಗೊಳಿಸಿರುವುದರಿಂದ ಪ್ರಕಾಶಕರು ಖಾಸಗಿ ಕೊರಿಯರ್ ಸೇವೆಯನ್ನು ಅವಲಂಬಿಸಬೇಕಾಗಿದೆ. ಇದರಿಂದ ಪುಸ್ತಕ ರವಾನೆ ವೆಚ್ಚ ಹೆಚ್ಚಿ, ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಲಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಪ್ರಕಾಶಕರ ಹಿತದೃಷ್ಟಿಯಿಂದ 'ರಿಜಿಸ್ಟರ್ಡ್ ಪಾರ್ಸೆಲ್' ಮೂಲಕ ಪುಸ್ತಕಗಳನ್ನು ರವಾನಿಸುವುದನ್ನು ಪುನಃ ಪ್ರಾರಂಭಿಸಬೇಕು. ಈ ನಿರ್ಧಾರ ಕೈಗೊಂಡಲ್ಲಿ ಪ್ರಕಾಶನ ವಲಯ ಚೇತರಿಸಿಕೊಳ್ಳಲಿದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

50+ ಯುರೋಪ್ ಪ್ರವಾಸ ಆಯ್ಕೆಗಳು ಮತ್ತು ಪ್ರಯಾಣ ವಿವರಗಳಿಗಾಗಿ QR ಕೋಡ್ ಅನ್ನು ಸ್ಕ್ಯಾನ್ ಮಾಡಿ.





ಕರೆಯುತ್ತಿದೆ ಯೂರೋಪು ಈಗಲೇ ಹೊರಡಿ ಅಥವಾ ಇನ್ನೂ ಒಂದು ವರ್ಷ ಕಾಯಿರಿ!

ಇನ್ನೇನು ಬೇಸಿಗೆ ಬರುತ್ತಿದೆ, ಬೇಗಬೇಗ ಮಾರಾಟವಾಗುತ್ತಿದೆ ಯೂರೋಪು! ಏರ್‌ಫೇರ್‌ಗಳು ಆಕಾಶ ಮುಟ್ಟುತ್ತಿವೆ, ಹೋಟೆಲ್‌ಗಳು ತುಂಬಿಹೋಗಿವೆ, ವೀಸಾ ಕ್ಯೂಗಳು ಉದ್ದವಾಗುತ್ತಿವೆ. ನೀವು ಎಷ್ಟೆಷ್ಟು ಕಾಯುತ್ತೀರೋ ಅಷ್ಟಷ್ಟೇ ತೊಂದರೆ ಹೆಚ್ಚುತ್ತದೆ. ಯೂರೋಪಿನ ಯಾವ ಭಾಗವನ್ನು ನೋಡಲು ಬಯಸುತ್ತೀರಿ ಎಂಬುದನ್ನು ನಿರ್ಧರಿಸಿ.

ಪಶ್ಚಿಮ? ಪೂರ್ವ? ಉತ್ತರ? ಮೆಡಿಟರೇನಿಯನ್? ಬಾಲ್ಕನ್? ಬಾಲ್ಟಿಕ್?

ಆಯ್ಕೆಗಳು ಬಹಳ, ಸಮಯ ಮಾತ್ರ ಕಡಿಮೆ. ಆದರೆ ಇಲ್ಲಿದೆ ಸಂತಸದ ಸುದ್ದಿ - ವೀಣಾ ವರ್ಲ್ಡ್ ಈಗಾಗಲೇ ನಿಮ್ಮ ಸಮಸ್ಯೆಯನ್ನು ಪರಿಹರಿಸಿಬಿಟ್ಟಿದೆ! ಸಾಕಷ್ಟು ಯೋಚಿಸಿ ನಾವು ರೂಪಿಸಿದ ಪ್ರವಾಸಗಳು ಯಾವುದೇ ಅಡೆತಡೆಯಿಲ್ಲದೆ ಉತ್ಕೃಷ್ಟ ಹಾಗೂ ಸುಸಂಘಟಿತ ರೀತಿಯಲ್ಲಿ ಯೂರೋಪನ್ನು ನೋಡುವಂತೆ ಮಾಡುತ್ತವೆ. ನಮ್ಮ ತಜ್ಞ ಪ್ಲ್ಯಾನಿಂಗ್‌ನ ಸಹಾಯದಿಂದ ನೀವು ಮುಂದಿನ 10 ವರ್ಷಗಳ ಯೂರೋಪಿನ ಹಾಲಿಡೇಗಳ ಶೆಡ್ಯೂಲನ್ನು ತಯಾರಿಸಿಕೊಳ್ಳಬಹುದು. ಆದರೆ,

ತಡ ಮಾಡಬೇಡಿ!

- ☑ ಈಗಲೇ ಬುಕ್ ಮಾಡಿ, ಬೆಲೆಗಳು ಆಕಾಶ ಮುಟ್ಟುವ ಮೊದಲು.
- ☑ ನಿಮ್ಮ ಸೀಟನ್ನು ಭದ್ರಪಡಿಸಿಕೊಳ್ಳಿ, ಪ್ರವಾಸಗಳು ಮಾರಾಟವಾಗಿಹೋಗುವ ಮೊದಲು.
- ☑ ನಿಮ್ಮ ವೀಸಾ ಪ್ರಾಸೆಸ್ ತಕ್ಷಣವೇ ಶುರು ಮಾಡಿ, ಕಾನ್ಸುಲೇಟ್‌ಗಳು ಕಿಕ್ಕಿರಿದು ತುಂಬುವ ಮೊದಲು.

ಈ ಬೇಸಿಗೆಯಲ್ಲಿ ಬರಿದೇ ಯೂರೋಪಿನ ಕನಸು ಕಾಣಬೇಡಿ - ಅದನ್ನು ನನಸು ಮಾಡಿ.

ಎಂದೆಂದೂ ಸರಿಯಾದ ಆಯ್ಕೆ! ಸಾಬೀತಾಗಿದೆ ಮತ್ತು ಸಾವಿರಾರು ಮಂದಿಯ ವಿಶ್ವಾಸಪಾತ್ರ!

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ ಯೂರೋಪಿಗೆ ! ವೀಣಾ ವರ್ಲ್ಡ್‌ನೊಂದಿಗೆ!!

ಮೊದಲ ಬಾರಿ ಪ್ರವಾಸಿಗರು ನೋಡುತ್ತಾರೆ
8 ದಿನಗಳಲ್ಲಿ 8 ದೇಶಗಳನ್ನು
10 ದಿನಗಳಲ್ಲಿ 10 ದೇಶಗಳನ್ನು
11 ದಿನಗಳಲ್ಲಿ 11 ದೇಶಗಳನ್ನು

ಮೊದಲ ಬಾರಿ ಪ್ರವಾಸಿಗರು ನೋಡುತ್ತಾರೆ
ಡಿಸ್‌ಕೌಂಟ್‌ಗಳಿಲ್ಲ!
ಗುಪ್ತ ಫೀಸುಗಳಿಲ್ಲ!
ಆಪ್ಷನಲ್‌ಗಳು ಇಲ್ಲ!
ಜೀವನಾದ್ಯಂತ ನೆನಪಿರುವ ಸಂತಸದ ಗಳಿಗೆಗಳು ಮಾತ್ರ!

87,000+ ಅತಿಥಿಗಳು ಯೂರೋಪಿಗೆ
ಕಳೆದ 9 ತಿಂಗಳಲ್ಲಿ 17,000+ ಜನರು ಸೇರಿದಂತೆ, ಕಳೆದ 11 ವರ್ಷಗಳಲ್ಲಿ 87,000ಕ್ಕೂ ಹೆಚ್ಚು ಮಂದಿ ಅತಿಥಿಗಳು ವೀಣಾ ವರ್ಲ್ಡ್ ಜೊತೆಯಲ್ಲಿ ಯೂರೋಪಿನ ಪ್ರವಾಸ ಮಾಡಿದ್ದಾರೆ.

ಈಗಲೇ ಬುಕ್ ಮಾಡಿ
ನಿಮ್ಮ ವೀಸಾ ಪ್ರಾಸೆಸ್ ತಕ್ಷಣವೇ ಶುರು ಮಾಡಿ, ನಮ್ಮಲ್ಲಿ ಬುಕ್ ಮಾಡಿದ 75% ಅತಿಥಿಗಳ UK ಮತ್ತು ಶೆಂಗನ್ ವೀಸಾಗಳು ಈಗಾಗಲೇ ಸಿದ್ಧಗೊಳ್ಳುತ್ತಿವೆ.



ಮೈ ಹೂಂ ನ!
ಯುರೋಪಿನ ವ್ಯಾಪಕ ಸೌಂದರ್ಯವನ್ನು ತಾವಾಗಿಯೆ ನೋಡುವುದೆಂದರೆ ಆತಂಕ ಉಂಟಾಗಬಹುದು; ಆದರೆ ನಿಮ್ಮೊಂದಿಗೆ ಡೆಡಿಕೇಟೆಡ್ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ಇರುವಾಗ, ನಿಮ್ಮ ಯುರೋಪ್ ಅಡ್ವೆಂಚರ್ ಹೆಜ್ಜೆಹೆಜ್ಜೆಗೂ ನಿರಾಳ ಹಾಗೂ ಆನಂದದಾಯಕವಾಗುತ್ತದೆ.

Veena World Indore New Sales Office Opens Today

- ಏರ್‌ಫೇರ್ ಮತ್ತು ವೀಸಾ ಫೀಸ್ ಒಳಗೊಂಡಿರುವ ಆಲ್-ಇನ್‌ಕ್ಲೂಸಿವ್ ಟೂರ್ಸ್
- ಯಾವುದೇ ನಗದು ವ್ಯವಹಾರವಿಲ್ಲ ಚೆಕ್, ರುಪೇ, ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್, ವೀಸಾ ಹಾಗೂ ಮಾಸ್ಟರ್‌ಕಾರ್ಡ್ ಮೂಲಕ ಹಣ ಪಾವತಿಸಿ. 0% ಕನ್ವೀನಿಯನ್ಸ್ ಫೀ
- ಯೂರೊ ಬದಲಾಗುತ್ತಿದೆಯೆ ಚಿಂತಿಸಬೇಡಿ! ಪೂರ್ತಿ ಟೂರ್ ಪ್ರೈಸನ್ನು ಇಂಡಿಯನ್ ರೂಪಾಯಿಗಳಲ್ಲಿ ಪಾವತಿಸಿರಿ
- ಒಳಗೊಂಡಿವೆ: ವೀಸಾ ಫೀ ಟ್ರಾವೆಲ್ ಇನ್ಶೂರೆನ್ಸ್* ಡ್ರೈವರ್-ಗೈಡ್ ಟಿಪ್ಸ್
- ಕನ್‌ಫರ್ಮ್ಡ್ ಏರ್‌ಲೈನ್ಸ್ ಕಂಫರ್ಟೇಬಲ್ ಹೋಟೆಲ್ಸ್ AC ಕೋಚಸ್
- ಗರಿಷ್ಠ 'ನೋಡಲೇಬೇಕಾದ' ಪ್ರೇಕ್ಷಣೀಯ ಸ್ಥಳಗಳು ಎಂಟ್ರೆನ್ಸ್ ಫೀಸ್‌ನೊಂದಿಗೆ
- ಇಂಡಿಯನ್ ಯುರೋಪಿಯನ್ ಸ್ಥಳೀಯ ಊಟೋಪಚಾರ ಬ್ರೇಕ್‌ಫಾಸ್ಟ್ ಲಂಚ್ ಡಿನ್ನರ್ ಒಳಗೊಂಡಿವೆ
- ನಿರ್ದಿಷ್ಟ ಪ್ರೇಕ್ಷಣೀಯ ಸ್ಥಳಗಳಲ್ಲಿ 'ವೀಣಾ ವರ್ಲ್ಡ್ ಟ್ರೀಟ್ಸ್'
- ನೇರ ಜಾಯಿನಿಂಗ್ ಲೀವಿಂಗ್ ಎಕ್ಸ್-ಡೆಸ್ಟಿನೇಶನ್ ಟೂರ್ ಪ್ರೈಸ್ ಲಭ್ಯವಿದೆ
- ಮುಂಬಯಿಯಿಂದ ಮುಂಬಯಿಯವರೆಗೆ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ನಿಮ್ಮ ಸೇವೆಗಾಗಿ
- ನಿಮ್ಮ ಫಾರಿನ್ ಎಕ್ಸ್‌ಚೇಂಜ್ ಖರೀದಿಸಿರಿ ವೀಣಾ ವರ್ಲ್ಡ್ ಫಾರೆಕ್ಸ್‌ನಲ್ಲಿ
- ನಿಮ್ಮ ಪ್ರೈವೇಟ್ ಯುರೋಪ್ ಹಾಲಿಡೇ ಪಡೆಯಿರಿ, ವೀಣಾ ವರ್ಲ್ಡ್‌ನಿಂದ ಕಸ್ಟಮೈಜ್ಡ್
- ಯುರೋಪ್ ಕಾರ್ಪೊರೇಟ್ ಟೂರ್ಸ್ MICE ಒಲ್ಲೋ ಲಭ್ಯವಿದೆ

ವೀಣಾ ವರ್ಲ್ಡ್‌ನ ಆಲ್-ಇನ್‌ಕ್ಲೂಸಿವ್ ಗ್ರೂಪ್ ಟ್ಯೂರ್‌ಗಳಿಂದ ಆಯ್ಕೆ ಮಾಡಿ. ನೀವು ಬೆಂಗಳೂರಿನಿಂದ (ಎಕ್ಸ್-ಬೆಂಗಳೂರು) ಅಥವಾ ಭಾರತದ ಅಥವಾ ಜಗತ್ತಿನ ಯಾವುದೇ ಸ್ಥಳದಿಂದ (J&L) ಟ್ಯೂರ್‌ಗಳಿಗೆ ಸೇರಿಕೊಳ್ಳಬಹುದು. ಎಲ್ಲಾ ಟ್ಯೂರ್ ಬೆಲೆಗಳನ್ನೂ ಸಾವಿರಗಳಲ್ಲಿ ಪಟ್ಟಿಮಾಡಲಾಗಿದೆ. ಕೆಳಗಿನ ಚಾರ್ಟ್ ಟ್ಯೂರ್ ಹೆಸರು, ಬೆಂಗಳೂರಿನಿಂದ ಹೊರಡುವ ಟ್ಯೂರ್ ಬೆಲೆಗಳು (ಏರ್‌ಫೇರ್, ವೀಸಾ ಮತ್ತು ಇನ್‌ಶೂರೆನ್ಸ್ ಸೇರಿದಂತೆ) ಮತ್ತು ಸೇರಿಕೊಳ್ಳುವ ಹಾಗೂ ಬಿಟ್ಟುಹೋಗುವ ಟ್ಯೂರ್ ಬೆಲೆಗಳನ್ನು (ಏರ್‌ಫೇರ್, ವೀಸಾ ಮತ್ತು ಇನ್‌ಶೂರೆನ್ಸ್ ಬಿಟ್ಟು) ತೋರಿಸುತ್ತದೆ. J&L ಅತಿಥಿಗಳಿಗೆ ವಿಮಾನದ ಟಿಕೆಟ್‌ಗಳು, ವೀಸಾಗಳು ಮತ್ತು ಇತರ ಸರ್ವೀಸ್‌ಗಳಲ್ಲಿ ನೆರವಾಗಲು ವೀಣಾ ವರ್ಲ್ಡ್ ಟೀಮ್ ಲಭ್ಯವಿರುತ್ತದೆ.

ವೀಣಾ ವರ್ಲ್ಡ್ಸ್ ಆಲ್-ಇನ್‌ಕ್ಲೂಸಿವ್ ಗ್ರೂಪ್ ಟೂರ್ಸ್‌ನಿಂದ ಆರಿಸಿಕೊಳ್ಳಿ. ಭಾರತದಲ್ಲಿ ಮತ್ತು ವಿಶ್ವಾದ್ಯಂತ ಇನ್ನೂ ಅನೇಕ ರೋಚಕ ಟೂರ್ಸ್ ಕಂಡುಕೊಳ್ಳಿ, veenaworld.com ನಲ್ಲಿ.

ವೆಸ್ಟರ್ನ್ ಯುರೋಪ್ - ಮೋಸ್ಟ್ ಪಾಪ್ಯುಲರ್ ಟೂರ್ಸ್

Tour Name	Ex-Bengaluru	J&L
ಯುರೋಪಿಯನ್ ಎಕ್ಸ್‌ಪ್ಲೋರರ್ (27D)	650K-675K	570K-580K
ಯುರೋಪಿಯನ್ ಡ್ರೀಮ್ (23D)	535K-550K	455K-470K
ಯುರೋಪಿಯನ್ ಮ್ಯಾಜಿಕ್ (19D)	475K-490K	395K-405K
ಯುರೋಪಿಯನ್ ಮಾರ್ವೆಲ್ಸ್ (17D)	415K-430K	340K-350K
ಯುರೋಪಿಯನ್‌ಜ್ಯುಯೆಲ್ಸ್ ವಿಥ್ ವೆರ್ಸಾಯಿ/ಡಿಸ್ನಿಲ್ಯಾಂಡ್ (15D)	365K-380K	285K-310K
ಯುರೋಪಿಯನ್ ಡಿಲೈಟ್ (13D)	330K-345K	250K-270K
ಯುರೋಪಿಯನ್ ವಂಡರ್ಸ್ (13D)	310K-325K	245K-255K
ಯುರೋಪಿಯನ್ ಹೈಲೈಟ್ಸ್ (11D)	290K-305K	210K-225K
ಯುರೋಪಿಯನ್ ಚಾರ್ಮ್ (11D)	275K-290K	215K-230K
ಯುರೋಪಿಯನ್ ಸ್ಪ್ಲೆಂಡರ್ಸ್ (10D)	250K-265K	185K-200K
ಯುರೋಪಿಯನ್ ಪನೋರಮ (8D)	235K-250K	170K-185K
ಗ್ಲಿಂಪ್ಸಸ್ ಆಫ್ ಯುರೋಪ್ (6D)	190K-205K	NA
ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ ವಿಥ್ + ವೆರ್ಸಾಯಿ/ಡಿಸ್ನಿಲ್ಯಾಂಡ್ (9D)	260K-275K	185K-195K
ಸ್ವಿಸ್ ಪ್ಯಾರಿಸ್ ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ (8D/11D)	220K-330K	170K-260K
ಲಂಡನ್ ಪ್ಯಾರಿಸ್ ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ (7D)	240K-255K	170K-185K
ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್ ಬ್ರೂಶ್ (7D)	220K-235K	NA

Tour Name	Ex-Bengaluru	J&L
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ ಐರ್‌ಲ್ಯಾಂಡ್ ವೇಲ್ಸ್ ಲಂಡನ್ (15D)	400K-415K	325K-340K
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ (10D)	305K-315K	230K-245K
ಸ್ವಿಸ್ ಪ್ಯಾರಿಸ್ (8D)	255K-265K	180K-195K
ಸ್ವಿಸ್ ಪ್ಯಾರಿಸ್ ಲಂಡನ್ (11D)	330K-345K	250K-265K
ಸ್ವಿಸ್ ಪ್ಯಾರಿಸ್ ಇಟಲಿ (11D)	295K-310K	225K-235K
ಸ್ವಿಸ್ ಆಸ್ಟ್ರಿಯಾ ಇಟಲಿ (11D)	300K-315K	230K-245K
ಸ್ವಿಸ್ ಆಸ್ಟ್ರಿಯಾ (8D)	245K-260K	180K-195K
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D)	315K-330K	225K-235K
ಬೆಸ್ಟ್ ಆಫ್ ಸ್ವಿಟ್ಜರ್‌ಲ್ಯಾಂಡ್ (7D)	240K-255K	170K-180K
ಆಲ್ ಆಫ್ ಸ್ವಿಟ್ಜರ್‌ಲ್ಯಾಂಡ್ (10D)	325K-340K	255K-265K
ಬೆಸ್ಟ್ ಆಫ್‌ಆಸ್ಟ್ರಿಯಾ (8D)	240K-255K	170K-185K
ಬೆಸ್ಟ್ ಆಫ್ ಫ್ರಾನ್ಸ್ (11D)	300K-325K	230000
ಬೆಸ್ಟ್ ಆಫ್ ಇಟಲಿ (8D)	235K-250K	165K-305K
ಆಲ್ ಆಫ್ ಇಟಲಿ (15D)	375000	305000
ವೆಸ್ಟರ್ನ್ ಯುರೋಪ್ + ಆಲ್ ಆಫ್ ಈಸ್ಟರ್ನ್ ಯುರೋಪ್ (30D)	675000	NA
ವೆಸ್ಟರ್ನ್ ಯುರೋಪ್ + ಈಸ್ಟರ್ನ್ ಯುರೋಪ್ + ಸ್ಪೇನ್ ಪೋರ್ಚುಗಲ್ ಮೊರೊಕೊ (60D)	1350000	NA

ನಾರ್ದರ್ನ್ ಯುರೋಪ್

Tour Name	Ex-Bengaluru	J&L
ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (10D)	475000	360000
ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ + ವಿಥ್ ಐಸ್‌ಬ್ರೇಕರ್ ಕ್ರೂಜ್ (9D/10D)	375K-430K	NA
ನಾರ್ವೆ+ಲೊಫೊಟನ್ ಐಲ್ಯಾಂಡ್ಸ್ (9D)	525000	445000
ಸ್ಕ್ಯಾಂಡಿನೇವಿಯಾ (10D/15D)	310K-495K	225K-410K
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (10D/16D)	390K-495K	305K-415K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ಮಿಡ್‌ನೈಟ್ ಸನ್ (14D)	575K-590K	500K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ (15D)	510K-525K	420K-430K
ಬೆಸ್ಟ್ ಆಫ್ ಐಸ್‌ಲ್ಯಾಂಡ್ (10D)	475K-395K	95K-400K
ಸ್ಪಿಟ್ಸ್‌ಬರ್ಗೆನ್ ಆರ್ಕ್ಟಿಕ್ ಕ್ರೂಜ್ (9D)	875K-900K	NA
ಬೆಸ್ಟ್ ಆಫ್ ರಷ್ಯಾ (7D)	180K-190K	NA

ಈಸ್ಟರ್ನ್ ಯುರೋಪ್

Tour Name	Ex-Bengaluru	J&L
ಆಲ್ ಆಫ್ ಈಸ್ಟರ್ನ್ ಯುರೋಪ್ (17D)	360K-375K	285K-300K
ಕ್ರೊಯೆಶಿಯಾ ಸ್ಲೊವೇನಿಯಾ ಸ್ಲೊವಾಕಿಯಾ ಹಂಗೆರಿ (12D)	285K-300K	210K-225K
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ ಬ್ರಾಟಿಸ್ಲಾವಾ (8D)	225K-240K	150K-165K
ವಿಯೆನ್ನಾ ಪ್ರಾಗ್ ಸಾಲ್ಸ್‌ಬರ್ಗ್ ಮ್ಯೂನಿಕ್ (8D)	210K-225K	150K- 155K
ಬೆಸ್ಟ್ ಆಫ್ ಕ್ರೊಯೆಶಿಯಾ (8D)	265000	195000
ಉಜ್ಬೆಕಿಸ್ತಾನ್ ಕಝಕ್‌ಸ್ತಾನ್ ಕಿರ್ಗಿಜ್‌ಸ್ತಾನ್ (9D)	200K-225K	NA
ಬೆಸ್ಟ್ ಆಫ್ ಬಾಕು ಅಝರ್‌ಬೈಜಾನ್ (7D)	135K-150K	NA
ಜಾರ್ಜಿಯಾ ಆರ್ಮೇನಿಯಾ ಅಝರ್‌ಬೈಜಾನ್ (10D)	200K-215K	NA
ಜಾರ್ಜಿಯಾ ಆರ್ಮೇನಿಯಾ (8D)	165K-175K	115K-125K

ಸದರ್ನ್ ಮೆಡಿಟರೇನಿಯನ್ ಬಾಲ್ಟಿಕ್ ಬಾಲ್ಕನ್ ಯುರೋಪ್

Tour Name	Ex-Bengaluru	J&L
ಬೆಸ್ಟ್ ಆಫ್ ಸ್ಪೇನ್ (10D)	250K-265K	180K-295K
ಆಲ್ ಆಫ್ ಸ್ಪೇನ್ (15D)	350K-365K	280K-295K
ಸ್ಪೇನ್ ಪೋರ್ಚುಗಲ್ (13D)	300K-315K	230K-245K
ಸ್ಪೇನ್ ಪೋರ್ಚುಗಲ್ ಮೊರೊಕೊ (16D)	345K-360K	230K-280K
ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D)	225K-240K	155K-165K
ರೊಮೇನಿಯಾ ಬಲ್ಗೇರಿಯಾ ಸರ್ಬಿಯಾ ನಾರ್ತ್ ಮಸೆಡೋನಿಯಾ (12D)	300K-315K	NA
ಗ್ರೀಸ್ (8D/10D/15D)	250K-425K	190K-240K
ಗ್ರೀಸ್ ಟರ್ಕಿ (12D)	350K-365K	NA
ಈಜಿಪ್ಟ್ ಗ್ರೀಸ್ ಟರ್ಕಿ (15D)	375K-390K	NA
ಟರ್ಕಿ (10D/15D)	225K-325K	155K-255K
ಬೆಸ್ಟ್ ಆಫ್ ಈಜಿಪ್ಟ್ (9D)	197K-207K	NA
ಟ್ಯುನೀಸಿಯಾ ಮಾಲ್ಟಾ ಸಿಸಿಲಿ (10D)	325K-340K	NA

ಯುಎಸ್ಎ ಸೌತ್ ಅಮೆರಿಕಾ ಕೆನಡಾ

Tour Name	Ex-Bengaluru	J&L
ಅಮೆರಿಕನ್ ಎಕ್ಸ್‌ಪ್ಲೋರರ್ (21D)	750K- 770K	NA
ಅಮೆರಿಕನ್ ಡ್ರೀಮ್ (19D)	705K-720K	640K-655K
ಅಮೇರಿಕನ್ ಸ್ಪೆಂಡರ್ಸ್ (18D)	650K-665K	513K-523K
ಅಮೇರಿಕನ್ ಅದ್ಭುತಗಳು (15D)	575K-590K	435K-450K
ಅಮೆರಿಕನ್ ಡಿಸ್ಕವರಿ (15D)	625K-640K	NA
ಅಮೆರಿಕನ್ ಮ್ಯಾಜಿಕ್ (13D)	530K-545K	390K-400K
ಅಮೆರಿಕನ್ ಡಿಲೈಟ್ (9D)	NA	295K-310K
ಯುಎಸ್ಎ ಈಸ್ಟ್ ಕೋಸ್ಟ್ (7D)	300K-315K	175K-190K
ಕ್ಯಾಲಿಫೋರ್ನಿಯಾ ಕಾರ್ನಿವಲ್ (10D)	400K-415K	260K-275K
ಬೆಸ್ಟ್ ಆಫ್ ಅಲಾಸ್ಕಾ (9D)	400K-420K	NA
ಬೆಸ್ಟ್ ಆಫ್ ಅಲಾಸ್ಕಾ ಕೆನಡಾ (17D)	650K-670K	NA
ಬೆಸ್ಟ್ ಆಫ್ ಕೆನಡಾ (10D)	475K-490K	NA
ಆಲ್ ಆಫ್ ಕೆನಡಾ (17D)	725K-740K	615K-630K
ಬೆಸ್ಟ್ ಆಫ್ ಯುಎಸ್ಎ & ಕೆನಡಾ (19D)	770-770K	NA
ಬೆಸ್ಟ್ ಆಫ್ ಹವಾಯಿ ಮೆಕ್ಸಿಕೊ (13D)	775K-790K	NA
ಬೆಸ್ಟ್ ಆಫ್ ದಕ್ಷಿಣ ಅಮೇರಿಕ (21D)	1085K-1100K	NA
ಬೆಸ್ಟ್ ಬ್ರಝಿಲ್, ಅರ್ಜೆಂಟೀನಾ (12D)	750K-770K	NA
ಅಂಟಾರ್ಕ್ಟಿಕಾ ದಿ 7th ಕಾಂಟಿನೆಂಟ್ (13D)	1325K-1340K	1125K-1140K

ಕಸ್ಟಮೈಜ್ಡ್ ಹಾಲಿಡೇಸ್ ನಿಮ್ಮ ಪ್ರೈವೇಟ್ ಹಾಲಿಡೇ, ನೀವು ಬಯಸುವ ರೀತಿಯಲ್ಲಿ!

ಯುರೋಪ್ ಯುಎಸ್ಎ ಟೂರ್ಸ್‌ಗಾಗಿ, ಭಾರತಾದ್ಯಂತ ಒಂದೇ ಟೂರ್ ಪ್ರೈಸ್ - ಮುಂಬಯಿ, ನಾಗ್ಪುರ, ಇಂದೋರ್, ಬೆಂಗಳೂರು, ಗೋವಾ, ಹೈದರಾಬಾದ್, ಚೆನ್ನೈಫಿ, ಕೊಚ್ಚಿ, ದೆಹಲಿ, ಅಹಮದಾಬಾದ್, ಕೋಲ್ಕತಾದಿಂದ.

ಸೀನಿಯರ್ಸ್ ಸ್ಪೆಶಲ್

ವೀಣಾ ವರ್ಲ್ಡ್ ಅತಿಥಿಗಳ

ಹಿಮಾಲಯದಲ್ಲಿ ಲಕ್ಷುರಿ ಗ್ರೂಪ್ ಟ್ಯೂರ್‌ಗಳು
ಕಾಶ್ಮೀರ (9D) 170000 - 190000 • ನೇಪಾಳ (10D) 175000
ಲೇಹ್ ಲಡಾಖ್ (10D) 195000 • ಭೂತಾನ (9D) 210000
ಸೇರಿಕೊಳ್ಳುವ ಹಾಗೂ ಬಿಟ್ಟುಹೋಗುವ ಟ್ಯೂರ್ ಬೆಲೆಗಳನ್ನು ಸಹ ಲಭ್ಯವಿದೆ

ಚೆರ್ರಿ ಬ್ಲಾಸಮ್

ವಿಮೆನ್ಸ್ ಸ್ಪೆಶಲ್

ವೀಣಾ ವರ್ಲ್ಡ್ ಗಿಫ್ಟ್ ಕಾರ್ಡ್ಸ್!

ಕಾರ್ಪೊರೇಟ್ ಟೂರ್ಸ್ MICE ಕಾನ್‌ಫರೆನ್ಸ್‌ಗಳು, ಇನ್ಸೆಂಟಿವ್ ಟೂರ್ಸ್ ಮತ್ತು ಅವಾರ್ಡ್ ಫಂಕ್ಷನ್ಸ್‌ಗಾಗಿ

Ask us for exclusive tours for your group of family and friends

Travel Now Pay Later!
EMI options available (3 months to 24 months) subject to EMI partner approval. T&C apply

Group tour price includes return airfare (ex-Bengaluru), transport, accommodation, all meals: breakfast, lunch, dinner, sightseeing with entrance fees, driver-guide tips, travel insurance*(ex-Bengaluru), services of a Tour Manager and VISA fee. USA tours are for valid USA visa holders only.

Jayanagar: Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 887 997 2217

Indiranagar: 2005, 100 feet Road, HAL 2nd Stage, Indiranagar, Bengaluru 560038, Call: 887 997 9500

Veena World Sales Partners: Karnataka: Belgaum-College Road 9980428880 • Belgaum-Goaves Circle 7338685500 • Belgaum-Tilakwadi 9845092772 Dharwad 9036715969 • Hubli 7204411007 • Malleshwaram 9845066469 • Basavanagudi 9900268233 • Vijaynagar 9036610005 • Chikodi 9448627771 Udupi 9448372824 • Gulburga 9632655010 • Vijayapur 9980857595 • Tamil Nadu: Coimbatore 9994666522 • For MICE Corporate Tours 704 599 3391

Applications invited for Sales Partners/ Agents across Southern India Call : 887 997 9733

Book Online 24x7 from anywhere on veenaworld.com | Call: 1800 22 7979 | Mon-Sat 10 to 7

Dadar 887 997 2203	Vile Parle 887 997 2213	Borivali 887 997 2201	Ghatkopar 887 997 2226	Thane 1 887 997 2205	Pune 887 997 2300	Vashi 887 997 2207	Bengaluru Jayangr 887 997 2217
Girgaon 887 997 2215	Andheri 887 997 2216	Kandivali 887 997 7500	Chembur 887 997 2202	Thane 2 887 997 2204	Baner 887 997 9300	Ahmedabad 887 997 7200	Bengaluru Indirangr 887 997 9500
Bandra 887 997 2212	Versova 887 997 9100	Bhayandar 887 997 7400	Mulund 887 997 9600	Dombivali 887 997 2206	Chinchwad 887 997 2310	Kolkata 887 997 2288	Hyderabad 887 997 9700
Matunga 887 997 2214	Malad 887 997 2219	Vasai 887 997 2209	Vidyavihar 887 997 2221	Airoli 887 997 9200	Hadapsar 887 997 7300	New Delhi 887 997 2700	Indore 887 997 9800

VEENA WORLD Travel. Explore. Celebrate Life.

All group tours are ex-Bengaluru. Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

ಕೆಐಎನಲ್ಲಿ ವೈಮಾನಿಕ ವೀಕ್ಷಣಾ ಪರದೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ವೈಮಾನಿಕ ವೀಕ್ಷಣೆ ಪರದೆ (ಎವಿಡಿ) ಅಳವಡಿಸಲಾಗಿದೆ.

ಈ ಡ್ಯಾಶ್‌ಬೋರ್ಡ್ ಮೂಲಕ ವಿಮಾನಗಳ ಲೈವ್ ಲೊಕೇಷನ್, ತುರ್ತು ಸಂದರ್ಭದ ಸಂದೇಶಗಳನ್ನು ಪ್ರಯಾಣಿಕರು ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ.

ಈ ವ್ಯವಸ್ಥೆಯು ವಿಮಾನ ಸಂಚಾರ, ವಾಯುಯಾನ ಪ್ರದೇಶದಲ್ಲಿ ವಾಹನಗಳ ಸಂಚಾರ ಸಮನ್ವಯ, ತುರ್ತು ಪರಿಸ್ಥಿತಿಯ ನಿರ್ವಹಣೆ ಸೇರಿದಂತೆ ಹಲವಾರು ಕಾರ್ಯಗಳ ಮೇಲ್ವಿಚಾರಣೆಗೆ ಕೇಂದ್ರೀಕೃತ ಡ್ಯಾಶ್ ಬೋರ್ಡ್ ನೆರವಾಗಲಿದೆ. ವಿಮಾನ ನಿಲ್ದಾಣದ ನಿರ್ವಾಹಕರು, ವಿಮಾನಯಾನ ಸಂಸ್ಥೆಗಳ ಪ್ರತಿನಿಧಿಗಳಿಗೆ ವಾಯುಯಾನ ಪ್ರದೇಶದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳ ಏಕೀಕೃತ ನೋಟವನ್ನು ಈ ಪರದೆ ಒದಗಿಸುತ್ತದೆ. ಆ ಮೂಲಕ ವಿಮಾನ ಕಾರ್ಯಾಚರಣೆಯ ದಕ್ಷತೆ ಮತ್ತು ಸುರಕ್ಷತೆ ಹೆಚ್ಚಿಸಲು ನೆರವಾಗಲಿದೆ.

ಈ ಪರದೆ ವೈಶಿಷ್ಟ್ಯತೆ ಏನು?

ಏಕೀಕೃತ ಡ್ಯಾಶ್‌ಬೋರ್ಡ್: ವಿಮಾನದ ಲ್ಯಾಂಡಿಂಗ್, ಟೇಕ್ ಆಫ್, ಟ್ಯಾಕ್ಸಿ ಮತ್ತು ವಾಹನ ಸಂಚಾರ ಸೇರಿದಂತೆ ವಾಯುಯಾನ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ನೈಜ ಸಮಯದ ಸಮಗ್ರ ವಿವರ ಈ ಪರದೆಯಲ್ಲಿ ದೊರೆಯಲಿದೆ.

ಟ್ರ್ಯಾಕಿಂಗ್ ಸೌಲಭ್ಯ: ವಾಯುಯಾನ ಪ್ರದೇಶದಲ್ಲಿ ವಿಮಾನಗಳ ವೇಗ, ರನ್ ವೇ ಬಳಕೆಯಲ್ಲಿರುವ ಸಮಯ ಮತ್ತು ಟ್ಯಾಕ್ಸಿ ಸಂಚಾರದ ನಿಖರ ಮೇಲ್ವಿಚಾರಣೆಗೆ ನೆರವು

ವಾಹನಗಳ ಮೇಲ್ವಿಚಾರಣೆ: ರನ್ ವೇಯಲ್ಲಿ ಸಂಚರಿಸುವ ವಿಮಾನೇತರ ವಾಹನಗಳ ಸಂಚಾರದ ಮೇಲೆ ಟ್ರ್ಯಾಕ್ ಮಾಡಬಹುದು

ಸಹಯೋಗ: ವಾಯುಯಾನ ಪ್ರದೇಶದ ಉತ್ತಮ ಕಾರ್ಯಾಚರಣೆ, ಕಾರ್ಯನಿರ್ವಹಣೆಗೆ ಇತರ ಸಂಸ್ಥೆ ಮತ್ತು ತಂಡಗಳ ಸಹಯೋಗವನ್ನು ಬಲಗೊಳಿಸಲಿದೆ.

ತುರ್ತು ಎಚ್ಚರಿಕೆ: ತುರ್ತು ಸಂದರ್ಭಗಳಲ್ಲಿ ಇತರ ಸಂಸ್ಥೆ/ತಂಡಗಳ ಜೊತೆಗೆ ಉತ್ತಮ ಸಮನ್ವಯ ಸಾಧಿಸಲು ಮತ್ತು ಅಪಾಯ, ಅಡೆತಡೆ ನಿವಾರಿಸಲು ತ್ವರಿತ ಪ್ರತಿಕ್ರಿಯೆ ಸೌಲಭ್ಯ ಒದಗಿಸುತ್ತದೆ.

ಸೂಕ್ತ ನಿರ್ವಹಣೆ: ಟ್ಯಾಕ್ಸಿ ಸಂಚಾರ ಸಮಯದ ವಿಳಂಬ ಕಡಿಮೆ ಮಾಡಲು ಮತ್ತು ಸುಗಮ ಕಾರ್ಯಾಚರಣೆ ಖಚಿತಪಡಿಸಲು ನಿಖರ ವಿಶ್ಲೇಷಣೆ ಒದಗಿಸುತ್ತದೆ. ಇದು ಸರಿಯಾದ ಸಮಯದ ಕಾರ್ಯಕ್ಷಮತೆ (ಒಟಿಪಿ) ಮತ್ತು ಇಂಧನ ಉಳಿತಾಯಕ್ಕೆ ಕಾರಣವಾಗುತ್ತದೆ.

ಹಿಂದಿನಂತಿಲ್ಲ ಇಂದು; ಹತ್ತು ವರ್ಷದಲ್ಲಿ ಚಿತ್ರಣ ಬದಲಾಗಿದೆ ಎಂದ ಪ್ರೇಕ್ಷಕರು

ರಂಗು ಕಳೆದುಕೊಂಡ ಪ್ರದರ್ಶನ



ಪ್ರೇಕ್ಷರರನ್ನು ರಂಜಿಸಿದ ಕಸರತ್ತು

ಅಮೆರಿಕ ವಾಯು ಸೇನೆಯ ಎಫ್–35 ಹಾಗೂ ರಷ್ಯಾದ ಸುಖೋಯ್–57 ಯುದ್ಧ ವಿಮಾನಗಳು ಭಾರಿ ಶಬ್ದದೊಂದಿಗೆ ಆಕಾಶ ಸೀಳಿಕೊಂಡು ಹೋಗುವಂತಹ ವೈಮಾನಿಕ ಕಸರತ್ತು ರೋಮಾಂಚನ ಉಂಟು ಮಾಡಿದವು. ಅಂತಿಮವಾಗಿ ಒಂಬತ್ತು ಹಾಕ್ ಎಂಕೆ–132 ಯುದ್ಧ ವಿಮಾನಗಳ ಕಸರತ್ತು ನೆರೆದವರ ಚಪ್ಪಾಳೆ ಗಿಟ್ಟಿಸಿತು. ಗ್ರೂಪ್ ಕ್ಯಾಪ್ಟನ್ ಸಿದ್ಧೇಶ್ ಕಾರ್ತಿಕ್ ಅವರ ನೇತೃತ್ವದ ತಂಡವು ಆಗಸದಲ್ಲಿ ವ್ಯೋಮದೊಂದಿಗೆ ಮಾಡುತ್ತಿದ್ದ ಹಲವು ಕಸರತ್ತುಗಳು ಮೈನವಿರೇಳಿಸುವಂತಿದ್ದವು. ಪರಸ್ಪರ ಡಿಕ್ಕಿ ಹೊಡೆಯುವಂತ ಸಾಹಸದ ಜತೆಗೆ, ಯುವಜನತೆಯ ಪ್ರತೀಕವಾಗಿ ಇಂಗ್ಲೀಷ್ 'ವೈ', 'ಎ' ಅಕ್ಷರದಂತೆ ಸಾಗುವ ಪ್ರದರ್ಶನ, ರಾಷ್ಟ್ರಧ್ವಜದ ಮಾದರಿಯ ಹೊಗೆಯುಗುಳುತ್ತಾ ಸಾಗುವ ಕಸರತ್ತು ಪ್ರೇಕ್ಷಕರನ್ನು ರಂಜಿಸಿದವು.

ಸೂರ್ಯಕಿರಣ ವಿಮಾನಗಳ ವೈಮಾನಿಕ ಪ್ರದರ್ಶನದಲ್ಲಿ ವಿವಿಧ ಆಕಾರಗಳ ಪ್ರದರ್ಶನ ನಡೆಯಿತು
ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್



ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೊ ಇಂಡಿಯಾ 15ನೇ ಆವೃತ್ತಿಯು ಯಲಹಂಕದಲ್ಲಿ ಆರಂಭವಾಗಿದ್ದು, ಪ್ರಮುಖ ಕೇಂದ್ರಬಿಂದುವಾದ ವೈಮಾನಿಕ ಪ್ರದರ್ಶನವು ಕಳೆದ ಹತ್ತು ವರ್ಷಗಳ ಹಿಂದಿನ ವಿಜೃಂಭಣೆಗೆ ಹೋಲಿಸಿದರೆ ಈ ಬಾರಿ ರಂಗು ಕಳೆದುಕೊಂಡಿದೆ.

ಭಾರತೀಯ ವಾಯು ಸೇನೆಯ ತಂಡವು ಎಚ್‌ಎಎಲ್ ನಿರ್ಮಿತ ಹೆಲಿಕಾಪ್ಟರ್‌ಗಳನ್ನು ಬಳಸಿ ಸಾರಂಗ ತಂಡದಿಂದ ಮೈ ಜುಂ ಎನಿಸುವ ರೋಮಾಂಚನಕಾರಿ ಪ್ರದರ್ಶನ, ಯುರೋಪಿಯನ್ ಏರೊಬ್ಯಾಟಿಕ್ ತಂಡದ ಫ್ಲೈಯಿಂಗ್ ಬುಲ್ಸ್‌ನ ಆಕರ್ಷಕ ಕಸರತ್ತು, ಸುಖೋಯ್ ಯುದ್ಧ ವಿಮಾನಗಳು ಕಿವಿ ಗಡಚಿಕ್ಕುವ ಶಬ್ದದೊಂದಿಗೆ ಪ್ರವೇಶ ಪಡೆದು ಮೈನವಿರೇಳಿಸುತ್ತಿದ್ದ ರಷ್ಯನ್ ನೈಟ್ಸ್ ತಂಡದ ವೈಮಾನಿಕ ಕಸರತ್ತುಗಳು ಮತ್ತು ಪ್ರತಿ ಗಂಟೆಗೆ 200 ನಾಟಿಕಲ್ಸ್ ವೇಗದಲ್ಲಿ ಸಾಗುವ ವಿಮಾನಗಳ ಮೇಲೆ ಯುವತಿಯರು ನಿಂತು ಹಾರಾಟ ನಡೆಸುವ 'ಏಂಜೆಲ್ಸ್ ಆನ್ ವಿಂಗ್ಸ್' ಹತ್ತು ವರ್ಷಗಳ ಹಿಂದಿನ ಏರೊ ಇಂಡಿಯಾದ ಪ್ರಮುಖ ಆಕರ್ಷಣೆಗಳಾಗಿದ್ದವು.

ಆದರೆ, 2025ರಲ್ಲಿ ಇಂಥ ಯಾವ ತಂಡಗಳೂ ಭಾಗವಹಿಸಿಲ್ಲ. ಒಂದೊಂದೇ ವಿಮಾನಗಳು ಆಗಸದಲ್ಲಿ ತಮ್ಮ ಪ್ರದರ್ಶನ ನಡೆಸುತ್ತಿವೆ. ಅಂತಿಮವಾಗಿ ಪ್ರದರ್ಶನಕ್ಕೆ ಕಳಶವಿಟ್ಟಂತೆ ಸೂರ್ಯ ಕಿರಣ್ ತಂಡದ ಕಸರತ್ತು ನೆರೆದವರ ಚಪ್ಪಾಳೆ ಗಿಟ್ಟಿಸುತ್ತಿದೆ.

ಮಧ್ಯಾಹ್ನ 12ಕ್ಕೆ ಎಚ್‌ಎಎಲ್‌ನ ಟರ್ಬೊ ಟ್ರೈನರ್ 40ಯೊಂದಿಗೆ ಪ್ರದರ್ಶನವು ಆರಂಭವಾಗುತ್ತದೆ. ಈ ವಿಮಾನವು ಕಡಿಮೆ ಸ್ಥಳಾವಕಾಶದಲ್ಲಿ ಶೇ 70ರಷ್ಟು ಬಾಗುವ ಸಾಮರ್ಥ್ಯ ಹೊಂದಿದ್ದು, ಸುಲಭವಾಗಿ ಲ್ಯಾಂಡಿಂಗ್ ಆಗುವುದನ್ನು ಪ್ರದರ್ಶಿಸುತ್ತಿದೆ.

ನಂತರ ತೇಜಸ್ ಲಘು ಯುದ್ಧ ವಿಮಾನದ ಮಾರ್ಕ್–1 ಆಲ್ಫಾ ತನ್ನ ಕಸರತ್ತು ಪ್ರದರ್ಶಿಸುತ್ತದೆ. ಅತ್ಯಂತ ಕಡಿಮೆ 130 ನಾಟ್ಸ್ ವೇಗದಲ್ಲಿ ಸಾಗುವ ಸಾಮರ್ಥ್ಯವಿರುವ ಈ ವಿಮಾನವು ತಲೆಕೆಳಗಾಗಿ ಸಾಗಬಲ್ಲದು. ಮುಖ್ಯ ತರಬೇತಿ ಪೈಲಟ್ ಕೆ.ಕೆ. ವೇಣುಗೋಪಾಲ್ ಅವರು ಈ ಕಸರತ್ತನ್ನು ಪ್ರದರ್ಶಿಸಿದರು. 700ರಿಂದ 900 ಮೀಟರ್ ಸ್ಥಳಾವಕಾಶದಲ್ಲಿ ಲ್ಯಾಂಡಿಂಗ್ ಸೌಕರ್ಯ ಇದರದ್ದು.

ತುಮಕೂರಿನಲ್ಲಿ ಏಷ್ಯಾದ ಅತಿ ದೊಡ್ಡ ವಿಮಾನ ತಯಾರಿಕಾ ಘಟಕ ಹೊಂದಿರುವ ಎಚ್‌ಎಎಲ್ ನಿರ್ಮಿಸಿರುವ ಎಲಿವೇಟ್ ಹೆಲಿಕಾಪ್ಟರ್ ತನ್ನ ಕಸರತ್ತು ಪ್ರದರ್ಶನ ಆರಂಭಿಸುತ್ತದೆ. ಸೇನೆ ಮತ್ತು ನಾಗರಿಕ ಬಳಕೆಗೆ ಯೋಗ್ಯವಾಗುವಂತೆ ಇದನ್ನು ಅಭಿವೃದ್ಧಿ ಪಡಿಸಲಾಗಿದೆ. ಅವಳಿ ಎಂಜಿನ್ ಹೊಂದಿರುವ ಇದು ಸಿಯಾಚಿನ್‌ನಂತಹ ದುರ್ಗಮ ಕಣಿವೆ ಪ್ರದೇಶದಲ್ಲೂ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಮುಂದಕ್ಕೆ ಮಾತ್ರವಲ್ಲ, ಹಿಮ್ಮುಖವಾಗಿಯೂ ಹಾರಾಟ ನಡೆಸುವ ಇದರ ಸಾಮರ್ಥ್ಯವನ್ನು ನಿವೃತ್ತ ಪೈಲಟ್ ಎಸ್.ಪಿ.ಜಾನ್ ಪ್ರದರ್ಶಿಸಿದರು.

ಅಮೆರಿಕದ ಬೋಯಿಂಗ್ ಕಂಪನಿಯ ಕೆಸಿ 135 ಯುಎಸ್‌ಎ ವಿಮಾನದ ಸಣ್ಣ ಹಾರಾಟದ ನಂತರ, ಪೈಲಟ್ ಪರ್ವಿಂದರ್ ಸಿಂಗ್ ಚಾಹಲ್ ಅವರಿಂದ ರಷ್ಯಾದ ಸುಖೋಯ್ ಎಂ30 ಎಂಕೆಐ ಯುದ್ಧ ವಿಮಾನದ ಕಸರತ್ತು ನಡೆಯಿತು. ಇದರ ನಂತರದ್ದು ಎನ್‌ಎಎಲ್ ನಿರ್ಮಿಸಿದ ಹಂಸ ಎನ್‌ಜಿ ಎಂಬ ಪುಟ್ಟ ವಿಮಾನ, ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಡಾರ್ನಿಯರ್ ವಿಮಾನದ ಸಣ್ಣ ಹಾರಾಟ ನಡೆಯಿತು.

ಸುಮಾರು ಎರಡು ಗಂಟೆಗಳ ವೈಮಾನಿಕ ಪ್ರದರ್ಶನಕ್ಕೆ ಹತ್ತು ವರ್ಷಗಳ ಹಿಂದೆ ಭೇಟಿ ನೀಡಿದವರು ಅಂದು ಕಂಡಿದ್ದ ವೈಮಾನಿಕ ಪ್ರದರ್ಶನಗಳನ್ನು ಪರಸ್ಪರ ಮೆಲುಕು ಹಾಕುತ್ತಿದ್ದ ದೃಶ್ಯ ಕಂಡುಬಂತು.

ಡಿಕೆನ್ಸನ್ ರಸ್ತೆಯಲ್ಲಿ ಜೋಯಾಲುಕ್ಕಾಸ್ ಹೊಸ ಶೋರೂಮ್ ಪುನರಾರಂಭ

Joyalukkas World's favourite jeweller

ಫೆ. 15ರಂದು ಮರುಆರಂಭ

ಬೆಂಗಳೂರು: ಜಗತ್ತಿನ ಜ್ಯುವೆಲ್ಲರಿ ಕ್ಷೇತ್ರದ ಪ್ರಸಿದ್ಧ ಜೋಯಾಲುಕ್ಕಾಸ್, ಬೆಂಗಳೂರಿನ ಡಿಕೆನ್ಸನ್ ರಸ್ತೆಯಲ್ಲಿ ತನ್ನ ಅತ್ಯಾಧುನಿಕ ನವೀಕೃತ ಶೋರೂಮ್‌ನ ಮರುಆರಂಭವನ್ನು ಘೋಷಿಸಲು ಉತ್ಸುಕವಾಗಿದೆ.

ಫೆ. 15ರಂದು ಭವ್ಯವಾದ ಪುನರಾರಂಭ ಸಮಾರಂಭ ನಡೆಯಲಿದ್ದು, ಈ ಮಹತ್ವದ ಸಂದರ್ಭವನ್ನು ಸಂಭ್ರಮ ಆಚರಿಸಲು ಬ್ರ್ಯಾಂಡ್ ವಿಶೇಷ ಕೊಡುಗೆಗಳನ್ನು ಪರಿಚಯಿಸುತ್ತಿದೆ. ಬ್ರ್ಯಾಂಡ್‌ನ ವಿಸ್ತರಣೆಯಲ್ಲಿ ಮೈಲಿಗಲ್ಲನ್ನು ಸಾಧಿಸುವುದಲ್ಲದೇ ಆಭರಣ ಪ್ರಿಯರಿಗೆ ಸರಿಸಾಟಿಯಿಲ್ಲದ ಖರೀದಿ ಅನುಭವ ನೀಡಲಿದೆ.

ಸುಸಜ್ಜಿತ ಮಳಿಗೆ ಅನಾವರಣದ ಪ್ರಯುಕ್ತ ಜೋಯಾಲುಕ್ಕಾಸ್ ಚಿನ್ನ, ವಜ್ರ, ಅನ್‌ಕಟ್ ವಜ್ರ, ಪ್ಲಾಟಿನಂ, ಅಮೂಲ್ಯ ಹರಳು ಮತ್ತು ಬೆಳ್ಳಿ ಆಭರಣಗಳ ಮಜೂರಿ ಮೇಲೆ ಶೇ.50 ರಿಯಾಯಿತಿ ಸೇರಿದಂತೆ ಅತ್ಯಾಕರ್ಷಕ ಕೊಡುಗೆಗಳನ್ನು ನೀಡುತ್ತಲಿದೆ. ಇದು ಸೀಮಿತ ಅವಧಿಯ ಕೊಡುಗೆಯಾಗಿದ್ದು ಬೆಂಗಳೂರಿಗರಿಗೆ ಶೋ ರೂಮ್‌ನ ಮರುಆರಂಭದ ಇನ್ನಷ್ಟು ವಿಶೇಷವಾಗಿಸಲು ಹೊರಟಿದೆ. ನಗರದ ಹೃದಯ ಭಾಗದಲ್ಲಿರುವ ಜೋಯಾಲುಕ್ಕಾಸ್ ಬ್ರ್ಯಾಂಡ್‌ನ ವಿಶ್ವದರ್ಜೆಯ ಆಭರಣ ಸಂಗ್ರಹಗಳನ್ನು ಇಲ್ಲಿ ಕಾಣಬಹುದು.

ಸಿಗ್ನೇಚರ್ ಸೊಬಗು: ಜೋಯಾಲುಕ್ಕಾಸ್‌ನ ಸಿಗ್ನೇಚರ್ ಸೊಬಗು ಮತ್ತು ಅತ್ಯಾಧುನಿಕತೆಯೊಂದಿಗೆ ವಿನ್ಯಾಸಗೊಳಿಸಲಾದ ಡಿಕೆನ್ಸನ್ ರೋಡ್ ಆಭರಣ ಮಳಿಗೆ, ಅತ್ಯಾಧುನಿಕ ಸೌಂದರ್ಯ, ವಿಶಾಲ ಶಾಪಿಂಗ್ ಆವರಣ ಮತ್ತು ಪ್ರೀಮಿಯಂ ಸೌಕರ್ಯಗಳನ್ನು ಹೊಂದಿದೆ. ವಿಶ್ವದಾದ್ಯಂತದ ಇತ್ತೀಚಿನ ವಿನ್ಯಾಸಗಳು ಮತ್ತು ಟೈಮ್‌ಲೆಸ್ ಕ್ಲಾಸಿಕ್‌ಗಳನ್ನು ಒಳಗೊಂಡಿರುವ ವೈವಿಧ್ಯಮಯ ಆಭರಣಗಳ ಸೊಗಸಾದ ಸಂಗ್ರಹವನ್ನು ಹೊಂದಿದೆ.

ನವೀಕೃತ ಆಭರಣ ಮಳಿಗೆಯನ್ನು ಕುರಿತು ಜೋಯಾಲುಕ್ಕಾಸ್ ಸಮೂಹದ ಸಿಎಂಡಿ ಜೋಯ್ ಆಲುಕ್ಕಾಸ್ ಮಾತನಾಡಿ, ``ಜೋಯಾಲುಕ್ಕಾಸ್‌ನ ಶ್ರೇಷ್ಠತೆ ಮತ್ತು ನಾವೀನ್ಯತೆಯ ಪರಂಪರೆಯನ್ನು ಡಿಕೆನ್ಸನ್ ರಸ್ತೆಗೆ ಮರಳಿ ತರಲು ನಾವು ಆನಂದಿಸುತ್ತೇವೆ. ನಮ್ಮ ಈ ಆಭರಣ ಮಳಿಗೆಯು ಗ್ರಾಹಕರಿಗೆ ಪ್ರೀಮಿಯಂ ಮತ್ತು ಮರೆಯಲಾಗದ ಆಭರಣ ಖರೀದಿ ಅನುಭವವನ್ನು ಒದಗಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಸೂಕ್ಷ್ಮವಾಗಿ ಸಂಗ್ರಹಿಸಲಾದ ಆಭರಣಗಳು ಹಾಗೂ ನಮ್ಮ ಅಸಾಧಾರಣ ಗ್ರಾಹಕ ಸೇವೆ, ಗ್ರಾಹಕರ ವಿವೇಚನಾಶೀಲ ಅಭಿರುಚಿಗಳನ್ನು ಪೂರೈಸಲು ಚಿಂತನಶೀಲ ಹಾಗೂ ಸೃಜನಾತ್ಮಕವಾಗಿ ವಿನ್ಯಾಸಗೊಳಿಸಲಾಗಿದೆ. ಮಳಿಗೆಯ ಭವ್ಯವಾದ ಪುನರಾರಂಭಕ್ಕೆ ನಮ್ಮೊಂದಿಗೆ ಸೇರಲು ಮತ್ತು ಸಂಭ್ರಮಾಚರಣೆಯ ಭಾಗವಾಗಲು ನಾವು ಎಲ್ಲರನ್ನು ಆಹ್ವಾನಿಸುತ್ತೇವೆ''.

ಜೋಯಾಲುಕ್ಕಾಸ್‌ನ ಈ ನೂತನ ಶೋರೂಮ್‌ನ ವೈವಿಧ್ಯತೆ ಅನುಭವಿಸುವ ಅವಕಾಶ ಗ್ರಾಹಕರು ಕಳೆದುಕೊಳ್ಳಬೇಡಿ. ವಿಶಾಲವಾದ ವಾಹನ ನಿಲುಗಡೆ ಸ್ಥಳ ಮತ್ತು ಸ್ವಾಗತಾರ್ಹ ವಾತಾವರಣ ಅನುಕೂಲತೆಗಳನ್ನು ಹಾಗೂ ಸೌಕರ್ಯಗಳನ್ನು ನೀಡಲು ಮಳಿಗೆಯನ್ನು ವಿನ್ಯಾಸಗೊಳಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಪಾಲ್ಗೊಳ್ಳುವ ಮೂಲಕ ಸೊಗಸಾದ ಆಭರಣಗಳು, ವಿಶೇಷ ಕೊಡುಗೆಗಳು ಮತ್ತು ಮರೆಯಲಾಗದ ಕ್ಷಣಗಳನ್ನು ಆನಂದಿಸಿ ಎಂದು ಹೇಳಿದರು. ❖

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅವ್ಯವಸ್ಥೆಯ ಆಗರ

ಯಲಹಂಕದಲ್ಲಿ ನಡೆಯುತ್ತಿರುವ 'ಏರೊ ಇಂಡಿಯಾ–2025' ವೈಮಾನಿಕ ಪ್ರದರ್ಶನದಲ್ಲಿ ಪಾರ್ಕಿಂಗ್, ಸಾರಿಗೆ ವ್ಯವಸ್ಥೆ, ಸಂಚಾರ ದಟ್ಟಣೆ ಸೇರಿದಂತೆ ಹಲವಾರು ಸಮಸ್ಯೆಗಳಿವೆ ಎಂದು ದೇಶದ ಬೇರೆ ಬೇರೆ ಭಾಗಗಳಿಂದ ಬಂದಿದ್ದ ಪ್ರತಿನಿಧಿಗಳು ಬೇಸರ ವ್ಯಕ್ತಪಡಿಸಿದರು.



ಏರೊ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ವಿದೇಶಿ ಯುದ್ಧ ವಿಮಾನಗಳ ಪ್ರದರ್ಶನ ಹಾಗೂ ಎಂದಿನಂತೆ ಸೂರ್ಯಕಿರಣದ ತಂಡದ ವೈಮಾನಿಕ ಪ್ರದರ್ಶನ ಮಾತ್ರ ಮೈನವಿರೇಳಿಸುವಂತೆ ಇತ್ತು. ಕಡೆಯ ಎರಡು ದಿನ ಮಾತ್ರ ಸಾರ್ವಜನಿಕರಿಗೆ ಪ್ರವೇಶವೆಂದು ಹೇಳಲಾಗಿತ್ತು. ಆದರೆ ಪ್ರದರ್ಶನದ ಎರಡನೇ ದಿನದಿಂದಲೇ ಹೆಚ್ಚು ಸಂಖ್ಯೆಯ ಜನ ಭಾಗವಹಿಸಿದ್ದರು. ಇದರಿಂದ ಸಂಚಾರ ದಟ್ಟಣೆ ಉಂಟಾಯಿತು.

ಅನಿತಾ, ಚೆನ್ನೈ



ಏರೊ ಇಂಡಿಯಾ ಪ್ರದರ್ಶನವನ್ನು ಬಹಳ ಚೆನ್ನಾಗಿ ಆಯೋಜನೆ ಮಾಡಲಾಗಿದೆ. ಪ್ರತಿಯೊಬ್ಬರೂ ಈ ಪ್ರದರ್ಶನದಲ್ಲಿ ಭಾಗವಹಿಸಿ ವೈಮಾನಿಕ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಕಣ್ತುಂಬಿಕೊಳ್ಳಬೇಕು. ಏರೊ ಇಂಡಿಯಾ ವೈಮಾನಿಕ ಪ್ರದರ್ಶನಕ್ಕೆ ಬರುವವರಿಗೆ ಜಿಕೆವಿಕೆಯಲ್ಲಿ ವಾಹನ ನಿಲುಗಡೆಗೆ ನಿಗದಿಪಡಿಸಿರುವ ಸ್ಥಳದಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಜಿಕೆವಿಕೆಯಿಂದ ಯಲಹಂಕ ವಾಯುನೆಲೆಗೆ ಬರಲು ಬಸ್‌ಗಳ ವ್ಯವಸ್ಥೆಯೂ ಇರಲಿಲ್ಲ.

ವೀಣಾ, ಯಲಹಂಕ ನ್ಯೂಟೌನ್



ಏರೊ ಇಂಡಿಯಾ ವೈಮಾನಿಕ ಪ್ರದರ್ಶನವನ್ನು ಬಹಳ ಚೆನ್ನಾಗಿ ಆಯೋಜಿಸಲಾಗಿದೆ. ಯಲಹಂಕ ವಾಯುನೆಲೆಯಲ್ಲಿ ಎಲ್ಲವೂ ಸರಿ ಇದೆ. ಆದರೆ ಹೊರ ಭಾಗದಲ್ಲಿ ಮಾತ್ರ ಸಂಚಾರದಟ್ಟಣೆ ಹೆಚ್ಚಾಗಿದೆ. ಇಲ್ಲಿಗೆ ತಲುಪಲು ಕನಿಷ್ಠ 3 ಗಂಟೆ ತಗಲುತ್ತಿದೆ.

ಪ್ರದೀಪ್, ಎಚ್‌ಎಸ್‌ಆರ್ ಲೇಔಟ್

ಏರೊ ಇಂಡಿಯಾದಲ್ಲಿ ವೈಮಾನಿಕ ಪ್ರದರ್ಶನ ನಡೆಯುವ ಸ್ಥಳಕ್ಕೆ ತಲುಪಲು ಸರಿಯಾದ ವ್ಯವಸ್ಥೆ ಮಾಡಿರದ ಕಾರಣ ನೂರಾರು ಜನರಿಗೆ ತೊಂದರೆ ಆಯಿತು. ಹೊರಗಡೆಯಿಂದ ಒಳಗಡೆ ಪ್ರವೇಶಿಸಲು ಕನಿಷ್ಠ 45 ನಿಮಿಷಗಳ ಸಮಯ ಬೇಕಾಗುತ್ತಿದೆ. ಸಾರ್ವಜನಿಕರು ಈ ಪ್ರದರ್ಶನಕ್ಕೆ ಭೇಟಿ ನೀಡಲು ಕಡೆಯ ಎರಡು ದಿನ ಅವಕಾಶ ನೀಡಲಾಗಿದೆ. ಆದರೆ ಮಂಗಳವಾರವೇ ಭಾರಿ ಸಂಖ್ಯೆಯ ಸಾರ್ವಜನಿಕರು ಹೇಗೊ ಪಾಸ್ ಪಡೆದುಕೊಂಡು ಒಳಗಡೆ ಬಂದಿದ್ದು, ಜನಸಂದಣಿ ಹೆಚ್ಚಾಗಿತ್ತು.



ಸುರಪಾಲ್ ಸಿಂಗ್ ದೇವ್ರಾ, ದೆಹಲಿ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

INVEST KARNATAKA



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಪರಂಪರೆಯ ಜೊತೆಗೆ ನಾವೀನ್ಯತೆಯನ್ನು ಸಂಯೋಜಿಸಿರುವ ಕೆಎಸ್‌ಡಿಎಲ್‌ನಿಂದ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಎಲ್ಲಾ ಪ್ರತಿನಿಧಿಗಳಿಗೆ ಸ್ವಾಗತ

ಇನ್ವೆಸ್ಟ್ ಕರ್ನಾಟಕ 2025	**ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ**	ಬೆಂಗಳೂರು ಅರಮನೆ, ಬೆಂಗಳೂರು. **ಫೆಬ್ರವರಿ 12-14**

ಪ್ರಗತಿಯ ಮರುಕಲ್ಪನೆ



ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರಿಗೆ ಕೆ.ಎಸ್.ಡಿ.ಎಲ್.ನ ಹೊಸ ಉತ್ಪನ್ನಗಳನ್ನು ನೀಡುತ್ತಿರುವ **ಶ್ರೀ ಎಂ.ಬಿ. ಪಾಟೀಲ,** ಬೃಹತ್ & ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಹಾಗೂ **ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ,** ಶಾಸಕರು, ಮುದ್ದೆಬಿಹಾಳ ವಿಧಾನಸಭಾ ಕ್ಷೇತ್ರ & ಅಧ್ಯಕ್ಷರು, ಕೆ.ಎಸ್.ಡಿ.ಎಲ್.



ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ (ಕೆಎಸ್‌ಡಿಎಲ್)

ಕ್ಷಿಪ್ರವಾಗಿ ಬೆಳೆಯುತ್ತಿರುವ ಸಾರ್ವಜನಿಕ ವಲಯದ ಘಟಕ (ಪಿಎಸ್‌ಯು) ಕೆಎಸ್‌ಡಿಎಲ್, ಕರ್ನಾಟಕದ ನಾವೀನ್ಯತೆ ಹಾಗೂ ಬೆಳವಣಿಗೆಯ ಪ್ರತೀಕವಾಗಿದೆ. ತಂತ್ರಜ್ಞಾನ ಆಧಾರಿತ, ಪರಿಸರ ಸ್ನೇಹಿ, ಸಮಗ್ರ ಮತ್ತು ಸದೃಢ ಪ್ರಗತಿಯ ಉದ್ದೇಶದೊಂದಿಗೆ ವಿಶ್ವದಾದ್ಯಂತ ಇರುವಂತಹ ಕೈಗಾರಿಕಾ ನಾಯಕರು ಒಟ್ಟುಗೂಡುವ ಇನ್ವೆಸ್ಟ್ ಕರ್ನಾಟಕ 2025, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಆಗಮಿಸುತ್ತಿರುವ ಎಲ್ಲಾ ಪ್ರತಿನಿಧಿಗಳನ್ನೂ ಕೆಎಸ್‌ಡಿಎಲ್ ಸ್ವಾಗತಿಸುತ್ತದೆ.

ನೂತನ ಅವಕಾಶಗಳನ್ನು ಪರಿಶೋಧಿಸಿ, ಕಾರ್ಯತಾಂತ್ರಿಕ ಪಾಲುದಾರಿಕೆಗಳೊಂದಿಗೆ ಕರ್ನಾಟಕದ ಬೆಳವಣಿಗೆಯ ಪಯಣದ ಭಾಗವಾಗಿ.



ಕೆಎಸ್‌ಡಿಎಲ್‌ನ ಸಾಧನೆಗಳು & ಮುಖ್ಯಾಂಶಗಳು

ಬಲಿಷ್ಠ ಬೆಳವಣಿಗೆ:
₹762 ಕೋಟಿ (2019-20) ವಹಿವಾಟಿನಿಂದ ₹1,570 ಕೋಟಿಗೆ (2023-24) ಏರಿಕೆ, ಶೇ.106 ರಷ್ಟು ಪ್ರಗತಿ

ಲಾಭಾಂಶ ಹೆಚ್ಚಳ:
ನಿವ್ವಳ ಲಾಭ ₹113 ಕೋಟಿಗಳಿಂದ ₹362 ಕೋಟಿಗೆ ಹೆಚ್ಚಳ, ಶೇ.220 ರಷ್ಟು ಏರಿಕೆ

ಸರ್ಕಾರಕ್ಕೆ ಹೆಚ್ಚಿನ ಆದಾಯ:
ಡಿವಿಡೆಂಡ್ ₹15.91 ಕೋಟಿಗಳಿಂದ ₹108.68 ಕೋಟಿಗೆ ಹೆಚ್ಚಳ

7 ಹ್ಯಾಂಡ್ ಸ್ಯಾನಿಟೈಜರ್‌ಗಳು, 5 ಹ್ಯಾಂಡ್ ವಾಶ್‌ಗಳು, 10 ಸೋಪುಗಳು, 3 ಶಾವರ್ ಜೆಲ್‌ಗಳು, ಹೈಜೆನಿಕ್ ಹ್ಯಾಂಡ್ ವಾಶ್‌ಗಳು, ಹಾಗೂ ಮೈಸೂರು ಸ್ಯಾಂಡಲ್ ಆಕ್ವಾ ಮಿನೆರಲ್ ವಾಟರ್ ಬಿಡುಗಡೆ.

3,813 ಎಕರೆಗಳಲ್ಲಿ ಶ್ರೀಗಂಧ ಸಾಗುವಳಿಗಾಗಿ 713 ಬೆಳೆಗಾರರೊಂದಿಗೆ ಪಾಲುದಾರಿಕೆ

ಎಲ್ಲಾ ವಿಭಾಗಗಳಲ್ಲಿಯೂ ಇ-ಆಫೀಸ್ ಯಶಸ್ವಿ ಅನುಷ್ಠಾನ

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಎರಡು ವಿಶೇಷ ಮಳಿಗೆಗಳ ಆರಂಭ

ಭವಿಷ್ಯದ ಕಾರ್ಯತಂತ್ರ & ನಿರ್ದೇಶನಗಳು

ಮಾರುಕಟ್ಟೆ ವಿಸ್ತರಣೆ:
ದೇಶದಾದ್ಯಂತ ತಲುಪದೇ ಇರುವಂತಹ ಮಾರುಕಟ್ಟೆಗಳಿಗೆ ಪ್ರವೇಶ

ಬಿಡುಗಡೆಗೆ ಸಿದ್ಧವಿರುವ ಹೊಸ ಉತ್ಪನ್ನಗಳು:
ಪ್ರೀಮಿಯಂ ಸಾಬೂನುಗಳು, ಶವರ್ ಜೆಲ್‌ಗಳು, ಅಗರಬತ್ತಿಗಳು, ಸಾಂಬ್ರಾಣಿ, ಉಜ್ವಲ ದೀಪದ ಎಣ್ಣೆ, ಪೂಜಾ ಸಾಮಗ್ರಿಗಳು ಹಾಗೂ ಕುಡಿಯುವ ನೀರು ಒಳಗೊಂಡ ಮೈಸೂರು ಸ್ಯಾಂಡಲ್ ವೇವ್ ಸರಣಿ.

ವಿಜಯಪುರದಲ್ಲಿ ನೂತನ ಸಾಬೂನು ತಯಾರಿಕಾ ಘಟಕ ಸ್ಥಾಪನೆ

ನಕಲು ವಿರುದ್ಧ ಕ್ರಮಗಳು:
ನಕಲು ಉತ್ಪನ್ನಗಳ ತಯಾರಿಕೆ ತಡೆಗಟ್ಟಲು ಆಧುನಿಕ ತಂತ್ರಜ್ಞಾನ ಬಳಕೆ

ಬೆಳವಣಿಗೆಯ ಗುರಿಗಳು:
2030ರ ವೇಳೆಗೆ ಆದಾಯ ₹1,500 ಕೋಟಿಗಳಿಂದ ₹5,000 ಕೋಟಿಗೆ ಹೆಚ್ಚಿಸುವ ಗುರಿ

ಜಾಗತಿಕ ವಿಸ್ತರಣೆ:
2030ರ ವೇಳೆಗೆ ಅಂತರರಾಷ್ಟ್ರೀಯ ಮಟ್ಟದ ವಹಿವಾಟನ್ನು ₹25 ಕೋಟಿಗಳಿಂದ ₹50 ಕೋಟಿಗೆ ಹೆಚ್ಚಿಸುವ ಗುರಿ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು.
-ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ನಷ್ಟದಲ್ಲಿದ್ದ ಕಂಪನಿ ಮಾಲೀಕರಿಗೆ ಸಹಾಯ ಮಾಡುವುದಾಗಿ ಆಮಿಷ

₹37.50 ಲಕ್ಷ ವಂಚನೆ: ಐವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದ ಕಂಪನಿ ಮಾಲೀಕರೊಬ್ಬರಿಗೆ ಕಮಿಷನ್ ರೂಪದಲ್ಲಿ ಹೆಚ್ಚಿನ ಹಣ ನೀಡುವುದಾಗಿ ಆಮಿಷವೊಡ್ಡಿ ₹37.50 ಲಕ್ಷ ಪಡೆದು ವಂಚಿಸಿದ್ದ ಐವರನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಇನಾಯತ್ ಉಲ್ಲಾ (50), ಜಾಕೀರ್(36), ಪ್ರತೀಕ್(35), ಉಮೇಶ್(31) ಹಾಗೂ ಸುಕೀರ್ತಿ(41) ಬಂಧಿತರು.

ಶೇಷಾದ್ರಿಪುರದ ಕಂಪನಿಯೊಂದರ ಮಾಲೀಕರು ನೀಡಿದ ದೂರು ಆಧರಿಸಿ ಬಸವೇಶ್ವರ ನಗರ ಹಾಗೂ ಹುಬ್ಬಳ್ಳಿಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ.

ಬಂಧಿತರಿಂದ ಎರಡು ಕಾರು, ಐದು ಮೊಬೈಲ್, ಆರ್‌ಬಿಐ ಹೆಸರಿನಲ್ಲಿದ್ದ ಎರಡು ನಕಲಿ ಕಡತ, ₹1 ಲಕ್ಷ ನಗದು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ತಿಳಿಸಿದರು.

'ದೂರುದಾರರ ಕಂಪನಿ ನಷ್ಟದಲ್ಲಿ ಇತ್ತು. ಹಣಕಾಸಿನ ಅವಶ್ಯಕತೆಯಿದ್ದ ಕಾರಣಕ್ಕೆ ಅವರು ಸಹಾಯ ಕೋರಿ ಪರಿಚಯಸ್ಥರಾಗಿದ್ದ ಇಬ್ಬರನ್ನು ಭೇಟಿ ಮಾಡಿದ್ದರು. ಅವರು ಆರೋಪಿಗಳನ್ನು ಪರಿಚಯ ಮಾಡಿಸಿದ್ದರು' ಎಂದು ತಿಳಿದರು.

'ಹಳೇ ಕಾಲದ ತಾಮ್ರದ ವಸ್ತುಗಳನ್ನು ವಿದೇಶಕ್ಕೆ ಮಾರಾಟ ಮಾಡಲಾಗಿದ್ದು, ವಿದೇಶಿ ಕಂಪನಿಯಿಂದ ₹15 ಲಕ್ಷ ಕೋಟಿ ಬಂದಿದೆ. ಇದಕ್ಕೆ ಸಂಬಂಧಿಸಿದ ಕಡತ ಆರ್‌ಬಿಐನಲ್ಲಿದ್ದು ತೆರಿಗೆ ಪಾವತಿಸಿ ಕಡತ ಪಡೆದುಕೊಳ್ಳಬೇಕಿದೆ ಎಂಬುದಾಗಿ ಆರೋಪಿಗಳು ನಂಬಿಸಿದ್ದರು. ಕಡತ ಪಡೆದುಕೊಳ್ಳಲು ಹಣದ ಅಗತ್ಯವಿದೆ. ಈಗ ಹಣ ನೀಡಿದರೆ, ಹೆಚ್ಚಿನ ಹಣ ನೀಡುತ್ತೇವೆ ಎಂದು ಆಮಿಷವೊಡ್ಡಿದ್ದರು. ಆರೋಪಿಗಳ ಮಾತು ನಂಬಿದ್ದ ದೂರುದಾರ, ಹಂತಹಂತವಾಗಿ ₹37.50 ಲಕ್ಷ ನೀಡಿದ್ದರು' ಎಂದು ಅವರು ಹೇಳಿದರು.

'ತಾಂತ್ರಿಕ ಪುರಾವೆ ಆಧರಿಸಿ ಆರೋಪಿಗಳನ್ನು ಪತ್ತೆ ಹಚ್ಚಲಾಯಿತು. ಬಸವೇಶ್ವರನಗರದಲ್ಲಿ ಪ್ರಮುಖ ಆರೋಪಿ ಬಂಧಿಸಿ ವಿಚಾರಣೆ ನಡೆಸಲಾಯಿತು. ಆತ ನೀಡಿದ ಸುಳಿವು ಆಧರಿಸಿ, ಉಳಿದ ನಾಲ್ವರನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದರು.

ನಕಲಿ ದಾಖಲೆ ಸೃಷ್ಟಿ: 'ಆರೋಪಿಗಳು ವಂಚನೆ ಎಸಗಲು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು. ವಿದೇಶದಿಂದ ಬಂದ ಹಣಕ್ಕೆ ತೆರಿಗೆ ಕಟ್ಟಿ ಹಣ ಬಿಡಿಸಿಕೊಳ್ಳಬೇಕಿದೆ. ಬಂದ ಹಣದಲ್ಲಿ ಕಮಿಷನ್ ನೀಡಲಾಗುವುದು ಎಂಬುದಾಗಿ ಹಲವರಿಗೆ ವಂಚಿಸಿದ್ದರು' ಎಂದು ಪೊಲೀಸರು ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ನಕಲಿ ದಾಖಲೆಗಳನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಪರಿಶೀಲಿಸಿದರು

ಮಾದಕ ವಸ್ತು ಮಾರಾಟ: 6 ಮಂದಿ ಸೆರೆ

ನಗರದ ಮೂರು ಪೊಲೀಸ್ ಠಾಣೆಗಳ ವ್ಯಾಪ್ತಿಯ ಖಾಲಿ ಪ್ರದೇಶಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಹದೇವಪುರ, ಕಲಾಸಿಪಾಳ್ಯ, ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು, ವಿವಿಧೆಡೆ ಕಾರ್ಯಾಚರಣೆ ನಡೆಸಿ ಆರೋಪಿಗಳಿಂದ ವಿವಿಧ ಮಾದರಿಯ 32 ಕೆ.ಜಿ. ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಇದರ ಮೌಲ್ಯ ₹17.50 ಲಕ್ಷ ಎಂದು ಅಂದಾಜಿಸಲಾಗಿದೆ. ಆರೋಪಿಗಳು ಹೊರ ರಾಜ್ಯಗಳಿಂದ ಹಣ್ಣಿನ ಪೆಟ್ಟಿಗೆಗಳಲ್ಲಿ ಗಾಂಜಾ, ಅಫೀಮ್ ತಂದು ಗ್ರಾಹಕರಿಗೆ ಪೂರೈಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಅಕ್ರಮ ವಾಸ: 10 ವಿದೇಶಿಯರ ಬಂಧನ

ನಗರದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯ ಬಡಾವಣೆಗಳಲ್ಲಿ ಅಕ್ರಮವಾಗಿ ನೆಲಸಿದ್ದ 10 ವಿದೇಶಿಯರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಜಾಲ, ಅಮೃತಹಳ್ಳಿ, ವಿದ್ಯಾರಣ್ಯಪುರ, ಗೋವಿಂದಪುರ, ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ಅಕ್ರಮವಾಗಿ ನೆಲಸಿದ್ದ ವಿದೇಶಿಯರನ್ನು ಬಂಧಿಸಿದ್ದಾರೆ. ಬಂಧಿತರನ್ನು ವಲಸಿಗರ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಅಕ್ರಮವಾಗಿ ನೆಲಸಿದ್ದ ವಿದೇಶಿಯರು ಅಪರಾಧ ಚಟುವಟಿಕೆಗಳಲ್ಲಿ ಭಾಗಿ ಆಗುತ್ತಿದ್ದಾರೆ ಎನ್ನುವ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಬಂಧಿತರ ಪೈಕಿ ಒಬ್ಬ ವಿದೇಶಿ ಪ್ರಜೆಯನ್ನು ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿಯ(ಎಫ್‌ಆರ್‌ಆರ್‌ಒ) ಸೂಚನೆ ಮೇರೆಗೆ ಆತನ ದೇಶಕ್ಕೆ ಕಳುಹಿಸಲಾಗಿದೆ. ಉಳಿದವರನ್ನು ಎಫ್‌ಆರ್‌ಆರ್‌ಒ ಸೂಚನೆ ಮೇರೆಗೆ ಅವರ ದೇಶಗಳಿಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಚಾರಣೆಗೆ ಬರಲು ಐಶ್ವರ್ಯಾಗೆ ಸೂಚನೆ

ಹಲವರ ಮೊಬೈಲ್ ಫೋನ್ ಕರೆಯ ದಾಖಲೆಗಳನ್ನು(ಸಿಡಿಆರ್) ಅಕ್ರಮವಾಗಿ ಪಡೆದುಕೊಂಡಿದ್ದ ಆರೋಪ ಎದುರಿಸುತ್ತಿರುವ ಐಶ್ವರ್ಯಾಗೌಡ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ, ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಫೆಬ್ರುವರಿ 13ರಂದು ವಿಚಾರಣೆಗೆ ಬರುವಂತೆ ಸೂಚಿಸಿ, ವಿಜಯನಗರ ಉಪ ವಿಭಾಗದ ಎಸಿಪಿ ಚಂದನ್ ಅವರು ನೋಟಿಸ್ ನೀಡಿದ್ದಾರೆ.

'ವಂಚನೆ ಪ್ರಕರಣದ ಆರೋಪಿಗಳಾದ ಐಶ್ವರ್ಯಾಗೌಡ ದಂಪತಿಗೆ ಸಿಡಿಆರ್ ಒದಗಿಸಿದ ಅಪರಿಚಿತ ವ್ಯಕ್ತಿಯ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೋರಿ ಎಸಿಪಿ ಭರತ್ ರೆಡ್ಡಿ ನೀಡಿದ ದೂರಿನ ಮೇರೆಗೆ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಯಾವ ಕಾರಣಕ್ಕೆ ಸಿಡಿಆರ್ ಪಡೆದುಕೊಳ್ಳಲಾಗಿತ್ತು ಎಂಬುದರ ಕುರಿತು ಆರೋಪಿಗಳಿಂದ ವಿಚಾರಣೆ ವೇಳೆ ಮಾಹಿತಿ ಪಡೆದುಕೊಳ್ಳಲಾವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜಪ್ತಿ ವಸ್ತುಗಳ ಮೇಲೆ 'ಕ್ಯೂಆರ್ ಕೋಡ್'

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿಕೊಳ್ಳುವ ವಸ್ತುಗಳ ಸಮರ್ಪಕ ನಿರ್ವಹಣೆಗೆ ಜಪ್ತಿ ಮಾಲುಗಳ ಮೇಲೆ 'ಕ್ಯೂಆರ್ ಕೋಡ್' ಅಳವಡಿಸಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ವಶಕ್ಕೆ ಪಡೆದ ವಸ್ತುಗಳು ಹಾಗೂ ದಾಖಲೆಗಳ ನಿರ್ವಹಣೆಯಲ್ಲಿ ಕೆಲವು ಲೋಪಗಳು ಕಂಡು ಬಂದಿದ್ದವು. ಅದನ್ನು ಸರಿಪಡಿಸುವ ಉದ್ದೇಶದಿಂದ ತಂತ್ರಜ್ಞಾನದ ಮೊರೆ ಹೋಗಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಈ ಜಪ್ತಿ ಮಾಲುಗಳ ಸಮರ್ಪಕ ನಿರ್ವಹಣೆ ಸಂಬಂಧ ಪ್ರತ್ಯೇಕ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಪ್ರತಿ ಜಪ್ತಿ ಮಾಲಿನ ಮೇಲೆ ಕ್ಯೂಆರ್ ಕೋಡ್ ಅಳವಡಿಸಲಾಗುವುದು' ಎಂದು ಹೇಳಿದರು.

'ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದಾಗ ಪ್ರಕರಣ, ವಸ್ತು, ಜಪ್ತಿ ಸ್ಥಳ, ಜಪ್ತಿ ಮಾಡಿದ ವ್ಯಕ್ತಿ, ಮಹಜರು ನಡೆಸಿದ ಮಾಹಿತಿ ಎಲ್ಲವೂ ಲಭ್ಯ ಆಗಲಿದೆ. ಸಿಸಿಬಿ ಸೇರಿದಂತೆ ನಗರದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಈ ಕ್ಯೂಆರ್ ಕೋಡ್ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಹಲವು ಪ್ರಕರಣಗಳಲ್ಲಿ ಜಪ್ತಿ ಮಾಡಿಕೊಂಡಿದ್ದ ವಸ್ತುಗಳ ನಿರ್ವಹಣೆ ಹಾಗೂ ವಿಲೇವಾರಿಯಲ್ಲಿ ಲೋಪಗಳು ಕಂಡುಬಂದಿದ್ದವು. ಇನ್ನು ಮುಂದೆ ತಪ್ಪುಗಳು ಕಂಡುಬಂದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.



ಪ್ರಶಸ್ತಿ ನಗರದಲ್ಲಿ ಮಂಗಳವಾರ 'ಎಸ್.ಪಿ ವರದರಾಜು ಆತ್ಮೀಯ ಬಳಗ' ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಗತಿ ಅಶ್ವತ್ಥ ನಾರಾಯಣ (ಚಲನಚಿತ್ರ ಕ್ಷೇತ್ರ) ಮತ್ತು ಶಾಂತಾಬಾಯಿ ಬೀಳಗಿ (ರಂಗಭೂಮಿ ಕ್ಷೇತ್ರ) ಅವರಿಗೆ ಎಸ್.ಪಿ ವರದರಾಜು ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ತಿನ ಸದಸ್ಯೆ ಉಮಾಶ್ರೀ, ನಟ ರಾಘವೇಂದ್ರ ರಾಜಕುಮಾರ್, ನಿರ್ದೇಶಕ ಪಿ. ಶೇಷಾದ್ರಿ ಮತ್ತು ಗ್ರೀನ್ ಹೌಸ್ ವಾಸಣ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಜಗಜೀವನರಾಮ್ ನಗರದಲ್ಲಿ ದ್ವಿಚಕ್ರ ವಾಹನ ಅಡ್ಡಗಟ್ಟಿ ಕೃತ್ಯ ಎಸಗಿದ್ದ ಅಪರಾಧಿಗಳು

ಕೊಲೆ: ಇಬ್ಬರಿಗೆ ಏಳು ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗಜೀವನರಾಮ್ ನಗರದಲ್ಲಿ ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿ ವ್ಯಕ್ತಿಯನ್ನು ಕೊಲೆ ಮಾಡಿದ್ದ ಇಬ್ಬರು ಅಪರಾಧಿಗಳಿಗೆ ನಗರದ 51ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು (ಸಿಐಡಿ ವಿಶೇಷ ನ್ಯಾಯಾಲಯ) ತಲಾ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ, ಆದೇಶಿಸಿದೆ.

ಜಗಜೀವನರಾಮ್ ನಗರದ ಚಂದ್ರು ಅವರಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಶಾಹಿದ್ ಪಾಷಾ ಅಲಿಯಾಸ್ ನ್ಯಾರೊ ಹಾಗೂ ಶಾಹಿದ್ ಪಾಷ ಅಲಿಯಾಸ್ ಗೇಣಾ ಶಿಕ್ಷೆಗೆ ಒಳಗಾದ ಅಪರಾಧಿಗಳು.

2022ರ ಏಪ್ರಿಲ್ 4ರ ರಾತ್ರಿ 2.15ರ ಸುಮಾರಿಗೆ ಸೈಮನ್‌ರಾಜ್ ಅವರು ತಮ್ಮ ಸ್ನೇಹಿತ ಚಂದ್ರು ಅವರ ಜತೆಗೆ ಚಿಕನ್ ರೋಲ್ ತಿನ್ನಲು ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಅದೇ ಸಮಯದಲ್ಲಿ ಎದುರಿನಿಂದ ಬರುತ್ತಿದ್ದ ಬೈಕ್‌ವೊಂದು ಡಿಕ್ಕಿಯಾಗಿತ್ತು. ಇದನ್ನು ಪ್ರಶ್ನಿಸಿದ್ದಕ್ಕೆ ಅಪರಾಧಿಗಳಾದ ಶಾಹಿದ್ ಹಾಗೂ ಆತನ ಸಹಚರರು ಮಚ್ಚಿನಿಂದ ಹೊಡೆದು ಚಂದ್ರು ಅವರನ್ನು ಕೊಲೆ ಮಾಡಿದ್ದರು. ಸೈಮನ್‌ರಾಜ್ ಅವರು ತಪ್ಪಿಸಿಕೊಂಡು ಪಾರಾಗಿದ್ದರು.

ಈ ಸಂಬಂಧ ಜೆ.ಜೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ, ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವರ್ಗಾವಣೆ ಮಾಡಿತ್ತು. 30 ಸಾಕ್ಷಿದಾರರನ್ನು ವಿಚಾರಣೆ ನಡೆಸಿದ್ದ ಸಿಐಡಿ, ಶಾಹಿದ್ ಪಾಷಾ ಅಲಿಯಾಸ್ ನ್ಯಾರೊ ಹಾಗೂ ಶಾಹಿದ್ ಪಾಷಾ ಅಲಿಯಾಸ್ ಗೇಣಾ ಎಂಬುವರನ್ನು ಬಂಧಿಸಿದ್ದರು.

ನ್ಯಾಯಾಲಯದಲ್ಲಿ ವಾದ–ಪ್ರತಿ ವಾದ ನಡೆದು ಇಬ್ಬರೂ ಅಪರಾಧಿಗಳು ಎಂದು ನ್ಯಾಯಾಧೀಶರು ಪ್ರಕಟಿಸಿದರು. ಅಪರಾಧಿಗಳಿಗೆ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 304ರ (ಭಾಗ–1) ಅಡಿಯಲ್ಲಿನ ಅಪರಾಧಕ್ಕಾಗಿ (ಕೊಲೆಯ ಉದ್ದೇಶದಿಂದ ಹಲ್ಲೆ) ಏಳು ಜೈಲು ಶಿಕ್ಷೆ, ತಲಾ ₹10 ಸಾವಿರ ದಂಡ, ಸೆಕ್ಷನ್ 506(ಭಾಗ–2)ರ ಅಡಿಯಲ್ಲಿನ ಅಪರಾಧಕ್ಕಾಗಿ (ಅತಿಕ್ರಮ ಪ್ರವೇಶ ಮಾಡಿ, ಮಾರಣಾಂತಿಕ ಹಲ್ಲೆ) ಮೂರು ವರ್ಷಗಳ ಶಿಕ್ಷೆ ಮತ್ತು ತಲಾ ₹5 ಸಾವಿರ ದಂಡ, ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್ 27(1)ರ ಅಡಿಯಲ್ಲಿನ ಅಪರಾಧಕ್ಕಾಗಿ 3 ವರ್ಷಗಳ ಶಿಕ್ಷೆ, ತಲಾ ₹5 ಸಾವಿರ ದಂಡ ವಿಧಿಸಿ ನ್ಯಾಯಾಧೀಶ ಯಶವಂತ ಕುಮಾರ್ ಅವರು ಆದೇಶಿಸಿದ್ದಾರೆ.

ಸರ್ಕಾರಿ ವಕೀಲರಾದ ಪ್ರಶಾಂತ್ ಹಾಗೂ ಭಾಗ್ಯಲಕ್ಷ್ಮಿ ಅವರು ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದರು.

ಭಾವನಿಂದಲೇ ಕೊಲೆ

ಮೆಜೆಸ್ಟಿಕ್ ಬಳಿಯ ರೈಲು ನಿಲ್ದಾಣದ ವಾಹನ ನಿಲುಗಡೆ ಪ್ರದೇಶದಲ್ಲಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿ ಆರೋಪಿ ಪರಾರಿಯಾಗಿದ್ದಾನೆ.

ವೆಂಕಟೇಶ್ (48) ಕೊಲೆಯಾದವರು. ವೆಂಕಟೇಶ್ ಅವರು ಮೆಜೆಸ್ಟಿಕ್ ಸುತ್ತಮುತ್ತಲ ಪ್ರದೇಶದಲ್ಲಿ 'ರೋಲ್ಡ್ ಗೋಲ್ಡ್' ಆಭರಣಗಳನ್ನು ಮಾರಾಟ ಮಾಡುತ್ತಿದ್ದರು. ಕೊಲೆಯಾದ ವೆಂಕಟೇಶ್ ಅವರ ಭಾವ ರಾಮು ಎಂಬಾತನೇ ಕೃತ್ಯ ಎಸಗಿದ್ದು, ಪರಾರಿ ಆಗಿದ್ದಾನೆ ಎಂದು ರೈಲ್ವೆ ಪೊಲೀಸರು ತಿಳಿಸಿದರು.

'ವಾಹನ ನಿಲುಗಡೆ ಪ್ರದೇಶದಲ್ಲಿ ರಾಮು ಹಾಗೂ ವೆಂಕಟೇಶ್ ಭಾನುವಾರ ರಾತ್ರಿ ಗಲಾಟೆ ಮಾಡಿಕೊಂಡಿದ್ದರು. ಗಲಾಟೆ ವಿಕೋಪಕ್ಕೆ ಹೋಗಿ ಚಾಕುವಿನಿಂದ ಇರಿದು ಆರೋಪಿ ಪರಾರಿ ಆಗಿದ್ದಾನೆ' ಎಂದು ಮೂಲಗಳು ಹೇಳಿವೆ.

'ರಕ್ತದ ಮಡುವಿನಲ್ಲಿ ಬಿದ್ದಿದ್ದ ವೆಂಕಟೇಶ್ ಅವರನ್ನು ಪೊಲೀಸರು, ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ. 'ಆರೋಪಿಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ರೈಲ್ವೆ ಪೊಲೀಸರು ಹೇಳಿದರು.

ಡ್ರಗ್ಸ್ ದಂಧೆ: ಮೂವರ ಸೆರೆ

ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ವಿದೇಶಿ ಪ್ರಜೆ ಸೇರಿದಂತೆ ಮೂವರನ್ನು ಸುದ್ದಗುಂಟೆಪಾಳ್ಯ ಮತ್ತು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ನೈಜೀರಿಯಾದ ಅಂಥೋಣಿ(35) ಎಂಬಾತನನ್ನು ಹೆಣ್ಣೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹6.5 ಲಕ್ಷ ಮೌಲ್ಯದ 3 ಕೆ.ಜಿ. 55 ಗ್ರಾಂ. ಎಂಡಿಎಂಎ ಕ್ರಿಸ್ಟಲ್ ವಶಕ್ಕೆ ಪಡೆಯಲಾಗಿದೆ.



ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಡ್ರಗ್ಸ್

ಆರೋಪಿ ಎರಡು ವರ್ಷಗಳ ಹಿಂದೆ ಪ್ರವಾಸಿ ವೀಸಾ ಪಡೆದು ನಗರಕ್ಕೆ ಬಂದಿದ್ದ. ಹೆಣ್ಣೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ವೀಸಾ ಅವಧಿ ಮುಕ್ತಾಯ ಆಗಿದ್ದರೂ ಅಕ್ರಮವಾಗಿ ನಗರದಲ್ಲಿ ನೆಲಸಿದ್ದ ಎಂದು ಪೊಲೀಸರು ಹೇಳಿದರು.

'ಮುಂಬೈ ಹಾಗೂ ದೆಹಲಿಯಲ್ಲಿ ನೆಲಸಿದ್ದ ತನ್ನ ಸ್ನೇಹಿತರಿಂದ ಆರೋಪಿ ಎಂಡಿಎಂಎ ಕ್ರಿಸ್ಟಲ್‌ಗಳನ್ನು ಕಡಿಮೆ ಬೆಲೆಗೆ ಖರೀದಿಸಿ ನಗರಕ್ಕೆ ತರುತ್ತಿದ್ದ. ನಂತರ ಚೇಳಕೆರೆ ಮೈದಾನದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ಇಬ್ಬರ ಬಂಧನ: ಗಾಂಜಾ ಮಾರುತ್ತಿದ್ದ ಇಬ್ಬರನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸುದ್ದಗುಂಟೆಪಾಳ್ಯ ನಿವಾಸಿಗಳಾದ ಯೂಸುಫ್ ಶರೀಫ್(35) ಮತ್ತು ಸಾದಿಕ್(30) ಬಂಧಿತರು.

ಆರೋಪಿಗಳಿಂದ ₹ 1.50 ಲಕ್ಷ ಮೌಲ್ಯದ 1 ಕೆ.ಜಿ. 825 ಗ್ರಾಂ. ಗಾಂಜಾ, ಮೊಬೈಲ್, ಒಂದು ಬೈಕ್ ವಶಕ್ಕೆ ಪಡೆಯಲಾಗಿದೆ.

ಭವಾನಿ ನಗರದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಗುಜರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳು, ಕೇರಳ ಮತ್ತು ಆಂಧ್ರಪ್ರದೇಶದಲ್ಲಿ ಇರುವ ಪೆಡ್ಲರ್‌ಗಳ ಮೂಲಕ ಗಾಂಜಾ ತರಿಸಿ ನಗರದಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆಮಿಷ– ವಂಚನೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಮಾಡಿಸಿಕೊಡುವುದಾಗಿ ಆಮಿಷವೊಡ್ಡಿ ಹಣ ಪಡೆದು ವಂಚಿಸುತ್ತಿದ್ದ ಹಾವೇರಿ ಜಿಲ್ಲೆಯ ರಾಘವೇಂದ್ರ ಎಂಬ ಆರೋಪಿಯನ್ನು ವಿಧಾನಸೌಧ ಠಾಣೆಯ ಪೊಲೀಸರು ಇತ್ತೀಚೆಗೆ ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ.

ಉಪ ವಿಭಾಗಾಧಿಕಾರಿ ಹುದ್ದೆಯಲ್ಲಿರುವ ಕೆಎಎಸ್ ಅಧಿಕಾರಿಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು. ಆರೋಪಿ ಬಳಿಯಿದ್ದ ನಕಲಿ ವರ್ಗಾವಣೆ ಪತ್ರಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ಪ್ಯಾಲೇಸ್ ಗುಟ್ಟಹಳ್ಳಿಯ ಬಾಡಿಗೆ ಮನೆಯಲ್ಲಿ ನೆಲಸಿದ್ದ. ಎ.ಸಿ ಸೇರಿದಂತೆ ಹಲವು ಸರ್ಕಾರಿ ಅಧಿಕಾರಿಗಳಿಗೆ ತಮಗೆ ಬೇಕಾದ ಸ್ಥಳಗಳಿಗೆ ವರ್ಗಾವಣೆ ಮಾಡಿಸಿಕೊಡುವುದಾಗಿ ಆಮಿಷವೊಡ್ಡಿ ಹಣ ಪಡೆದುಕೊಂಡಿದ್ದ. ದೂರುದಾರ ಅಧಿಕಾರಿಯು ಬೆಂಗಳೂರು ಉತ್ತರ ಉಪ ವಿಭಾಗದ ಎ.ಸಿ ಹುದ್ದೆಗೆ ವರ್ಗಾವಣೆ ಮಾಡಿಸಿಕೊಂಡು ಬರಲು ಪ್ರಯತ್ನಿಸುತ್ತಿದ್ದರು. ಅವರನ್ನು ಸಂಪರ್ಕಿಸಿದ್ದ ಆರೋಪಿಯು ಹಣ ಪಡೆದು ವಂಚಿಸಿದ್ದ' ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು


ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 8ಕ್ಕೆ ಅಭಿಷೇಕ, ಮಧ್ಯಾಹ್ನ ಬ್ರಹ್ಮರಥೋತ್ಸವ, ರಾತ್ರಿ 9ರಿಂದ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ ಗುಟ್ಟಹಳ್ಳಿ, ಹನುಮಂತನಗರ

'ಆಹಾ! ಕಲೆಕ್ಟಿವ್ 2025' ಮೇಳ: ವಿದ್ಯಾರ್ಥಿಗಳಿಗೆ ಕಲೆಯ ಕಾರ್ಯಾಗಾರ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10.30ರಿಂದ

ಸ್ಟೋನಾ ಮೇಳ: ಉದ್ಘಾಟನೆ: ಎಸ್.ಎಸ್. ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿ: ಕುಮಾರ್ ವಿಷ್ಣೋಯ್, ಆಯೋಜನೆ: ಫೆಡರೇಷನ್ ಆಫ್ ಇಂಡಿಯನ್ ಗ್ರಾನೈಟ್ ಆ್ಯಂಡ್ ಸ್ಟೋನ್ ಇಂಡಸ್ಟ್ರಿ (ಎಫ್‌ಐಜಿಎಸ್‌ಐ), ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ), ಬೆಳಿಗ್ಗೆ 11

ಎನ್.ಆರ್.ಎಚ್. ಆನ್‌ಲೈನ್ ರಿಜಿಸ್ಟ್ರೇಶನ್ ಪೋರ್ಟಲ್ ಮತ್ತು 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್' ಕಾರ್ಯಾಗಾರ: ಉದ್ಘಾಟನೆ: ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ವಿಪಿನ್ ಸಿಂಗ್, ಡಾ.ಪಿನಾಕಿನ್ ಎನ್. ತ್ರಿವೇದಿ, ಡಾ.ಬಿ.ಟಿ. ರುದ್ರೇಶ್, ಡಾ. ಸಂಜಯ್ ಗುಪ್ತ, ಅಧ್ಯಕ್ಷತೆ: ಡಾ. ಅನಿಲ್ ಖುರಾನ, ಆಯೋಜನೆ: ರಾಷ್ಟ್ರೀಯ ಹೋಮಿಯೋಪಥಿ ಆಯೋಗ, ಕರ್ನಾಟಕ ಹೋಮಿಯೋಪಥಿ ಮಂಡಳಿ, ಸ್ಥಳ: ನಿಮ್ಹಾನ್ಸ್ ಸಮ್ಮೇಳನ ಸಭಾಂಗಣ, ಹೊಸೂರು ಮುಖ್ಯರಸ್ತೆ, ಬೆಳಿಗ್ಗೆ 11

ಲೇಖಕರೊಂದಿಗೆ ಮುಖಾಮುಖಿ: ಅತಿಥಿ ಉಪನ್ಯಾಸಕ: ವಸುಧೇಂದ್ರ, ಗೌರವ ಅತಿಥಿ: ರಜನಿ ಜೈರಾಮ್, ಸಂಯೋಜನೆ: ರಾಜೇಶ್ವರಿ ವೈ.ಎಂ., ಆಯೋಜನೆ ಹಾಗೂ ಸ್ಥಳ: ಜೈನ್ ಡೀಮ್ಡ್ ವಿಶ್ವವಿದ್ಯಾಲಯ, ಜಯನಗರ, ಮಧ್ಯಾಹ್ನ 2.15


ವಸುಧೇಂದ್ರ

ಕನ್ನಡದ ಮೌಲಿಕ ಕೃತಿಗಳ ಪರಿಚಯ ಸಂಚಿಕೆ: 'ಮಂಕುತಿಮ್ಮನ ಕಗ್ಗ ಹಾಗೂ ಡಿವಿಜಿ ಒಂದು ಮೌಲ್ಯ' ವಿಷಯದ ಬಗ್ಗೆ ಉಪನ್ಯಾಸ: ಸತ್ಯೇಶ್ ಎನ್. ಬೆಳ್ಳೂರ್, ಅಧ್ಯಕ್ಷತೆ: ಆರ್.ಎಸ್. ಶಾಂತಾರಾಮ್, ಪ್ರಾಸ್ತಾವಿಕ ನುಡಿ: ಮುದಿಗೆರೆ ರಮೇಶ್ ಕುಮಾರ್, ಆಯೋಜನೆ ಹಾಗೂ ಸ್ಥಳ: ದೀಪಾ ಅಂಧ ಮಕ್ಕಳ ವಸತಿ ಪ್ರೌಢಶಾಲೆ, ಭಾರತ್ ನಗರ, ಮಾಗಡಿ ಮುಖ್ಯರಸ್ತೆ, ಸಂಜೆ 5.30

ಸೆಂಟರ್ ಸ್ಟೇಜ್–ಕಪ್ಪಣ್ಣ ಪ್ರಶಸ್ತಿ ಪ್ರದಾನ: ಡಿ.ವಿ. ಗುರುಪ್ರಸಾದ್, ಮುಖ್ಯ ಅತಿಥಿಗಳು: ಗಿರಿಜಾ ಲೋಕೇಶ್, ಧರಣಿದೇವಿ ಮಾಲಗತ್ತಿ, ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಪ್ರಶಸ್ತಿ ಪುರಸ್ಕೃತರು: ಸಾಸ್ವೆಹಳ್ಳಿ ಸತೀಶ್, ಶ್ವೇತಾ ಶ್ರೀನಿವಾಸ್, ಆಯೋಜನೆ: ಶ್ರೀಮಾತಾ ಚಾರಿಟಬಲ್ ಟ್ರಸ್ಟ್, ಸೆಂಟರ್ ಸ್ಟೇಜ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

60ನೇ ನಾದಜ್ಯೋತಿ ಸಂಗೀತ ಸಂಭ್ರಮ, ವಜ್ರ ಮಹೋತ್ಸವದ ಸಂಭ್ರಮ: ಗಾಯನ: ಬೇಬಿ ಶ್ರೀರಾಮ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಅನೂರು ಅನಂತ ಕೃಷ್ಣ ಶರ್ಮ, ಘಟ: ಸುಕನ್ಯಾ ರಾಮಗೋಪಾಲ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಭಕ್ತಿ ಸಂಗೀತ: ವೀರಮಣಿ ರಾಜು, ಅಭಿಷೇಕ್ ರಾಜು, ಆಯೋಜನೆ: ಕಾಡು ಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡು ಮಲ್ಲೇಶ್ವರ ದೇವಾಲಯ, ಮಲ್ಲೇಶ್ವರ, ಸಂಜೆ 6.30

ಕುಖ್ಯಾತ ರೌಡಿ ಬಾಗಪ್ಪ ಹರಿಜನ ಭೀಕರ ಹತ್ಯೆ

ವಿಜಯಪುರ: ಭೀಮಾ ತೀರದ ಕುಖ್ಯಾತ ರೌಡಿ ಚಂದಪ್ಪ ಹರಿಜನನ ಸಹಚರ ಬಾಗಪ್ಪ ಹರಿಜನ (53)ನನ್ನು ನಗರದ ಆಕಾಶವಾಣಿ ಬಳಿ ಮಂಗಳವಾರ ರಾತ್ರಿ 10 ಗಂಟೆ ಸುಮಾರಿಗೆ ಮಾರಕಾಸ್ತ್ರಗಳಿಂದ ಕೊಚ್ಚಿ ಭೀಕರವಾಗಿ ಹತ್ಯೆ ಮಾಡಲಾಗಿದೆ.


ಬಾಗಪ್ಪ ಹರಿಜನ

ಘಟನಾ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬಾಗಪ್ಪ ಕೈ ಕತ್ತರಿಸಿ, ಭೀಕರವಾಗಿ ಹತ್ಯೆ ಮಾಡಲಾಗಿದೆ. ಕೊಲೆ ಮಾಡಿದವರು ಯಾರು ಎಂಬುದು ಇನ್ನಷ್ಟೇ ತಿಳಿಯಬೇಕಿದೆ.

ಪಾತಕ ಲೋಕದಲ್ಲಿ 'ಶಾರ್ಪ್ ಶೂಟರ್', ಚಂದಪ್ಪನ ಪಾಳೆಯದಲ್ಲಿ 'ಚಿರತೆಯಂಥ ಬೇಟೆಗಾರ' ಎಂಬ ವಿಶೇಷಣಗಳಿಗೆ ಪಾತ್ರನಾಗಿದ್ದ ಬಾಗಪ್ಪ ಪಾತಕಿಗಳಿಂದಲೇ ಹತ್ಯೆಯಾಗಿದ್ದಾನೆ.

ವಿಜಯಪುರ, ಕಲಬುರಗಿ ಸೇರಿದಂತೆ ಭೀಮಾ ತೀರದಲ್ಲಿ ನಡೆದ ಹಲವಾರು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ.

ಜಿಲ್ಲಾ ಸೆಷನ್ಸ್ ಕೋರ್ಟ್ ಆವರಣದಲ್ಲಿ ಬಾಗಪ್ಪ ಮೇಲೆ 2017ರ ಆ. 7ರಂದು ಶೂಟೌಟ್ ನಡೆದಿತ್ತು. ಆರು ಗುಂಡುಗಳು ತಗುಲಿದ್ದವು, ಈ ಘಟನೆ ನಂತರ ಭೂಗತನಾಗಿದ್ದನು.

ಆಲಮೇಲ ಪಟ್ಟಣ ಸಮೀಪದ ಬ್ಯಾಡಗಿಹಾಳ ಗ್ರಾಮದ ಕೃಷಿ ಕೂಲಿಕಾರ ಕುಟುಂಬಕ್ಕೆ ಸೇರಿದ ಈತನಿಗೆ ಇಬ್ಬರು ಪತ್ನಿಯರು, ಇಬ್ಬರು ಹೆಣ್ಣು ಮಕ್ಕಳು. ನಾಲ್ವರು ಸಹೋದರರು.

2008ರಲ್ಲಿಕಲಬುರ್ಗಿಪೊಲೀಸರುಪುಣೆಯಲ್ಲಿಬಾಗಪ್ಪನನ್ನು ಬಂಧಿಸಿದ್ದರು. 2013ರಲ್ಲಿ ಚಂದಪ್ಪನ ಸ್ವಗ್ರಾಮ ಬೊಮ್ಮನಹಳ್ಳಿಯಲ್ಲೇ ಈತನ ತಮ್ಮ ಬಸಪ್ಪ ಹರಿಜನ ಹತ್ಯೆಯಾಗಿತ್ತು. ಈ ಕೊಲೆ ಪ್ರಕರಣದಲ್ಲಿ ಬಾಗಪ್ಪನ ಹೆಸರು ಕೇಳಿಬಂದಿತ್ತು.

2015ರಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ ತನ್ನ ಅಕ್ಕನ ಪರ ಸದಸ್ಯರನ್ನು ಬೆದರಿಸಲು ಖುದ್ದು ಬಾಗಪ್ಪನೇ ಬರುತ್ತಿದ್ದ. ಮತ್ತೊಮ್ಮೆ ಆಲಮೇಲ ಪೊಲೀಸರ ಸೆರೆಯಾಗಿದ್ದ. ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ 2016ರಲ್ಲಿ ಜಾಮೀನು ದೊರೆತಿತ್ತು.

ಕಂಡಕ್ಟರ್ ಲಾಳಸಂಗಿ ಹತ್ಯೆ, 2008ರಲ್ಲಿ ಕಾಂಗ್ರೆಸ್ ಮುಖಂಡ ಪುತ್ರಪ್ಪ ಭೈರಗೊಂಡ ಮೇಲೆ ನಡೆದ ಗುಂಡಿನ ದಾಳಿ, ವಿಜಯಪುರದ ಕಾಂಗ್ರೆಸ್ ಮುಖಂಡ ಫಯಾಜ್ ಮುಶ್ರೀಫ್ ಕೊಲೆ ಪ್ರಕರಣಗಳಲ್ಲಿಯೂ ಬಾಗಪ್ಪನ ಹೆಸರು ಪ್ರಮುಖವಾಗಿ ಪ್ರಸ್ತಾಪಗೊಂಡಿತ್ತು ಎಂದು ಮೂಲಗಳಿಂದ ತಿಳಿದುಬಂದಿದೆ.


ಮನೆ ಬಿಟ್ಟು ಬಂದಿದ್ದ ಮಹಿಳೆಯ ರಕ್ಷಣೆ

ಉಜಿರೆ (ದಕ್ಷಿಣ ಕನ್ನಡ): ಮನೆಯಲ್ಲಿ ಜಗಳ ಮಾಡಿ ಧರ್ಮಸ್ಥಳಕ್ಕೆ ಬಂದಿದ್ದ ಬೆಂಗಳೂರಿನ ಮಹಿಳೆಯೊಬ್ಬರನ್ನು ಧರ್ಮಸ್ಥಳ ಪೊಲೀಸರು ರಕ್ಷಿಸಿ, ಆಕೆಯ ಕುಟುಂಬದ ಜತೆ ಕಳುಹಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಅನ್ನಪೂರ್ಣ ಅವರು ಮನೆಯಲ್ಲಿ ನಡೆದ ಗಲಾಟೆಯಿಂದ ನೊಂದು ಬಸ್‌ನಲ್ಲಿ ಧರ್ಮಸ್ಥಳಕ್ಕೆ ಬಂದಿದ್ದರು.

ಆಕೆಯ ಪುತ್ರ ಪೊಲೀಸರಿಗೆ ಈ ಮಾಹಿತಿ ನೀಡಿದ್ದರು. ಪೊಲೀಸರು ಮೊಬೈಲ್ ಲೊಕೇಶನ್ ಮೂಲಕ ಆಕೆ ಧರ್ಮಸ್ಥಳದಲ್ಲಿ ಇರುವುದಾಗಿ ಖಚಿತ-ಪಡಿಸಿಕೊಂಡು ಧರ್ಮಸ್ಥಳ ಪೊಲೀಸರಿಗೆ ಮಾಹಿತಿ ನೀಡಿದ್ದರು.

ತಂತ್ರಜ್ಞಾನ



ಸಣ್ಣ ಪರಮಾಣು ಸ್ಥಾವರಗಳಿಂದ ವಿದ್ಯುತ್



ಸೂರ್ಯನಾರಾಯಣ ವಿ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇತ್ತೀಚೆಗೆ ಮಂಡಿಸಿರುವ 2025-26ನೇ ಸಾಲಿನ ಬಜೆಟ್‌ನಲ್ಲಿ 'ಪರಮಾಣು ಶಕ್ತಿಯಿಂದ ವಿದ್ಯುತ್ ಉತ್ಪಾದನೆಗೆ ಸರ್ಕಾರ ಹೆಚ್ಚು ಒತ್ತನ್ನು ನೀಡಲಿದೆ' ಎಂದಿದ್ದಾರೆ. 2047ರ ಹೊತ್ತಿಗೆ 100 ಗಿಗಾ ವಾಟ್ ಅಣುವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೊಂದುವುದಕ್ಕಾಗಿ ₹20 ಸಾವಿರ ಕೋಟಿಯ ಯೋಜನೆಯನ್ನು ಘೋಷಿಸಿದ್ದಾರೆ. ಇಂಗಾಲರಹಿತ ವಿದ್ಯುತ್ ಉತ್ಪಾದನೆಗಾಗಿ ಸಣ್ಣ ಮಾಡ್ಯುಲರ್ ಪರಮಾಣು ಸ್ಥಾವರಗಳನ್ನು (ಎಸ್‌ಎಂಆರ್ - Small Modular Reactor) ಖಾಸಗಿಯವರ ಸಹಭಾಗಿತ್ವದಲ್ಲಿ ದೇಶೀಯವಾಗಿ ಅಭಿವೃದ್ಧಿಪಡಿಸಲಾಗುವುದು ಎಂದೂ ಅವರು ಹೇಳಿದ್ದಾರೆ. 2033ರ ವೇಳೆಗೆ ಇಂತಹ ಐದು ಸ್ಥಾವರಗಳನ್ನು ಕೇಂದ್ರ ನಿರ್ಮಿಸಲಿದೆ.

2070ರ ವೇಳೆಗೆ ಭಾರತವು ಶೂನ್ಯ ಇಂಗಾಲ/ಹಸಿರುಮನೆ ಅನಿಲಗಳನ್ನು ಹೊರಸೂಸುವ ರಾಷ್ಟ್ರವಾಗುವ ಗುರಿಯನ್ನು ಹೊಂದಿದೆ. ಅದಕ್ಕಾಗಿ ವಿದ್ಯುತ್ ಪರಿವರ್ತನೆಯಾಗಬೇಕಾಗಿದೆ. ಸದ್ಯ ದೇಶದಲ್ಲಿ ಬಳಕೆಯಾಗುತ್ತಿರುವ ವಿದ್ಯುತ್‌ನಲ್ಲಿ ಶೇ 46.21ರಷ್ಟು ಪ್ರಮಾಣದ ವಿದ್ಯುತ್ತನ್ನು ಕಲ್ಲಿದ್ದಲನ್ನೇ ಬಳಸಿ ಉತ್ಪಾದಿಸಲಾಗುತ್ತಿದೆ. ಕಲ್ಲಿದ್ದಲು ಸೇರಿದಂತೆ ಪಳೆಯುಳಿಕೆ ಇಂಧನಗಳ ವಿದ್ಯುತ್ ಉತ್ಪಾದನಾಪ್ರಕ್ರಿಯೆಗೆ ಹೋಲಿಸಿದರೆ ಪರಮಾಣುಶಕ್ತಿಯನ್ನು ಬಳಸಿಕೊಂಡು ಉತ್ಪಾದಿಸುವ ಪ್ರಕ್ರಿಯೆ ಹೆಚ್ಚು ಪರಿಸರಸ್ನೇಹಿ. ಈ ವಿಧಾನದಿಂದ ವಾತಾವರಣಕ್ಕೆ ಹೆಚ್ಚು ಇಂಗಾಲ ಬಿಡುಗಡೆಯಾಗುವುದಿಲ್ಲ. ಈ ಕಾರಣಕ್ಕೆ ಕೇಂದ್ರ ಸರ್ಕಾರವು ಅಣು ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಒತ್ತನ್ನು ನೀಡಲು ಬಯಸಿದೆ. ಭಾರತ ಮಾತ್ರವಲ್ಲ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸೇರಿದಂತೆ ಜಗತ್ತಿನಾದ್ಯಂತ ಹಲವು ರಾಷ್ಟ್ರಗಳು ಸಣ್ಣ ಮಾಡ್ಯುಲರ್ ಪರಮಾಣು ಸ್ಥಾವರಗಳನ್ನು ಅಭಿವೃದ್ಧಿಪಡಿಸುತ್ತಿವೆ. ರಷ್ಯಾ, ಚೀನಾಗಳು ಈಗಾಗಲೇ ಕೆಲವು ಎಸ್‌ಎಂಆರ್‌ಗಳನ್ನು ಸ್ಥಾಪಿಸಿವೆ.

ಎಸ್‌ಎಂಆರ್ ಎಂದರೇನು?: 10ರಿಂದ 300 ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದಿಸುವ ಅತ್ಯಾಧುನಿಕ ಪರಮಾಣು ಸ್ಥಾವರವನ್ನು ಸಣ್ಣ ಮಾಡ್ಯುಲರ್ ಪರಮಾಣು ಸ್ಥಾವರ (ಎಸ್‌ಎಂಆರ್) ಎಂದು ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ) ವ್ಯಾಖ್ಯಾನಿಸುತ್ತದೆ. ಈಗಿನ ಸಾಂಪ್ರದಾಯಿಕ ಬೃಹತ್ ಪರಮಾಣು ವಿದ್ಯುತ್ ಸ್ಥಾವರಗಳಿಗೆ ಹೋಲಿಸಿದರೆ ಎಸ್‌ಎಂಆರ್‌ಗಳು ಗಾತ್ರದಲ್ಲಿ ತುಂಬಾ ಚಿಕ್ಕದು. ಸಾಮಾನ್ಯ ಸ್ಥಾವರಗಳ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯಕ್ಕೆ ಹೋಲಿಸಿದರೆ ಇವುಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಕೂಡ ಮೂರನೇ ಒಂದರಷ್ಟು ಮಾತ್ರ (ದೊಡ್ಡ ಸ್ಥಾವರಗಳು 1000 ಮೆಗಾವಾಟ್‌ಗಿಂತಲೂ ಹೆಚ್ಚು ಉತ್ಪಾದಿಸುತ್ತವೆ).

ಹೆಸರೇ ಸೂಚಿಸುವಂತೆ ಇದು ಗಾತ್ರದಲ್ಲಿ ಚಿಕ್ಕದಾದ ಸ್ಥಾವರ. ಮಾಡ್ಯುಲರ್ ಎಂದರೆ, ಈ ಸ್ಥಾವರವನ್ನು ಘಟಕವಾರು ವಿಂಗಡಿಸಬಹುದು. ಅಂದರೆ, ಸ್ಥಾವರ ನಿರ್ಮಾಣಕ್ಕೆ ಬಳಸುವ ಉಪಕರಣಗಳನ್ನು ಬೇರೆ ಕಡೆ ತಯಾರಿಸಿ, ನಂತರ ಅವುಗಳನ್ನು ಸ್ಥಾವರವನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳಕ್ಕೆ ಕೊಂಡುಹೋಗಿ, ಅಲ್ಲಿ ಜೋಡಿಸಬಹುದು (ಅಸೆಂಬ್ಲಿಂಗ್). ಈ ಸ್ಥಾವರಗಳು ಕೂಡ ಸಾಂಪ್ರದಾಯಿಕ ಅಣುಸ್ಥಾವರಗಳ ರೀತಿಯಲ್ಲೇ, ಅಂದರೆ, ಪರಮಾಣು ವಿದಳನ (ನ್ಯೂಕ್ಲಿಯರ್ ಫಿಷನ್) ಕ್ರಿಯೆಯಿಂದ ಶಾಖವನ್ನು ಸೃಷ್ಟಿಸಿ ಅದರಿಂದ ವಿದ್ಯುತ್ತನ್ನು ಉತ್ಪಾದಿಸುತ್ತವೆ.

ಪ್ರಯೋಜನಗಳು: ದೊಡ್ಡ ಪರಮಾಣು ಸ್ಥಾವರಗಳಿಗೆ ಹೋಲಿಸಿದರೆ ಸಣ್ಣ ಮಾಡ್ಯುಲರ್ ಸ್ಥಾವರಗಳಿಂದ ಹಲವು ಲಾಭಗಳಿವೆ. ಮೊದಲನೆಯದು ಈ ಸ್ಥಾವರಗಳ ನಿರ್ಮಾಣವೆಚ್ಚ ಕಡಿಮೆ. ಸಾಂಪ್ರದಾಯಿಕ ಸ್ಥಾವರಗಳ ವಿವಿಧ ಘಟಕಗಳನ್ನು ಸ್ಥಾವರ ತಲೆ ಎತ್ತಲಿರುವ ಸ್ಥಳದಲ್ಲೇ ನಿರ್ಮಾಣ ಮಾಡಬೇಕಾಗುತ್ತದೆ. ಆದರೆ ಎಸ್‌ಎಂಆರ್‌ಗಳಿಗೆ ಬೇಕಾಗುವ ಬಿಡಿ ಭಾಗಗಳನ್ನು ಬೇರೆಡೆಗಳಲ್ಲಿ ನಿರ್ಮಿಸಿ, ನಂತರ ನಿರ್ಮಾಣಸ್ಥಳಕ್ಕೆ ತಂದು ಜೋಡಿಸಲಾಗುತ್ತದೆ. ಸ್ಥಾವರ ಚಿಕ್ಕದಾಗಿರುವುದರಿಂದ ಅದರ ನಿರ್ಮಾಣಕ್ಕೆ ಹೆಚ್ಚಿನ ಸಮಯ ಬೇಡ. ವಿಶ್ವ ಪರಮಾಣು ಒಕ್ಕೂಟದ ಪ್ರಕಾರ, ದೊಡ್ಡ ಪರಮಾಣು ಸ್ಥಾವರ ನಿರ್ಮಾಣಕ್ಕೆ ಆರರಿಂದ 12 ವರ್ಷಗಳ ಸಮಯ ಬೇಕಾಗುತ್ತದೆ. ಆದರೆ, ಎಸ್‌ಎಂಆರ್‌ಗಳನ್ನು ಎರಡರಿಂದ ಮೂರು ವರ್ಷಗಳ ಒಳಗಾಗಿ ನಿರ್ಮಿಸಬಹುದು.

ಎಸ್‌ಎಂಆರ್‌ಗಳಿಗೆ ಹೆಚ್ಚು ಜಾಗ/ಭೂಮಿಯ ಅಗತ್ಯವಿಲ್ಲ. ದೊಡ್ಡ ಸ್ಥಾವರಗಳನ್ನು ನಿರ್ಮಿಸಲು ನೂರಾರು ಎಕರೆಗಳ ಸ್ಥಳಾವಕಾಶ ಬೇಕು. ಸಣ್ಣ ಸ್ಥಾವರಗಳನ್ನು ಕೇವಲ 10 ಎಕರೆಯಷ್ಟು ಜಾಗದಲ್ಲೂ ನಿರ್ಮಿಸಬಹುದು. ಹೀಗಾಗಿ, ವಿದ್ಯುತ್ ಬೇಡಿಕೆ ಹೆಚ್ಚಿರುವ ಸಣ್ಣ ಗ್ರಾಮಗಳಲ್ಲೂ ಇವನ್ನು ಸ್ಥಾಪಿಸಬಹುದು. ಈ ಸ್ಥಾವರಗಳು ಹೆಚ್ಚು ಸುರಕ್ಷಿತ ಎನ್ನುವುದು ತಜ್ಞರ ವಾದ. ಸರಳ ವಿನ್ಯಾಸ, ಸಹಜ ತಂಪಾಗಿಸುವ ವ್ಯವಸ್ಥೆಯನ್ನು (ಶಾಖದ ತೀವ್ರತೆಯನ್ನು ಕಡಿಮೆ ಮಾಡಲು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ಕಟ್ಟಡ ನಿರ್ಮಾಣ ತಂತ್ರಜ್ಞಾನ) ಹೊಂದಿರುವ ಎಸ್‌ಎಂಆರ್‌ಗಳ ಕಾರ್ಯಾಚರಣೆಗೆ ಕಡಿಮೆ ಶಕ್ತಿ ಮತ್ತು ಕಡಿಮೆ ಒತ್ತಡ ಸಾಕು ಎನ್ನುತ್ತಾರೆ. ಸಾಂಪ್ರದಾಯಿಕ ಸ್ಥಾವರಗಳಿಗೆ ಹೋಲಿಸಿದರೆ ಸಣ್ಣ ಸ್ಥಾವರಗಳಿಗೆ ಪ್ರತಿ 3ರಿಂದ 7 ವರ್ಷಗಳಿಗೊಮ್ಮೆ ಇಂಧನವನ್ನು (ಯುರೇನಿಯಂ) ಪೂರೈಸಿದರೆ ಸಾಕು. ದೊಡ್ಡ ಸ್ಥಾವರಗಳಿಗೆ ಒಂದೆರಡು ವರ್ಷಗಳ ಒಳಗಾಗಿಯೇ ಇಂಧನದ ಮರುಪೂರಣ ಮಾಡಬೇಕು. ಮಾತ್ರವಲ್ಲ, ಇದು ಸಂಕೀರ್ಣವಾದ ಮತ್ತು ಹೆಚ್ಚು ಸುರಕ್ಷತೆಯನ್ನು ಬೇಡುವ ಪ್ರಕ್ರಿಯೆ.

ಕೊನೆ ಮಾತು: ಎಸ್‌ಎಂಆರ್‌ಗಳ ಬಗ್ಗೆ ಚರ್ಚೆ ಆರಂಭವಾಗಿ ದಶಕವೇ ಕಳೆದಿದೆ. ಆದರೆ, ಜಾಗತಿಕವಾಗಿ ದೊಡ್ಡ ಮಟ್ಟಿಗೆ ಈ ಸ್ಥಾವರಗಳ ಅಭಿವೃದ್ಧಿ ಸಾಧ್ಯವಾಗಿಲ್ಲ. ಇನ್ನೂ ಅಧ್ಯಯನ-ಸಂಶೋಧನೆಗಳು ನಡೆಯುತ್ತಿವೆ. ಅಮೆರಿಕ, ರಷ್ಯಾ, ಚೀನಾ, ಬ್ರಿಟನ್, ಫ್ರಾನ್ಸ್, ಜಪಾನ್ ಸೇರಿದಂತೆ ಹಲವು ರಾಷ್ಟ್ರಗಳು ಇವುಗಳ ಅಭಿವೃದ್ಧಿಯಲ್ಲಿ ತೊಡಗಿವೆ. ಜಾಗತಿಕವಾಗಿ 80ಕ್ಕೂ ಹೆಚ್ಚು ಎಸ್‌ಎಂಆರ್‌ಗಳ ಅಭಿವೃದ್ಧಿ ಪ್ರಗತಿಯಲ್ಲಿದೆ ಎಂದು ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ ಹೇಳಿದೆ. 2024ರ ಆರಂಭದಲ್ಲಿ ಜಗತ್ತಿನಲ್ಲಿ ಐದು ಸ್ಥಾವರಗಳು ಕಾರ್ಯಾರಂಭ ಮಾಡಿವೆ. 20 ಸ್ಥಾವರಗಳ ನಿರ್ಮಾಣ ಅಂತಿಮ ಹಂತದಲ್ಲಿದೆ ಎಂದು ಹೇಳುತ್ತದೆ ವಿಶ್ವ ಪರಮಾಣು ಒಕ್ಕೂಟ. ❖

ಆತಂಕಗಳು

ಎಸ್‌ಎಂಆರ್‌ಗಳು ಕಡಿಮೆ ಪ್ರಮಾಣದಲ್ಲಿ ಇಂಗಾಲ ಹೊರಸೂಸುತ್ತವೆ. ಹೀಗಾಗಿ ಇವು ಪರಿಸರಸ್ನೇಹಿ ಎಂದು ಹೇಳಲಾಗುತ್ತದೆ. ಆದರೆ ಈ ಸ್ಥಾವರಗಳು ಕೂಡ ಪರಿಸರದ ಮೇಲೆ ಪರಿಣಾಮ ಬೀರುತ್ತವೆ ಎಂಬ ಆತಂಕ ಪರಿಸರವಾದಿಗಳದ್ದು.

ಸ್ಥಾವರಗಳಿಗೆ ಅಗತ್ಯವಿರುವ ಯುರೇನಿಯಂ ಅನ್ನು ಗಣಿಗಾರಿಕೆಯ ಮೂಲಕವೇ ಹೊರ ತೆಗೆಯಬೇಕಾಗುತ್ತದೆ . ಈ ಪ್ರಕ್ರಿಯೆಯಲ್ಲಿ ಪಳೆಯುಳಿಕೆ ಇಂಧನಗಳನ್ನೇ ಬಳಸಬೇಕಾಗುತ್ತದೆ. ಸ್ಥಾವರಗಳು ರೇಡಿಯೊ ವಿಕಿರಣಯುಕ್ತ ತ್ಯಾಜ್ಯವನ್ನು ಸೃಷ್ಟಿಸುತ್ತವೆ. ಇದು ಯಾವತ್ತಿಗೂ ಅಪಾಯಕಾರಿ. ಎಸ್‌ಎಂಆರ್‌ಗಳು ಸಾಂಪ್ರದಾಯಿಕ ಸ್ಥಾವರಗಳಿಗಿಂತ ಹೆಚ್ಚು ವಿಕಿರಣಯುಕ್ತ ತ್ಯಾಜ್ಯವನ್ನು ಸೃಷ್ಟಿಸುತ್ತವೆ ಎಂದು ಸ್ಟ್ಯಾನ್‌ಫೋರ್ಡ್ ವಿ.ವಿ 2022ರಲ್ಲಿ ನಡೆಸಿರುವ ಅಧ್ಯಯನ ಹೇಳಿದೆ. ಸ್ಥಾವರದಿಂದ ಹೊರ ಬರುವ ನೀರನ್ನು ಸಮರ್ಪಕವಾಗಿ ಸಂಸ್ಕರಣೆ ಮಾಡದಿದ್ದರೆ, ಸ್ಥಾವರ ಇರುವ ಪ್ರದೇಶದ ಜಲಚರಗಳ ಜೀವಕ್ಕೂ ಅದು ಕಂಟಕವಾಗಬಹುದು. ಸ್ಥಾವರ ಸ್ಥಾಪಿಸಲು ಗುರುತಿಸಿರುವ ಜಾಗದಲ್ಲಿ ನಡೆಯುವ ಕಾಮಗಾರಿಗಳು ಕೂಡ ಪರಿಸರಕ್ಕೆ ಧಕ್ಕೆ ತರುತ್ತವೆ. ಹೀಗಾಗಿ ಸಣ್ಣ ಸ್ಥಾವರಗಳ ವಿರೋಧಿ ಕೂಗು ಕೂಡ ಜಾಗತಿಕ ಮಟ್ಟದಲ್ಲಿ ಕೇಳಿ ಬರುತ್ತಿದೆ.

ಸೋರಾ: ಸಿನಿಮಾ ನಿರ್ಮಾಣದ ಎ.ಐ.



ಅವಿನಾಶ್ ಬಿ.

'ಎಐ' (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ತಂತ್ರಜ್ಞಾನದ ಪ್ರಗತಿಯ ತೀವ್ರತೆಯು ಉದ್ಯೋಗ ನಷ್ಟದ ಆತಂಕವನ್ನು ಆಗಾಗ್ಗೆ ಸೃಷ್ಟಿಸುತ್ತಲೇ ಇದೆ. ಚಾಟ್‌ಜಿಪಿಟಿ ತಂತ್ರಾಂಶವು ವರ್ಷದ ಹಿಂದೆ ಸೃಷ್ಟಿಸಿದ್ದಂತಹ ಪ್ರತಿರೋಧದ ಧ್ವನಿ ಈಗ ಪುನಃ ಜೋರಾಗಿ ಕೇಳಿಬರುತ್ತಿದೆ. ಇದಕ್ಕೆ ಕಾರಣವೆಂದರೆ, ಸೋರಾ (Sora) ಎಂಬ, ಪಠ್ಯದಿಂದ ದೃಶ್ಯಾವಳಿಯನ್ನು ಸೃಜಿಸುವ ತಂತ್ರಜ್ಞಾನ. ಇದರ ಜನಕ ಬೇರಾರೂ ಅಲ್ಲ, ಅದೇ ಚಾಟ್‌ಜಿಪಿಟಿಯನ್ನು ಹೊರತಂದಿದ್ದ ಓಪನ್ ಎಐ.

ಚಲನಚಿತ್ರ ಅಥವಾ ಧಾರಾವಾಹಿ ನಿರ್ಮಾಣಕ್ಕೆ ಮೂಲಾಧಾರವಾದ ಸ್ಕ್ರಿಪ್ಟ್ ಅಥವಾ ಚಿತ್ರಕಥೆಗಳು ಮಾನವನ ಸಹಜ ಬುದ್ಧಿಮತ್ತೆಯಿಂದಲೇ ಇದುವರೆಗೂ ರೂಪುಗೊಳ್ಳುತ್ತಿತ್ತು. ಈಗ ಇಂಥ ಚಿತ್ರಕಥೆಗಳನ್ನು ಕೃತಕ ಬುದ್ಧಿಮತ್ತೆಯೇ ರೂಪಿಸಿಕೊಡಬಹುದಾಗಿದೆ. ಜನರ ಭಾವನೆಗಳೊಂದಿಗೆ ಆಟವಾಡುವುದಕ್ಕೆ ಈಗ ಅದಕ್ಕೂ ಗೊತ್ತಾಗಿಬಿಟ್ಟಿದೆ. ಚಾಟ್‌ಜಿಪಿಟಿ ಹೊರತಂದಿರುವ ದೃಶ್ಯರೂಪದಲ್ಲಿ ಕಥೆಯನ್ನು ಹೇಳುವ 'ಸೋರಾ' ತಂತ್ರಜ್ಞಾನವು ಹಾಲಿವುಡ್ ಕ್ಷೇತ್ರದಲ್ಲಿ ಭಾರಿ ಸಂಚಲನವನ್ನೇ ಎಬ್ಬಿಸಿದೆ. ಅಂದು ಕಥೆಗಾರರು, ಸ್ಕ್ರಿಪ್ಟ್ ಬರಹಗಾರರು ಮಾತ್ರವಲ್ಲದೆ ತಮ್ಮನ್ನೇ ಹೋಲುವ ಕೃತಕ ನಾಯಕ-ನಾಯಕಿಯರನ್ನು ತೆರೆಯಲ್ಲಿ ಕಂಡಿದ್ದ ನಟ-ನಟಿಯರೂ ರೊಚ್ಚಿಗೆದ್ದಿದ್ದರೆ, ಇದೀಗ ಹಾಲಿವುಡ್ ನಿರ್ಮಾಪಕರೂ ಬೆಚ್ಚಿ ಬಿದ್ದಿದ್ದಾರೆ. ಸೋರಾ ಎಂಬ ಜನರೇಟಿವ್ ತಂತ್ರಜ್ಞಾನದ ಸಹಾಯದಿಂದ, ಪೂರ್ತಿ ಚಲನಚಿತ್ರವನ್ನೂ, ಧಾರಾವಾಹಿಯ ಎಪಿಸೋಡುಗಳನ್ನೂ ಗರಿಷ್ಠ ಗುಣಮಟ್ಟದಲ್ಲಿ ನಿರ್ಮಿಸಬಹುದಾಗಿದೆ. ಅಂತರ್ಜಾಲದಲ್ಲೇ ಮನೋರಂಜನೆಯನ್ನು ದೊರಕಿಸಿಕೊಡುವ 'ಒಟಿಟಿ' (ಓವರ್ ದಿ ಟಾಪ್) ವೇದಿಕೆಗಳಿಗೆ ಅತ್ಯಂತ ಸುಲಭವಾಗಿ, ತೀರಾ ಕನಿಷ್ಠ ಖರ್ಚು-ವೆಚ್ಚದಲ್ಲಿ, ಯಾರಿಗೂ ವೇತನವನ್ನೇ ಕೊಡಬೇಕಿಲ್ಲದೆ ಇಡೀ ಸಿನಿಮಾವನ್ನೇ ನಿರ್ಮಿಸಿಕೊಡಬಹುದಾಗಿದೆ!

ಏನಿದು ಸೋರಾ?

ಅತ್ಯಾಧುನಿಕವಾದ ಕೃತಕ ಬುದ್ಧಿಮತ್ತೆಯ ಸುಧಾರಿತ ತಂತ್ರಜ್ಞಾನವೇ 'ಸೋರಾ'. ಇದು ಓಪನ್‌ಎಐ ಕಂಪನಿಯ ಚಾಟ್‌ಜಿಪಿಟಿ ಎಂಬ ಜನರೇಟಿವ್ ತಂತ್ರಜ್ಞಾನವನ್ನು ಅವಲಂಬಿಸಿದೆ. ಕಥೆ, ಚಿತ್ರಕಥೆ, ಸಂಭಾಷಣೆ, ಪ್ರೇಕ್ಷಕರ ಮತ್ತು ಕಥಾಸಾಹಿತಿಗಳ ಭಾವನೆಗಳಿಗೆ ಅನುಗುಣವಾಗಿ ಕಥೆಯ ಬದಲಾವಣೆ ಮಾಡಿಕೊಡಬಲ್ಲ ಕೃತಕ ಬುದ್ಧಿಮತ್ತೆ ಈ ತಂತ್ರಜ್ಞಾನದಲ್ಲಿದೆ. ಕಥಾ ಹಿನ್ನೆಲೆ, ಸನ್ನಿವೇಶದ ಚಿತ್ರಣ, ವಾದ-ಸಂವಾದ ಮಾತ್ರವಲ್ಲದೆ, ಕೆಲವೇ ಕ್ಷಣಗಳಲ್ಲೇ ಇಡೀ ಚಿತ್ರಕಥೆಯನ್ನು ಇದು ರಚಿಸಬಲ್ಲದು. ಮತ್ತು ವಿಡಿಯೊವನ್ನು ಕೂಡ ಚಿತ್ರಿಸಿಕೊಡಬಲ್ಲದು. ಸಂದರ್ಭವನ್ನು ಅರ್ಥ ಮಾಡಿಕೊಂಡು, ಕಥೆಯ ಶೈಲಿಗೆ ಅನುಗುಣವಾಗಿ ಮತ್ತು ನಮ್ಮ ಆದ್ಯತೆಗಳಿಗೆ ಅನುಗುಣವಾಗಿ, ಕಥೆಯು ಸಾಗಬೇಕಾದ ಶೈಲಿಗೆ (ಹಾಸ್ಯಪ್ರಧಾನವೋ, ಕಲಾತ್ಮಕವೋ, ಮನೋರಂಜನೆಯೋ ಅಥವಾ ಹಿಂಸೆಯೋ... ಹೀಗೆ) ಅನುಗುಣವಾಗಿ ಕಥೆಯನ್ನು ವಿಸ್ತರಿಸಿ, ಚಲನಚಿತ್ರ ನಿರ್ಮಿಸಲು ಈ ಸಹಾಯಕ ತಂತ್ರಜ್ಞಾನ ನೆರವಾಗುತ್ತದೆ. ಒಮ್ಮೆ ನಿರ್ಮಿಸಿದ್ದನ್ನು ಕೆಲವೇ ಕ್ಷಣಗಳಲ್ಲಿ ತಿದ್ದುಪಡಿಯನ್ನು ಮಾಡುವುದು, ಪೂರ್ತಿಯಾಗಿ ಅಥವಾ ನಿರ್ದಿಷ್ಟ ಸನ್ನಿವೇಶವನ್ನಷ್ಟೇ ಬದಲಾವಣೆ ಮಾಡುವುದೂ ಸಾಧ್ಯ.

ಪರಿಣಾಮ ಏನು?

ಅತ್ಯಾಧುನಿಕ ಗೇಮಿಂಗ್, ಚಲನಚಿತ್ರ, ಆ್ಯನಿಮೇಶನ್ ಕ್ಷೇತ್ರಗಳಲ್ಲಿ ತೀರಾ ಕಡಿಮೆ ಶ್ರಮ, ಹಣ ಮತ್ತು ಸಮಯ ಬೇಡುವ ಟೂಲ್ ಆಗಿ ಇದು ಬಳಕೆಯಾಗಲಿದೆ. ಪಠ್ಯವಷ್ಟೇ ಅಲ್ಲದೆ, ಚಿತ್ರ ನಿರ್ಮಾಣಕ್ಕೂ (ವಿಡಿಯೊ) ಸೈ. ಒಂದು ಚಿತ್ರ ನಿರ್ಮಾಣಕ್ಕೆ ಅಥವಾ ಗೇಮ್ ರಚಿಸಲು ತಿಂಗಳುಗಟ್ಟಲೆ ಪೂರ್ವತಯಾರಿ, ನಟ-ನಟಿಯರ ಆಯ್ಕೆ, ಕಥೆ ಸಾಗುವ ರೀತಿ ಮುಂತಾದವುಗಳ ಚಿಂತನೆ ನಡೆಸಬೇಕಾಗುತ್ತದೆ. ಆದರೆ ಸೋರಾ, ಕೆಲವೇ ಕ್ಷಣಗಳಲ್ಲಿ ಇಡೀ ವಿಡಿಯೊ ಅಥವಾ ಗೇಮ್ ಸಿದ್ಧಪಡಿಸುವ ಮೂಲಕ ಅದನ್ನು ಸುಲಭವಾಗಿಸುತ್ತದೆ. ಒಮ್ಮೆ ನಿರ್ಮಾಣವಾದ ಬಳಿಕ ಜಗತ್ತಿನ ಹಲವು ಭಾಷೆಗಳಿಗೆ ಅದನ್ನು ಡಬ್ ಮಾಡುವುದು ಕೂಡ ಸಾಧ್ಯ. ಸ್ವತಂತ್ರ ಯೂಟ್ಯೂಬರ್‌ಗಳಿಗೆ ಅಥವಾ ಸಣ್ಣಪುಟ್ಟ ಸ್ಟುಡಿಯೊ ಹೊಂದಿರುವವರಿಗೆ ಇದು ವರದಾನವಿದ್ದಂತೆ.

ಈ ಕಾರಣಗಳಿಗಾಗಿಯೇ ಹಾಲಿವುಡ್ ಸ್ಕ್ರೀನ್ ರೈಟಿಂಗ್ ಹಾಗೂ ನಿರ್ಮಾಪಕರ ಸಮುದಾಯದಿಂದ ಪ್ರಬಲ ವಿರೋಧ ಎದುರಾಗಿದೆ. ಕೌಶಲವನ್ನು ಬೇಡುವ ಅವರ ಉದ್ಯೋಗಗಳಿಗೆ ಕುತ್ತು ತರುವಂಥ ತಂತ್ರಜ್ಞಾನವಿದು.

ಈ ರೀತಿಯಲ್ಲಿ ಚಲನಚಿತ್ರ, ಗೇಮ್, ಆ್ಯನಿಮೇಷನ್ ಸರಣಿ ನಿರ್ಮಾಣಕ್ಕೆ ನೆರವಾಗುವುದರಲ್ಲಿ ಚಾಟ್‌ಜಿಪಿಟಿ ಮಾತ್ರವೇ ಇರುವುದಲ್ಲ. ಎಐ ಡಂಜಿಯಾನ್ (AI Dungeon), ಓಪನ್‌ಎಐನ ಮತ್ತೊಂದು ಟೂಲ್ ರೈಟರ್ಸ್ ರೂಮ್ (Writer's Room), ಸೂಡೋರೈಟ್ (SudoWrite), ಪ್ಲಾಟ್ ಜನರೇಟರ್, ಗ್ರಾಮರ್ಲೀ ಮುಂತಾದ ಇನ್ನೂ ಹಲವಾರು ಟೂಲ್‌ಗಳು ಕೂಡ, ಕಥೆ, ಚಿತ್ರಕಥೆ, ಸಂಭಾಷಣೆಗಳನ್ನು ರಚಿಸಲು, ಕಥೆಯ 'ಐಡಿಯಾ'ವನ್ನು ನೀಡಲು, ಸನ್ನಿವೇಶಗಳನ್ನು ಸೃಷ್ಟಿಸಲು ನೆರವಾಗುತ್ತವೆ.

ಸವಾಲುಗಳೇನು?

ನೈಜತೆಗೆ ಹತ್ತಿರವಾಗಿ ಇದು ಚಿತ್ರಣವನ್ನು ಕಟ್ಟಿಕೊಡಬಹುದಾದರೂ, ಯಾವುದೇ ಚಿತ್ರಕ್ಕೆ ಪರಿಪೂರ್ಣವಾಗಿ ಮಾನವೀಯ ಸ್ಪರ್ಶ ನೀಡುವುದಕ್ಕೆ ಸೋರಾಕ್ಕೆ ಸಾಧ್ಯವಾಗದು. ಅಂತೆಯೇ ಪಕ್ಷಪಾತದಿಂದ ಕೂಡಿದ ಕಥೆಗಳು, ತಪ್ಪು ಮಾಹಿತಿ, ತಪ್ಪು ಸಂದೇಶಗಳೂ ಸೃಷ್ಟಿಯಾಗಬಹುದು. ಜೊತೆಗೆ, ನಟ-ನಟಿಯರನ್ನು ಹೋಲುವ ಮುಖಗಳೂ, ಇತರರ ಕಥೆ, ಹಾಡು, ನೃತ್ಯ, ಸನ್ನಿವೇಶಗಳಲ್ಲಿ ಹೋಲಿಕೆಗಳೂ ಇರಬಹುದಾಗಿದ್ದು, ಇದರಿಂದ ಕೃತಿಸ್ವಾಮ್ಯ ಸಮಸ್ಯೆಗಳೂ ಎದುರಾಗಬಹುದು.

ಸೋರಾದ ಸಾಧ್ಯತೆಗಳ ಅಗಾಧತೆಯನ್ನು https://openai.com/sora/ ತಾಣದಲ್ಲಿ ನೋಡಬಹುದಾಗಿದೆ. ❖


ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

34) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಕೊಟ್ಟಿರುವ ಬೀಜದಳದ ಚಿತ್ರದಲ್ಲಿ ಮತ್ತು ಎಂದು ಗುರುತಿಸಲಾದ ಭಾಗಗಳು ಕ್ರಮವಾಗಿ .... (ಮಾರ್ಚ್ 2020)



ಎ) ಹಣ್ಣು ಕಾಂಡ
ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು
ಸಿ) ದ್ವಿತೀಯ ಬೇರು ಮತ್ತು ಪ್ರಥಮ ಕಾಂಡ
ಡಿ) ಮೊಗ್ಗು ಮತ್ತು ಎಲೆ

ಉತ್ತರ:– (ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು

2) ಶಾರ್ಟ್ ಸರ್ಕ್ಯೂಟ್ ಸಂದರ್ಭದಲ್ಲಿ ಮಂಡಲದಲ್ಲಿನ ವಿದ್ಯುತ್ ಪ್ರವಾಹವು...................

ಎ) ಗಣನೀಯವಾಗಿ ಕಡಿಮೆಯಾಗುತ್ತದೆ.
ಬಿ) ಬಹಳ ಹೆಚ್ಚಾಗಿರುತ್ತದೆ.
ಸಿ) ಒಮ್ಮೆ ಹೆಚ್ಚು ಒಮ್ಮೆ ಕಡಿಮೆ ಆಗುತ್ತದೆ
ಡಿ) ವಿದ್ಯುತ್ ಸ್ಥಿರವಾಗಿರುತ್ತದೆ

ಉತ್ತರ:–(ಬಿ) ಬಹಳ ಹೆಚ್ಚಾಗಿರುತ್ತದೆ.

3) ಈ ಕೆಳಗಿನವುಗಳಲ್ಲಿ ಯಾವುದು ಮನುಷ್ಯರಲ್ಲಿ ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಭಾಗವಲ್ಲ

ಎ) ಅಂಡಾಶಯ ಬಿ) ಗರ್ಭಕೋಶ
ಸಿ) ವೀರ್ಯನಾಳ ಡಿ) ಅಂಡನಾಳ

ಉತ್ತರ:– (ಸಿ) ವೀರ್ಯನಾಳ

4) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?

ಎ) ಹಿಮ್ಮೆದುಳಿನ ಮೆಡುಲ್ಲ ಬಿ) ಸೈಟೋಕೈನಿನ್
ಸಿ) ಕಾಲುಗಳು ಡಿ) ಹಿಮ್ಮೆದುಳಿನ ಅನುಮಸ್ತಿಷ್ಕ

ಉತ್ತರ:– (ಡಿ) ಹಿಮ್ಮೆದುಳಿನ ಭಾಗವಾದ ಅನುಮಸ್ತಿಷ್ಕ

5) ಸ್ನೇಲ್‌ನ ನಿಯಮಕ್ಕೆ (Snell Law)ಸಂಬಂಧಿಸಿದ್ದು ....

ಎ) ಬೆಳಕಿನ ಪ್ರತಿಫಲನ ಬಿ) ಬೆಳಕಿನ ವಕ್ರೀಭವನ
ಸಿ) ಬೆಳಕಿನ ಪ್ರಸರಣೆ ಡಿ) ಬೆಳಕಿನ ಕೋರಿಕೆ

ಉತ್ತರ:– (ಬಿ) ಬೆಳಕಿನ ವಕ್ರೀಭವನ

6) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು? (ಮಾರ್ಚ್ 2021)

ಎ) ಮ್ಯಾಂಗನೀಸ್ ಬಿ) ಟಂಗಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ

ಉತ್ತರ:– (ಬಿ) ಟಂಗಸ್ಟನ್

7) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರಣವಾಗುತ್ತದೆ?

ಎ) ಅಬ್ಸಿಸಿಕ್ ಆಮ್ಲ (abscisic acid)
ಬಿ) ಆಕ್ಸಿನ್ ಸಿ) ಸೈಟೋಕೈನಿನ್
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ಅಬ್ಸಿಸಿಕ್ ಆಮ್ಲ (abscisic acid)

8) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ–ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ............

ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲೀಯಸ್

ಉತ್ತರ:– (ಬಿ) ಮೈಟೋ ಕಾಂಡ್ರಿಯಾ

9) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?

ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್

ಉತ್ತರ:– (ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

10) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:– (ಸಿ) ಹೈಡ್ರೋಕ್ಲೋರಿಕ್ ಆಮ್ಲ

11) "ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ." ಇದು ಯಾವ ನಿಯಮ?

ಎ) ಗುರುತ್ವಾಕರ್ಷಣ ನಿಯಮ
ಬಿ) ನ್ಯೂಟನನ ಮೊದಲ ನಿಯಮ
ಸಿ) ರಾಶಿ ಸಂರಕ್ಷಣೆ ನಿಯಮ ಡಿ) ಹೊಸ ವಿಕಿರಣ ನಿಯಮ

ಉತ್ತರ:– (ಸಿ) ರಾಶಿ ಸಂರಕ್ಷಣೆ ನಿಯಮ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

35) ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ. (ಜೂನ್ 2019)

ಉತ್ತರ:– * ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ :– ವೋಲ್ಟ್
* ವಿಭವಾಂತರವನ್ನು ಅಳೆಯಲು ಬಳಸುವ ಸಾಧನ:– ವೋಲ್ಟ್ ಮೀಟರ್

36) ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಎಲ್ಲಿ ಉಂಟಾಗುತ್ತದೆ?


ಉತ್ತರ:– ಕಣ್ಣನ್ನು ಪ್ರವೇಶಿಸುವ ಬೆಳಕಿನ ಕಿರಣಗಳ ಹೆಚ್ಚಿನ ವಕ್ರೀಭವನವು ಕಾರ್ನಿಯಾದ ಹೊರ ಮೇಲ್ಮೈನಲ್ಲಿ ಉಂಟಾಗುತ್ತದೆ

4) ವಿದ್ಯುತ್ ಪ್ರವಾಹದ ಏಕಮಾನವನ್ನು ವ್ಯಾಖ್ಯಾನಿಸಿ

ಉತ್ತರ:– ವಿದ್ಯುತ್ ಪ್ರವಾಹದ ಏಕಮಾನ ಆಂಪೀಯರ್(A) ಒಂದು ಅಂಪಿಯರ್ ವಿದ್ಯುತ್ ಪ್ರವಾಹದ ರಚನೆಯು ಪ್ರತಿ ಸೆಕೆಂಡಿಗೆ ಒಂದು ಕೂಲಂಬ್ ಆವೇಶದ ಪ್ರವಾಹವಾಗಿದೆ.

37) ಮಾನವ ಹೃದಯದ ಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



II PUC BIOLOGY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

REVISION : MODEL QUESTIONS

27. Describe the out breeding devices that prevent the auto-gamy.

Ans:- Continued self-pollination results in inbreeding depression, flowering plants have developed out breeding devices to discourage self-pollination and to encourage cross-pollination.

1) Pollen grains are released before the stigma becomes receptive or stigma becomes receptive before pollens are released.

2) In some species the anthers and stigma are placed in different position, so that pollen cannot come in contact with stigma of the same flower.

3. Self-incompatibility, it is a genetic mechanism were pollens are prevented from fertilizing the ovule by inhibiting pollen tube germination.

4. By- production of unisexual flowers.

28. a. What is medical termination of pregnancy? Mention the safe period for medical Termination of pregnancy.

Ans. 1. It is defined as international or voluntary termination of pregnancy before full term.

2. MTP was legalised my Government of India in 1971. If India in 1971.

3. MTP is done in the following situations.

i. Failure of contra captive used during coitus or rapes.

ii. When continued pregnancy is harmful or fatal to either mother or foetus or both.

iii. It is performed during first trimester(ie) up to 12 weeks of pregnancy.

b. Write three simple principles to prevent sexually transmitted diseases.

Ans. i. Avoid sex with unknown partners/multiple partners.

ii. Always use condoms during coitus.

iii. Contact a qualified doctor for any doubt in early stage of infection.

32. Mention the steps involved in DNA finger printing?

Ans. FR. Alec Jeffery developed the Technique of DNA finger printing an attempt to identify DNA marker for inherited deceases. DNA finger printing uses short nucleotide repeats called variable number Tandem Repeats (VNTRs) as markers. VNTRs vary from person to person.

Methodology :

1. DNA is isolated and extracted from the cell or tissue by centrifugation.

2. By the process of polymerase chain reaction (PCR) many copies are produced. This step is called amplification.

3. DNA is cut into small fragments by treating with restriction end nuclease.

4. DNA fragments are separated by a arose gel electrophoresis.

5. The separated DNA fragments are visualised under ultraviolet radiation after applying suitable dye.

6. The DNA is transferred from electrophoresis plate to nylon membrane sheet . this is called southern blotting

7. Probs are now added which bind to specific nucleic sequences that are complementary to them is called hybridisation .

8. The hybridised DNA fragments are detected by autobiography. They are observed as dark bands on x-ray film

33. Mention the three critical areas of biotechnology

Ans:- Biotechnology has three main categories: biomedical, agricultural, and environmental.

Some critical research areas of biotechnology include:

* Providing the best catalyst in the form of an improved organism
* Creating optimal conditions for a catalyst to act
* Downstream processing technologies to purify the protein/organic compound

Biotechnology also has three important techniques:

* Recombinant DNA Technology (Genetic Engineering)
* Plant Tissue Culture
* Transgenic (Genetically Modified Organisms)

34. Describe the structure of DNA with a neat labelled diagram.

Ans:- James D. Watson and F.H.C. Crick proposed the Double helix model of DNA in 1953.

According to which the DNA molecule is composed of 2 polynucleotide strands running anti parallel to each other. They are inter twined like a twisted ladder and each strand is helically coiled to the other. The outer edge of the helix is made up of deoxyribose and phosphate molecules all along. This becomes the back bone of the helix comparable to the limb of a ladder. The nitrogen bases of both the strands face each other and is arranged at right angles to the backbone similar to the steps of a ladder. There is a specific pairing of nitrogen bases. A specific purine pairs with a specific pyrimidine. Adenine pairs with Thymine with two hydrogen bonds (A=T) whereas Guanine pairs with Cytosine with 3 hydrogen bonds (G ≡ C). *(Contd)*

ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಮಹಾಕುಂಭಮೇಳ

ಮಾಘಿ ಹುಣ್ಣಿಮೆ: 'ವಾಹನ ಮುಕ್ತ ವಲಯ'

ಮಹಾಕುಂಭನಗರ, (ಪಿಟಿಐ): ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಬುಧವಾರ ಮಾಘಿ ಹುಣ್ಣಿಮೆ, 'ಕಲ್ಪವಾಸ್' ಪೂರ್ಣಗೊಳ್ಳಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಲಿದ್ದು, ವಾಹನಗಳ ದಟ್ಟಣೆ ನಿಯಂತ್ರಿಸಲು ಮಹಾಕುಂಭ ನಗರ ವ್ಯಾಪ್ತಿಯನ್ನು 'ವಾಹನ ಮುಕ್ತ ವಲಯ'ವನ್ನಾಗಿ ಮಾಡಿದ್ದಾರೆ.

ಪುಣ್ಯ ನದಿಯ ತಟದಲ್ಲಿ ನಿಗದಿತ ಕಾಲ ನೆಲಸಿ, ಉಪವಾಸದ ಮೂಲಕ ಆತ್ಮದ ಅವಲೋಕನ ಹಾಗೂ ಆಧ್ಯಾತ್ಮಿಕ ಶುದ್ಧೀಕರಣ ಪ್ರಕ್ರಿಯೆಗೆ 'ಕಲ್ಪವಾಸ್' ಎಂದು ಕರೆಯಲಾಗುತ್ತದೆ. ಮಹಾಕುಂಭಮೇಳದ ಅವಧಿಯಲ್ಲಿ ನಡೆಸುವ 'ಕಲ್ಪವಾಸ್' ಅನ್ನು ಅತ್ಯಂತ ಮಂಗಳಕರ ಎಂದು ಪರಿಗಣಿಸಲಾಗಿದೆ.

ಅಂದಾಜಿನ ಪ್ರಕಾರ, ತ್ರಿವೇಣಿ ಸಂಗಮದಲ್ಲಿಯೇ 10 ಲಕ್ಷಕ್ಕೂ ಅಧಿಕ ಭಕ್ತರು 'ಕಲ್ಪವಾಸ್'ನಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಸರ್ಕಾರ ಬಿಡುಗಡೆಗೊಳಿಸಿದ ಹೇಳಿಕೆಯಲ್ಲಿ ತಿಳಿಸಿದೆ.

'ಮಾಘ ಹುಣ್ಣಿಮೆಯಂದು ನಡೆಸುವ ಪುಣ್ಯಸ್ನಾನಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಮಂಗಳವಾರ ಬೆಳಿಗ್ಗೆ 4 ಗಂಟೆಯಿಂದ ಬುಧವಾರ ಸಂಜೆ 5 ಗಂಟೆಯವರೆಗೆ ಇಡೀ ಮಹಾಕುಂಭ ನಗರವನ್ನು ವಾಹನ ಮುಕ್ತ ವಲಯವಾಗಿ ಮಾಡಲಾಗಿದ್ದು, ತುರ್ತು, ಅಗತ್ಯ ವಸ್ತುಗಳನ್ನು ಪೂರೈಸುವ ವಾಹನಗಳಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮಹಾಕುಂಭಮೇಳದಲ್ಲಿ ಮಾಘಿ ಹುಣ್ಣಿಮೆಯ ಅಮೃತ ಸ್ನಾನ ಮಾಡಲು ಮಂಗಳವಾರ ದೋಣಿಯಲ್ಲಿ ತ್ರಿವೇಣಿ ಸಂಗಮಕ್ಕೆ ತೆರಳಿದ ಭಕ್ತರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಅಜಾದ್



ರಿಲಯನ್ಸ್ ಉದ್ದಿಮೆಗಳ ಸಮೂಹದ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಕುಂಭಮೇಳದಲ್ಲಿ ಕುಟುಂಬಸಹಿತ ಮಂಗಳವಾರ ಪುಣ್ಯಸ್ನಾನ ಮಾಡಿ, ತ್ರಿವೇಣಿ ಸಂಗಮದಲ್ಲಿ ಗಂಗಾ ಪೂಜೆ ನೆರವೇರಿಸಿದರು ಪಿಟಿಐ ಚಿತ್ರ

ದೆಹಲಿ ಮುಖ್ಯಮಂತ್ರಿ ಆಯ್ಕೆ ಮುಂದುವರಿದ ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮುಖ್ಯಮಂತ್ರಿ ಆಯ್ಕೆಗಾಗಿ ಬಿಜೆಪಿಯಲ್ಲಿ ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ, ಮುಂಬರುವ ಬಿಹಾರ ವಿಧಾನಸಭೆ ಮತ್ತು ಪಂಜಾಬ್‌ನಲ್ಲಿ ಬಲಿಷ್ಠವಾಗಿರುವ ಎಎಪಿಗೆ ರಾಜಕೀಯ ಸಂದೇಶ ರವಾನಿಸುವ ನಿಟ್ಟಿನಲ್ಲಿ ಬಿಜೆಪಿಯು ಇಬ್ಬರು ಉಪ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ದೆಹಲಿ ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಕೆಲವು ಬಿಜೆಪಿ ಶಾಸಕರು ಮಂಗಳವಾರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಆದಾಗ್ಯೂ, ಅಮೆರಿಕ ಮತ್ತು ಫ್ರಾನ್ಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮರಳಿದ ಬಳಿಕವೇ ನೂತನ ಸಚಿವ ಸಂಪುಟದ ಕುರಿತು ಅಂತಿಮ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿದುಬಂದಿದೆ.

ಸಿಖ್ ಸಮುದಾಯಕ್ಕೆ ಸಂಪುಟದಲ್ಲಿ ಪ್ರಾತಿನಿಧ್ಯ ಕಲ್ಪಿಸಲು ರಜೌರಿ ಗಾರ್ಡನ್ ಕ್ಷೇತ್ರದ ಶಾಸಕ ಮನಜಿಂದರ್ ಸಿಂಗ್ ಸಿರ್ಸಾ ಅವರಿಗೆ ಸಚಿವ ಸ್ಥಾನ ಅಥವಾ ಉಪ ಮುಖ್ಯಮಂತ್ರಿ ಸ್ಥಾನ ನೀಡುವ ಇರಾದೆ ಬಿಜೆಪಿಗೆ ಇದೆ. ಬಿಹಾರದಲ್ಲಿ ಬಿಜೆಪಿಯು ಜೆಡಿಯು ಪಕ್ಷದ ಜೂನಿಯರ್ ಪಕ್ಷವಾಗಿ ಅಧಿಕಾರ ಹಂಚಿಕೊಳ್ಳುತ್ತಿದೆ. ಏಕಾಂಗಿಯಾಗಿ ಅಧಿಕಾರದ ಗದ್ದುಗೆ ಗೇರಲು ಬಿಜೆಪಿಯಿಂದ ಸಾಧ್ಯವಾಗಿಲ್ಲ. ಹೀಗಾಗಿ, 2025ರ ಡಿಸೆಂಬರ್ ವೇಳೆಗೆ ನಡೆಯಲಿರುವ ಬಿಹಾರ ವಿಧಾನ ಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಉಪ ಮುಖ್ಯಮಂತ್ರಿಸ್ಥಾನ ಸೃಷ್ಟಿಸುವ ಅಪೇಕ್ಷೆಯನ್ನು ಪಕ್ಷ ಹೊಂದಿದೆ.

ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಗೆಲುವು ಸಾಧಿಸಿದ ಮಾಜಿ ಸಂಸದ ಪರ್ವೇಶ್ ವರ್ಮಾ ಅವರು ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಆದರೆ, 14 ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಮುಖ್ಯಮಂತ್ರಿಗಳಿದ್ದು, ಯಾರೊಬ್ಬರೂ ಮಹಿಳೆಯರಿಲ್ಲ. ಹೀಗಾಗಿ, ದೆಹಲಿಯಲ್ಲಿ ಮಹಿಳೆಯೊಬ್ಬರನ್ನು ಮುಖ್ಯಮಂತ್ರಿ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಎಪಿಸೋಡ್ ತೆಗೆದ ಯೂಟ್ಯೂಬ್

ನವದೆಹಲಿ (ಪಿಟಿಐ): ಪಾಡ್‌ಕಾಸ್ಟರ್ ರಣವೀರ್ ಇಲಾಹಾಬಾದಿಯಾ ಅವರು ಆಡಿದ ಅಶ್ಲೀಲ ಮಾತುಗಳು ಇರುವ 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಎಂಬ ರಿಯಾಲಿಟಿ ಶೋ ಕಾರ್ಯಕ್ರಮದ ಎಪಿಸೋಡ್ ಅನ್ನು ಮಂಗಳವಾರ ಯೂಟ್ಯೂಬ್ ತೆಗೆದುಹಾಕಿದೆ.



ರಣವೀರ್

ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಯೂಟ್ಯೂಬ್ ಈ ಕ್ರಮ ಕೈಗೊಂಡಿದೆ.

ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಹಿರಿಯ ಸಲಹೆಗಾರ್ತಿ ಕಾಂಚನ್ ಗುಪ್ತ ಅವರು ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. 'ರಾಷ್ಟ್ರೀಯ ಮಹಿಳಾ ಆಯೋಗದಿಂದ ವರದಿ ತರಿಸಿಕೊಳ್ಳಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಖಾತೆಯ ಸಚಿವೆ ಅನ್ನಪೂರ್ಣಾ ದೇವಿ ಪ್ರತಿಕ್ರಿಯಿಸಿದ್ದಾರೆ.

ಫೆ.17ರಂದು ತನಿಖೆಗೆ ಹಾಜರಾಗುವಂತೆ ರಣವೀರ್, ಸಮಯ್ ಹಾಗೂ ಕಾರ್ಯಕ್ರಮದ ನಿರ್ಮಾಪಕರಿಗೆ ಮಹಿಳಾ ಆಯೋಗವು ಸಮನ್ಸ್ ನೀಡಿದೆ.

30 ಅತಿಥಿಗಳಿಗೆ ಸಮನ್ಸ್: 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಕಾರ್ಯಕ್ರಮದ ವಿರುದ್ಧ ಮಹಾರಾಷ್ಟ್ರ ಸೈಬರ್ ವಿಭಾಗವು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ. ಮೊದಲ ಎಪಿಸೋಡ್‌ನಿಂದ ಇಲ್ಲಿಯವರೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸುಮಾರು 30 ಅತಿಥಿಗಳಿಗೆ ಸಮನ್ಸ್ ನೀಡಲಾಗಿದೆ.

'ಈ ಕಾರ್ಯಕ್ರಮದ ಎಲ್ಲ 18 ಎಪಿಸೋಡ್‌ಗಳನ್ನು ತೆಗೆದು ಹಾಕುವ ಬಗ್ಗೆ ಸೈಬರ್ ವಿಭಾಗ ಚಿಂತನೆ ನಡೆಸಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವವರು, ಅತಿಥಿಗಳು, ತೀರ್ಪುಗಾರರು ಎಲ್ಲರೂ ಅಶ್ಲೀಲ ಭಾಷೆ ಬಳಸುತ್ತಿದ್ದಾರೆ. ಇಂತಹವರ ಪಟ್ಟಿ ಸಿದ್ಧಪಡಿಸಿಕೊಳ್ಳಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ತಿರುಪತಿ ಲಡ್ಡು ಹಗರಣ: ವಾಹನ ಚಾಲಕರಿಗೆ ಡೇರಿ ನಿರ್ದೇಶಕ ಸ್ಥಾನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಪತಿ ತಿರುಮಲ ದೇವಸ್ಥಾನದ ಪವಿತ್ರ ಪ್ರಸಾದ ಲಡ್ಡು ತಯಾರಿಕೆಗೆ ಕಲಬೆರಕೆ ತುಪ್ಪ ಪೂರೈಸಿರುವ ಆರೋಪ ಎದುರಿಸುತ್ತಿರುವ ತಮಿಳುನಾಡಿನ ಎಆರ್ ಡೇರಿ ಪ್ರೈವೇಟ್ ಲಿಮಿಟೆಡ್, ಉತ್ತರಾಖಂಡದ ಡೇರಿಯಿಂದ ಪ್ರತಿ ಕೆ.ಜಿಗೆ ₹2.75ರಿಂದ ₹3 ಕಮಿಷನ್ ಪಡೆಯುತ್ತಿತ್ತು ಎನ್ನುವುದು ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆಯಲ್ಲಿ ಪತ್ತೆಯಾಗಿದೆ.

ತುಪ್ಪ ಕಲಬೆರಕೆಯ ಪ್ರಕರಣ ಬಹಿರಂಗಗೊಂಡ ನಂತರ ಅದರ ಪರಿಣಾಮಗಳಿಂದ ಆತಂಕಗೊಂಡಿದ್ದ ಉತ್ತರಾಖಂಡ ಮೂಲದ ಡೇರಿ ಪ್ರವರ್ತಕರು ಸರ್ಕಾರದ ಕ್ರಮದಿಂದ ತಪ್ಪಿಸಿಕೊಳ್ಳಲು ತಮ್ಮ ವಾಹನಗಳ ಚಾಲಕರನ್ನು ಡೇರಿಯ ನಿರ್ದೇಶಕರನ್ನಾಗಿ ನೇಮಿಸಿಕೊಂಡಿದ್ದರು ಎನ್ನುವ ಅಂಶವನ್ನು ಎಸ್‌ಐಟಿಯು ಇತ್ತೀಚೆಗೆ ತಿರುಪತಿಯ ನ್ಯಾಯಾಲಯಕ್ಕೆ ಸಲ್ಲಿಸಿರುವ ರಿಮ್ಯಾಂಡ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಎಸ್‌ಐಟಿಯು ಲಡ್ಡು ಪ್ರಸಾದ ಕಲಬೆರಕೆ ಹಗರಣಕ್ಕೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆಯಲ್ಲಿ, ಉತ್ತರಾಖಂಡದ ರೂರ್ಕಿಯ ಭೋಲೆ ಬಾಬಾ ಡೇರಿಯ ಮಾಜಿ ನಿರ್ದೇಶಕರಾದ ವಿಪಿನ್ ಜೈನ್ ಮತ್ತು ಪೊಮಿಲ್ ಜೈನ್, ತಿರುಪತಿಯ ವೈಷ್ಣವಿ ಡೇರಿಯ ಸಿಇಒ ಅಪೂರ್ವ ವಿನಯ್ ಕಾಂತ್ ಚಾವ್ಡಾ ಮತ್ತು ಎಆರ್ ಡೇರಿ ವ್ಯವಸ್ಥಾಪಕ ನಿರ್ದೇಶಕ ರಾಜು ರಾಜಶೇಖರನ್ ಅವರನ್ನು ಬಂಧಿಸಿತ್ತು.

ದೇವರಗುಡ್ಡ–ಮೈಲಾರ ಜಾತ್ರೆ • ಪೊಲೀಸರ ನಿರ್ಲಕ್ಷ್ಯ; ಜನಪ್ರತಿನಿಧಿಗಳಿಂದ ಒತ್ತಡ

ಹೆದ್ದಾರಿ ಚಕ್ಕಡಿ ಸವಾರಿ ಅಪಾಯಕಾರಿ

• ಸಂತೋಷ ಜಿಗಳಿಕೊಪ್ಪ



ಹಾವೇರಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೊರಟಿದ್ದ ಚಕ್ಕಡಿ ಹಾಗೂ ಅವುಗಳ ಹಿಂದೆ ತೆರಳುತ್ತಿದ್ದ ವಾಹನಗಳು – ಪ್ರಜಾವಾಣಿ ಚಿತ್ರ/ಮಾಲತೇಶ ಇಚ್ಚಂಗಿ

ಹಾವೇರಿ: ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ದೇವರಗುಡ್ಡ ಹಾಗೂ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮೈಲಾರದ ಜಾತ್ರೆಗಾಗಿ ಜನರು ಚಕ್ಕಡಿ ಕಟ್ಟಿಕೊಂಡು ಹೆದ್ದಾರಿಗಳ ಮೂಲಕ ಹೊರಟಿದ್ದಾರೆ. ಜಿದ್ದಿಗೆ ಬಿದ್ದು ಅತಿ ವೇಗದಲ್ಲಿ ಚಕ್ಕಡಿಗಳನ್ನು ಓಡಿಸುತ್ತಿದ್ದು, ಮಾರ್ಗಮಧ್ಯ ಅನಾಹುತ ಸಂಭವಿಸುತ್ತಿವೆ.

ರಾಜ್ಯದಲ್ಲೇ ಅತಿ ಹೆಚ್ಚು ಜನರು ಸೇರುವ ಮೈಲಾರ ಜಾತ್ರೆಗೆ ಫೆಬ್ರುವರಿ 9ರಿಂದ ಹಾವೇರಿ ಹಾಗೂ ಸುತ್ತಮುತ್ತಲಿನ ಜನರು ಎತ್ತಿನ ಚಕ್ಕಡಿ ಹಾಗೂ ವಾಹನಗಳ ಮೂಲಕ ಹೊರಟಿದ್ದಾರೆ. ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲೆ ಹಾಗೂ ತಾಲ್ಲೂಕು ರಸ್ತೆಗಳಲ್ಲಿ ಚಕ್ಕಡಿಗಳ ಸಂಖ್ಯೆಯೇ ಹೆಚ್ಚಿದೆ.

ಯುವಕರೇ ಚಕ್ಕಡಿ ಸವಾರಿ ಮಾಡುತ್ತಿದ್ದಾರೆ. ತಮ್ಮಿಷ್ಟದ ಸ್ವಾತಂತ್ರ್ಯ ಹೋರಾಟಗಾರರು, ಸಿನಿಮಾ ನಟರು ಹಾಗೂ ಇತರ ಪ್ರೋತ್ಸಾಹ ಬಾವುಟ ಕಟ್ಟಿ ಚಕ್ಕಡಿ ಅಲಂಕಾರ ಮಾಡಿದ್ದಾರೆ. ಇದೇ ಚಕ್ಕಡಿಗಳನ್ನು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಸ್ಪರ್ಧೆಯ ರೀತಿಯಲ್ಲಿ ಓಡಿಸುತ್ತಿದ್ದಾರೆ. ಅಕ್ಕ-ಪಕ್ಕ ಹಾಗೂ ಹಿಂದಿನಿಂದ ಜನರು ಬೈಕ್‌ಗಳಲ್ಲಿ ಚಕ್ಕಡಿ ಹಿಂಬಾಲಿಸುತ್ತಿದ್ದಾರೆ.

ರಸ್ತೆಯಲ್ಲಿ ಸಾಗುವ ವಾಹನಗಳ ಶಬ್ದದಿಂದ ಎತ್ತುಗಳು ಬೆದರುತ್ತಿದ್ದು, ಚಕ್ಕಡಿಗಳನ್ನು ಎಲ್ಲೆಂದರಲ್ಲಿ ಎಳೆದೊಯ್ಯುತ್ತಿವೆ. ಇಂಥ ಸಂದರ್ಭದಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಚಕ್ಕಡಿ ಗುದ್ದಿ ದ್ವಿಚಕ್ರ ವಾಹನ ಸವಾರರು ಗಾಯಗೊಳ್ಳುತ್ತಿದ್ದು, ಸಮೀಪದ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಚಕ್ಕಡಿ ಓಡಿಸದಂತೆ ನಿಯಮವಿದೆ. ಸರ್ವಿಸ್ ರಸ್ತೆಯಲ್ಲಿ ಹೋಗಲು ಚಕ್ಕಡಿಗಳಿಗೆ ಅವಕಾಶವಿದೆ. ಆದರೆ, ಎಲ್ಲ ಚಕ್ಕಡಿಗಳು ಹೆದ್ದಾರಿಯಲ್ಲಿಯೇ ಸಾಗುತ್ತಿವೆ. ಇದರಿಂದಾಗಿ ರಾಜ್ಯ–ಹೊರ ರಾಜ್ಯಗಳ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ.

ಪೊಲೀಸರ ನಿರ್ಲಕ್ಷ್ಯ: ಜಾತ್ರೆಗೆ ಜನರು ಚಕ್ಕಡಿ ಹಾಗೂ ವಾಹನಗಳ ಮೂಲಕ ಹೋಗುವ ಬಗ್ಗೆ ಮಾಹಿತಿ ಇದ್ದರೂ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿಲ್ಲ. ಸೋಮವಾರ ಸಂಜೆಯಿಂದ ರಾತ್ರಿಯವರೆಗೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಕ್ಕಡಿಗಳ ಸಾಲು ಕಂಡುಬಂತು. ಸ್ಥಳದಲ್ಲಿ ಒಬ್ಬ ಪೊಲೀಸ್ ಸಹ ಇರಲಿಲ್ಲ. ಯುವಕರು, ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿ ಚಕ್ಕಡಿಗಳನ್ನು ಓಡಿಸಿಕೊಂಡು ಹೋದರು. ಯಾರಾದರೂ ಪ್ರಶ್ನಿಸಿದರೆ, ಅವರ ಜೊತೆಗೆ ಜಗಳ ಮಾಡಿದ ಘಟನೆಗಳೂ ನಡೆದವು.

ಪ್ರತಿವರ್ಷ ಜಾತ್ರೆಗೆ ಚಕ್ಕಡಿಗಳು ಹೋಗುವ ವಿಷಯ ಪೊಲೀಸರಿಗೆ ಗೊತ್ತಿದೆ. ಅಷ್ಟಾದರೂ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿಲ್ಲ
ರಾಜಶೇಖರ ಬಂಕಾಪುರ
ಹಾವೇರಿ ನಿವಾಸಿ

ಹಾವೇರಿ ಹೊರಭಾಗದ ಹೆದ್ದಾರಿಯಲ್ಲಿ ಚಕ್ಕಡಿ ಪಕ್ಕದಲ್ಲಿ ಬೈಕ್‌ನಲ್ಲಿ ಹೊರಟಿದ್ದ ಇಬ್ಬರು, ಉರುಳಿಬಿದ್ದು ಗಾಯಗೊಂಡ ಘಟನೆ ನಡೆದಿದೆ. ಅವರಿಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿದ್ದು, ಅವರದ್ದೇ ಮನೆಯ ಚಕ್ಕಡಿ ಆಗಿದ್ದರಿಂದ ಈ ಬಗ್ಗೆ ದೂರು ನೀಡಿಲ್ಲ.

ಚಕ್ಕಡಿಗಳ ಸವಾರ ಬಗ್ಗೆ ಪ್ರತಿಕ್ರಿಯಿಸಿದ ಹೆಚ್ಚುವರಿ ಎಸ್ಪಿ ಎಲ್.ವೈ. ಶಿರಕೋಳ, 'ಇದು ಅಪಾಯಕಾರಿ ನಡೆ. ಬಂಕಾಪುರ ಟೋಲ್‌ಗೇಟ್‌ನಿಂದ ದೇವರಗುಡ್ಡ ಬಳಿಯ ಕಾಕೋಳವರೆಗೂ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾರೆ. ಅಪಾಯಕಾರಿ ರೀತಿಯಲ್ಲಿ ಚಕ್ಕಡಿ ಓಡಿಸುವವರನ್ನು ಪತ್ತೆ ಮಾಡಿ ಕ್ರಮ ಜರುಗಿಸುತ್ತಿದ್ದಾರೆ' ಎಂದರು.

'ಒಂದೆರಡು ಚಕ್ಕಡಿಗಳಿದ್ದರೆ ಸಮಸ್ಯೆ ಕಡಿಮೆ. ನೂರಾರು ಚಕ್ಕಡಿಗಳು ಹೋಗುವಾಗ, ಸಮಸ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಅತಿ ವೇಗವಾಗಿ ಚಕ್ಕಡಿ ಓಡಿಸುವುದು ತುಂಬಾ ಅಪಾಯಕಾರಿ. ರಸ್ತೆ ಮಧ್ಯೆ ಚಕ್ಕಡಿಯನ್ನು ತಡೆದು ನಿಲ್ಲಿಸಿದರೆ, ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತದೆ. ಹೀಗಾಗಿ, ಚಕ್ಕಡಿಗಳನ್ನು ತ್ವರಿತವಾಗಿ ನಿಗದಿತ ಸ್ಥಳಕ್ಕೆ ಕಳುಹಿಸಲಾಗುತ್ತಿದೆ' ಎಂದು ಹೇಳಿದರು.

ಜನಪ್ರತಿನಿಧಿಗಳಿಂದ ಕರೆ: ಕೆಲವರ ಚಕ್ಕಡಿಗಳನ್ನು ಪೊಲೀಸರು ತಡೆದು ನಿಲ್ಲಿಸಿ ಜಪ್ತಿ ಮಾಡಲು ಮುಂದಾಗಿದ್ದರು. ಇಂಥ ಸಂದರ್ಭದಲ್ಲಿ ಪೊಲೀಸರಿಗೆ ಕರೆ ಮಾಡಿದ್ದ ಜನಪ್ರತಿನಿಧಿಗಳು, 'ಅವು ನಮ್ಮ ಮತದಾರರ ಚಕ್ಕಡಿ. ಬಿಟ್ಟು ಕಳುಹಿಸಿ' ಎಂದು ತಾಕೀತು ಮಾಡಿರುವುದು ಗೊತ್ತಾಗಿದೆ. ಇದಾದ ನಂತರ ಪೊಲೀಸರು, ಚಕ್ಕಡಿ ಬಿಟ್ಟು ಕಳುಹಿಸಿದ್ದಾರೆ.

ಚಕ್ಕಡಿ– ಬೈಕ್ ಡಿಕ್ಕಿ: ಮೂವರು ಸಾವು



ದರ್ಶನ



ಆಕಾಶ



ಶಶಿಕುಮಾರ

ಹಾವೇರಿ: ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಗುಡಗೂರು ಬಳಿ ಮಂಗಳವಾರ ನಸುಕಿನಲ್ಲಿ ಚಕ್ಕಡಿ ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿ, ಇಬ್ಬರು ವಿದ್ಯಾರ್ಥಿಗಳು ಸೇರಿ ಮೂವರು ಮೃತಪಟ್ಟಿದ್ದಾರೆ.

'ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಗೋಡಿಹಾಳದ ಆಕಾಶ್ ಮಲಕಪ್ಪ ಬಿರಾದಾರ (23), ಬೀದರ್ ಜಿಲ್ಲೆಯ ಜೋಜಾನ ಗ್ರಾಮದ ದರ್ಶನ (23) ಮತ್ತು ಹಾವೇರಿ ತಾಲ್ಲೂಕಿನ ಕನವಳ್ಳಿ ಗ್ರಾಮದ ಶಶಿಕುಮಾರ ಹುಲಗಪ್ಪ ಉಪ್ಪಾರ (25) ಮೃತರು. ಹನುಮನಮಟ್ಟಿಯ ಕೃಷಿ ಕಾಲೇಜಿನ ವಿದ್ಯಾರ್ಥಿಗಳಾದ ಆಕಾಶ್ ಮತ್ತು ದರ್ಶನ್ ಇಬ್ಬರೂ ಹಾಸ್ಟೆಲ್‌ನಲ್ಲಿ ವಾಸವಿದ್ದರು. ಕೃಷಿ ಕಾಲೇಜಿನ ಉದ್ಯೋಗಿಯೊಬ್ಬರ ಮಗ ಶಶಿಕುಮಾರ ಜೊತೆ ಇಬ್ಬರೂ ವಿದ್ಯಾರ್ಥಿಗಳು ಸೋಮವಾರ ರಾತ್ರಿ ಮೈಲಾರದ ಮೈಲಾರಲಿಂಗೇಶ್ವರ ದೇವಸ್ಥಾನಕ್ಕೆ ಬೈಕ್‌ನಲ್ಲಿ ತೆರಳಿದ್ದರು' ಎಂದು ರಾಣೆಬೆನ್ನೂರು ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ದರ್ಶನ ಪಡೆದು, ಬೈಕ್‌ನಲ್ಲಿ ಮೂವರು ಕಾಲೇಜಿಗೆ ಮರಳುತ್ತಿದ್ದ ವೇಳೆ ಅಪಘಾತ ಸಂಭವಿಸಿದೆ. ಚಕ್ಕಡಿಗೆ ಬೈಕ್ ಡಿಕ್ಕಿ ಹೊಡೆದಿದೆಯೋ ಅಥವಾ ಬೈಕ್‌ಗೆ ಚಕ್ಕಡಿ ಡಿಕ್ಕಿ ಹೊಡೆದಿದೆಯೋ ಗೊತ್ತಾಗಿಲ್ಲ. ತಲೆಗೆ ತೀವ್ರ ಪೆಟ್ಟು ಬಿದ್ದು ಇಬ್ಬರು ಮೃತಪಟ್ಟಿದ್ದಾರೆ. ಎದೆಗೆ ತೀವ್ರ ಪೆಟ್ಟು ಬಿದ್ದು ಇನ್ನೊಬ್ಬರು ಅಸುನೀಗಿದ್ದಾರೆ. ಅಪಘಾತ ಹೇಗಾಯಿತು ಎಂಬುದು ಯಾರಿಗೂ ತಿಳಿದಿಲ್ಲ' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಲ್.ವೈ. ಶಿರಕೋಳ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾಲೇಜಿನಲ್ಲಿ ವಾರ್ಷಿಕ ಪರೀಕ್ಷೆ ನಡೆಯುತ್ತಿತ್ತು. ಬಿ.ಎಸ್ಸಿ ತೃತೀಯ ವರ್ಷದ ವಿದ್ಯಾರ್ಥಿ ಆಕಾಶ ಬಿರಾದಾರ, ದ್ವಿತೀಯ ವರ್ಷದ ವಿದ್ಯಾರ್ಥಿ ದರ್ಶನ ಇಬ್ಬರೂ ಶಶಿಕುಮಾರ ಜೊತೆ ಮೈಲಾರಕ್ಕೆ ತೆರಳಿ, ವಾಪಸ್ ಬರುವಾಗ ದುರ್ಘಟನೆ ಸಂಭವಿಸಿದೆ' ಎಂದು ಕೃಷಿ ಕಾಲೇಜಿನ ವಿದ್ಯಾಧಿಕಾರಿ ಜಿತೇಂದ್ರಕುಮಾರ ಹಿಳ್ಳಿ ತಿಳಿಸಿದರು.

ಸುದ್ದಿ 2 ನಿಮಿಷ

ವಿದೇಶದಿಂದ ಪ್ರಧಾನಿ ವಾಪಸಾದ ಬಳಿಕ ದೆಹಲಿಗೆ–ಶ್ರೀರಾಮುಲು

ಕೂಡ್ಲಿಗಿ (ವಿಜಯನಗರ ಜಿಲ್ಲೆ): 'ಪ್ರಧಾನಿ ಮೋದಿ ಅವರು ವಿದೇಶದಿಂದ ಮರಳಿದ ಬಳಿಕ ನಾನು ದೆಹಲಿಗೆ ಹೋಗುವೆ. ರಾಜ್ಯದಲ್ಲಿ ಬಿಜೆಪಿಯನ್ನು ಇನ್ನಷ್ಟು ಬಲ ಪಡಿಸಲು ಯಾತ್ರೆ ಕೈಗೊಳ್ಳುವ ಉದ್ದೇಶವಿದ್ದು, ಇದರ ಬಗ್ಗೆ ವರಿಷ್ಠರೊಂದಿಗೆ ಚರ್ಚಿಸುವೆ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.



'ಪಕ್ಷ ಸಂಘಟಿಸಲು ನಾನು ಎಲ್ಲಾ ರೀತಿಯಿಂದಲೂ ಸಮರ್ಥನಾಗಿದ್ದು, ಇದನ್ನು ವರಿಷ್ಠರಿಗೆ ಮನವರಿಕೆ ಮಾಡಲು ದೆಹಲಿಗೆ ಹೋಗುವೆ' ಎಂದು ಅವರು ಮಂಗಳವಾರ ತಿಳಿಸಿದರು.

'ಯತ್ನಾಳ ಅವರಿಗೆ ಎರಡು ಬಾರಿ ನೋಟಿಸ್ ನೀಡಲಾಗಿದೆ. ಈಗ ಚೆಂಡು ರಾಷ್ಟ್ರೀಯ ನಾಯಕರ ಅಂಗಳದಲ್ಲಿ ಇದೆ. ಏನು ಮಾಡಬೇಕು ಎಂಬುದು ತೀರ್ಮಾನವಾಗಲಿದೆ. ವಿಜಯೇಂದ್ರ ಅಸಮರ್ಥರು ಎಂದು ನಾನು ಹೇಳುತ್ತಿಲ್ಲ. ಎಲ್ಲವನ್ನೂ ಅಧ್ಯಕ್ಷರು ಅಥವಾ ಕೇಂದ್ರ ನಾಯಕರು ಬಂದು ಮಾಡಲು ಸಾಧ್ಯವಿಲ್ಲ. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನಾನು ಸಮರ್ಥನಿದ್ದೇನೆ' ಎಂದರು.

'ಕೋವಿಡ್ ಅಕ್ರಮ: ಕೆ.ಸುಧಾಕರ್ ಪಾತ್ರದ ದಾಖಲೆ ಇವೆ'

ಚಿಕ್ಕಬಳ್ಳಾಪುರ: 'ಕೋವಿಡ್ ಕಾಲದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ಡಾ.ಕೆ.ಸುಧಾಕರ್ ಎಸಗಿದ ಅಕ್ರಮಗಳ ಬಗ್ಗೆ ನನ್ನ ಬಳಿ ಸಾಕಷ್ಟು ಪುರಾವೆ, ದಾಖಲೆಗಳಿವೆ. ಅವರ ಎಲ್ಲ ಅನಾಚಾರಗಳನ್ನು ಬಯಲು ಮಾಡುವೆ' ಎಂದು ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಸಂದೀಪ್ ರೆಡ್ಡಿ ಸವಾಲು ಹಾಕಿದ್ದಾರೆ.

'ಕೋವಿಡ್‌ವೇಳೆ ಸಾಕಷ್ಟು ಅಕ್ರಮಗಳು ನಡೆದಿವೆ. ಇದಕ್ಕೆ ಸಂಬಂಧಿಸಿದ ದಾಖಲೆ ನನ್ನ ಬಳಿ ಇವೆ. ಈ ಬಗ್ಗೆ ತನಿಖೆ ನಡೆಸುತ್ತಿರುವ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರು ಸಮಯ ನೀಡಿದರೆ ಅಕ್ರಮದ ದಾಖಲೆಗಳನ್ನು ನೀಡುವೆ' ಎಂದು ಅವರು ತಿಳಿಸಿದರು.

ನಗರದಲ್ಲಿ ಮಂಗಳವಾರ ಮಾತನಾಡಿದ ರೆಡ್ಡಿ, 'ಕೋವಿಡ್ ವೇಳೆ ಚೆನ್ನೈ ಮೂಲದ ಮೈಕ್ರೊ ಫೈನಾನ್ಸ್‌ವೊಂದಕ್ಕೆ ಕೆ.ಸುಧಾಕರ್ ಕೋಟ್ಯಂತರ ರೂಪಾಯಿ ವರ್ಗಾವಣೆ ಮಾಡಿದ್ದಾರೆ. ನಂತರ ಅಲ್ಲಿಂದ ಹಣ ವಾಪಸ್ ಪಡೆದಿದ್ದಾರೆ' ಎಂದು ಆರೋಪಿಸಿದರು.

'ಬಿಜೆಪಿಯು ಡಾ.ಕೆ.ಸುಧಾಕರ್ ಒಬ್ಬನ ಸ್ವತ್ತಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಗೆ ಆತ ಶಾಪ. ತೀರಾ ದುರ್ಬಲ ವ್ಯಕ್ತಿಯಾದ ಆತನಿಗೆ ಅಸೂಯೆ ಹೆಚ್ಚು. ಮತ್ತೊಬ್ಬರ ಬೆಳವಣಿಗೆ ಸಹಿಸದ ಆತನ ಪಾಪದ ಕೊಡ ತುಂಬಿದೆ' ಎಂದು ಟೀಕಿಸಿದರು.

ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ಇತ್ತೀಚೆಗೆ ಸಂದೀಪ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿತ್ತು. ಆದರೆ, ಅದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದ ಸಂಸದ ಸುಧಾಕರ್ ಪಕ್ಷದ ವರಿಷ್ಠರಿಗೆ ದೂರು ನೀಡಿದ್ದರು. ಈ ನೇಮಕ ಜಿಲ್ಲೆಯ ಬಿಜೆಪಿಯಲ್ಲಿ ಬಣ ರಾಜಕಾರಣಕ್ಕೆ ಕಾರಣವಾಗಿತ್ತು.

ಈ ನಡುವೆ, ಬಿಜೆಪಿ ಹೈಕಮಾಂಡ್ ಈ ನೇಮಕ ತಡೆ ಹಿಡಿಯುವಂತೆ ಸೂಚಿಸಿದ ಬೆನ್ನಲ್ಲೇ ಸಂದೀಪ್ ರೆಡ್ಡಿ, ಸುಧಾಕರ್ ವಿರುದ್ಧ ಬಹಿರಂಗವಾಗಿ ತಿರುಗಿ ಬಿದ್ದಿದ್ದಾರೆ.

'ಸಂಗಮೇಶ್ವರ ಪುತ್ರನ ಬಂಧಿಸಿ'

ಪ್ರಜಾವಾಣಿ ವಾರ್ತೆ



ನಾರಾಯಣ ಸ್ವಾಮಿ

ಬೆಂಗಳೂರು: ಮಹಿಳಾ ಅಧಿಕಾರಿಗಳನ್ನು ಅವಾಚ್ಯವಾಗಿ ನಿಂದಿಸಿ, ಬೆದರಿಕೆ ಒಡ್ಡಿದ್ದ ಭದ್ರಾವತಿ ಶಾಸಕ ಸಂಗಮೇಶ್ವರ ಅವರ ಪುತ್ರ ಬಸವೇಶ್ ಅವರನ್ನು ಬಂಧಿಸಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರ ಕುಟುಂಬ ಸದಸ್ಯರು ಆಯಾ ವಿಧಾನಸಭಾ ಕ್ಷೇತ್ರಗಳಲ್ಲಿ ದುಂಡಾವರ್ತಿಯಲ್ಲಿ ತೊಡಗಿದ್ದು, ಸಂಗಮೇಶ್ವರ ಅವರ ಪುತ್ರ ಬಸವೇಶ್ ವರ್ತನೆ ಇದಕ್ಕೆ ತಾಜಾ ನಿದರ್ಶನ ಎಂದರು.

'ಕಾನೂನು ಏನು ಮಾಡುತ್ತಿದೆ? ಮುಖ್ಯಮಂತ್ರಿಯವರು ಏನು ಮಾಡುತ್ತಿದ್ದಾರೆ? ನಿಮ್ಮ ಶಾಸಕರು ಏನು ಮಾಡಿದರೂ ಸರಿ ಎಂಬ ಧೋರಣೆ ನಿಮ್ಮದಾಗಿದೆ. ಮಹಿಳೆಯರಿಗೆ ಗೌರವ ಕೊಡುವ ರೀತಿ ಇದೇನಾ? ಈವರೆಗೂ ಯಾಕೆ ಬಂಧಿಸಿಲ್ಲ? ಮಹಿಳಾ ನಿಂದನೆ ವಿಚಾರದಲ್ಲಿ ಸರ್ಕಾರ ಇಷ್ಟು ತಡ ಮಾಡಬಾರದಿತ್ತು. ಬೇರೆಯವರು ಇದೇ ತಪ್ಪು ಮಾಡಿದ್ದರೆ ಏನೆಲ್ಲ ಮಾಡುತ್ತಿದ್ದೀರಿ, ಏನೇನು ಗೂಬೆ ಕೂರಿಸುತ್ತಿದ್ದೀರಿ' ಎಂದು ಪ್ರಶ್ನಿಸಿದರು.

ದಲಿತ ಸಚಿವರ ಚಟುವಟಿಕೆ ಬಿರುಸು

ಒಂದನೇ ಪುಟದಿಂದ...

ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಅಹವಾಲು ಸಲ್ಲಿಸಲು ಕೆ.ಎನ್. ರಾಜಣ್ಣ ಮಂಗಳವಾರ ರಾತ್ರಿ ರಾಷ್ಟ್ರ ರಾಜಧಾನಿಗೆ ಬಂದರು. ಜಿ.ಪರಮೇಶ್ವರ ಮತ್ತು ಎಚ್.ಸಿ. ಮಹದೇವಪ್ಪ ಅವರು ಬುಧವಾರ ಸಂಜೆ ಬರಲಿದ್ದಾರೆ. ಕೆ.ಸಿ. ವೇಣುಗೋಪಾಲ್ ಅವರಿಗೆ ರಾಜಣ್ಣ ಅವರು ಲಿಖಿತ ದೂರು ನೀಡುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ಭದ್ರಾವತಿ: ಶಾಸಕರ ಪುತ್ರ ಎಂದು ಹೇಳಿ ಬೆದರಿಕೆ ಒಡ್ಡಿದ್ದ ಮತ್ತೊಂದು ವಿಡಿಯೊ

ಅಧಿಕಾರಿಗೆ ಬೆದರಿಕೆ, ಮೂವರ ಬಂಧನ


ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಭದ್ರಾವತಿ ತಾಲ್ಲೂಕಿನ ಸೀಗೆಬಾಗಿ ಬಳಿ ಭಾನುವಾರ ತಡರಾತ್ರಿ ಭದ್ರಾ ನದಿಯಲ್ಲಿ ಅಕ್ರಮ ಮರಳುಗಾರಿಕೆ ತಡೆಯಲು ಹೋಗಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಹಿಳಾ ಅಧಿಕಾರಿ ಕೆ.ಕೆ.ಜ್ಯೋತಿ ಅವರಿಗೆ ಶಾಸಕರ ಪುತ್ರ ಎಂದು ಹೇಳಿಕೊಂಡ ವ್ಯಕ್ತಿ ಅವಾಚ್ಯವಾಗಿ ನಿಂದಿಸಿ, ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ.

ಭದ್ರಾವತಿಯ ಹಳೇನಗರ ಠಾಣೆಯಲ್ಲಿ ಮಂಗಳವಾರ ಅಧಿಕಾರಿ ಕೆ.ಕೆ. ಜ್ಯೋತಿ ನೀಡಿದ ದೂರು ಆಧರಿಸಿ ಅಲ್ಲಿನ ಪೊಲೀಸರು ಕ್ರಮ ಕೈಗೊಂಡಿದ್ದು, ವಿಡಿಯೊ ಸಾಕ್ಷ್ಯ ಆಧರಿಸಿ ಚನ್ನಗಿರಿ ತಾಲ್ಲೂಕಿನ ಮಾವಿನಕಟ್ಟೆಯ ರವಿ ಬಿನ್ ಮಲ್ಲೇಶಪ್ಪ (30), ಹಾಸನ ಜಿಲ್ಲೆ ಅರಕಲಗೂಡಿನ ವರುಣ್ ಬಿನ್ ರಾಜಶೇಖರ್ (34) ಹಾಗೂ ಭದ್ರಾವತಿ ತಾಲ್ಲೂಕಿನ ಸುರೇಂದ್ರಗೌಡ ಕ್ಯಾಂಪ್‌ನ ಅಜಯ್ ಬಿನ್ ತಿಪ್ಪೇಶ್ (28) ಎಂಬುವವರನ್ನು ಬಂಧಿಸಲಾಗಿದೆ. ತನಿಖೆ ಮುಂದುವರೆದಿದೆ' ಎಂದು ಎಸ್ಪಿ ಜಿ.ಕೆ.ಮಿಥುನ್‌ಕುಮಾರ್ ತಿಳಿಸಿದರು.

ಪೊಲೀಸರಿಗೆ ಸಲ್ಲಿಸಿದ ದೂರಿನಲ್ಲಿ ಅಧಿಕಾರಿ ಜ್ಯೋತಿ ಯಾವುದೇ ವ್ಯಕ್ತಿಯ ಹೆಸರು ನಮೂದಿಸಿಲ್ಲ ಎಂದು ತಿಳಿದುಬಂದಿದೆ.

ಜಾತಿ ನಿಂದನೆ ಪ್ರಕರಣಕ್ಕೆ ಯತ್ನ: ಅಧಿಕಾರಿ ಕೆ.ಕೆ. ಜ್ಯೋತಿ ವಿರುದ್ಧ ಭದ್ರಾವತಿಯ ಹಳೇನಗರ ಠಾಣೆಯಲ್ಲಿ ಜಾತಿ ನಿಂದನೆ ಪ್ರಕರಣ ದಾಖಲಿಸಲು ಅಕ್ರಮ ಮರಳು ಸಾಗಣೆ ದಂಧೆಕೋರರು ಮುಂದಾಗಿದ್ದರು ಎಂಬುದು ತಿಳಿದುಬಂದಿದೆ.



ಭದ್ರಾವತಿ ತಾಲ್ಲೂಕಿನ ಸೀಗೆಬಾಗಿ ಬಳಿ ಭಾನುವಾರ ರಾತ್ರಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದ ಸ್ಥಳದಲ್ಲಿ ಭದ್ರಾ ನದಿಯಿಂದ ಅಕ್ರಮವಾಗಿ ಸಂಗ್ರಹಿಸಿಟ್ಟಿರುವ ಮರಳು

ಭದ್ರಾವತಿ ಪೊಲೀಸರ ತಂಡ ರಚಿಸಲಾಗಿದೆ. ವಿಡಿಯೊ ಸಾಕ್ಷ್ಯವನ್ನು ಎಫ್‌ಎಸ್‌ಎಲ್ ಪರೀಕ್ಷೆಗೆ ಒಳಪಡಿಸುವುದು ಸೇರಿ ತಾಂತ್ರಿಕ ಆಯಾಮದಿಂದಲೂ ತನಿಖೆ ಕೈಗೊಳ್ಳಲಾಗುವುದು
ಜಿ.ಕೆ.ಮಿಥುನ್‌ಕುಮಾರ್
ಶಿವಮೊಗ್ಗ ಎಸ್ಪಿ

ಭದ್ರಾವತಿಯಲ್ಲಿ ಅರಾಜಕತೆ ಇದ್ದು, ಗೃಹ ಸಚಿವ ಜಿ.ಪರಮೇಶ್ವರ ಭೇಟಿ ಕೊಡಬೇಕು. ಅಲ್ಲಿನ ಅಕ್ರಮ ದಂಧೆಗಳಿಗೆ ಕಡಿವಾಣ ಹಾಕಬೇಕು. ಡಿವೈಎಸ್ಪಿ ಅಮಾನತು ಮಾಡಬೇಕು
ಎಸ್.ಎನ್.ಚನ್ನಬಸಪ್ಪ
ಶಿವಮೊಗ್ಗ ನಗರ ಬಿಜೆಪಿ ಶಾಸಕ

ಜ್ಯೋತಿ ಅವರಿಗೆ ಸೋಮವಾರ ಠಾಣೆಯಿಂದ ಕರೆ ಮಾಡಿದ್ದ ಪೊಲೀಸರು, 'ನಿಮ್ಮ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಿಸಲು ಕೆಲವರು ಬಂದಿದ್ದಾರೆ. ಠಾಣೆಗೆ ಬನ್ನಿ' ಎಂದು ಕರೆದಿದ್ದರು. 'ನಾನು ರಾತ್ರಿ ರೇಡ್‌ಗೆ ಹೋಗಿದ್ದೆ. ಅಲ್ಲಿ ಯಾರಿಗೂ ಬೈದಿಲ್ಲ. ಜಾತಿ ನಿಂದನೆ ಪ್ರಕರಣಕ್ಕೆ ಸಾಕ್ಷ್ಯ ಬೇಕಲ್ಲವೇ?' ಎಂದು ಜ್ಯೋತಿ ಪ್ರಶ್ನಿಸಿದ್ದಾರೆ. ಅದಕ್ಕೆ ಅಧಿಕಾರಿ ಸುಮ್ಮನಾಗಿದ್ದಾರೆ.

'ಜ್ಯೋತಿ ಅವರು ಅಧಿಕಾರಿ ಎಂಬುದು ಹಳೇನಗರ ಠಾಣೆ ಪಿಎಸ್‌ಐಗೆ ಗೊತ್ತಿರಲಿಲ್ಲ. ಹೀಗಾಗಿ ಕರೆ ಮಾಡಿದ್ದಾರೆ. ಅದು ಗೊತ್ತಾದ ಮೇಲೆ ದೂರು ಕೊಡಲು ಬಂದವರನ್ನು ವಾಪಸ್ ಕಳುಹಿಸಿದ್ದಾರೆ' ಎಂದು ಮಿಥುನ್‌ಕುಮಾರ್ ಹೇಳಿದರು.

ಈ ಕುರಿತು ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಪರಮೇಶ್ವರ, 'ಅವಹೇಳನಕಾರಿಯಾಗಿ ಮಾತನಾಡಿರುವುದು ಗೊತ್ತಿದೆ. ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದರೆ ಸ್ಥಳೀಯ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ' ಎಂದರು.

ಜಾಲತಾಣದಲ್ಲಿ ಮತ್ತೊಂದು ವಿಡಿಯೊ

ಅಕ್ರಮ ಮರಳು ದಂಧೆ ತಡೆಯಲು ಯತ್ನಿಸಿದ ಇನ್ನೊಂದು ಪ್ರಕರಣದಲ್ಲಿ ಅದೇ ಅಧಿಕಾರಿಗೆ ಶಾಸಕರ ಪುತ್ರ ಎಂದು ಹೇಳಿಕೊಂಡ ವ್ಯಕ್ತಿ ಬೆದರಿಕೆ ಹಾಕುವ ಮತ್ತೊಂದು ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ರಾತ್ರಿ ಮಹಿಳಾ ಅಧಿಕಾರಿಗಳ ತಂಡ ದಾಳಿ ನಡೆಸಿದಾಗ ಅಲ್ಲಿ ವ್ಯಕ್ತಿಯೊಬ್ಬ 'ಮೇಡಂ ಅಣ್ಣಾ ಮಾತಾಡುತ್ತಾರೆ ತಗೊಳ್ಳಿ' ಎಂದು ಫೋನ್ ಕೊಡುತ್ತಾನೆ. 'ಯಾವ ಅಣ್ಣಾ' ಎಂದು ಅಧಿಕಾರಿ ಕೇಳಿದಾಗ 'ಎಂಎಲ್‌ಎ ಅವರ ಮಗ' ಅನ್ನುತ್ತಾನೆ.

ಅತ್ತಲಿಂದ ಮಾತಾಡುವ ವ್ಯಕ್ತಿ 'ನೀವು ಅಲ್ಲಿ ಬಂದು ಡಕಾಯಿತಿ ಮಾಡುತ್ತೀರಾ' ಎಂದು ಪ್ರಶ್ನಿಸಿದಾಗ 'ಇಲ್ಲಿ ರೇಡ್‌ಗೆ (ದಾಳಿ) ಬಂದಿದ್ದೇವೆ' ಎಂದು ಅಧಿಕಾರಿ ಉತ್ತರಿಸುತ್ತಾರೆ. 'ನಿನಗೆ ತಾಕತ್ ಇದ್ದರೆ ಅಲ್ಲಿಯೇ ನಿಂತುಕೊಳ್ಳಬೇಕು. ನಮ್ ಹುಡುಗರನ್ನು ಕಳಿಸುತ್ತೇನೆ' ಎಂದು ಬೆದರಿಕೆ ಧಾಟಿಯಲ್ಲಿ ಹೇಳುವ ವ್ಯಕ್ತಿ, ನಂತರ ಅವಾಚ್ಯ ಪದಗಳಿಂದ ಅಧಿಕಾರಿಗೆ ನಿಂದಿಸುತ್ತಾನೆ.

'ಗಾಡಿ (ಟ್ರ್ಯಾಕ್ಟರ್) ನಮ್ಮ ಮೈಮೇಲೆ ಹೊಡೀರಿ ಅನ್ನುತ್ತೀರಲ್ಲ. ಬೆದರಿಸುವುದೇಕೆ? ಅದನ್ನು ನಾವು ರೆಕಾರ್ಡ್ ಮಾಡಿಕೊಂಡಿದ್ದೇವೆ' ಎಂದು ಫೋನ್ ತಂದುಕೊಟ್ಟ ವ್ಯಕ್ತಿಗೆ ಮಹಿಳಾ ಅಧಿಕಾರಿ ಹೇಳುವುದು ವಿಡಿಯೊದಲ್ಲಿದೆ. ಸೋಮವಾರ ಹರಿದಾಡಿದ್ದ ವಿಡಿಯೊದ ಮುಂದುವರಿದ ಭಾಗ ಈ ವಿಡಿಯೊದಲ್ಲಿದೆ ಎಂದು ಗೊತ್ತಾಗಿದೆ.

ಬಿಜೆಪಿಯಿಂದ ಪ್ರತಿಭಟನೆ: ಮಹಿಳಾ ಅಧಿಕಾರಿಗೆ ನಿಂದನೆ ಖಂಡಿಸಿ ಭದ್ರಾವತಿಯಲ್ಲಿ ಮಂಗಳವಾರ ಬಿಜೆಪಿ ಹಾಗೂ ಮಹಿಳಾ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ವರದಿ ಕೇಳಿದ ಮಹಿಳಾ ಆಯೋಗ

ಭದ್ರಾವತಿಯಲ್ಲಿ ಮಹಿಳಾ ಅಧಿಕಾರಿಗೆ ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ಮಂಗಳವಾರ ಪ್ರಕಟವಾದ ವರದಿ ಉಲ್ಲೇಖಿಸಿ ಶಿವಮೊಗ್ಗ ಎಸ್ಪಿಗೆ ಪತ್ರ ಬರೆದಿರುವ ರಾಜ್ಯ ಮಹಿಳಾ ಆಯೋಗ ಪ್ರಕರಣದಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ವರದಿ ಕಳುಹಿಸಿಕೊಡುವಂತೆ ಕೇಳಿದೆ. ಅದರ ಪ್ರತಿ ಪತ್ರಿಕೆಗೆ ಲಭ್ಯವಾಗಿದೆ.

ಅಮಿತ್ ಶಾ– ಸೋಮಣ್ಣ ಭೇಟಿ

ಪ್ರಜಾವಾಣಿ ವಾರ್ತೆ



ಅಮಿತ್ ಶಾ ಅವರಿಗೆ ವಿ.ಸೋಮಣ್ಣ ಹೂಗುಚ್ಛ ನೀಡಿದರು

ನವದೆಹಲಿ: ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮಂಗಳವಾರ ಇಲ್ಲಿ ಭೇಟಿ ಮಾಡಿ ರಾಜ್ಯ ಬಿಜೆಪಿಯಲ್ಲಿನ ಚಟುವಟಿಕೆ ಬಗ್ಗೆ ಚರ್ಚಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬದಲಿಸಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ಪಟ್ಟು ಹಿಡಿದಿದೆ. ಪಕ್ಷದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವವರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಎಂಬುದು ಯತ್ನಾಳ ಬಣದ ಬೇಡಿಕೆ. ಈ ವಿಷಯವನ್ನು ವಿ.ಸೋಮಣ್ಣ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಗಮನಕ್ಕೆ ತಂದಿದೆ. ವರಿಷ್ಠರಿಗೆ ಈ ಸಂದೇಶವನ್ನು ತಲುಪಿಸುವಂತೆ ಅವರಲ್ಲಿ ಮನವಿ ಮಾಡಿದೆ. ಈ ಸಂಬಂಧ ಸೋಮಣ್ಣ, ಬೊಮ್ಮಾಯಿ, ಶಾಸಕ ಅರವಿಂದ ಬೆಲ್ಲದ, ಮಾಜಿ ಸಚಿವ ಮುರುಗೇಶ ನಿರಾಣಿ ಮತ್ತಿತರ ಲಿಂಗಾಯತ ನಾಯಕರು ಸೋಮವಾರ ಸುದೀರ್ಘವಾಗಿ ಸಮಾಲೋಚನೆ ನಡೆಸಿದ್ದಾರೆ. ಸೋಮಣ್ಣ ಅವರು ಈ ಸಂದೇಶವನ್ನು ಶಾ ಅವರಿಗೆ ರವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತುಮಕೂರು- ಚಿತ್ರದುರ್ಗ- ದಾವಣಗೆರೆ ರೈಲು ಯೋಜನೆಯ ಭಾಗವಾದ ತಿಮ್ಮರಾಜನಹಳ್ಳಿ ಮತ್ತು ತಾವರೆಕೆರೆ ಮಧ್ಯದ ಕಾಮಗಾರಿಗೆ ರೈಲ್ವೆ ಮಂಡಳಿಯು ಗೃಹ ಇಲಾಖೆಗೆ ಕಳುಹಿಸುವ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಶಾ ಅವರಲ್ಲಿ ಮನವಿ ಮಾಡಿದೆ. ಇದಕ್ಕೆ ಅವರು ಸ್ಪಂದಿಸಿದ್ದಾರೆ ಎಂದು ಸೋಮಣ್ಣ ತಿಳಿಸಿದರು.

ಜೆಇಇ ಮೇನ್ಸ್: 14 ಮಂದಿಗೆ ಶೇ 100 ಅಂಕ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ 'ಜೆಇಇ–ಮೇನ್–2025'ರ ಮೊದಲ ಆವೃತ್ತಿಯ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕದ ಕುಶಾಗ್ರ ಗುಪ್ತಾ ಸೇರಿ ಒಟ್ಟು 14 ಪರೀಕ್ಷಾರ್ಥಿಗಳು ಶೇಕಡ ನೂರು ಅಂಕ ಗಳಿಸಿದ್ದಾರೆ.

'ಶೇಕಡ ನೂರು ಅಂಕ ಗಳಿಸಿದವರಲ್ಲಿ ಸಾಮಾನ್ಯ ವರ್ಗದ 12 ಮಂದಿ, ಒಬಿಸಿ ಮತ್ತು ಪರಿಶಿಷ್ಟ ಜಾತಿ ವರ್ಗದ ತಲಾ ಒಬ್ಬ ಅಭ್ಯರ್ಥಿ ಇದ್ದಾರೆ. ಇವರಲ್ಲಿ ಹೆಚ್ಚಿನವರು ರಾಜಸ್ಥಾನದವರು' ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಪ್ರಕಟಿಸಿದೆ.

ನಿರ್ಣಾಯಕ ಎನ್ನಲಾಗಿರುವ ಮೊದಲ ಆವೃತ್ತಿಯ ಈ ಪರೀಕ್ಷೆಗೆ ದೇಶದಾದ್ಯಂತ 12.58 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು.

ರಾಜಸ್ಥಾನದ ಐವರು, ದೆಹಲಿ, ಉತ್ತರ ಪ್ರದೇಶದಿಂದ ತಲಾ ಇಬ್ಬರು ಹಾಗೂ ಕರ್ನಾಟಕ, ಆಂಧ್ರಪ್ರದೇಶ, ಗುಜರಾತ್, ತೆಲಂಗಾಣ, ಮಹಾರಾಷ್ಟ್ರದ ತಲಾ ಒಬ್ಬ ಅಭ್ಯರ್ಥಿ ಶೇಕಡ 100 ಅಂಕ ಗಳಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. ಎನ್‌ಟಿಎನಲ್ಲಿ ಗಳಿಸಿದ ಅಂಕ ಅಭ್ಯರ್ಥಿಗಳು ಗಳಿಸಿದ ಶೇಕಡಾವಾರು ಅಂಕಗಳಂತೆ ಅಲ್ಲ, ಸಾಮಾನ್ಯೀಕರಿಸಿದ ಅಂಕಗಳಾಗಿವೆ ಎಂದು ಎನ್‌ಟಿಎ ಅಧಿಕಾರಿಗಳು ತಿಳಿಸಿದ್ದಾರೆ.

ಸಾಮಾನ್ಯೀಕರಿಸಿದ ಅಂಕಗಳೆಂದರೆ, ಬಹುಹಂತದ ಪ್ರಶ್ನೆಪತ್ರಿಕೆಗಳಲ್ಲಿ ಗಳಿಸಿದ ಅಂಕಗಳು ಹಾಗೂ ಪರೀಕ್ಷೆಯ ಒಂದು ಹಂತದಲ್ಲಿ ಹಾಜರಾಗಿದ್ದ ಎಲ್ಲ ಅಭ್ಯರ್ಥಿಗಳ ಪೂರಕ ಸಾಧನೆ ಆಧರಿಸಿದ ಅಂಕಗಳಾಗಿವೆ. ಪ್ರತಿ ಹಂತದಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳನ್ನು 100ರಿಂದ 0ವರೆಗೆ ಇಳಿಮುಖ ಆಧಾರದಲ್ಲಿ ಶ್ರೇಣೀಕರಿಸಲಾಗುತ್ತದೆ ಎಂದರು.

99.99 ಪರ್ಸೆಂಟೈಲ್ ಪಡೆದಿರುವ ಬೆಂಗಳೂರಿನ ದಕ್ಷ್ ತಯಾಲಿಯಾ ವೇದಾಂತುವಿನಲ್ಲಿ ತರಬೇತಿ ಪಡೆದಿದ್ದಾರೆ. ವಿಜ್ಞಾನ ಒಲಿಂಪಿಯಾಡ್‌ನಲ್ಲಿ ಆಸಕ್ತಿ ಹೊಂದಿರುವ ಅವರು, ಐಐಟಿ ಬಾಂಬೆ ಸೇರಲು ಬಯಸಿದ್ದಾರೆ.

ನ್ಯೂನತೆ: 2 ಸ್ಕ್ಯಾನಿಂಗ್ ಕೇಂದ್ರಗಳಿಗೆ ₹40 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಹಾಸನ: ಶಿಶು ಆರೋಗ್ಯವಾಗಿರುವುದಾಗಿ ತಪ್ಪು ಮಾಹಿತಿ ನೀಡಿದ ಎರಡು ಸ್ಕ್ಯಾನಿಂಗ್ ಕೇಂದ್ರಗಳಿಗೆ ಇಲ್ಲಿನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ₹40 ಲಕ್ಷ ದಂಡ ವಿಧಿಸಿದೆ.

ಕುಂದೂರು ಹೋಬಳಿ ಹನುಮನಹಳ್ಳಿಯ ಶುಭಾ ಎಂ.ಕೆ. ಅವರು 2018ರ ಜುಲೈ 31ರಂದು ಬೆಂಗಳೂರಿನ ವಿವೇಕ್ ಸ್ಕ್ಯಾನ್ ಸೆಂಟರ್‌ನಲ್ಲಿ ಸ್ಕ್ಯಾನಿಂಗ್ ಮಾಡಿಸಿದ್ದರು. ತೊಂದರೆ ಕಂಡುಬಂದಿಲ್ಲವೆಂದು ವರದಿ ದೊರಕಿತ್ತು. ಹಾಸನದ ಯುನಿಟಿ ಸ್ಕ್ಯಾನ್ ಸೆಂಟರ್‌ನಲ್ಲಿ ಅದೇ ವರ್ಷ ಸೆ.29ರಂದು ನೀಡಿದ್ದ ವರದಿಯಲ್ಲೂ ಯಾವುದೇ ತೊಂದರೆ ಇಲ್ಲ ಎಂದಿತ್ತು.

ಆದರೆ, ಮಗು ಜನಿಸಿದಾಗ ಮೂತ್ರದಲ್ಲಿ ನಿಯಂತ್ರಣವಿಲ್ಲದಿರುವುದು, ಬೆನ್ನುಹುರಿ ತೊಂದರೆ ಹಾಗೂ ಮಲಬದ್ಧತೆ ಕಂಡುಬಂದಿತ್ತು. ಸ್ಕ್ಯಾನಿಂಗ್ ಹಂತದಲ್ಲೇ ಪತ್ತೆಯಾಗಿದ್ದರೆ, ಗರ್ಭಾವಸ್ಥೆಯಲ್ಲೇ ಶಿಶು ತೆಗೆಸಬಹುದಿತ್ತು. ಸರಿಯಾದ ವರದಿ ನೀಡದೇ ಶಾಶ್ವತ ಅಂಗವೈಕಲ್ಯವುಳ್ಳ ಹೆಣ್ಣುಮಗು ಜನಿಸಲು ಕಾರಣವಾಗಿದ್ದರಿಂದ ಪರಿಹಾರವಾಗಿ ₹50 ಲಕ್ಷ ಕೊಡಿಸಬೇಕು ಎಂದು ಅವರು ಆಯೋಗದಲ್ಲಿ 2023ರ ಆ.17ರಂದು ಅರ್ಜಿ ಸಲ್ಲಿಸಿದ್ದರು.

ವಾದ ಆಲಿಸಿ ಹಾಗೂ ದಾಖಲೆಗಳನ್ನು ಪರಿಶೀಲಿಸಿದ ಆಯೋಗದ ಅಧ್ಯಕ್ಷೆ ಚಂಚಲಾ ಸಿ.ಎಂ ಅವರಿದ್ದ ಪೀಠವು ಬೆಂಗಳೂರಿನ ವಿವೇಕ ಸ್ಕ್ಯಾನ್ ಹಾಗೂ ಹಾಸನದ ಯುನಿಟಿ ಸ್ಕ್ಯಾನ್ ಸೆಂಟರ್‌ನ ಪರವಾಗಿ ವೈದ್ಯರ ವೃತ್ತಿಪರ ನಷ್ಟ ಪರಿಹಾರಕ್ಕಾಗಿ ತಲಾ ₹20 ಲಕ್ಷ ಪರಿಹಾರ ನೀಡುವಂತೆ ಓರಿಯೆಂಟಲ್ ಇನ್ಶೂರೆನ್ಸ್‌ಗೆ ಜ.31ರಂದು ಆದೇಶಿಸಿದೆ.

ಡಾಲಿ ಧನಂಜಯ ವಿವಾಹ ಮೈಸೂರಿನಲ್ಲಿ 15, 16ರಂದು



ಡಾಲಿ ಧನಂಜಯ ಹಾಗೂ ಧನ್ಯತಾ

ಮೈಸೂರು: ನಟ ಡಾಲಿ ಧನಂಜಯ ಹಾಗೂ ಡಾ. ಧನ್ಯತಾ ಅವರ ವಿವಾಹವು ಫೆ. 15 ಹಾಗೂ 16ರಂದು ಇಲ್ಲಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಡೆಯಲಿದ್ದು, ಎಕರೆಗಳಷ್ಟು ವಿಶಾಲವಾದ ಪ್ರದೇಶದಲ್ಲಿ ಚಾಮುಂಡೇಶ್ವರಿ ದೇಗುಲದ ಮಾದರಿಯಲ್ಲಿ ಬೃಹತ್ ಮಂಟಪ ನಿರ್ಮಾಣವಾಗುತ್ತಿದೆ.

'ಓದಿದ್ದು ಇಲ್ಲಿಯೇ. ರಂಗಭೂಮಿ–ನಟನೆಯ ನಂಟು ಬೆಳೆದಿದ್ದು ಇಲ್ಲಿಂದಲೇ. ಹೀಗಾಗಿ ಇಲ್ಲಿಯೇ ಮದುವೆಯಾಗುತ್ತಿದ್ದೇನೆ' ಎಂದು ಧನಂಜಯ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸರಳವಾಗಿ ವಿವಾಹವಾಗುವ ಆಲೋಚನೆ ಇತ್ತು. ಆದರೆ ಮನೆಯವರು, ಅಭಿಮಾನಿಗಳ ಒತ್ತಾಸೆಯಿಂದ ಬೃಹತ್ ಕಾರ್ಯಕ್ರಮವಾಗಿ ಮಾರ್ಪಾಡಾಗಿದೆ' ಎಂದರು.

'ಅಭಿಮಾನಿಗಳಿಗೆಂದೇ 'ವಿದ್ಯಾಪತಿ' ದ್ವಾರವನ್ನು ವಿಶೇಷವಾಗಿ ವಿನ್ಯಾಸಗೊಳಿಸಿದ್ದೇವೆ. ಜನಸಾಮಾನ್ಯರು ಹಾಗೂ ವಿಐಪಿಗಳಿಗೆ ಒಂದೇ ಮಾದರಿಯ ಊಟದ ವ್ಯವಸ್ಥೆ ಇರಲಿದೆ. ಕನ್ನಡ ಚಿತ್ರರಂಗದ ಜೊತೆಗೆ ಹೊರ ರಾಜ್ಯ–ದೇಶಗಳಿಂದಲೂ ಸ್ನೇಹಿತರು ಬರಲಿದ್ದಾರೆ. 25–35 ಸಾವಿರದಷ್ಟು ಜನ ಸೇರುವ ನಿರೀಕ್ಷೆ ಇದೆ' ಎಂದರು. ಫೆ. 15ರ ಸಂಜೆ ಆರತಕ್ಷತೆ ಹಾಗೂ 16ರಂದು ಬೆಳಿಗ್ಗೆ ಮದುವೆ ಕಾರ್ಯಕ್ರಮ ನಡೆಯಲಿದೆ.

ಕಲಬುರಗಿಯ ಬುದ್ಧ ವಿಹಾರದಲ್ಲಿ ಕಾರ್ಯಕ್ರಮ

108 ಭಂತೇಜಿಗಳಿಂದ ತ್ರಿಪಿಟಕ ಪಠಣ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಹೊರ ವಲಯದ ಬುದ್ಧ ವಿಹಾರದಲ್ಲಿ ಮಂಗಳವಾರ ತ್ರಿಪಿಟಕ ಸದ್ಧಮ್ಮ ಸಜ್ಝಾಯನದ ಅಂಗವಾಗಿ 108 ಭಂತೇಜಿಗಳು ಸುಮಾರು ಐದು ಗಂಟೆ ಕಾಲ ಬೌದ್ಧ ಸಾಹಿತ್ಯದ ತ್ರಿಪಿಟಕ ಪಠಣ ಮಾಡಿದರು.

ಸಿದ್ಧಾರ್ಥ ವಿಹಾರ ಟ್ರಸ್ಟ್ ಹಾಗೂ ಬೆಂಗಳೂರಿನ ಮಹಾಬೋಧಿ ಸಂಸ್ಥೆ ಈ ಕಾರ್ಯಕ್ರಮ ಆಯೋಜಿಸಿತ್ತು. ಚಾರಿಕಾ ಧಮ್ಮ ಜಾಥಾ ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪತ್ನಿ ರಾಧಾಬಾಯಿ ಖರ್ಗೆ ಅವರು ತ್ರಿಪಿಟಕ ಪಠಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಭಂತೇಜಿ ಅತಿತ್ಥಾ ಮಹಾಥೇರೊ, ಮಹಾಬೋಧಿ ಸಂಸ್ಥೆಯ ಆನಂದ ಭಂತೇಜಿ, ಅಮೆರಿಕದ ಭಂತೇಜಿ ವಾಂಗಮೊ ಡಿಕ್ಸೆ ಸೇರಿ ವಿಯೆಟ್ನಾಂ, ಕಾಂಬೋಡಿಯಾ, ಶ್ರೀಲಂಕಾ, ಬರ್ಮಾ, ಥಾಯ್ಲೆಂಡ್ ರಾಷ್ಟ್ರಗಳಿಂದ ಬಂದಿದ್ದ 108 ಭಂತೇಜಿಗಳು ಪಾಲಿ ಭಾಷೆಯಲ್ಲಿ ತ್ರಿಪಿಟಕ ಪಠಣ ಮಾಡಿದರು. ವಿನಯಪಿಟಕ, ಅಭಿಧಮ್ಮಪಿಟಕ ಹಾಗೂ ಸುತ್ತಪಿಟಕ ಪಠಣದ ಬಳಿಕ ಗೌತಮ ಬುದ್ಧರು ನೀಡಿದ್ದ ಉಪನ್ಯಾಸಗಳು, ಉಪದೇಶಗಳು, ನಡೆಸಿದ ಚರ್ಚೆಗಳು, ಸಂಭಾಷಣೆಗಳನ್ನು ಸಭಿಕರಿಗೆ ತಿಳಿಸಿದರು.

'ಈ ಜಗತ್ತು ಅವಲಂಬನೆಯಿಂದ ಜನಿಸಿದೆ. ಕಣ್ಣಿನಿಂದ ದೃಶ್ಯ, ಕಿವಿಯಿಂದ ಶಬ್ದ, ಮೂಗಿನಿಂದ ವಾಸನೆ, ನಾಲಗೆಯಿಂದ ರುಚಿ, ಶರೀರದಿಂದ ಸ್ಪರ್ಶ ಮತ್ತು ಮನಸ್ಸಿನಿಂದ ಯೋಚನೆಗಳು ಹುಟ್ಟುತ್ತವೆ. ಅವುಗಳಿಂದಾಗಿ ಆಸೆ–ದುರಾಸೆ, ಬೇಕು–ಬೇಡಗಳು ಹುಟ್ಟಿಕೊಂಡು ಅಂಟುವಿಕೆ ಹೆಚ್ಚಾಗಿ, ನಾನಾ ಬಗೆಯ ಕರ್ಮಗಳನ್ನು ಮಾಡುತ್ತೇವೆ ಎಂದು ಭಗವಾನ್ ಬುದ್ಧ ಬೋಧಿಸಿದ್ದಾರೆ' ಎಂದು ವಿಯೆಟ್ನಾಂ ಭಂತೇಜಿ ತಿನ ದತ್ ಹೇಳಿದರು.




ಕಲಬುರಗಿಯ ಬುದ್ಧ ವಿಹಾರದಲ್ಲಿ ಮಂಗಳವಾರ ತ್ರಿಪಿಟಕ ಸದ್ಧಮ್ಮ ಸಜ್ಝಾಯನದ ಅಂಗವಾಗಿ 108 ಭಂತೇಜಿಗಳು ಬೌದ್ಧ ಸಾಹಿತ್ಯದ ತ್ರಿಪಿಟಕ ಪಠಣ ಮಾಡಿದರು

ಇಂದು ಸನ್ನತಿಯಲ್ಲಿ ಪಠಣ: ಚಿತ್ತಾಪುರ ತಾಲ್ಲೂಕಿನ ಸನ್ನತಿ ಸಮೀಪದ ಐತಿಹಾಸಿಕ ಬುದ್ಧವಿಹಾರದಲ್ಲಿ ಜಾಗತಿಕ ಶಾಂತಿಗಾಗಿ ಬುಧವಾರ ಪವಿತ್ರ ತ್ರಿಪಿಟಕ ಪಠಣವು 108 ಭಂತೇಜಿಗಳಿಂದ ಜರುಗಲಿದೆ.

ನಿಧನ ವಾರ್ತೆ

ಡಾ.ಸಂಪತ ಕುಮಾರ ಶಿವಣಗಿ



ಬೆಳಗಾವಿ: ಜಿಲ್ಲೆಯ ಅಥಣಿ ಮೂಲದವರಾದ, ಅಮೆರಿಕದಲ್ಲಿ ವೈದ್ಯರಾಗಿದ್ದ ಡಾ. ಸಂಪತಕುಮಾರ ಶಿವಣಗಿ (88) ಅವರು ಮಂಗಳವಾರ ಬೆಳಿಗ್ಗೆ (ಅಮೆರಿಕದ ವೇಳೆಯಂತೆ ಸೋಮವಾರ ರಾತ್ರಿ) ನಿಧನರಾದರು.

ಕೆಎಲ್‌ಇ ಸಂಸ್ಥೆಯಿಂದ ಬೆಳಗಾವಿಯಲ್ಲಿ ನಿರ್ಮಿಸಲಾದ ಕ್ಯಾನ್ಸರ್ ಆಸ್ಪತ್ರೆಗೆ ಅವರು ₹8 ಕೋಟಿ ದಾನ ನೀಡಿದ್ದರು. ಆಸ್ಪತ್ರೆಗೆ 'ಡಾ. ಸಂಪತಕುಮಾರ ಶಿವಣಗಿ ಕ್ಯಾನ್ಸರ್ ಆಸ್ಪತ್ರೆ' ಎಂದು ನಾಮಕರಣ ಮಾಡಲಾಗಿದೆ. ಜನವರಿ 3ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಆಸ್ಪತ್ರೆ ಉದ್ಘಾಟಿಸಿದ್ದರು. ಸಂಪತಕುಮಾರ, ಅವರ ಪತ್ನಿ ಮತ್ತು ಮಕ್ಕಳು ಹಾಜರಿದ್ದರು. ಒಂದು ವಾರ ತವರು ಜಿಲ್ಲೆಯಲ್ಲಿ ಉಳಿದ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

'ಸಂಪತ ಕುಮಾರ ಅವರು ಕೆಎಲ್‌ಇ ಸಂಸ್ಥೆಯ ಆರ್‌ಎಲ್ ವಿಜ್ಞಾನ ಕಾಲೇಜಿನ ಹಳೆಯ ವಿದ್ಯಾರ್ಥಿ. ಜೆಎನ್‌ಎಂಸಿಯಲ್ಲಿ 1974ರಿಂದ 1976ರವರೆಗೆ ಅಧ್ಯಾಪಕರಾಗಿದ್ದರು. ತುರ್ತು ಪರಿಸ್ಥಿತಿ ಸಂದರ್ಭ 1976ರಲ್ಲಿ ಅಮೆರಿಕಕ್ಕೆ ಹೋಗಿ, ಅಲ್ಲಿಯೇ ನೆಲೆಸಿದ್ದರು. ಅವರ ವೈದ್ಯಕೀಯ ಸೇವೆ ಪರಿಗಣಿಸಿ, ಅಮೆರಿಕದ ಒಂದು ರಸ್ತೆಗೆ 'ಡಾ.ಶಿವಣಗಿ ರೋಡ್' ಎಂದು ಹೆಸರಿಟ್ಟು ಗೌರವಿಸಲಾಗಿದೆ' ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ತಿಳಿಸಿದ್ದಾರೆ.

ಶಿವಣಗಿ ಅವರ ಜೀವನ ಚರಿತ್ರೆಯನ್ನು ಸಾಹಿತಿ ಸರಜೂ ಕಾಟ್ಕರ್ ಅವರು, 'ಭಾರತ ಅಮೆರಿಕದ ಸಾಂಸ್ಕೃತಿಕ ರಾಯಭಾರಿ ಡಾ.ಸಂಪತ ಕುಮಾರ ಶಿವಣಗಿ' ಎಂಬ ಶೀರ್ಷಿಕೆಯಡಿ ಬರೆದಿದ್ದಾರೆ. ಈ ಕೃತಿ ಕೂಡ ಜನವರಿ 3ರಂದೇ ಬಿಡುಗಡೆಗೊಂಡಿತ್ತು.

ಕುಂಭಮೇಳ: 'ಕಾವೇರಿ ಆರತಿ' ವೈಭವ

• ಮೋಹನ್ ಕುಮಾರ ಸಿ.

ತಿ.ನರಸೀಪುರ (ಮೈಸೂರು ಜಿಲ್ಲೆ): ಇಲ್ಲಿನ ತ್ರಿವೇಣಿ ಸಂಗಮಕ್ಕೆ ಹರಿದು ಬಂದಿದ್ದ ಭಕ್ತ ಸಾಗರವು 'ಕಾವೇರಿ ಆರತಿ'ಯ ಬೆಳಗಿಗೆ ಭಾವಪರವಶಗೊಂಡಿತು.

ಕುಂಭಮೇಳದ ಎರಡನೇ ದಿನವಾದ ಮಂಗಳವಾರ, ಅಗಸ್ತ್ಯೇಶ್ವರ ಸ್ವಾಮಿ ದೇಗುಲದ ಸ್ನಾನಘಟ್ಟದಲ್ಲಿ ಗಂಗೆಗೆ ನಮಿಸಿದ ಅರ್ಚಕರು ಬೆಳಗಿದ ದೀಪಗಳು ಕಾವೇರಿ, ಕಪಿಲೆ, ಸ್ಫಟಿಕ ನದಿಗಳ ಸಂಗಮದಲ್ಲಿ ಹೊಳೆದವು. ಈ ಅಪೂರ್ವ ದೃಶ್ಯವನ್ನು ಸಾವಿರಕ್ಕೂ ಹೆಚ್ಚು ಮಂದಿ ಕಣ್ತುಂಬಿಕೊಂಡರು.

ಜೀವನದಿ 'ಕಾವೇರಿ' ತಾಯಿಗೆ, ಅವಳ ಸೋದರಿ 'ಕಪಿಲೆ'ಗೆ ಭಕ್ತರು ಜಯಕಾರದ ನುಡಿಹಾರವನ್ನು ಹಾಕಿದರು. ಸಪ್ತ ನದಿಗಳ ಹಿರಿಯಳಾದ 'ಗಂಗೆ'ಗೂ ನಮಿಸಿದರು. ಬೆಳಗುತ್ತಿದ್ದ ಸೊಡರುಗಳನ್ನು ನೋಡುತ್ತಲೇ ಪುಣ್ಯ ಜಳಕವನ್ನು ಮಾಡಿದವರು ಪುಳಕಗೊಂಡರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕಾಗಿನೆಲೆ ಶಾಖಾಮಠದ ಶಿವಾನಂದಪುರಿ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ತಿರುಚ್ಚಿ ಸಂಸ್ಥಾನ ಮಠ ಕೈಲಾಸಾಶ್ರಮದ ಜಯೇಂದ್ರಪುರಿ ಸ್ವಾಮೀಜಿ, ಪೂರ್ಣಾನಂದ ಸ್ವಾಮೀಜಿ, ಸೇರಿದಂತೆ ವಿವಿಧ ಮಠಗಳ ಸ್ವಾಮೀಜಿಗಳನ್ನು ಮಂಗಳವಾದ್ಯಗಳ ಸಮೇತ ಮೆರವಣಿಗೆಯಲ್ಲಿ ಕರೆತರಲಾಯಿತು.

ನಂತರ ರಾತ್ರಿ 8 ಗಂಟೆಗೆ ಕಾವೇರಿ ಆರತಿ ಓಂಕಾರದ ಮೂಲಕ ಚಾಲನೆ ದೊರಕಿತು. ಧೂಪಾರತಿಯನ್ನು ಮಾಡಿದ ಅರ್ಚಕರು ಗಂಟೆಗಳ ನಾದವನ್ನು ಹೊಮ್ಮಿಸಿದರು. ಚಾಮರಗಳನ್ನು ಬೀಸಿದರು. ಓಂಕಾರದೊಂದಿಗೆ ಬರುತ್ತಿದ್ದ ಸಂಸ್ಕೃತ ಶ್ಲೋಕಗಳನ್ನು ಕೇಳುತ್ತಾ ನೆರೆದವರು ತನ್ಮಯರಾದರು. ಸರಸ್ವತಿ, ದುರ್ಗೆ, ಲಕ್ಷ್ಮಿ, ಗಂಗೆಗೆ ನಮಿಸಲಾಯಿತು.

ಶಿವಸ್ತುತಿಯು ಮೊಳಗುತ್ತಿದ್ದಂತೆ ದೀಪಗಳನ್ನು ಒಂಬತ್ತು ಅರ್ಚಕರು ಹೊತ್ತಿಸಿದರು. ಕಾವೇರಿ ಮಾತೆಗೆ ಮೂರು ಸುತ್ತು ಬೆಳಗಿ, ಆಗಸಕ್ಕೆ ತೋರಿದರು. ನಕ್ಷತ್ರ- ತಾರಾ ಮಂಡಲಗಳಿಗೆ ದೀಪಗಳನ್ನು ತೋರುತ್ತಿದ್ದಂತೆ ಮಿಂಚಿನ ಸಂಚಲನ ಉಂಟಾಯಿತು. ಭಕ್ತರು ಭಾವಪರ ವಶರಾಗಿ ಕೈ ಮುಗಿದರು. 'ಕಾಲಭೈರವ' ಸ್ತುತಿ, 'ರುದ್ರ' ಶ್ಲೋಕಗಳ ಗೀತೆಗಳ ಹಿಮ್ಮೇಳವು ಭಾವ ತೀವ್ರತೆಯನ್ನು ಹೆಚ್ಚಿಸಿತು. ರಾತ್ರಿ 8.25ಕ್ಕೆ ಸ್ವಾಮೀಜಿಗಳು ಹಾಗೂ ಭಕ್ತರು ಆರತಿಯನ್ನು ಸ್ವೀಕರಿಸಿದರು. ನಂತರ ಆಗಸದಲ್ಲಿ ಬಾಣಬಿರುಸುಗಳ ಚಿತ್ತಾರವು ಸಂಭ್ರಮವನ್ನು ಹೆಚ್ಚಿಸಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಉಪಸ್ಥಿತರಿದ್ದರು..



ಮೈಸೂರು ಜಿಲ್ಲೆಯ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆದಿರುವ ಕುಂಭಮೇಳದಲ್ಲಿ ಮಂಗಳವಾರ ರಾತ್ರಿ 'ಕಾವೇರಿ ಆರತಿ' ನಡೆಯಿತು ಚಿತ್ರ: ಅನೂಪ್ ರಾಘ ಟಿ.

'ಮಹಾನ್ ಬೆಂಗಳೂರು' ಆಗಲಿ: ನಾಗರಿಕರ ಸಲಹೆ

'ನಗರಕ್ಕೆ ಒಬ್ಬರೇ ಮೇಯರ್ ಇರಲಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಗರಕ್ಕೆ ಒಬ್ಬರೇ ಮೇಯರ್ ಇರಲಿ, ಮಹಾಪೌರರ ಅವಧಿಯನ್ನು ಐದು ವರ್ಷ ಮಾಡಿ, ಲಾಟರಿ ವ್ಯವಸ್ಥೆ ಮೂಲಕ ವಾರ್ಡ್ ಸಮಿತಿಗಳಿಗೆ ಆಯ್ಕೆ ಮಾಡಿ, ಬೆಂಗಳೂರು ಎಲ್ಲಿಯವರೆಗೆ ವಿಸ್ತರಣೆಯಾಗುತ್ತದೆ ಎಂಬ ಸ್ಪಷ್ಟನೆ ನೀಡಿ...'

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ಬಗ್ಗೆ ನಾಗರಿಕರು ವ್ಯಕ್ತಪಡಿಸಿದ ಅಭಿಪ್ರಾಯಗಳಿವು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ- 2024' ಅನ್ನು ಪರಿಶೀಲಿಸಿ, ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ಅಧ್ಯಕ್ಷ ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ರಾಜರಾಜೇಶ್ವರಿನಗರ, ಪಶ್ಚಿಮ, ಬೊಮ್ಮನಹಳ್ಳಿ ಹಾಗೂ ದಕ್ಷಿಣ ವಲಯಗಳಲ್ಲಿ ಮಂಗಳವಾರ ಆಯೋಜಿಸಲಾಗಿದ್ದ 'ಸಾರ್ವಜನಿಕರು, ಸಂಘ–ಸಂಸ್ಥೆಗಳಿಂದ ಸಲಹೆ ಸ್ವೀಕಾರ' ಸಭೆಗಳಲ್ಲಿ 100ಕ್ಕೂ ಹೆಚ್ಚು ಸಲಹೆಗಳನ್ನು ಸ್ವೀಕರಿಸಲಾಯಿತು.

'ಗ್ರೇಟರ್ ಬೆಂಗಳೂರು ಆಡಳಿತ ಪ್ರಾಧಿಕಾರದಲ್ಲಿ (ಜಿಬಿಎ) ಬೆಸ್ಕಾಂ, ಜಲಮಂಡಳಿಯನ್ನು ವಿಲೀನ ಮಾಡಿಕೊಳ್ಳಬೇಕು. ಮತಗಟ್ಟೆ ಆಧರಿತವಾಗಿ, ಪ್ರದೇಶಗಳನ್ನು ವಿಂಗಡನೆ ಮಾಡಬೇಕು, 'ಗ್ರೇಟರ್ ಬೆಂಗಳೂರು' ಬದಲು 'ಮಹಾನ್ ಬೆಂಗಳೂರು' ಎಂದು ಹೆಸರಿಸಬೇಕು' ಎಂಬ ಸಲಹೆಗಳನ್ನು ನಾಗರಿಕರು ನೀಡಿದರು.

'ಗ್ರೇಟರ್ ಬೆಂಗಳೂರು' ವ್ಯಾಪ್ತಿಗೆ ಸೇರಿದೆ ಎಂದ ಮಾತ್ರಕ್ಕೆ ಹಳ್ಳಿಗಳಿಗೆ ತೆರಿಗೆ ಹೆಚ್ಚಿಸಿದರೆ ನಿವಾಸಿಗಳಿಗೆ ತೊಂದರೆಯಾಗುತ್ತದೆ. ನಗರ ಪಾಲಿಕೆಗಳನ್ನು ವಿಂಗಡಿಸಿದರೆ, ಎಲ್ಲದ್ದಕ್ಕೂ ಒಂದೇ ರೀತಿ ಅನುದಾನ ನೀಡಬೇಕು. ಪ್ರಾಯೋಗಿಕವಾಗಿ ವಿಂಗಡಣೆ ಮಾಡಿ ನೋಡಿ, ಅದು ಯಶಸ್ವಿಯಾದರೆ ಮಾತ್ರ ಅನುಷ್ಠಾನಕ್ಕೆ ತನ್ನಿ' ಎಂದೂ ಸಲಹೆ ನೀಡಿದರು.

'ನಾಗರಿಕರಿಗೆ ಸಿಗಬೇಕಾದಂತಹ ಮೂಲಸೌಕರ್ಯಗಳನ್ನು ನ್ಯಾಯ ಬದ್ಧವಾಗಿ, ಸರಿಯಾದ ಪದ್ಧತಿಯಲ್ಲಿ ತಲುಪಿಸುವ ವ್ಯವಸ್ಥೆಯಲ್ಲಿ ಇಂದು ನಾವಿಲ್ಲ. ಅದಕ್ಕಾಗಿ ಆಡಳಿತ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಮುಂದಾಗಿದ್ದೇವೆ' ಎಂದು ರಿಜ್ವಾನ್ ಅರ್ಷದ್ ತಿಳಿಸಿದರು.

ಶಾಸಕರಾದ ಎಂ. ಕೃಷ್ಣಪ್ಪ, ರವಿ ಸುಬ್ರಮಣ್ಯ, ಸಿ.ಕೆ. ರಾಮಮೂರ್ತಿ, ಸತೀಶ್ ರೆಡ್ಡಿ, ಉದಯ್ ಬಿ. ಗರುಡಾಚಾರ್, ಎಸ್.ಟಿ. ಸೋಮಶೇಖರ್, ವಿಧಾನ ಪರಿಷತ್ ಸದಸ್ಯರಾದ ಎಚ್.ಎಸ್. ಗೋಪಿನಾಥ್, ಟಿ.ಎ. ಶರವಣ, ಸುಧಾಮ್ ದಾಸ್ ಉಪಸ್ಥಿತರಿದ್ದರು.

ಯಲಹಂಕ ವಿಶೇಷ ತಹಶೀಲ್ದಾರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ವಿಶೇಷ ತಹಶೀಲ್ದಾರ್ ಮುನಿಶಾಮಿ ರೆಡ್ಡಿ ಅವರನ್ನು ಅಮಾನತುಗೊಳಿಸಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಆದೇಶಿಸಿದ್ದಾರೆ.

ಮುನಿಶಾಮಿ ರೆಡ್ಡಿ ಅವರು ಸರ್ಕಾರಿ ಸೇವೆಗೆ ಅನಧಿಕೃತ ಗೈರಾಗುವ ಮೂಲಕ ತೋರಿರುವ ಬೇಜವಾಬ್ದಾರಿ, ನಿರ್ಲಕ್ಷ್ಯ ಹಾಗೂ ಅವರ ಮೇಲೆ ಲೋಕಾಯುಕ್ತ ಪ್ರಕರಣವಿರುವುದನ್ನು ಪರಿಗಣಿಸಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪಹಣಿಯಲ್ಲಿ ಜಮೀನಿನ ಮಾಲೀಕರ ಹೆಸರನ್ನು ಸೇರಿಸಲು ₹10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ಮುಂಗಡವಾಗಿ ₹3 ಲಕ್ಷ ಹಣ ಪಡೆದು, ನಂತರ ₹2 ಲಕ್ಷ ಹಣವನ್ನು ನೀಡುವಂತೆ ಬೇಡಿಕೆ ಇಟ್ಟಿರುವ ಬಗ್ಗೆ ವಕೀಲರಾದ ಮಹೇಶ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಫೆ.3ರಂದು ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ ಎಂಬ ಮಾಹಿತಿ ಇದೆ. ಕಾರ್ಯಾಚರಣೆ ಮತ್ತು ಅಧಿಕಾರಿಯ ಬಂಧನದ ಕುರಿತು ಅಧಿಕೃತ ಮಾಹಿತಿ ತನಿಖಾ ಸಂಸ್ಥೆಯಿಂದ ಸ್ವೀಕೃತವಾಗಿರುವುದಿಲ್ಲ. ಆದರೆ ಮಾಧ್ಯಮಗಳಲ್ಲಿ ಪ್ರಕಟವಾಗಿದೆ ಎಂದು ಪ್ರಾದೇಶಿಕ ಆಯುಕ್ತರು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ವಿಶೇಷ ತಹಶೀಲ್ದಾರ್ ಅವರು ತಾಲ್ಲೂಕಿನ ವಿವಿಧ ಅರೆ ನ್ಯಾಯಿಕ ಪ್ರಕರಣಗಳ ಪೀಠಾಧಿಕಾರಿಯಾಗಿ ಕಾರ್ಯ ನಿರ್ವಹಿಸಬೇಕಾಗಿದ್ದು, ಜವಾಬ್ದಾರಿಯುತವಾದ ಹುದ್ದೆಯಾಗಿರುತ್ತದೆ. ಆದರೆ, ಮುನಿಶಾಮಿ ಅವರು ಮೇಲಧಿಕಾರಿಗಳ ಪೂರ್ವಾನುಮತಿ, ರಜೆ ಮಂಜೂರಾತಿ ಪಡೆಯದೆ ಫೆ.4ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರಾಗಿದ್ದಾರೆ. ಮುನಿಶಾಮಿರೆಡ್ಡಿ ಅವರ ವಿರುದ್ಧದ ಇಲಾಖಾ ವಿಚಾರಣೆ ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರೇಮಿಗಳ ದಿನಕ್ಕೆ ವಂಡರ್ ಲಾ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ರಾಮನಗರ: ಪ್ರೇಮಿಗಳ ದಿನಕ್ಕೆ ವಂಡರ್ ಲಾ ವಿಶೇಷ ಕೊಡುಗೆ ಘೋಷಿಸಿದೆ. ಫೆ.7ರಿಂದ 14ರವರೆಗೆ ವಿಶೇಷ ರಸದೌತಣ ನೀಡಲಿದೆ. ತಮ್ಮ ಪ್ರೀತಿ ಪಾತ್ರರೊಂದಿಗೆ ಪ್ರೀತಿ ಹಂಚಿಕೊಳ್ಳಲು ಉತ್ತಮ ವಾತಾವರಣ ಸೃಷ್ಟಿಸುವ ಉದ್ದೇಶದೊಂದಿಗೆ ಸಂಗೀತ ಸಂಜೆ ಆಯೋಜಿಸಿದೆ.

ಫೆ.15 ಮತ್ತು 16ರಂದು ಸಿಂಗಲ್ಸ್ ಡೇ ಆಯೋಜಿಸಿದೆ. 15 ರಂದು ಏಕಾಂಗಿ ವ್ಯಕ್ತಿಗಳಿಗಾಗಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಿದೆ. ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡಿಕೊಂಡರೆ ವಾಹನ ನಿಲುಗಡೆ ಹಾಗೂ ಆಹಾರ, ಟಿಕೆಟ್ ಕಾಂಬೊಗಳ ಮೇಲೆ ಶೇ.35ರಷ್ಟು ರಿಯಾಯಿತಿ ಪಡೆಯಬಹುದು.

ಮಾಹಿತಿಗೆ 80372 30333/99455 57777 ಸಂಪರ್ಕಿಸಬಹುದು ಎಂದು ವಂಡರ್ ಲಾ ಹಾಲಿಡೇಸ್ ಕಾರ್ಯನಿರ್ವಾಹಕ ಮುಖ್ಯಸ್ಥ ಅರುಣ್ ಕೆ. ಚಿಟ್ಟಿಲಪಲ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅರೆ ವೈದ್ಯಕೀಯ: ಶುಲ್ಕ ಇಳಿಕೆ

ಬೆಂಗಳೂರು: ಅರೆ ವೈದ್ಯಕೀಯ ಕೋರ್ಸ್‌ಗಳ 496 ಸೀಟು ಖಾಲಿ ಉಳಿದಿದ್ದು, ಹಲವು ಕಾಲೇಜುಗಳು ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ಘೋಷಿಸಿವೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೂ ಪತ್ರ ಬರೆದಿದ್ದು, ಅಂತಿಮ ಸುತ್ತಿನ ಸೀಟು ಹಂಚಿಕೆಯಲ್ಲಿ ಶುಲ್ಕ ರಿಯಾಯಿತಿ ವಿವರ ನೀಡುವಂತೆ ಕೋರಿವೆ. ಶರೀರಶಾಸ್ತ್ರ, ಅಂಗರಚನಾ ಶಾಸ್ತ್ರ, ಸೂಕ್ಷ್ಮ ಜೀವವಿಜ್ಞಾನ, ಸಮುದಾಯ ಔಷಧ, ರೋಗಶಾಸ್ತ್ರ, ವಿಧಿವಿಜ್ಞಾನ ಔಷಧ, ಜೀವರಸಾಯನ ಶಾಸ್ತ್ರ ಕೋರ್ಸ್‌ಗಳ ಶುಲ್ಕ ₹94,025ರಿಂದ ₹1,94,025ರ ನಡುವೆ ಇದೆ. ಹಲವು ಕಾಲೇಜುಗಳು ಶುಲ್ಕವನ್ನು ₹68,525ಕ್ಕೆ ಇಳಿಸಿದೆ. ರಾಜ್ಯದಲ್ಲಿ 921 ಅರೆ ವೈದ್ಯಕೀಯ ಕಾಲೇಜುಗಳಿವೆ.

ಜೆಇಇ ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಅಂಕ



ಭವೇಶ್ ಜಯಂತಿ

ಬೆಂಗಳೂರು: ಇದೇ ಜನವರಿಯಲ್ಲಿ ನಡೆದ ಜೆಇಇ ಮುಖ್ಯ ಪರೀಕ್ಷೆಯಲ್ಲಿ ನಗರದ ಮಾರತ್ ಹಳ್ಳಿಯ ಚೈತನ್ಯ ಟೆಕ್ನೊ ಶಾಲೆಯ ವಿದ್ಯಾರ್ಥಿ ಉತ್ತಮ ಪರ್ಸಂಟೈಲ್ ಪಡೆದು, ಆಯ್ಕೆಯಾಗಿದ್ದಾರೆ.

ಚೈತನ್ಯ ಟೆಕ್ನೊ ಶಾಲೆಯ ಭವೇಶ್ ಜಯಂತಿ ಜೆಇಇ ಮುಖ್ಯ ಪರೀಕ್ಷೆಯಲ್ಲಿ 99.99 ಪರ್ಸಂಟೈಲ್ ಪಡೆದಿದ್ದಾರೆ.

'ಕಲಾಪದ ಕಾರಣ ಭಾಗವಹಿಸುತ್ತಿಲ್ಲ'

ಬೆಂಗಳೂರು: ಸಂಸತ್ ಕಲಾಪ ನಡೆಯುತ್ತಿರುವುದರಿಂದ ಹೂಡಿಕೆದಾರರ ಸಮಾವೇಶದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ನಮ್ಮ ಸರ್ಕಾರವು ಆತ್ಮನಿರ್ಭರ ಭಾರತ ಪರಿಕಲ್ಪನೆಯ ಮೂಲಕ ವಿಕಸಿತ ಭಾರತ- 2047ರ ಗುರಿ ಮುಟ್ಟುವ ನಿಟ್ಟಿನಲ್ಲಿ ಹೂಡಿಕೆಗಳಿಗೆ ಉತ್ತೇಜನ ನೀಡುವುದಕ್ಕೆ ಬದ್ಧವಾಗಿದೆ' ಎಂದು ಹೇಳಿದ್ದಾರೆ.

ಆವಿಷ್ಕಾರ, ನಾವೀನ್ಯತೆ ಮತ್ತು ಉದ್ಯಮಶೀಲತೆಯ ಮಹತ್ವದ ಕೇಂದ್ರವಾಗಿರುವ ಕರ್ನಾಟಕವು ಭಾರತದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರವಹಿಸುವುದನ್ನು ಮುಂದುವರಿಸುತ್ತದೆ ಎಂದು ತಿಳಿಸಿದ್ದಾರೆ.

ರಾಹುಲ್ ಗಾಂಧಿಗೆ ಕೋರ್ಟ್ ಸಮನ್ಸ್

ಲಖನೌ (ಪಿಟಿಐ): ಭಾರತ್ ಜೋಡೊ ಯಾತ್ರೆಯ ವೇಳೆ ಸೇನೆಯ ವಿರುದ್ಧ ಮಾನಹಾನಿಕರ ಹೇಳಿಕೆ ನೀಡಿದ ಆರೋಪದ ಮೇಲೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಇಲ್ಲಿನ ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿದೆ.

ಹೆಚ್ಚುವರಿ ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಅಲೋಕ್ ಕುಮಾರ್ ಅವರು ಮುಂದಿನ ವಿಚಾರಣೆಗೆ ಮಾರ್ಚ್ 24ರ ದಿನಾಂಕ ನಿಗದಿಪಡಿಸಿದ್ದಾರೆ. ರಾಹುಲ್ ಅವರು ಅಂದು ನ್ಯಾಯಾಲಯದಲ್ಲಿ ಹಾಜರಿರಬೇಕು.

ಬಿಆರ್‌ಒನ ಮಾಜಿ ನಿರ್ದೇಶಕ ಉದಯ್ ಶಂಕರ್ ಶ್ರೀವಾಸ್ತವ ಅವರ ಪರವಾಗಿ ವಕೀಲ ವಿವೇಕ್ ತಿವಾರಿ ಅವರು ರಾಹುಲ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಭಾರತ್ ಜೋಡೊ ಯಾತ್ರೆ ಸಂದರ್ಭ 2022ರ ಡಿಸೆಂಬರ್ 16ರಂದು ರಾಹುಲ್ ಅವರು ಮಾಧ್ಯಮದವರ ಜತೆ ಮಾತನಾಡುವಾಗ ಭಾರತ- ಚೀನಾ ಯೋಧರ ನಡುವಣ ಸಂಘರ್ಷದ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು ಎಂದು ದೂರಿನಲ್ಲಿ ತಿಳಿಸಿದ್ದರು.

30 ಇಲಾಖೆ, 150 ಸೇವೆಗಳ ಒದಗಿಸುವ ಪೋರ್ಟಲ್‌ಗೆ ಚಾಲನೆ • ನೆರವು, ಸಲಹೆ ನೀಡಲು ಚಾಟ್‌ಬಾಟ್ 'ಉಮಾ'

ಕೈಗಾರಿಕಾ ಸ್ನೇಹಿ ಏಕಗವಾಕ್ಷಿ ವ್ಯವಸ್ಥೆ ಜಾರಿ

• ಜಯಸಿಂಹ ಆರ್.

ಬೆಂಗಳೂರು: ಕೈಗಾರಿಕೆಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಿಸಿದ 150ಕ್ಕೂ ಹೆಚ್ಚು ಅನುಮೋದನೆ ಹಾಗೂ ಅನುಮತಿಗಳಿಗೆ ಒಂದೆಡೆಯೇ ಅರ್ಜಿ ಸಲ್ಲಿಸಲು ಅವಕಾಶವಿರುವ ಏಕಗವಾಕ್ಷಿ ವ್ಯವಸ್ಥೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಬಿಡುಗಡೆ ಮಾಡಿದರು.

ಮೈಕ್ರೊಸಾಫ್ಟ್ ಕಂಪನಿಯ ನೆರವಿನೊಂದಿಗೆ ಅಭಿವೃದ್ಧಿಪಡಿಸಿರುವ 'ಸಿಂಗಲ್ ವಿಂಡೊ ಸಿಸ್ಟಂ-ಎಸ್‌ಡಬ್ಲ್ಯು-ಎಸ್' ಪೋರ್ಟಲ್‌ನಲ್ಲಿ, ರಾಜ್ಯ ಸರ್ಕಾರದ 30 ಇಲಾಖೆಗಳು ಮತ್ತು ಸಂಸ್ಥೆಗಳ ಸೇವೆಗಳು ಲಭ್ಯವಿರಲಿವೆ. ಎಸ್‌ಡಬ್ಲ್ಯು-ಎಸ್ ಜತೆಗೆ ಪ್ರಮಾಣ ಪತ್ರ ಆಧಾರಿತ ಅನುಮೋದನೆ ವ್ಯವಸ್ಥೆಗೂ ಚಾಲನೆ ನೀಡಲಾಯಿತು.

ಕೈಗಾರಿಕೆಗಳ ಸ್ಥಾಪನೆ, ಪರಿಸರ ಅನುಮತಿ, ಮೂಲಸೌಕರ್ಯ ಸೇವೆ ಸಂಬಂಧಿತ 150 ಅನುಮತಿಗಳಿಗಾಗಿ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅನುಮತಿ, ಅನುಮೋದನೆ ಮತ್ತು ನವೀಕರಣ ಪ್ರಕ್ರಿಯೆಗಳು ಕಾಲಮಿತಿಯಲ್ಲಿ ಅತ್ಯಂತ ತ್ವರಿತವಾಗಿ ಆಗಲಿವೆ.

ಅರ್ಜಿ ಸಲ್ಲಿಕೆಯಲ್ಲಿ ಉದ್ಯಮದಾರರಿಗೆ ನೆರವಾಗಲು ಪೋರ್ಟಲ್‌ನಲ್ಲಿ ಚಾಟ್‌ಬಾಟ್ ವ್ಯವಸ್ಥೆಯನ್ನೂ ಅಳವಡಿಸಲಾಗಿದೆ. ಎಲ್ಲ ಹಂತದಲ್ಲೂ ನೆರವು ಮತ್ತು ಸಲಹೆ ನೀಡುವ ಈ ಚಾಟ್‌ಬಾಟ್‌ಗೆ 'ಉಮಾ' ಎಂದು ಹೆಸರಿಡಲಾಗಿದೆ.

ಈ ವ್ಯವಸ್ಥೆ ಅಡಿ ಯಾವುದೇ ಉದ್ಯಮಿಯು ಉದ್ಯಮ ಸ್ಥಾಪಿಸುವ ಸಂಬಂಧ ಪ್ರಮಾಣ ಪತ್ರವನ್ನು ಸಲ್ಲಿಸಿ, ಕಟ್ಟಡ ಮತ್ತಿತರ ನಿರ್ಮಾಣ ಕಾಮಗಾರಿ ಆರಂಭಿಸಬಹುದು. ಅನುಮೋದನೆ ದೊರೆಯುವ ಮುನ್ನವೇ ಕಾಮಗಾರಿ ನಡೆಸಬಹುದು. ಅನುಮೋದನೆ ದೊರೆತ ಬಳಿಕ ಇನ್ನಿತರ ಕೆಲಸಗಳನ್ನು ಆರಂಭಿಸಬಹುದಾಗಿದೆ.

'ಈ ವ್ಯವಸ್ಥೆಯನ್ನು ರಾಜ್ಯ ಮಟ್ಟದ ಏಕಗವಾಕ್ಷಿ ವ್ಯವಸ್ಥೆಯೊಂದಿಗೆ ಬೆಸೆಯಲಾಗಿದೆ. ಕೈಗಾರಿಕೆಗೆ ಬೇಕಾದ ಭೂಮಿಯ ಹುಡುಕಾಟ, ಮಂಜೂರಾತಿ, ಕಟ್ಟಡ ನಕಾಶೆಗೆ ಅನುಮೋದನೆ ಸೇರಿ ಕೆಐಎಡಿಬಿಯ ಎಲ್ಲ ಸೇವೆಗಳೂ ಪೋರ್ಟಲ್‌ನಲ್ಲಿ ಲಭ್ಯವಿರಲಿವೆ' ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಮಾಹಿತಿ ನೀಡಿದರು.



ಅರಮನೆ ಮೈದಾನದಲ್ಲಿ ಆಯೋಜಿಸಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು. ಸಚಿವರಾದ ಎಂ.ಬಿ.ಪಾಟೀಲ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'12 ವಿಶೇಷ ಹೂಡಿಕೆ ವಲಯ'

'ರಾಜ್ಯದ ವಿವಿಧ ಭಾಗಗಳಲ್ಲಿ ಇರುವ 200ಕ್ಕೂ ಹೆಚ್ಚು ಕೈಗಾರಿಕಾ ಪ್ರದೇಶಗಳ ಜತೆಗೆ 30,000 ಎಕರೆ ವಿಸ್ತೀರ್ಣದಲ್ಲಿ 12 ವಿಶೇಷ ಹೂಡಿಕೆ ವಲಯ ಸ್ಥಾಪಿಸುತ್ತೇವೆ' ಎಂದು ಸಚಿವ ಎಂ.ಬಿ.ಪಾಟೀಲ ಘೋಷಿಸಿದರು.

'ಹೂಡಿಕೆ ವಲಯಗಳ ಸ್ಥಾಪನೆಯಿಂದ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಕಡಿಮೆಯಾಗಲಿದೆ ಮತ್ತು ಕಾರ್ಯಕ್ಷಮತೆ ಹೆಚ್ಚಾಗಲಿದೆ. ಇದರ ಭಾಗವಾಗಿ ವೈಮಾನಿಕ-ರಕ್ಷಣಾ, ಇವಿ ತಯಾರಿಕೆ, ಔಷಧ ಉದ್ಯಮ, ಡೀಪ್‌ಟೆಕ್, ಡ್ರೋನ್ ಪಾರ್ಕ್ ಕ್ಲಸ್ಟರ್‌ಗಳನ್ನು ರೂಪಿಸಲಾಗುತ್ತದೆ' ಎಂದರು.

ಎರಡೇ ದಿನದಲ್ಲಿ ವಿಮಾನ ನಿಲ್ದಾಣದ ಸ್ಥಳ ಘೋಷಣೆ: ಡಿಕೆಶಿ

'ಬೆಂಗಳೂರು ಸಮೀಪ ಎರಡನೇ ವಿಮಾನ ನಿಲ್ದಾಣ ಸ್ಥಾಪನೆಗೆ ಮುಂದಿನ ಎರಡು ದಿನಗಳಲ್ಲಿ ಸ್ಥಳವನ್ನು ಘೋಷಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಕಟಿಸಿದರು.

'ವಿಮಾನ ನಿಲ್ದಾಣ ಸ್ಥಾಪನೆಗೆ ಹಲವು ಪ್ರದೇಶಗಳ ಪ್ರಸ್ತಾವ ಬಂದಿತ್ತು. ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಮುಂದಿನ ದಶಕಗಳಲ್ಲಿ ಆಗುವ ಬೆಳವಣಿಗೆ, ಸಂಚಾರ ಮತ್ತು ವಿಮಾನ ಹಾರಾಟ ದಟ್ಟಣೆಯನ್ನು ಗಮನದಲ್ಲಿ ಇರಿಸಿಕೊಂಡು ಸ್ಥಳ ಆಯ್ಕೆ ಮಾಡಲಾಗಿದೆ' ಎಂದರು.



20 ಲಕ್ಷ ಉದ್ಯೋಗ: ಸಿ.ಎಂ

'ಕೈಗಾರಿಕಾ ನೀತಿ 2025-30' ಅನ್ನು ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ನೂತನ ಕೈಗಾರಿಕಾ ನೀತಿ ಅಡಿಯಲ್ಲಿ ರಾಜ್ಯದಾದ್ಯಂತ ₹7.5 ಲಕ್ಷ ಕೋಟಿ ಹೂಡಿಕೆಯನ್ನು ನಿರೀಕ್ಷೆ ಮಾಡಲಾಗಿದೆ. ಇದರಿಂದ 20 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ' ಎಂದರು.

'ಬೆಂಗಳೂರು ಮತ್ತು ಬೆಂಗಳೂರಿನಾಚೆಗೂ ಕೈಗಾರಿಕೆಗಳ ಸ್ಥಾಪನೆಗೆ ನೂತನ ನೀತಿ ಒತ್ತು ನೀಡಲಿದೆ. ಸುಸ್ಥಿರ ಅಭಿವೃದ್ಧಿಯ ಮಾದರಿಗಳನ್ನು ಅನುಸರಿಸಲಿದೆ. ಎಲ್ಲ ಕ್ಷೇತ್ರ ಮತ್ತು ವಲಯಗಳಲ್ಲೂ ಹೂಡಿಕೆಗೆ ಉತ್ತೇಜನ ನೀಡಲಾಗುತ್ತದೆ' ಎಂದರು.

ಆನಂದ್ ಮಹೀಂದ್ರಾ ಕೊಡಗು ನಂಟು

ಮಹೀಂದ್ರಾ ಅಂಡ್ ಮಹೀಂದ್ರಾ ಸಮೂಹದ ಮುಖ್ಯಸ್ಥ ಆನಂದ್ ಮಹೀಂದ್ರಾ, 'ನನ್ನ ಬಾಲ್ಯದ ಬಹುತೇಕ ದಿನಗಳನ್ನು ಕಳೆದದ್ದು ನಾಗರಹೊಳೆಯ ಕುಟ್ಟದಲ್ಲಿ. ಅಲ್ಲಿ ನನ್ನ ತಂದೆ–ತಾಯಿ ಗಿಡನೆಟ್ಟು ಬೆಳಸಿದ ಕಾಫಿ ತೋಟವೇ ನನಗೆ ಉದ್ಯಮದ ಪಾಠಶಾಲೆ. ಕೊಡಗಿಗೂ ನನಗೂ ಅಷ್ಟು ಅವಿನಾಭಾವ ಸಂಬಂಧ' ಎಂದು ನೆನಪಿಸಿಕೊಂಡರು.

₹35,000 ಕೋಟಿ ಮುಂದಿನ ಐದು ವರ್ಷಗಳಲ್ಲಿ ಮಹೀಂದ್ರಾ ಕಂಪನಿಯು ರಾಜ್ಯದಲ್ಲಿ, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಮಾಡಲಿರುವ ಹೂಡಿಕೆ

₹5,000 ಕೋಟಿ ಮುಂದಿನ ವರ್ಷಗಳಲ್ಲಿ ಹಣಕಾಸು ಇತರ ಸೇವೆಗಳಲ್ಲಿ ಮಹೀಂದ್ರಾ ಮಾಡಲಿರುವ ಹೂಡಿಕೆ

ಕರ್ನಾಟಕವೇ ಕರ್ಮಭೂಮಿ: ಜಿಂದಾಲ್

ಜೆಎಸ್‌ಡಬ್ಲ್ಯು ಸ್ಟೀಲ್ಸ್ ವ್ಯವಸ್ಥಾಪಕ ನಿರ್ದೇಶಕ ಸಜ್ಜನ್ ಜಿಂದಾಲ್, 'ನಾನು ಎಂಜಿನಿಯರಿಂಗ್ ಪಡೆದದ್ದು ಮತ್ತು ಅತ್ಯಂತ ದೊಡ್ಡ ಉಕ್ಕಿನ ಕಾರ್ಖಾನೆ ಆರಂಭಿಸಿದ್ದು ಕರ್ನಾಟಕದಲ್ಲೇ. ಇಲ್ಲಿ ಈವರೆಗೆ ₹1.25 ಲಕ್ಷ ಕೋಟಿಯಷ್ಟು ಹೂಡಿಕೆ ಮಾಡಿದ್ದೇವೆ. ಕರ್ನಾಟಕ ನನ್ನ ಕರ್ಮಭೂಮಿ, ಕನ್ನಡಿಗರೇ ನನ್ನ ಪರಿವಾರ. ಇಲ್ಲಿ ನಮ್ಮ ಹೂಡಿಕೆಯನ್ನು ಇನ್ನಷ್ಟು ವಿಸ್ತರಿಸಲಿದ್ದೇವೆ' ಎಂದರು.

₹43,000 ಕೋಟಿ ಉಕ್ಕಿನ ಕಾರ್ಖಾನೆ ವಿಸ್ತರಣೆಗೆ ಜಿಂದಾಲ್ ಕಂಪನಿ ಮಾಡಲಿರುವ ಹೂಡಿಕೆ

₹56,000 ಕೋಟಿ ಸೌರ ವಿದ್ಯುತ್ ಮತ್ತು ಹಸಿರು ಜಲಜನಕ ಉತ್ಪಾದನೆಗೆ ಜಿಂದಾಲ್ ಕಂಪನಿ ಘೋಷಿಸಿರುವ ಹೂಡಿಕೆ



ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಪದ ಕಲಾವಿದರ ಜೊತೆ ವಿದೇಶಿ ಅತಿಥಿಗಳು ಸೆಲ್ಫಿ ತೆಗೆದುಕೊಂಡರು ಪ್ರಜಾವಾಣಿ ಚಿತ್ರ

ಸಿ.ಎಂಗೆ ನೆರವಾದ ರಾಜನಾಥ್ ಸಿಂಗ್

ಕಾಲಿಗೆ ಪೆಟ್ಟು ಮಾಡಿಕೊಂಡು ವಿಶ್ರಾಂತಿ ಪಡೆಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಮನೆ ಮೈದಾನದಲ್ಲಿ ಮಂಗಳವಾರ ಆರಂಭವಾದ ಹೂಡಿಕೆದಾರರ ಸಮಾವೇಶಕ್ಕೆ ಗಾಲಿ ಕುರ್ಚಿಯಲ್ಲಿ ಬಂದರು. ಆ ವೇಳೆ ಸಿದ್ದ-ರಾಮಯ್ಯನವರ ಕೈಹಿಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಕುರ್ಚಿ ಮುಂದೆ ಸರಿಯಲು ನೆರವಾದರು.

ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದ ಸಿಂಗ್, ರಾಜಕೀಯ ನಾಯಕರು ಹೆಚ್ಚು ಓಡಾಡಬೇಕಾಗುತ್ತದೆ. ಕಾಲು ಸುಸ್ಥಿತಿಯಲ್ಲಿ ಇರಬೇಕಾದುದು ಅಗತ್ಯ. ಸಿದ್ದರಾಮಯ್ಯ ಬೇಗ ಗುಣಮುಖರಾಗಲಿ ಎಂದು ಆಶಿಸಿದರು.

ನೋವಿನ ನಡುವೆಯೇ ಸಿದ್ದರಾಮಯ್ಯ ಅವರು ಎದ್ದು ನಿಂತು ಭಾಷಣ ಮಾಡಿದರು. ಭಾಗವಹಿಸಿದ್ದ ಎಲ್ಲರಲ್ಲೂ ಹುರುಪು ತುಂಬಿದರು.



ಅರಮನೆ ಮೈದಾನದಲ್ಲಿ ಆಯೋಜಿಸಿರುವ ಜಾಗತಿಕ ಹೂಡಿಕೆದಾರರ ಸಮಾವೇಶ "ಇನ್ವೆಸ್ಟ್ ಕರ್ನಾಟಕ 2025" ಕಾರ್ಯಕ್ರಮಕ್ಕೆ ವ್ಹೀಲ್ ಚೇರ್‌ನಲ್ಲಿ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ —ಪ್ರಜಾವಾಣಿ ಚಿತ್ರ



ನೃತ್ಯ ಪ್ರದರ್ಶನ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು ಪ್ರಜಾವಾಣಿ ಚಿತ್ರ

ಠಾಣೆ, ಪೊಲೀಸರಿಗೆ ಕಲ್ಲೆಸೆತ; ಪ್ರಕರಣ ದಾಖಲು

ಸದ್ಯ ಉದಯಗಿರಿ ಶಾಂತ; ಠಾಣೆಗೆ ಭೇಟಿ ನೀಡಿದ ರಾಜಕೀಯ ನಾಯಕರು, ಎಡಿಜಿಪಿ

ಪ್ರಜಾವಾಣಿ ವಾರ್ತೆ

ಮೈಸೂರು: ಮುಸ್ಲಿಂ ಸಮುದಾಯವನ್ನು ಅವಹೇಳನ ಮಾಡಿದ ಪೋಸ್ಟ್ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿ, ಸೋಮವಾರ ರಾತ್ರಿ ಪ್ರಕ್ಷುಬ್ಧ ವಾತಾವರಣದಿಂದ ಕೂಡಿದ್ದ ಇಲ್ಲಿನ ಉದಯಗಿರಿ ಠಾಣೆಯ ಸುತ್ತಲಿನ ಪ್ರದೇಶವು ಮಂಗಳವಾರ ಸಹಜ ಸ್ಥಿತಿಯತ್ತ ಮರಳಿತು.

ಕಲ್ಯಾಣಗಿರಿಯ ನಿವಾಸಿ ಸತೀಶ್ (46) ಎಂಬಾತನನ್ನು ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಪ್ರಕರಣವನ್ನು ಸಿಸಿಬಿಗೆ ಹಸ್ತಾಂತರಿಸಲಾಗಿದೆ. ಠಾಣೆ ಮತ್ತು ಪೊಲೀಸರಿಗೆ ಕಲ್ಲೆಸೆದ ಹಾಗೂ ಗಲಾಟೆ ಮಾಡಿದವರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಂಡಿದ್ದು, ಸ್ಥಳ ಮಹಜರು ನಡೆದಿದೆ. ಒಟ್ಟು ಎರಡು ಪ್ರಕರಣಗಳು ದಾಖಲಾಗಿವೆ.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ಭೇಟಿ ನೀಡಿ ಸಭೆ ನಡೆಸಿದರು. 'ಗಲಾಟೆ ಮಾಡಿದವರ ಬಂಧನಕ್ಕೆ ಸ್ಥಳೀಯ ಪೊಲೀಸರ ತಂಡ ರಚಿಸಲಿದ್ದೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಠಾಣೆಗೆ ಬಂದ ಮಾಜಿ ಸಂಸದ ಪ್ರತಾಪ ಸಿಂಹ ಅವರನ್ನು ಪೊಲೀಸರು ವಾಪಸ್ ಕಳಿಸಿದರು. ನಂತರ ಕ್ಯಾತಮಾರನಹಳ್ಳಿ ಹುಲಿಯಮ್ಮ ದೇವಸ್ಥಾನದ ಬಳಿ ಮುಖಂಡರೊಂದಿಗೆ ಚರ್ಚಿಸುತ್ತಿದ್ದ ವೇಳೆ ಬಂದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದ ತಂಡ ಅಲ್ಲಿಂದಲೂ ತೆರಳುವಂತೆ ಸೂಚಿಸಿತು. ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಭೇಟಿ ನೀಡಿ, 'ಘಟನೆಗೆ ಪ್ರಚೋದಿಸುತ್ತಿರುವ ಪ್ರತಾಪಸಿಂಹ ಅವರನ್ನು ಬಂಧಿಸಬೇಕು' ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ದೂರು ಸಲ್ಲಿಸಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ನೇತೃತ್ವದ ಬಿಜೆಪಿ ನಾಯಕರ ತಂಡ ಠಾಣೆಗೆ ಬಂದ ವೇಳೆ, ಆಕ್ಷೇಪಿಸಲು ಬಂದ ಲಕ್ಷ್ಮಣ್ ಅವರನ್ನು ದೂರದಲ್ಲೇ ಪೊಲೀಸರು ತಡೆದರು. ಅವರು ಸಂಗಡಿಗರೊಂದಿಗೆ ರಸ್ತೆಯಲ್ಲೇ ಧರಣಿ ನಡೆಸಿದರು.

ಘಟನೆ ವಿವರ: 'ಆರೋಪಿಯ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಸೋಮವಾರ ಸಾವಿರಾರು ಮಂದಿ ಠಾಣೆಯ ಮುಂದೆ ಜಮಾಯಿಸಿ ಕಲ್ಲು ತೂರಾಟ ನಡೆಸಿದ್ದರು. ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಸಿಡಿಸಿ ಗುಂಪು ಚದುರಿಸಿದ್ದರು. ಡಿಸಿಪಿ ಎಂ.ಮುತ್ತುರಾಜ್ ಸೇರಿ 10ಕ್ಕೂ ಅಧಿಕ ಪೊಲೀಸರಿಗೆ ಗಾಯವಾಗಿತ್ತು. ಏಳು ವಾಹನಗಳು ಜಖಂಗೊಂಡಿದ್ದವು.



ಮೈಸೂರಿನ ಉದಯಗಿರಿ ಠಾಣೆಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಂಗಳವಾರ ಭೇಟಿ ನೀಡಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಹಾಗೂ ಡಿಸಿಪಿ ಎಂ.ಮುತ್ತುರಾಜ್ ಅವರಿಂದ ಘಟನೆಯ ಮಾಹಿತಿ ಪಡೆದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪಸಿಂಹ ಜೊತೆಗಿದ್ದರು – ಪ್ರಜಾವಾಣಿ ಚಿತ್ರ

ಓಲೈಕೆ ರಾಜಕಾರಣದಿಂದ ರಾಜ್ಯಕ್ಕೆ ಬೆಂಕಿ ಬೀಳುತ್ತಿದೆ. ಸುಮಾರು 800 ಜನರು ಪೊಲೀಸ್ ಠಾಣೆಗೆ ನುಗ್ಗಿ, ಡಿಸಿಪಿಯವರ ವಾಹನಕ್ಕೆ ಬೆಂಕಿ ಹಚ್ಚಿದ್ದಾರೆ. ಸರ್ಕಾರ ಬದುಕಿದೆಯೇ?'
ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ನಾಯಕ, ವಿಧಾನಪರಿಷತ್ತು

ಉದಯಗಿರಿ ಮುಸ್ಲಿಂ ಸಮುದಾಯದ ಬಾಹುಳ್ಯದ ಪ್ರದೇಶವಾಗಿದ್ದು, ಮತೀಯ ದುಷ್ಕರ್ಮಿಗಳು ನಿರಂತರವಾಗಿ ಕ್ರೌರ್ಯ ಮೆರೆಯುತ್ತಿದ್ದಾರೆ. ಪೊಲೀಸರ ಮೇಲೆ ಹಲ್ಲೆ ನಡೆಸುವಷ್ಟು ಬಲಿಷ್ಠರಾಗಿದ್ದಾರೆ.
ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಹುಬ್ಬಳ್ಳಿ ಪ್ರಕರಣವನ್ನು ಸಿದ್ದರಾಮಯ್ಯ ವಾಪಸ್ ಪಡೆದಿರುವುದನ್ನೇ ಮಾದರಿಯಾಗಿಟ್ಟು ಉದಯಗಿರಿಯಲ್ಲೂ ಮತಾಂಧರು ಪೊಲೀಸರ ಮೇಲೆ ದಾಳಿ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ
ಆರ್.ಅಶೋಕ, ವಿರೋಧ ಪಕ್ಷದ ನಾಯಕ

ಆರ್‌ಎಸ್‌ಎಸ್ ಸಂಘಟನೆಯ ನೂರಾರು ಮಂದಿ ಮುಸ್ಲಿಮರೊಂದಿಗೆ ಸೇರಿಕೊಂಡು ಕಲ್ಲೆಸೆದಿದ್ದಾರೆ. ಅವರನ್ನು ಪತ್ತೆಹಚ್ಚಬೇಕು. ಬಿಜೆಪಿ ನಾಯಕರನ್ನು ಮೈಸೂರು ಪ್ರವೇಶಿಸಲು ಬಿಡಬಾರದು
ಎಂ.ಲಕ್ಷ್ಮಣ, ಕೆಪಿಸಿಸಿ ವಕ್ತಾರ

'ಡಿ.ಜೆ. ಹಳ್ಳಿ ಘಟನೆಗೆ ಹೋಲಿಕೆ ಸಲ್ಲ'

ಬೆಂಗಳೂರು: 'ಯಾವುದೇ ಪರಿಸ್ಥಿತಿಯಲ್ಲಿ ಕಾನೂನು ಕೈಗೆತ್ತಿಕೊಳ್ಳುವುದು ತಪ್ಪು. ಮೈಸೂರಿನ ಉದಯಗಿರಿಯ ಘಟನೆಯನ್ನು ಡಿ.ಜೆ.ಹಳ್ಳಿ ಘಟನೆಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ' ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿತ್ತು. ಆದರೆ, ಪೊಲೀಸರು ಸಂಜೆಯಾದರೂ ಎಫ್‌ಐಆರ್ ದಾಖಲಿಸಲಿಲ್ಲ. ಆಗ ಠಾಣೆಯ ಬಳಿಯೇ ಪ್ರತಿಭಟನೆ ನಡೆಸಿದರು. ರಾತ್ರಿ 8.30 ಕ್ಕೆ ಕಲ್ಲು ತೂರಾಟ ಮಾಡಿ, ಟೈರ್‌ಗಳಿಗೆ ಬೆಂಕಿ ಹಚ್ಚಿ, ವಾಹನಗಳಿಗೆ ಜಖಂ ಮಾಡಿದ್ದಾರೆ. ಮಧ್ಯರಾತ್ರಿ 12.30 ರ ವೇಳೆಗೆ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಪೊಲೀಸ್ ಸಿಬ್ಬಂದಿ, ಅಧಿಕಾರಿಗಳಿಗೆ ಪೆಟ್ಟಾಗಿದೆ. ಲಾಠಿ ಪ್ರಹಾರ ಮತ್ತು ಅಶ್ರುವಾಯು ಸಿಡಿಸಿದ್ದಾರೆ' ಎಂದರು

'ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜನಸಂಖ್ಯೆ ಹೆಚ್ಚಾಗಿದೆ. ಎರಡು ಪೊಲೀಸ್ ಠಾಣೆಯ ಅಗತ್ಯವಿದೆ. ಜನಸಂಖ್ಯೆ ದಟ್ಟಣೆ ಇರುವ ಪ್ರದೇಶದಲ್ಲಿ ವದಂತಿಗಳು ಬೇಗ ಹರಡುತ್ತವೆ. ಶಾಂತಿ ಸ್ಥಾಪಿಸುವ ಸಂಬಂಧ ಸ್ಥಳೀಯರ ಜತೆ ಚರ್ಚೆ ಮಾಡಿದ್ದೇನೆ' ಎಂದು ತಿಳಿಸಿದರು.

'ದಾಂದಲೆ ಎಬ್ಬಿಸಿದವರ ವಿರುದ್ಧ ಕ್ರಮ'

ಬೆಂಗಳೂರು: ' ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಿ ದಾಂದಲೆ ಎಬ್ಬಿಸಿದವರನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದ ಪೋಸ್ಟ್ ಒಂದು ಸಮುದಾಯವನ್ನು ಕೆರಳಿಸಿದೆ. ಪೋಸ್ಟ್ ಮಾಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು. ಆತನನ್ನು ವಶಕ್ಕೆ ನೀಡುವಂತೆ 200 ಜನ ಠಾಣೆ ಬಳಿ ಗಲಾಟೆ ಮಾಡಿ, ಕಲ್ಲು ತೂರಿದ್ದಾರೆ. ಆಗ ಪೊಲೀಸರು ಅಶ್ರುವಾಯು ಸಿಡಿಸಿ, ಪರಿಸ್ಥಿತಿ ನಿಯಂತ್ರಿಸಿದ್ದಾರೆ' ಎಂದರು.

ರಾಯಚೂರು ಸಂಸದ ಜಿ.ಕುಮಾರ ನಾಯಕ ಆಕ್ರೋಶ

'ರಾಜ್ಯದಲ್ಲಿ ಕಡಿಮೆ ರೈಲು ಜಾಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ಪ್ರತಿ 100 ಚದರ ಕಿ.ಮೀ.ಗೆ 2.62 ಕಿ.ಮೀ. ಮಾತ್ರ ರೈಲು ಜಾಲ ಇದೆ. ಆದರೆ, ಉತ್ತರ ಪ್ರದೇಶದಲ್ಲಿ ಇದರ ಎರಡು ಪಟ್ಟು ಹಾಗೂ ಪಶ್ಚಿಮ ಬಂಗಾಳದಲ್ಲಿ ನಾಲ್ಕು ಪಟ್ಟು ಇದೆ. ಈ ಅನ್ಯಾಯ ಸರಿಪಡಿಸುವಂತೆ ರೈಲ್ವೆ ಸಚಿವರಿಗೆ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ಈ ಸಲದ ಬಜೆಟ್‌ನಲ್ಲೂ ಭಾರಿ ಅನ್ಯಾಯ ಮಾಡಲಾಗಿದೆ' ಎಂದು ರಾಯಚೂರು ಸಂಸದ ಜಿ.ಕುಮಾರ ನಾಯಕ ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಕನ್ನಡದಲ್ಲಿ ಮಾತನಾಡಿದ ಅವರು, ಬಸವಣ್ಣ ಅವರ ವಚನ ಹಾಗೂ ಕುವೆಂಪು ಅವರ ಕವಿವಾಣಿ ಉಲ್ಲೇಖಿಸಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಕರ್ನಾಟಕವು ದೇಶದಲ್ಲೇ ಅತ್ಯಂತ ಕಡಿಮೆ ರೈಲ್ವೆ ಸಾಂದ್ರತೆ ಹೊಂದಿದೆ. ವಂದೆ ಭಾರತ್, ನಮೋ ಭಾರತ್ ಸೇರಿದಂತೆ ಹೊಸ ರೈಲು ಸೇವೆಗಳನ್ನು ಹೆಚ್ಚು ರೈಲು ಜಾಲ ಇರುವ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಹಿಂದುಳಿದ ಜಿಲ್ಲೆಗಳು ಹಾಗೂ ರಾಜ್ಯಗಳನ್ನು ಕಡೆಗಣಿಸಲಾಗುತ್ತಿದೆ. ಆಲಮಟ್ಟಿ-ಯಾದಗಿರಿ ರೈಲು ಮಾರ್ಗ ಸೇರಿದಂತೆ ರಾಜ್ಯದ ರೈಲ್ವೆ ಯೋಜನೆಗಳಿಗೆ ಕೂಡಲೇ ಅನುಮೋದನೆ ನೀಡಬೇಕು ಎಂದು ಅವರು ಆಗ್ರಹಿಸಿದರು.

15ನೇ ಕೇಂದ್ರ ಹಣಕಾಸು ಆಯೋಗವು ಕರ್ನಾಟಕದ ತೆರಿಗೆ ಪಾಲನ್ನು ಶೇ 23ರಷ್ಟು ಕಡಿಮೆ ಮಾಡಿದೆ. ಪಾಲು ಶೇ 4.7ರಿಂದ ಶೇ 3.6ಕ್ಕೆ ಇಳಿದಿದೆ. 16ನೇ ಹಣಕಾಸು ಆಯೋಗದ ವರದಿಯು ಶೀಘ್ರದಲ್ಲೇ ಹಣಕಾಸು ಸಚಿವರ ಕೈಗಳನ್ನು ಮತ್ತೊಮ್ಮೆ ಕಟ್ಟಿಹಾಕಲಿದೆ. ಈ ವರದಿಯು ನೆಲದ ವಾಸ್ತವಗಳನ್ನು ಪ್ರತಿಬಿಂಬಿಸಬೇಕು. ಸಮತೋಲಿತ ಅಭಿವೃದ್ಧಿಗೆ ಒತ್ತು ನೀಡಬೇಕು. ರಾಜ್ಯಗಳು ತಮ್ಮ ನ್ಯಾಯಯುತ ಪಾಲನ್ನು ಪಡೆಯಬೇಕು' ಎಂದು ಅವರು ಹೇಳಿದರು.

'ಏಮ್ಸ್ ಸ್ಥಾಪನೆಗಾಗಿ ರಾಯಚೂರಿನ ಜನರು ಸಾವಿರ ದಿನಗಳಿಂದ ಹೋರಾಟ ಮಾಡುತ್ತಿದ್ದಾರೆ. ಆದರೆ, ಈ ಸಲವೂ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಏಮ್ಸ್ ಸ್ಥಾಪನೆ ಬಗ್ಗೆ ಕೇಂದ್ರ ಸರ್ಕಾರ ಕೂಡಲೇ ಘೋಷಣೆ ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'ದೇಶದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಸಂಖ್ಯೆ ಶೇ 25ರಷ್ಟಿದೆ. ಮುಸ್ಲಿಮರು ಶೇ 19ರಷ್ಟಿದ್ದಾರೆ. ಆದರೆ, ಈ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಬಜೆಟ್‌ನಲ್ಲಿ ಅನುದಾನ ಹಂಚಿಕೆ ತೀರಾ ಕಡಿಮೆ. ಪರಿಶಿಷ್ಟರ ಜನಸಂಖ್ಯೆಗೆ ತಕ್ಕಂತೆ ಅನುದಾನ ಹಂಚಿಕೆ ಮಾಡಲು ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಸರ್ಕಾರಗಳು ಕಾಯ್ದೆ ರೂಪಿಸಿವೆ. ಆದರೆ, ಕೇಂದ್ರ ಸರ್ಕಾರ ಈ ವರೆಗೂ ಕಾಯ್ದೆ ರೂಪಿಸಿಲ್ಲ. ಇದರಿಂದ, ಶೋಷಿತ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ' ಎಂದು ಅವರು ಗಮನ ಸೆಳೆದರು.

ರಾಜ್ಯದಲ್ಲಿ 16 ಬರ ಸಂಭಾವ್ಯ ಜಿಲ್ಲೆಗಳು ಕೇಂದ್ರ ಸಚಿವ ಭಗೀರಥ ಚೌಧರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರವು ದೇಶದಲ್ಲಿ 24 ಬರ ಸಂಭಾವ್ಯ ಜಿಲ್ಲೆಗಳನ್ನು ಗುರುತಿಸಿದ್ದು, ಅವುಗಳಲ್ಲಿ 16 ಕರ್ನಾಟಕ ರಾಜ್ಯದವು ಎಂದು ಕೃಷಿ ಕಲ್ಯಾಣ ಖಾತೆ ರಾಜ್ಯ ಸಚಿವ ಭಗೀರಥ ಚೌಧರಿ ತಿಳಿಸಿದರು.

ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಲೋಕಸಭೆಯಲ್ಲಿ ಮಂಗಳವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ಕರ್ನಾಟಕವು ಮುಖ್ಯವಾಗಿ ಮಳೆಯಾಶ್ರಿತ ಕೃಷಿಕ ರಾಜ್ಯವಾಗಿದ್ದು, ಹೆಚ್ಚಾಗಿ ಬರಗಾಲದಿಂದ ಬಳಲುತ್ತಿದೆ. ರಾಜ್ಯದಲ್ಲಿ ಸಾಮಾನ್ಯವಾಗಿ ಉತ್ತಮ ಮಳೆಯಾಗುತ್ತಿದೆ. ಆದರೆ, ಅದರ ಅನಿಯಮಿತ ಹಂಚಿಕೆಯಿಂದಾಗಿ, ಕೃಷಿ ಚಟುವಟಿಕೆ ಮೇಲೆ ಪರಿಣಾಮ ಉಂಟಾಗುತ್ತಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ ಕಳೆದ 23 ವರ್ಷಗಳಲ್ಲಿ (2001ರಿಂದ 2023) 16 ವರ್ಷಗಳನ್ನು ಬರ ವರ್ಷಗಳೆಂದು ಘೋಷಿಸಲಾಗಿದೆ. 2018ರಿಂದ ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಪ್ರವಾಹಗಳು ಹೆಚ್ಚಾಗುತ್ತಿವೆ. ರಾಜ್ಯದ ಉತ್ತರ ಮತ್ತು ಪೂರ್ವ ಒಣ ಪ್ರದೇಶಗಳಲ್ಲಿ ಆಲಿಕಲ್ಲು ಮಳೆಯಿಂದ ತೋಟಗಾರಿಕಾ ಬೆಳೆಗಳ ಮೇಲೆ ಪರಿಣಾಮ ಬೀರುತ್ತಿದೆ. ರಾಜ್ಯದ ದಕ್ಷಿಣ ಭಾಗದಲ್ಲೂ ಶಾಖದ ಅಲೆಗಳು ಹೆಚ್ಚುತ್ತಿವೆ' ಎಂದು ಅವರು ಮಾಹಿತಿ ನೀಡಿದರು.

ಇನ್ನೊಂದು ಪ್ರಶ್ನೆಗೆ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಉತ್ತರಿಸಿ, 'ಕೇಂದ್ರ ಸರ್ಕಾರವು ಪರಂಪರಾಗತ ಕೃಷಿ ವಿಕಾಸ ಯೋಜನೆ (ಪಿಕೆವಿವೈ) ಮೂಲಕ ಸಾವಯವ ಕೃಷಿಯನ್ನು ಉತ್ತೇಜಿಸುತ್ತಿದೆ. ರಾಜ್ಯದ 37,558 ರೈತರು ಈ ಯೋಜನೆಯ ಲಾಭ ಪಡೆದಿದ್ದಾರೆ' ಎಂದು ಮಾಹಿತಿ ನೀಡಿದರು.

ಬೆಳಗಾವಿವರೆಗೆ ವಂದೆ ಭಾರತ್: ಪ್ರಲ್ಹಾದ ಜೋಶಿ

ನವದೆಹಲಿ: ಬೆಂಗಳೂರು-ಧಾರವಾಡ ನಡುವಿನ ವಂದೆ ಭಾರತ್ ರೈಲು ಸೇವೆಯು ಬೆಳಗಾವಿಗೆ ಶೀಘ್ರದಲ್ಲಿ ವಿಸ್ತರಣೆಯಾಗಲಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ನವದೆಹಲಿಯಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಪ್ರಲ್ಹಾದ ಜೋಶಿ ಮತ್ತು ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ಸಭೆ ಸೇರಿ ಈ ಬಗ್ಗೆ ಚರ್ಚೆ ನಡೆಸಿದ್ದಾರೆ.


ಅತೀ ಶೀಘ್ರದಲ್ಲಿಯೇ ಬೆಳಗಾವಿ - ಬೆಂಗಳೂರಿನ ಮಧ್ಯೆ ವಂದೆ ಭಾರತ್ ರೈಲಿನ ಆರಂಭದ ವೇಳಾಪಟ್ಟಿ ಬಿಡುಗಡೆಯಾಗಲಿದೆ ಎಂದು ಜೋಶಿ ತಿಳಿಸಿದ್ದಾರೆ.

ಈ ರೈಲು ಸಂಚಾರದಿಂದ ಹುಬ್ಬಳ್ಳಿ-ಧಾರವಾಡ ಹಾಗೂ ಬೆಳಗಾವಿ ಜನತೆಗೆ ಬೆಂಗಳೂರು ಪ್ರಯಾಣಕ್ಕೆ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

'5 ವರ್ಷ ಸಿದ್ದರಾಮಯ್ಯ ಸಿಎಂ'

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): 'ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಅಸಾಧ್ಯ. ಐದು ವರ್ಷ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ' ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಹೇಳಿದರು.



ಎನ್ ಎಸ್ ಬೋಸರಾಜು

'ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದಲ್ಲಿ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಯೇ ಇಲ್ಲ' ಎಂದು ಸುದ್ದಿಗಾರರಿಗೆ ಅವರು ತಿಳಿಸಿದರು.

ಆಯ್ಕೆಯಾದ ಅಭ್ಯರ್ಥಿಗಳ ಒಎಂಆರ್ ಶೀಟ್ ಪರಿಶೀಲಿಸಲು ಆಗ್ರಹ

ಸಿಟಿಐ ಪಟ್ಟಿ: ಪರೀಕ್ಷಾ ಅಕ್ರಮ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಪ್ರಕಟಿಸಿರುವ ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ವಾಣಿಜ್ಯ ತೆರಿಗೆ ಪರಿವೀಕ್ಷಕ (ಸಿಟಿಐ) 230 ಹುದ್ದೆಗಳಿಗೆ ಆಯ್ಕೆಯಾದವರ ತಾತ್ಕಾಲಿಕ ಪಟ್ಟಿಗೆ ಕೆಲವು ಅಭ್ಯರ್ಥಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿವಿಧ ಹುದ್ದೆಗಳ ಆಯ್ಕೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಿಂದೆ ನಡೆಸಿದ್ದ ಪರೀಕ್ಷೆಯಲ್ಲಿ ಅತೀ ಕಡಿಮೆ ಅಂಕ ಗಳಿಸಿದ್ದ ಕೆಲವು ಅಭ್ಯರ್ಥಿಗಳು ಸಿಟಿಐ ಹುದ್ದೆಯ ಆಯ್ಕೆ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ಇದು ಪಟ್ಟಿಯಲ್ಲಿ ಸ್ಥಾನ ಪಡೆಯದ ಅಭ್ಯರ್ಥಿಗಳ ಅನುಮಾನಕ್ಕೆ ಕಾರಣವಾಗಿದೆ.

'ವಿಜಯಪುರ ಜಿಲ್ಲೆ ಒಂದರಿಂದಲೇ 25 ಅಭ್ಯರ್ಥಿಗಳು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಅಲ್ಲದೆ, ಉನ್ನತ ಏಳು ಸ್ಥಾನಗಳಲ್ಲಿ ಒಂದೇ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳಿದ್ದಾರೆ. ಪರೀಕ್ಷೆಯಲ್ಲಿ ದೊಡ್ಡ ಮಟ್ಟದ ಹಗರಣ ನಡೆದಿರುವ ಶಂಕೆಯಿದೆ' ಎಂದು ಆರೋಪಿಸಿ ಕೆಲವು ಅಭ್ಯರ್ಥಿಗಳು 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ಸಿಟಿಐ ಹುದ್ದೆಗಳ ಆಯ್ಕೆಗೆ 2024ರ ಜನವರಿಯಲ್ಲಿ ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. ವಿವಿಧ ನಿಗಮಗಳಲ್ಲಿನ ವಿವಿಧ ವೃಂದಗಳ ಹುದ್ದೆಗಳಿಗೆ ಕೆಇಎ 2023ರ ಅಕ್ಟೋಬರ್‌ನಲ್ಲಿ ಪರೀಕ್ಷೆ ನಡೆಸಿತ್ತು. ಕೆಇಎ ಪರೀಕ್ಷೆಯಲ್ಲಿ 95 ಸಾವಿರಕ್ಕೂ ಕೆಳಗಿನ ಸ್ಥಾನ ಪಡೆದ ಅಭ್ಯರ್ಥಿಗಳು ಸಿಟಿಐ ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದು ಆಯ್ಕೆ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಈ ಚಮತ್ಕಾರ ಹೇಗೆ ಸಾಧ್ಯ' ಎಂದು ಪ್ರಶ್ನಿಸಿರುವ ಕೆಲವು ಅಭ್ಯರ್ಥಿಗಳು, 'ಸಿಟಿಐ ಆಯ್ಕೆ ಪಟ್ಟಿಯಲ್ಲಿರುವ ಎಲ್ಲ ಅಭ್ಯರ್ಥಿಗಳ ಒಎಂಆರ್ ಶೀಟ್‌ನ್ನು ತನಿಖೆಗೆ ಒಳಪಡಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ ಅವರಿಗೆ 'ಎಕ್ಸ್' ಮಾಡಿದ್ದಾರೆ.

'ಒಬ್ಬ ಅಭ್ಯರ್ಥಿ ಕೆಇಎ ಪರೀಕ್ಷೆಯಲ್ಲಿ 15 ಅಂಕವನ್ನಷ್ಟೇ ಗಳಿಸಿದ್ದರೆ, ಕೆಪಿಎಸ್‌ಸಿ ಪರೀಕ್ಷೆಯಲ್ಲಿ 150 ಅಂಕ ಪಡೆದಿದ್ದಾರೆ. ಮತ್ತೊಬ್ಬ ಅಭ್ಯರ್ಥಿಗೆ ಕೆಇಎ ಪರೀಕ್ಷೆಯಲ್ಲಿ 33 ಅಂಕ ಬಂದಿದ್ದರೆ, ಕೆಪಿಎಸ್‌ಸಿಯಲ್ಲಿ 160 ಅಂಕ ಸಿಕ್ಕಿದೆ. ಕೇವಲ ಎರಡು ತಿಂಗಳ ಅಂತರದಲ್ಲಿ ಕೆಇಎ ಮತ್ತು ಕೆಪಿಎಸ್‌ಸಿ ನಡೆಸಿದ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು ಅಚ್ಚರಿ ಮೂಡಿಸುತ್ತದೆ. ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ತಕ್ಷಣ ಅಭ್ಯರ್ಥಿಗಳ ಒಎಂಆರ್ ಶೀಟ್ ಮತ್ತು ಅವರು ಪರೀಕ್ಷೆ ಬರೆದ ಕೇಂದ್ರದ ವಿಡಿಯೊ ತುಣುಕು ಪರಿಶೀಲಿಸಬೇಕು' ಎಂದೂ ಒತ್ತಾಯಿಸಿ ಕೆಪಿಎಸ್‌ಸಿ ಕಾರ್ಯದರ್ಶಿಗೆ ಅಭ್ಯರ್ಥಿಗಳು 'ಎಕ್ಸ್' ಮಾಡಿದ್ದಾರೆ. ಕೆಪಿಎಸ್‌ಸಿ ಕಾರ್ಯದರ್ಶಿಯನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

'ಅನುಕ್ರಮ' ನೋಂದಣಿ ಸಂಖ್ಯೆಯ ಅಭ್ಯರ್ಥಿಗಳು ಅರ್ಹ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:15 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ಕೆಪಿಎಸ್‌ಸಿ ಪ್ರಕಟಿಸಿದೆ. ಆದರೆ, ಅನುಕ್ರಮ (ಸೀರೀಸ್) ನೋಂದಣಿ ಸಂಖ್ಯೆಯ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದಿರುವುದು ಕೂಡಾ ಅಭ್ಯರ್ಥಿಗಳಲ್ಲಿ ಅನುಮಾನ ಮೂಡಿಸಿದೆ. ಅಭ್ಯರ್ಥಿಗಳ ನೋಂದಣಿ ಸಂಖ್ಯೆಯ ಪಟ್ಟಿಯನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಅಭ್ಯರ್ಥಿಗಳು, 'ಅನುಕ್ರಮ ನೋಂದಣಿ ಸಂಖ್ಯೆ ಹೊಂದಿರುವ ಹಲವು ಅಭ್ಯರ್ಥಿಗಳ ಆಯ್ಕೆ ಹೇಗೆ ಸಾಧ್ಯ? ಈ ಅಭ್ಯರ್ಥಿಗಳು ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದಿರಬಹುದು' ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಮುಡಾ ನಿವೇಶನ ಹಂಚಿಕೆ ಅಕ್ರಮದ ತನಿಖಾ ವರದಿ

ಲೋಕಾಯುಕ್ತಕ್ಕೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ನಿವೇಶನ ಹಂಚಿಕೆ ಅಕ್ರಮದ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ತನಿಖಾ ವರದಿಯ ದಾಖಲೆಗಳನ್ನು ಕಚೇರಿಗೆ ಬಂದು ಪಡೆಯಿರಿ' ಎಂದು ಲೋಕಾಯುಕ್ತ ಪೊಲೀಸರಿಗೆ ಹೈಕೋರ್ಟ್ ಸೂಚಿಸಿದೆ.

'ಮುಡಾ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೋರಿ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯಲ್ಲಿ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು 'ಲೋಕಾಯುಕ್ತ ಪೊಲೀಸರು ನಡೆಸುತ್ತಿರುವ ತನಿಖಾ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು' ಎಂದು ಆದೇಶಿಸಿದ್ದರು. ಇದರನ್ವಯ ಲೋಕಾಯುಕ್ತ ಪೊಲೀಸರು ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಇತ್ತೀಚೆಗಷ್ಟೇ ಈ ಅರ್ಜಿಯನ್ನು ತಿರಸ್ಕರಿಸಿದ್ದರು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಪರ ವಕೀಲ ವೆಂಕಟೇಶ ಅರಬಟ್ಟಿ ಅವರು, ತನಿಖಾ ವರದಿಯನ್ನು ನ್ಯಾಯಾಲಯದಲ್ಲಿ ಖುದ್ದು ಹಾಜರಾಗಿರುವ ಲೋಕಾಯುಕ್ತ ಇನ್‌ಸ್ಪೆಕ್ಟರ್ ಅನಿಲ್ ಕಾಳೆ ಅವರಿಗೆ ನೀಡಬೇಕು' ಎಂದು ಮಂಗಳವಾರ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಅವರು, 'ಸಂಬಂಧಿಸಿದ ಅಧಿಕಾರಿ ಚೇಂಬರ್‌ಗೆ ಬಂದು ಪಡೆಯಲು ಹೇಳಿ' ಎಂದರು. ಈ ವೇಳೆ ಇನ್‌ಸ್ಪೆಕ್ಟರ್ ಅನಿಲ್ ಕಾಳೆ ಅವರನ್ನು ಗಮನಿಸಿ, 'ಇದೇನಿದು, ಟೋಪಿ ಹಾಕಿಕೊಂಡು ಬಂದಿದ್ದೀರಲ್ಲಾ, ಇದನ್ನೇನು ಸಿನಿಮಾ ಥಿಯೇಟರ್ ಎಂದುಕೊಂಡಿರಾ? ಕೋರ್ಟ್‌ಗೆ ಯಾವ ದಿರಿಸಿನಲ್ಲಿ ಬರಬೇಕು ಎಂಬುದು ನಿಮಗೆ ಅರಿವಿಲ್ಲವೇ' ಎಂದರು.

ಕಡಲಿನಲ್ಲಿ ಜಲಾಂತರ್ಗಾಮಿಯಂತೆ ನಟಿಸುವ 'ಮಾರೀಚ'

• ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರು: ಕಡಲಾಳದಲ್ಲಿ ದಾಳಿ ನಡೆಸುವ ಶತ್ರುಗಳ ಜಲಾಂತರ್ಗಾಮಿ ಮೇಲೆ ದಾಳಿ ನಡೆಸಲು ಬಳಸುವ ಕ್ಷಿಪಣಿ ಪ್ರಯೋಗದಲ್ಲಿ, ಅದೇ ಮಾದರಿಯ ಶಬ್ದ ಹೊರಹೊಮ್ಮಿಸುವ ಕಡಿಮೆ ಖರ್ಚಿನ ಸಾಧನವನ್ನು ಡಿಆರ್‌ಡಿಒ ಹಾಗೂ ನೌಕಾಪಡೆಯ ಭೌತಿಕ ಮತ್ತು ಸಾಗರ ಅಧ್ಯಯನ ಪ್ರಯೋಗಾಲಯ ಅಭಿವೃದ್ಧಿಪಡಿಸಿವೆ.

ಕೇರಳದ ಕೊಚ್ಚಿಯಲ್ಲಿರುವ ಈ ಕೇಂದ್ರವು ಇಎಸ್‌ಪಿಟಿಎಸ್ ಸಾಧನ ಅಭಿವೃದ್ಧಿಪಡಿಸಿದ್ದು, ಈ ಸಾಧನವು ಇಲ್ಲಿ ನಡೆಯುತ್ತಿರುವ ಏರೊ ಇಂಡಿಯಾದಲ್ಲಿ ಪ್ರದರ್ಶನಕ್ಕಿದೆ. ಇದರಿಂದ ನೌಕಾ ಪಡೆ ಹೆಚ್ಚಿನ ಹಣ ಉಳಿತಾಯ ಮಾಡಲು ಅವಕಾಶ ಸಿಗಲಿದೆ ಎಂದು ಪ್ರಯೋಗಾಲಯದ ವಿಜ್ಞಾನಿಗಳು ತಿಳಿಸಿದರು.

'ರಾಮಾಯಣದಲ್ಲಿ ಹೊಂಬಣ್ಣದ ಮಾಯಾ ಜಿಂಕೆಯನ್ನು ಕಂಡ ಸೀತೆ ಅದು ಬೇಕೆನ್ನುತ್ತಾಳೆ. ರಾವಣ ಕಳುಹಿಸಿದ ಮಾರೀಚ ಇಂಥ ವೇಷ ಧರಿಸಿರುತ್ತಾನೆ. ನಂತರ ರಾಮನ ಬಾಣಕ್ಕೆ ಹತನಾಗುತ್ತಾನೆ. ಇದನ್ನೇ ಆಧರಿಸಿರುವ ಸಾಧನ ಇಎಸ್‌ಪಿಟಿಎಸ್' ಎಂದು ವಿಜ್ಞಾನಿ ರಾಜೀವ್ ವಿವರಿಸಿದರು.

'ಕಡಲಾಳದಲ್ಲಿ ಸಾಗುವ ಜಲಾಂತರ್ಗಾಮಿಗಳನ್ನು ನಾಶಪಡಿಸಲು ನೀರಿನಲ್ಲೇ ಸಾಗುವ ಕ್ಷಿಪಣಿಗಳನ್ನು ಬಳಸಲಾಗುತ್ತದೆ. ಆದರೆ, ಇದರ ಪ್ರಯೋಗಕ್ಕೆ ಕೋಟ್ಯಂತರ ರೂಪಾಯಿ ಮೌಲ್ಯದ ಜಲಾಂತರ್ಗಾಮಿಯನ್ನು ನಷ್ಟ ಮಾಡಿಕೊಳ್ಳುವ ಬದಲು, ಅದೇ ಶಬ್ದ ಹೊರಹೊಮ್ಮಿಸುವ ಪುಟ್ಟ ಸಾಧನವನ್ನು ಬಳಕೆ ಮಾಡಿಕೊಳ್ಳಲಾಗಿದೆ. ಇಎಸ್‌ಪಿಟಿಎಸ್ ಸಾಧನವು ಇಲ್ಲಿ ಸೋನಾರ್ ಶಬ್ದ ಹೊರಹೊಮ್ಮಿಸುತ್ತ ಜಲಾಂತರ್ಗಾಮಿಯಂತೆ ನಟಿಸುತ್ತದೆ. ಈ ಶಬ್ದವನ್ನು ಬೆನ್ನತ್ತುವ ಕ್ಷಿಪಣಿ ಗುರಿಯನ್ನು ತಲುಪಿ ತನ್ನ ಕೆಲಸ ಮುಗಿಸುತ್ತದೆ' ಎಂದು ವಿವರಿಸಿದರು.

'ಇಎಸ್‌ಪಿಟಿಎಸ್ ಸಾಧನವನ್ನು ಈ ವರ್ಷ ಅಭಿವೃದ್ಧಿಪಡಿಸಲಾಗಿದ್ದು, ಶೀಘ್ರದಲ್ಲಿ ಇದು ನೌಕಾ ಪಡೆಯನ್ನು ಸೇರಲಿದೆ. ಇದು ವೆಚ್ಚ ಕಡಿಮೆ ಮಾಡುವ ಡಿಆರ್‌ಡಿಒ ಪ್ರಯತ್ನವಾಗಿದೆ' ಎಂದರು.

'ಇದರೊಂದಿಗೆ ಯುದ್ಧ ನೌಕೆಗಳ ಸೌರ, ಪೆರಿಸ್ಕೋಪ್, ರೇಡಾರ್ ಹೀಗೆ ಹಲವು ವ್ಯವಸ್ಥೆಗಳನ್ನು ನಿರ್ವಹಿಸುವ ನೆಟ್‌ವರ್ಕ್ ವ್ಯವಸ್ಥೆ 'ಇಂಟಿಗ್ರೇಟೆಡ್ ಕಾಂಬ್ಯಾಟ್ ಸಿಸ್ಟಮ್' ಅಭಿವೃದ್ಧಿಪಡಿಸಲಾಗಿದೆ. ಈ ಹಿಂದೆ ಪ್ರತಿಯೊಂದಕ್ಕೂ ಒಂದೊಂದು ನಿರ್ವಹಣಾ ಸಾಧನಗಳಿದ್ದವು. ಈಗ ಎಲ್ಲವನ್ನೂ ಒಂದು ವ್ಯವಸ್ಥೆಯೊಳಗೆ ತರಲಾಗಿದೆ. ಇದರಿಂದ ನಿರ್ವಹಣೆಯೂ ಸುಲಭವಾಗಲಿದೆ. ಜತೆಗೆ ಖರ್ಚು ಕೂಡಾ ಕಡಿಮೆ' ಎಂದು ರಾಜೀವ್ ವಿವರಿಸಿದರು.

'ಇಂಟಿಗ್ರೇಟೆಡ್ ಕಾಂಬ್ಯಾಟ್ ಸಿಸ್ಟಮ್ ಸ್ವದೇಶಿ ನಿರ್ಮಿತ ನೌಕೆಗಳಲ್ಲಿ ಮಾತ್ರವಲ್ಲ, ಆಮದು ಮಾಡಿಕೊಂಡ ನೌಕೆಗಳಲ್ಲೂ ಕರಾರುವಾಕ್ಕಾಗಿ ಕೆಲಸ ಮಾಡಲಿದೆ' ಎಂದು ತಿಳಿಸಿದರು.



ಡಿಆರ್‌ಡಿಒ ಹಾಗೂ ನೌಕಾಪಡೆಯ ಭೌತಿಕ ಮತ್ತು ಸಾಗರ ಅಧ್ಯಯನ ಪ್ರಯೋಗಾಲಯ ಅಭಿವೃದ್ಧಿಪಡಿಸಿರುವ ಜಲಾಂತರ್ಗಾಮಿ ಮಾದರಿಯ ಶಬ್ದ ಹೊರಹೊಮ್ಮಿಸುವ ಸಾಧನ ಇಎಸ್‌ಪಿಟಿಎಸ್

ಗುರಿ ಧ್ವಂಸ ಮಾಡಬಲ್ಲ ಅಗೋಚರ ಯುಎವಿ

• ಖಲೀಲ ಅಹ್ಮದ ಶೇಖ

ಬೆಂಗಳೂರು: ಶತ್ರು ಪಾಳಯದ ರೇಡಾರ್ ಸಂಪರ್ಕಕ್ಕೂ ಸಿಗದಂತೆ ಮುನ್ನುಗ್ಗಿ, ನಿಗದಿತ ಗುರಿಯನ್ನು ಧ್ವಂಸಗೊಳಿಸಬಲ್ಲ ಸಾಮರ್ಥ್ಯವುಳ್ಳ ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುವ ಅತಿ ವೇಗದ ಮಾನವರಹಿತ ವೈಮಾನಿಕ ವಾಹನವನ್ನು (ಯುಎವಿ) ಬೆಂಗಳೂರಿನ ವೈಮಾನಿಕ ಅಭಿವೃದ್ಧಿ ಸಂಸ್ಥೆ (ಎಡಿಇ) ರೂಪಿಸಿದೆ. ಇದು ಭಾರತೀಯ ವಾಯು ಪಡೆಯ ಬಲ ಹೆಚ್ಚಿಸಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಅಂಗ ಸಂಸ್ಥೆಯಾದ ಎಡಿಇ ಈ ಯುಎವಿಯನ್ನು ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ 'ಏರೊ ಇಂಡಿಯಾ–2025' ವೈಮಾನಿಕ ಪ್ರದರ್ಶನದಲ್ಲಿ ಪ್ರದರ್ಶಿಸಿದೆ. ಇದು ನೋಡುಗರ ಗಮನ ಸೆಳೆಯುತ್ತಿದೆ.

'ಬಾಲರಹಿತ (ಟೇಲ್‌ಲೆಸ್ ಕಾನ್ಫಿಗರೇಷನ್) ಸಂರಚನೆ ಹೊಂದಿದ ಯುಎವಿ, ರಹಸ್ಯವಾಗಿ ಕಾರ್ಯನಿರ್ವಹಿಸುವ ತಂತ್ರಜ್ಞಾನ ಹೊಂದಿದೆ. ಇದು ಭಾರತ ಸೇರಿದಂತೆ ಕೆಲವೇ ರಾಷ್ಟ್ರಗಳಲ್ಲಿದೆ. ರಕ್ಷಣಾ ತಂತ್ರಜ್ಞಾನದಲ್ಲಿ ಸ್ವಾವಲಂಬನೆಯತ್ತ ಹೆಜ್ಜೆ ಇಟ್ಟಿರುವ ದೇಶವು ವೈಮಾನಿಕ ಕ್ಷೇತ್ರದ ತಂತ್ರಜ್ಞಾನದಲ್ಲಿ ಪರಿಪಕ್ವತೆ ಸಾಧಿಸುತ್ತಿರುವುದಕ್ಕೆ ಇದು ಸಾಕ್ಷಿ' ಎಂದು ಎಡಿಇ ನಿರ್ದೇಶಕ ದಿಲೀಪ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಯುಎವಿಯನ್ನು ಎಡಿಇ ಸಂಸ್ಥೆ ವಿನ್ಯಾಸ ಮಾಡಿದ್ದು, ಪ್ರಯೋಗಾರ್ಥ ಹಾರಾಟದಲ್ಲಿ ಯಶಸ್ಸು ಕಂಡಿದೆ. ದೇಶೀಯವಾಗಿ ಸಿದ್ಧಪಡಿಸಿದ ಎರಡು ಮೂಲ ಮಾದರಿಗಳನ್ನು ಬಳಸಿಕೊಂಡು ಸಂರಚನೆಯಲ್ಲಿ ಸುಧಾರಣೆ ಮಾಡಲಾಗಿದೆ. ಹಾರಾಟವನ್ನು ನಿಯಂತ್ರಿಸುವ ಏವಿಯಾನಿಕ್ಸ್ ವ್ಯವಸ್ಥೆ, ಹಾರಾಟದ ಕಾರ್ಯಾಚರಣೆಯು ಉತ್ತಮಗೊಂಡಿದೆ. ಈ ಹಿಂದಿನ ಡ್ರೋನ್‌ಗಳು ಲಂಬಾಕಾರದ ರೆಕ್ಕೆಗಳನ್ನು ಹೊಂದಿರುತ್ತಿದ್ದವು. ಇದು ಬಾಲ ರಹಿತ ವ್ಯವಸ್ಥೆ ಹೊಂದಿದ್ದು, ಮಾತ್ರ ರೇಡಾರ್ ಹೊರತುಪಡಿಸಿ ಉಳಿದವುಗಳ ಸಂಪರ್ಕಕ್ಕೆ ಸಿಗದೇ ರಹಸ್ಯವಾಗಿ ಕಾರ್ಯಾಚರಣೆ ನಡೆಸಲಿದೆ' ಎಂದು ವಿವರಿಸಿದರು.

'ಇದು ನಾವಿಗೇಶನ್ ಸೌಕರ್ಯ ಹೊಂದಿದ್ದು, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಭೂಸ್ಪರ್ಶ ಮಾಡಲಿದೆ. ವೈಮಾನಿಕ ಮತ್ತು ಸಮುದ್ರ ಆಧಾರಿತ ಯುದ್ಧಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ಯುಎವಿ ಭವಿಷ್ಯದಲ್ಲಿ ಶತ್ರುಗಳ ರೇಡಾರ್ ಭೇದಿಸಿ, ಅವರ ನೆಲೆಗಳನ್ನು ಧ್ವಂಸಗೊಳಿಸಲು, ರಹಸ್ಯ ಕಾರ್ಯಾಚರಣೆ ನಡೆಸಲು ಉಪಯುಕ್ತ ಆಗಿದೆ' ಎಂದು ಹೇಳಿದರು.



ಬೆಂಗಳೂರಿನ ಯಲಹಂಕ ವಾಯು ನೆಲೆಯಲ್ಲಿ ನಡೆಯುತ್ತಿರುವ ಏರೊ ಇಂಡಿಯಾ–2025 ವೈಮಾನಿಕ ಪ್ರದರ್ಶನದಲ್ಲಿ ಮಾನವರಹಿತ ವೈಮಾನಿಕ ವಾಹನವನ್ನು ಪ್ರದರ್ಶನಕ್ಕೆ ಇಡಲಾಗಿದೆ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಸಮುದ್ರದಲ್ಲಿನ ಬಾಂಬ್ ಪತ್ತೆ ಹಚ್ಚುವ ಡ್ರೋನ್

ಸಮುದ್ರದ ಆಳದಲ್ಲಿ ಶತ್ರುಗಳು ಇರಿಸಿರುವ ಬಾಂಬ್ ಮತ್ತು ಲೋಹಗಳನ್ನು ಪತ್ತೆ ಹಚ್ಚುವ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ಸ್ವಯಂಚಾಲಿತವಾಗಿ ನೀರಿನಾಳದಲ್ಲಿ ಸಂಚರಿಸುವ ಡ್ರೋನ್ ಅನ್ನು ಸಿಐ4 ಎಂಬ ಕಂಪನಿ ಅಭಿವೃದ್ಧಿಪಡಿಸಿದೆ.

ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ 'ಏರೊ ಇಂಡಿಯಾ–2025' ವೈಮಾನಿಕ ಪ್ರದರ್ಶನದಲ್ಲಿ ಕಂಪನಿಯು ಈ ಡ್ರೋನ್ ಪ್ರದರ್ಶಿಸಿದೆ. ಇದು ಎಲ್ಲರ ಗಮನ ಸೆಳೆಯುತ್ತಿದೆ.

'ಈ ಡ್ರೋನ್ ಸದ್ಯ ಭಾರತೀಯ ನೌಕಾ ಪಡೆಯಲ್ಲಿ ಬಳಕೆಯಾಗುತ್ತಿದೆ. ಇದರಲ್ಲಿ ಎಐ ಆಧಾರಿತ ಎರಡು ಕ್ಯಾಮೆರಾ, ಐಆರ್‌ಕೆ ವಿದ್ಯುತ್ ದೀಪದ ವ್ಯವಸ್ಥೆಯನ್ನು ಒಳಗೊಂಡಿದೆ. ನೀರಿನಾಳದಲ್ಲಿರುವ ಪ್ರತಿಯೊಂದು ವಸ್ತುವಿನ ಸ್ಪಷ್ಟ ಚಿತ್ರಗಳನ್ನು ತೆಗೆದು ಶೇಖರಣೆ ಮಾಡಿಕೊಳ್ಳುತ್ತದೆ. ಎಕೊ ಧ್ವನಿ ವ್ಯವಸ್ಥೆ, ನೀರಿನಲ್ಲಿರುವ ಲೋಹಗಳು, ಬಾಂಬ್‌ಗಳನ್ನು ಪತ್ತೆ ಹಚ್ಚುವ ವ್ಯವಸ್ಥೆಯನ್ನು ಒಳಗೊಂಡಿದೆ' ಎಂದು ಕಂಪನಿಯ ಡೆನ್ಸಿಲ್ ಜಾರ್ಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ನೌಕಾ ಪಡೆಯ ಹಡಗುಗಳ ತಳಭಾಗಕ್ಕೆ ಆಗಿರುವ ಹಾನಿಯನ್ನು ನೋಡಲು ಮರೀನ್ ಕಮಾಂಡೋಸ್ ಸಮುದ್ರದ ಆಳಕ್ಕೆ ಈಜಿಕೊಂಡು ಹೋಗಬೇಕಾಗಿತ್ತು. ಆದರೆ ನಮ್ಮ ಡ್ರೋನ್ ಹಡಗಿಗೆ ಆಗಿರುವ ಹಾನಿಯನ್ನು ಪತ್ತೆ ಹೆಚ್ಚಿ ಮಾಹಿತಿಯನ್ನು ರವಾನಿಸಲಿದೆ. ಈ ಡ್ರೋನ್ ಅನ್ನು ಒಮ್ಮೆ ಚಾರ್ಜ್ ಮಾಡಿ ನೀರಿಗೆ ಇಳಿಸಿದರೆ ಕನಿಷ್ಠ ನಾಲ್ಕು ಗಂಟೆಗಳವರೆಗೂ ಕಾರ್ಯಾಚರಣೆ ನಡೆಸಲಿದೆ. ಸಮುದ್ರದಲ್ಲಿ ಕಾಣೆಯಾದವರನ್ನು ಹುಡುಕಾಟ ಮಾಡುತ್ತದೆ. ಈ ಡ್ರೋನ್ ಬೆಲೆ ₹1.5 ಕೋಟಿಯಿಂದ ₹4.5 ಕೋಟಿವರೆಗೂ ಇದೆ' ಎಂದು ವಿವರಿಸಿದರು.

ಹೈಕೋರ್ಟ್‌ಗೆ ನ್ಯಾ.ಕುನ್ಹಾ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್-19ರ ಎರಡನೇ ಅಲೆಯ ಸಂದರ್ಭದಲ್ಲಿ, 'ಪ್ರುಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್' ಮತ್ತು 'ಎಲ್‌ಎಜೆ ಎಕ್ಸ್‌ಪೋರ್ಟ್ಸ್' ಲಿಮಿಟೆಡ್ ಕಂಪನಿಗಳು ಪಿಪಿಇ ಕಿಟ್‌ಗಳನ್ನು ದುಬಾರಿ ಬೆಲೆಗೆ ಪೂರೈಕೆ ಮಾಡಿವೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರ ಏಕಸದಸ್ಯ ಆಯೋಗದ ವರದಿಯನ್ನು ರಾಜ್ಯ ಸರ್ಕಾರ ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಿದೆ.

'ಪಿಪಿಇ ಕಿಟ್ ಪೂರೈಸಿರುವ ಈ ಎರಡೂ ಖಾಸಗಿ ಕಂಪನಿಗಳ ಪರ ಏಕಸದಸ್ಯ ನ್ಯಾಯಪೀಠ ನೀಡಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ರೂಬೆನ್ ಜಾಕೊಬ್, 'ಕೋವಿಡ್ ಮೊದಲ ಅಲೆ ಸಂದರ್ಭದಲ್ಲಿ ಪಿಪಿಇ ಕಿಟ್‌ಗಳನ್ನು ಪೂರೈಸಲು 'ಪ್ರುಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್' ಮತ್ತು 'ಎಲ್‌ಎಜೆ ಎಕ್ಸ್‌ಪೋರ್ಟ್ಸ್' ಕಂಪನಿಗಳು ಟೆಂಡರ್ ಪಡೆದುಕೊಂಡಿದ್ದವು. ಆದರೆ, ಎರಡನೇ ಅಲೆ ಸಂದರ್ಭದಲ್ಲಿ ಹೊಸದಾಗಿ ಟೆಂಡರ್‌ನಲ್ಲಿ ಪಾಲ್ಗೊಳ್ಳದೇ ಅಧಿಕಾರಿಗಳ ಜೊತೆ ಶಾಮೀಲಾಗಿ ಆರೋಗ್ಯ ಇಲಾಖೆಗೆ ಪಿಪಿಇ ಕಿಟ್‌ಗಳನ್ನು ಪೂರೈಸಿವೆ' ಎಂದು ದೂರಿದರು.

'ಪ್ರತಿ ಪಿಪಿಇ ಕಿಟ್‌ಗೆ ₹400 ಮೂಲ ಬೆಲೆ ಇದ್ದರೆ ಅದನ್ನು ₹1,312ಗೆ ಪೂರೈಸಲಾಗಿದೆ. ಈ ಸಂಬಂಧ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತನಿಖೆ ನಡೆಸಿ ಅಕ್ರಮ ಪತ್ತೆ ಮಾಡಿದ್ದಾರೆ. ಸಂಬಂಧಿಸಿದ ಇಲಾಖಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಹಗರಣದ ತನಿಖೆಗೆ ರಚಿಸಲಾದ ನ್ಯಾಯಮೂರ್ತಿ ಕುನ್ಹಾ ಅವರ ನೇತೃತ್ವದ ಆಯೋಗವು ವರದಿ ನೀಡಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕೋವಿಡ್ ಹಗರಣದ ಹೆಚ್ಚುವರಿ ದಾಖಲೆ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಸಲ್ಲಿಸಿರುವ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಲಾಗಿದೆ. ಮೇಲ್ಮನವಿ ತಿದ್ದುಪಡಿಗೆ ಅವಕಾಶ ನೀಡಲಾಗಿದೆ' ಎಂದು ತಿಳಿಸಿ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿತು.

ಮೇಲ್ಮನವಿ: 'ಕೋವಿಡ್ ಸಂದರ್ಭದಲ್ಲಿ ಪಿಪಿಇ ಕಿಟ್‌ಗಳನ್ನು ಪೂರೈಸಿದ ಬಿಲ್ ಮೊತ್ತ ಪಾವತಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಖಾಸಗಿ ಕಂಪನಿಗಳು ಹೈಕೋರ್ಟ್ ಮೆಟ್ಟಿಲೇರಿದ್ದವು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಬಾಕಿ ₹38.26 ಕೋಟಿ ಮೊತ್ತವನ್ನು ಆರು ವಾರಗಳಲ್ಲಿ ಪಾವತಿಸಿ' ಎಂದು 2024ರ ಏಪ್ರಿಲ್ 10ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿದೆ.

'ಕಟ್ಟೆಮಾಡು ದೇಗುಲ: ಯಾವುದೇ ಜನಾಂಗದ ಸಂಪ್ರದಾಯಕ್ಕೆ ಅವಕಾಶವಿಲ್ಲ'

ಮಡಿಕೇರಿ: ತಾಲ್ಲೂಕಿನ ಕಟ್ಟೆಮಾಡು ಮಹಾಮೃತ್ಯುಂಜಯ ದೇಗುಲ ಸಮಿತಿಯು ತನ್ನ ಬೈಲಾದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದೆ.

ಈ ಕುರಿತು ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಮಿತಿ ಅಧ್ಯಕ್ಷ ಶಶಿ ಜನಾರ್ದನ, 'ಯಾವುದೇ ಜನಾಂಗದ ಸಂಪ್ರದಾಯ ಪದ್ಧತಿಗೆ ದೇಗುಲದಲ್ಲಿ ಅವಕಾಶವಿಲ್ಲವೆಂಬುದು ಸೇರಿ ಸಮಿತಿಯ ಬೈಲಾಕ್ಕೆ ತಿದ್ದುಪಡಿ ತರುವುದಿಲ್ಲ ಎಂದು ಗ್ರಾಮಸ್ಥರು ಹಾಗೂ ಸಮಿತಿ ತೀರ್ಮಾನಿಸಿದೆ. ಜಿಲ್ಲಾಧಿಕಾರಿಯ ತೀರ್ಮಾನವನ್ನು ನಿರೀಕ್ಷಿಸುತ್ತಿದ್ದೇವೆ' ಎಂದರು.

ಈ ಮಧ್ಯೆ ಸುದ್ದಿಗೋಷ್ಠಿ ನಡೆಸಿದ ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ, 'ಕೊಡವರ ಸಂಸ್ಕೃತಿ, ಆಚಾರ ವಿಚಾರದ ಕುರಿತ ಬೇಡಿಕೆಗಳಿಗೆ ನಮ್ಮ ಆಕ್ಷೇಪವಿಲ್ಲ. ಆದರೆ ಅರೆಭಾಷೆ ಗೌಡರನ್ನು ಗುರಿ ಮಾಡಿರುವುದು ಸರಿಯಲ್ಲ. ದೇಗುಲದ ವಿಚಾರದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ಆದರೆ, ಗೌಡ ಸಮುದಾಯದವರಿಗೆ ನೋವಾದರೆ, ಅವರ ಪರ ನಿಲ್ಲುತ್ತೇವೆ' ಎಂದು ಹೇಳಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕೊಟ್ಟು ಕೊರಗಬೇಡಿ, ಹಿಟ್ಟಿಕ್ಕಿ ಹಂಗಿಸಬೇಡಿ, ಎಷ್ಟು ಉಂಡರೆಂದು ಹೀಯಾಳಿಸಬೇಡಿ.

-ಶಿವಕುಮಾರ ಸ್ವಾಮೀಜಿ

‘ನಮ್ಮ ಮೆಟ್ರೊ’ ದೇಶದಲ್ಲೇ ದುಬಾರಿ ಸುಲಿಗೆಯನ್ನು ತಕ್ಷಣ ನಿಲ್ಲಿಸಿ

ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ‘ನಮ್ಮ ಮೆಟ್ರೊ’ ಪ್ರಯಾಣ ದರವನ್ನು ಏಕಾಏಕಿ ಭಾರಿ ಪ್ರಮಾಣದಲ್ಲಿ ಹೆಚ್ಚಿಸುವ ಮೂಲಕ ಅಕ್ಷರಶಃ ಪ್ರಯಾಣಿಕರ ಸುಲಿಗೆಗೆ ಇಳಿದಿದೆ. ಪ್ರಯಾಣ ದರವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು ನಿಗಮದ ಬಳಿ ಏನೇ ಸಬೂಬುಗಳಿದ್ದರೂ ಈ ನಿರ್ಧಾರವು ಯಾರೂ ಒಪ್ಪುವಂಥದ್ದಲ್ಲ. ದರ ಹೆಚ್ಚಳದ ಬಳಿಕ ದೇಶದಲ್ಲೇ ಬೆಂಗಳೂರು ಮೆಟ್ರೊ ಪ್ರಯಾಣವು ಅತ್ಯಂತ ದುಬಾರಿ ಎನಿಸಿದೆ. ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆಗೊಳಿಸಿ, ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸುವ ಮೂಲಕ ರಸ್ತೆಗಳ ಮೇಲಿನ ಒತ್ತಡವನ್ನು ಹಗುರಗೊಳಿಸಿ, ಸಂಚಾರದಟ್ಟಣೆಗೂ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಮೆಟ್ರೊ ಸಾರಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಆದರೆ, ಬಿಎಂಆರ್‌ಸಿಎಲ್ ಈಗ ಪ್ರಯಾಣ ದರ ಏರಿಕೆ ಮಾಡಿದ ಪರಿ ಹೇಗಿದೆಯೆಂದರೆ, ಜನ ಮೆಟ್ರೊ ಪ್ರಯಾಣವನ್ನೇ ತ್ಯಜಿಸಿ, ಖಾಸಗಿ ವಾಹನ ಬಳಸುವುದನ್ನು ಉತ್ತೇಜಿಸಲು ಹೊರಟಂತಿದೆ. ಗರಿಷ್ಠ ಶೇ 45 ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಹೇಳುತ್ತಿದೆಯಾದರೂ ಕೆಲವು ನಿಲ್ದಾಣಗಳ ಪ್ರಯಾಣ ದರದಲ್ಲಿ ಶೇ 100ರಷ್ಟು ಹೆಚ್ಚಳವಾಗಿದೆ ಎಂದು ಪ್ರಯಾಣಿಕರು ದೂರಿದ್ದಾರೆ. ಮೆಟ್ರೊ ಸಾರಿಗೆ ಇರುವುದು ಬರೀ ಉಳ್ಳವರ ಬಳಕೆಗಾಗಿ ಎಂಬ ಭ್ರಮೆಯಲ್ಲಿ ನಿಗಮದ ಆಡಳಿತ ಮಂಡಳಿ ಇದ್ದಂತಿದೆ. ವಾಸಸ್ಥಳದಿಂದ ಕೆಲಸದ ಸ್ಥಳಕ್ಕೆ ಸಕಾಲದಲ್ಲಿ ತಲುಪಲು ಬಡವರು, ದಿನಗೂಲಿ ಕಾರ್ಮಿಕರು ಕೂಡ ಮೆಟ್ರೊ ಸಾರಿಗೆಯನ್ನು ಅವಲಂಬಿಸಿದ್ದಾರೆ. ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಮೆಟ್ರೊ ಬಳಸುತ್ತಿದ್ದಾರೆ. ಪ್ರಯಾಣ ದರದಲ್ಲಿ ಏಕಾಏಕಿ ಭಾರಿ ಏರಿಕೆ ಆಗಿದ್ದರಿಂದ ಅಷ್ಟೊಂದು ಹಣವನ್ನು ಹೊಂದಿಸಲು ಸಾಧ್ಯವಾಗದೆ ಅವರೆಲ್ಲ ಮೆಟ್ರೊ ಪ್ರಯಾಣವನ್ನೇ ತೊರೆಯುವಂತಾಗಿದೆ. ‘ಪ್ರಯಾಣ ದರ ಹೆಚ್ಚಳದ ಬಳಿಕವೂ ಮೆಟ್ರೊ ಸಾರಿಗೆಯು ಆಟೊ ಪ್ರಯಾಣಕ್ಕೆ ಹೋಲಿಸಿದರೆ ಅಗ್ಗ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು ಹೇಳಿರುವುದು ಕೂಡ ವರದಿಯಾಗಿದೆ. ಈ ಹೋಲಿಕೆಯೇ ಹಾಸ್ಯಾಸ್ಪದ ಮತ್ತು ಸಮೂಹಸಾರಿಗೆ ವ್ಯವಸ್ಥೆಯ ಕುರಿತು ಆಡಳಿತ ವರ್ಗ ಅಸೂಕ್ಷ್ಮವಾಗಿ ಯೋಚಿಸುತ್ತಿರುವುದರ ಪ್ರತೀಕ. ಒಂದುವೇಳೆ ಬಿಎಂಆರ್‌ಸಿಎಲ್ ಪೈಪೋಟಿ ನೀಡುವುದೇ ಇದ್ದರೆ ಜಗತ್ತಿನಲ್ಲೇ ಅತ್ಯಂತ ಅಗ್ಗದ ಸಮೂಹ ಸಾರಿಗೆಯನ್ನಾಗಿ ಬೆಂಗಳೂರು ಮೆಟ್ರೊ ಸೇವೆಯನ್ನು ರೂಪಿಸುವುದರತ್ತ ಆ ಪೈಪೋಟಿ ಇರಬೇಕು.



ಪ್ರಯಾಣಿಕರ ಮೇಲೆ ಹೊರಿಸಿದ ಭಾರಿ ಹೊರೆಯನ್ನು ಹಿಂಪಡೆಯುವ ಕೆಲಸವನ್ನು ನಿಗಮವು ಆದಷ್ಟು ಬೇಗ ಮಾಡಬೇಕು

ಸಾಲದ ತೀರುವಳಿ, ಸವಕಳಿಯ ಹೊರೆ ಮತ್ತು ಹೆಚ್ಚಿದ ದೈನಂದಿನ ಕಾರ್ಯಾಚರಣೆ ವೆಚ್ಚವನ್ನು ಸರಿದೂಗಿಸಲು ಈ ಹೆಚ್ಚಳವು ಅನಿವಾರ್ಯವಾಗಿದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ. ಮುಂದಿನ ಐದು ವರ್ಷಗಳಲ್ಲಿ ಸಾಲ ತೀರಿಸಲು ₹10,422 ಕೋಟಿ ಬೇಕು ಮತ್ತು ₹7,316 ಕೋಟಿಯಷ್ಟು ಹಣ ಸವಕಳಿಗೆ ಬಂದ ಸಾಧನ–ಸಲಕರಣೆಗಳ ಬದಲಾವಣೆಗೆ ಬೇಕು ಎನ್ನುವುದು ನಿಗಮವು ನೀಡುವ ಲೆಕ್ಕಾಚಾರ. ಮೆಟ್ರೊ ರೈಲು ಮಾರ್ಗಗಳ ನಿರ್ಮಾಣ ಯೋಜನೆಯು ಕಾಲಮಿತಿಯಲ್ಲಿ ಮುಗಿದಿದ್ದರೆ ಇಷ್ಟೊಂದು ಸಾಲದ ಹೊರೆ ಉಳಿಯುತ್ತಿರಲಿಲ್ಲ. ಹಳದಿ ಮಾರ್ಗ ಸಿದ್ಧವಾದರೂ ಬೋಗಿಗಳಿಲ್ಲದೆ ಅಲ್ಲಿ ಮೆಟ್ರೊ ಸಂಚಾರ ಶುರುಮಾಡಲು ಸಾಧ್ಯವಾಗಿಲ್ಲ. ನಿಗಮದ ಕಾರ್ಯವೈಖರಿಗೆ ಇದು ಕನ್ನಡಿ ಹಿಡಿಯುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಕಾರ್ಯಕ್ಷಮತೆ ತೋರದೆ ಸಾಲದ ಹೊರೆಯನ್ನು ಹೆಚ್ಚಾಗಿಸಿಕೊಂಡು, ಅದನ್ನು ಪ್ರಯಾಣಿಕರ ಮೇಲೆ ವರ್ಗಾಯಿಸಲು ಹೊರಟಿರುವುದು ಯಾವ ಸೀಮೆಯ ನ್ಯಾಯ? ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಕಾರಣ ಎಂದು ಬಿಜೆಪಿ ನಾಯಕರು ದೂರಿದರೆ, ಕೇಂದ್ರ ಸರ್ಕಾರ ಕಾರಣ ಎಂದು ಕಾಂಗ್ರೆಸ್ ನಾಯಕರು ದೂರುತ್ತಿದ್ದಾರೆ. ಜನಸಾಮಾನ್ಯರನ್ನು ಮೂರ್ಖರನ್ನಾಗಿ ಮಾಡುವ ಸಲುವಾಗಿಯೇ ಈ ನಾಟಕ? ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಜಂಟಿ ಒಡೆತನ ಹೊಂದಿರುವ ಸಂಸ್ಥೆ ಬಿಎಂಆರ್‌ಸಿಎಲ್. ಕೇಂದ್ರ ಸರ್ಕಾರ ರಚಿಸಿದ ದರ ನಿಗದಿ ಸಮಿತಿಯ ಶಿಫಾರಸಿನ ಮೇರೆಗೆ ಈ ಏರಿಕೆ ಆಗಿದೆ. ಜನರ ಬಗ್ಗೆ ಕಳಕಳಿ ಇದ್ದರೆ ಎರಡೂ ಸರ್ಕಾರಗಳು ಒಟ್ಟಾಗಿ ಬೆಲೆ ಏರಿಕೆಯನ್ನು ತಡೆಹಿಡಿಯಬಹುದಿತ್ತು. ನಿಗಮದ ಪ್ರಸ್ತಾವಕ್ಕೆ ಸದ್ದಿಲ್ಲದೆ ಒಳಗೊಳಗೆ ಒಪ್ಪಿಗೆ ನೀಡಿ, ಈಗ ಬೀದಿಯಲ್ಲಿ ನಿಂತು ಮೊಸಳೆ ಕಣ್ಣೀರು ಸುರಿಸುತ್ತಿರುವವರಿಗೆ ಬಡವರ ಕಷ್ಟ ಅರ್ಥವಾಗುವುದಿಲ್ಲ. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇಂತಹ ನಾಟಕಗಳು ನಡೆಯುತ್ತವೆ ಅಷ್ಟೆ. ದರ ಏರಿಕೆಯ ಜಾರಿಯಲ್ಲಿ ವೈಪರೀತ್ಯಗಳು ಏನಾದರೂ ಆಗಿದ್ದರೆ ಅವಲೋಕಿಸುವುದಾಗಿ ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರು ಹೇಳಿದ್ದಾರೆ. ಪ್ರಯಾಣಿಕರ ಮೇಲೆ ಹೊರಿಸಿದ ಭಾರಿ ಹೊರೆಯನ್ನು ಹಿಂಪಡೆಯುವ ಕೆಲಸವನ್ನು ನಿಗಮವು ಆದಷ್ಟು ಬೇಗ ಮಾಡಬೇಕು. ವೆಚ್ಚ ಹೊಂದಾಣಿಕೆಗೆ ಬೇರೆ ದಾರಿಗಳನ್ನು ಕಂಡುಕೊಳ್ಳಬೇಕು. ಮೆಟ್ರೊ ಸಂಬಂಧಿತ ಪ್ರತಿ ಯೋಜನೆಯನ್ನೂ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು ವೆಚ್ಚ ಕಡಿತದ ಅತ್ಯಂತ ಸುಲಭದ ದಾರಿ. ನಿಗಮದ ವ್ಯಾಪ್ತಿಯಲ್ಲಿ ಲಭ್ಯವಿರುವ ಸ್ಥಳಗಳನ್ನು ಬಾಡಿಗೆಗೆ ಕೊಡುವುದರಿಂದಲೂ ಒಂದಿಷ್ಟು ವರಮಾನ ಗಳಿಸಬಹುದು. ಹೊರೆ ತಗ್ಗಿಸಿಕೊಳ್ಳಲು ಇಂತಹ ಪರ್ಯಾಯ ಮಾರ್ಗಗಳು ಇರುವಾಗ ದರ ಏರಿಕೆಯ ಸುಲಭದ ದಾರಿಯನ್ನೇ ಬಿಎಂಆರ್‌ಸಿಎಲ್ ಆಯ್ದುಕೊಂಡಿರುವುದು ಪ್ರಯಾಣಿಕರ ಬಗೆಗಿನ ಅದರ ನಿಷ್ಕಾಳಜಿಯ ದ್ಯೋತಕ.

ದಿನದ ಟ್ವೀಟ್

ವರಮಾನಕ್ಕೆ ಪರ್ಯಾಯ ಮಾರ್ಗ ಹುಡುಕಿ



ಹೈದರಾಬಾದ್ ಮೆಟ್ರೊಗೆ ಸೇರಿದ ಅತ್ಯಂತ ಜನದಟ್ಟಣೆಯ ಅಮೀರ್‌ಪೇಟ್ ನಿಲ್ದಾಣದ ಖಾಲಿ ಜಾಗಗಳನ್ನು ಆರ್ಥಿಕವಾಗಿ ಲಾಭದಾಯಕ ಆಗುವಂತೆ ಮಾಡಲಾಗಿದೆ. ಶೇ 100ರಷ್ಟು ಪ್ರಯಾಣ ದರ ಏರಿಕೆಯ ಮೂಲಕ ಪ್ರಯಾಣಿಕರ ಮೇಲೆ ಹೊರೆ ಹಾಕುವ ಬದಲು ಟಿಕೆಟ್ ಹೊರತಾದ ವರಮಾನ ಮೂಲಗಳನ್ನು ಶೋಧಿಸುವ ದಿಸೆಯಲ್ಲಿ ಅಮೀರ್‌ಪೇಟ್ ಮೆಟ್ರೊ ನಿಲ್ದಾಣವನ್ನು ಬೆಂಗಳೂರು ಮೆಟ್ರೊ ಅಧ್ಯಯನ ಮಾಡಬೇಕು.

ಕಾರ್ತಿಕ್ ರೆಡ್ಡಿ

ಕಿಡಿನುಡಿ



ಬೆಂಗಳೂರಿನ ಜನ ಸಿರಿವಂತರು ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ಎಲ್ಲವುಗಳ ದರವನ್ನೂ ಏರಿಸುವ ಮೂಲಕ ಅವರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಹಿಂಡಿಕೊಳ್ಳಬಹುದು ಎಂದು ಭಾವಿಸಿದ್ದಾರೆ. ಜನ ದುರ್ಬಲರು ಎಂಬುದೂ ಅವರಿಗೆ ತಿಳಿದಿದೆ. ಬೆಂಗಳೂರಿನ ಜನರ ಪರವಾಗಿ ಹೋರಾಡಲು ಕನ್ನಡ ಸಂಘಟನೆಗಳಿಗೆ ಇದೊಂದು ಅವಕಾಶ.

ಮಹೇಶ್ ಬಿ.ಆರ್.

25 ವರ್ಷಗಳ ಹಿಂದೆ

ಶನಿವಾರ, 12-2-2000

• **ಆನೆಗೆ ರೇಡಿಯೊ ಕಾಲರ್: ವಿಫಲ ಯತ್ನ**

ಮೈಸೂರು, ಫೆ. 11– ಬಂಡೀಪುರ ಅರಣ್ಯದಲ್ಲಿ ಯಾವುದಾದರೊಂದು ಕಾಡಾನೆಗೆ ರೇಡಿಯೊ ಕಾಲರ್ ಹಾಕಲು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ತಂಡವೊಂದು ಅರಣ್ಯ ಇಲಾಖೆಯ ನೆರವಿನೊಂದಿಗೆ ಈ ವಾರದ ಮೊದಲ ಭಾಗದಲ್ಲಿ ರಹಸ್ಯ ಯತ್ನವೊಂದನ್ನು ನಡೆಸಿದೆ.

ಮುಖ್ಯವಾಗಿ ಆನೆಗಳ ಚಲನವಲನ, ಅವುಗಳು ನಡೆದುಕೊಳ್ಳುವ ರೀತಿ ಹಾಗೂ ಮುಖ್ಯ ಅರಣ್ಯ ಪ್ರದೇಶವನ್ನು ಬಿಟ್ಟು ಹೊರಗೆ ಬರಲು ಕಾರಣಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ರೇಡಿಯೊ ಕಾಲರ್ ಹಾಕುವ ಪ್ರಯತ್ನ ನಡೆಸಲಾಯಿತು.

• **ಏಕರೂಪ ತೆರಿಗೆ: ಕೇಂದ್ರಕ್ಕೆ ಕೃಷ್ಣ ಎಚ್ಚರಿಕೆ**

ಬೆಂಗಳೂರು, ಫೆ. 11– ಎಲ್ಲ ರಾಜ್ಯಗಳಲ್ಲೂ ಏಕರೂಪ ತೆರಿಗೆ ಪದ್ಧತಿಯನ್ನು ಜಾರಿಗೊಳಿಸುವಂತೆ ಮಾಡುವಲ್ಲಿ ಕೇಂದ್ರ ಸರ್ಕಾರ ಯಶಸ್ವಿಯಾಗದಿದ್ದರೆ, ಕರ್ನಾಟಕ ಈಗಾಗಲೇ ಅಳವಡಿಸಿರುವ ಏಕರೂಪ ತೆರಿಗೆ ವ್ಯವಸ್ಥೆಯ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಕೃಷ್ಣ ಇಂದು ಇಲ್ಲಿ ಎಚ್ಚರಿಕೆ ನೀಡಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಏರ್ಪಡಿಸಿದ್ದ ಸಂವಾದದಲ್ಲಿ ಭಾಗವಹಿಸಿದ್ದ ಅವರು, ಹಲವು ರಾಜ್ಯಗಳು ಏಕರೂಪ ತೆರಿಗೆ ಪದ್ಧತಿಯನ್ನು ಜಾರಿಗೊಳಿಸಿಲ್ಲದಿದ್ದರೂ ನಾವು ಈ ದಿಸೆಯಲ್ಲಿ ಮುಂದಿದ್ದೇವೆ ಎಂದರು.

ಇಡೀ ದೇಶದಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು 2001ನೇ ಇಸವಿಯ ವೇಳೆಗೆ ಜಾರಿಗೆ ತರಲು ಸಾಧ್ಯವಾಗಬಹುದು ಎಂದರು.

50 ವರ್ಷಗಳ ಹಿಂದೆ

ಬುಧವಾರ, 12-2-1975

• **‘ಹೆಲ್ಮೆಟ್’ ಆಜ್ಞೆ ತಂದಿರುವ ಚಿಂತೆ**

ಬೆಂಗಳೂರು, ಫೆ. 11– ನಗರದಲ್ಲಿ ಸ್ಕೂಟರ್ ಮತ್ತು ಮೋಟರ್ ಸೈಕಲ್ ಸವಾರರು ಹಾಗೂ ಈ ವಾಹನಗಳ ಹಿಂದಿನ ಆಸನದಲ್ಲಿ ಕೂರುವವರೂ ಹೆಲ್ಮೆಟ್ ಉಪಯೋಗಿಸುವುದನ್ನು ಕಡ್ಡಾಯ ಮಾಡುವ ಆಲೋಚನೆ ಹೊರಬಿದ್ದಾಗಿನಿಂದ ಸಮಸ್ಯೆ ಸಹಸ್ರ ಮುಖ ಬೆಳೆದಿದೆ.

ಮೊದಲ ಪ್ರಶ್ನೆ ಸ್ವಾಭಾವಿಕವಾಗಿಯೇ ಹಣದ ಪ್ರಶ್ನೆ. ಬಹುತೇಕ ಮಂದಿ ಎರಡೂ ಹೆಲ್ಮೆಟ್‌ಗಳನ್ನು ಮೊದಲ ಬಾರಿ ಕೊಳ್ಳಬೇಕಾಗಿದೆ. ನೂರೈವತ್ತರಿಂದ ಇನ್ನೂರು ರೂಪಾಯಿ ಕೂಡಲೇ ತೆರಬೇಕು.

ಗಾಡಿ ಬಿಡುವವರೇನೋ ಹೆಲ್ಮೆಟ್ ಹಾಕಿಕೊಂಡಿರಬಹುದು. ಇನ್ನೊಂದನ್ನು ಇಡುವುದೆಲ್ಲಿ? ಈಗಿನ ಆಲೋಚನೆಯ ಅರ್ಥ, ದಾರಿಯಲ್ಲಿ ಯಾರಾದರೂ ಗೆಳೆಯರು ‘ಲಿಫ್ಟ್’ ಬಯಸಿದರೆ ನಿರಾಕರಿಸಬೇಕೆಂದೇ? ಅಥವಾ ಸ್ಕೂಟರ್ ಸವಾರರು ಎರಡೆರಡು ಹೆಲ್ಮೆಟ್‌ಗಳನ್ನು ಹೊತ್ತು ಓಡಾಡಬೇಕೊ?

ಬುದ್ಧಿವಂತಿಕೆಯನ್ನು ಸರಕಾಗಿಸುವ ಹೊಸ ಕಾಲಕ್ಕೆ ಸಜ್ಜಾಗುವುದೊಂದೇ ದಾರಿ

ಎ.ಐ ಪೈಪೋಟಿ: ಇದು ಆರಂಭವಷ್ಟೆ!



ವಿಶ್ಲೇಷಣೆ

ವಸಂತ ಶೆಟ್ಟಿ

2025 ಶುರುವಾಗಿ ತಿಂಗಳಾಗಿದೆಯಷ್ಟೆ. ಆದರೆ ತಿಂಗಳೊಂದರಲ್ಲೇ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಪ್ರಪಂಚದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಹತ್ತಿರದಿಂದ ಗಮನಿಸುತ್ತಿದ್ದರೆ, ಇನ್ನು ಕೆಲ ವರ್ಷಗಳಲ್ಲಿ ನಾವು ನೋಡಲಿರುವ ಪ್ರಪಂಚ ಈಗಿನಂತಿರದು ಅನ್ನುವುದು ಸ್ಪಷ್ಟ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೇರಿದ ತಕ್ಷಣವೇ ‘ಸ್ಟಾರ್ ಗೇಟ್’ ಅನ್ನುವ ಯೋಜನೆಯನ್ನು ಘೋಷಿಸಿ, ಅದಕ್ಕೆ ಐನೂರು ಬಿಲಿಯನ್ ಡಾಲರ್ (₹43.35 ಲಕ್ಷ ಕೋಟಿ) ಹೂಡಿಕೆ ಮಾಡುವುದಾಗಿ ತಿಳಿಸಿದರು. ನಾಲ್ಕನೆಯ ಔದ್ಯಮಿಕ ಕ್ರಾಂತಿಯಲ್ಲೂ ಅಮೆರಿಕದ ಪಾರಮ್ಯ ಮುಂದುವರಿಯಬೇಕು ಅಂದರೆ ಎ.ಐ ತಂತ್ರಜ್ಞಾನದ ಬೆಳವಣಿಗೆಯ ಮೇಲೆ ಬಿಗಿ ಹಿಡಿತ ಅಮೆರಿಕದ್ದಾಗಿರಬೇಕು ಮತ್ತು ಅದನ್ನು ಸಾಧ್ಯವಾಗಿಸಲು ಈ ಹೂಡಿಕೆ ಬೇಕು ಅನ್ನುವ ನಿಲುವು ಇಲ್ಲಿತ್ತು. ಅದಾಗಿ ಕೆಲವೇ ದಿನಗಳಲ್ಲಿ ಚೀನಾ ‘ಡೀಪ್‌ಸೀಕ್’ ಅನ್ನುವ ಹೊಸತೊಂದು ಎ.ಐ ನುಡಿಮಾದರಿಯನ್ನು ಜಗತ್ತಿಗೆ ಪರಿಚಯಿಸಿತು. ಓಪನ್ ಎ.ಐ ತರಹದ ಅಮೆರಿಕದ ಸಂಸ್ಥೆಯು ಒಂದು ನುಡಿಮಾದರಿಯನ್ನು ತರಬೇತುಗೊಳಿಸಲು ಮಾಡಿದ ವೆಚ್ಚದ ನೂರರಲ್ಲಿ ಒಂದು ಭಾಗದಷ್ಟು ವೆಚ್ಚದಲ್ಲಿ ಅದರಷ್ಟೇ ಸಮರ್ಥವಾಗಿ ಕೆಲಸ ಮಾಡುವ ಮಾದರಿಯೊಂದನ್ನು ಬಿಡುಗಡೆಗೊಳಿಸಿ ಜಗತ್ತನ್ನೇ ಬೆರಗಾಗಿಸಿತು.


ಎ.ಐ ತಂತ್ರಜ್ಞಾನದ ಬೆಳವಣಿಗೆಗೆ ನಿರಂತರವಾಗಿ ವಿಶ್ಲೇಷಣಾ ಶಕ್ತಿಯನ್ನು (ಕಾಂಪ್ಯುಟೇಷನಲ್ ಪವರ್) ಒದಗಿಸುವ ಜಿಪಿಯು ಚಿಪ್‌ಗಳು ಬೇಕು, ದೊಡ್ಡ ಡೇಟಾ ಸೆಂಟರುಗಳು ಬೇಕು, ನಿರಂತರ ವಿದ್ಯುತ್ ಪೂರೈಕೆ ಆಗಬೇಕು... ಹೀಗಾಗಿ ಇದಕ್ಕೆ ದೊಡ್ಡ ಮಟ್ಟದ ಬಂಡವಾಳ ಬೇಕು ಎಂದು ಜಗತ್ತನ್ನೇ ನಂಬಿಸಿದ್ದ ಅಮೆರಿಕದ ಮುಂಚೂಣಿಯ ತಂತ್ರಜ್ಞಾನ ಸಂಸ್ಥೆಗಳ ವಾದವನ್ನು ತಲೆಕೆಳಗು ಮಾಡಿದ ಚೀನಾ, ರಾತ್ರೋರಾತ್ರಿ ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಈ ಎಲ್ಲ ತಂತ್ರಜ್ಞಾನ ಸಂಸ್ಥೆಗಳ ಷೇರುಗಳ ಮೌಲ್ಯ ತೀವ್ರವಾಗಿ ಕುಸಿಯುವಂತೆ ಮಾಡಿತು. ‘ಸ್ಟಾರ್ ಗೇಟ್’ ಯೋಜನೆ ಘೋಷಿಸಿದ ಕೆಲ ದಿನಗಳಲ್ಲೇ ಚೀನಾ ‘ಡೀಪ್‌ಸೀಕ್’ ಬಿಡುಗಡೆಗೊಳಿಸಿ ಅಮೆರಿಕದ ಕಂಪನಿಗಳ ಷೇರು ಮೌಲ್ಯ ಕುಸಿಯುವಂತೆ ಮಾಡಿದ್ದು ಖಂಡಿತ ಕಾಕತಾಳೀಯ ಆಗಿರಲಿಕ್ಕಿಲ್ಲ!

ಇಲ್ಲಿ ಇನ್ನೊಂದು ಆಸಕ್ತಿಯ ವಿಷಯವೆಂದರೆ, ಎ.ಐ ವಿಷಯದಲ್ಲಿ ಚೀನಾವನ್ನು ನಿಯಂತ್ರಿಸಲೆಂದೇ ಈ ಜಿಪಿಯು ಚಿಪ್‌ಸೆಟ್‌ಗಳನ್ನು ಚೀನಾಕ್ಕೆ ಕೊಡುವುದರ ಮೇಲೆ ಅಮೆರಿಕ ನಿರ್ಬಂಧ ಹೇರಿತ್ತು. ಆದರೂ ಅದು ಯಾವುದೋ ದಾರಿಯಲ್ಲಿ ಒಂದಿಷ್ಟು ಚಿಪ್‌ಸೆಟ್‌ಗಳನ್ನು ಹೊಂದಿಸಿಕೊಂಡಿದ್ದ ಚೀನಾ, ಇದ್ದ ಸೀಮಿತ ಸಂಪನ್ಮೂಲವನ್ನೇ ಬಳಸಿಕೊಂಡು, ಬುದ್ಧಿಶಕ್ತಿಯ ಬಲದಲ್ಲಿ ಸಮರ್ಥವಾಗಿ ಅಮೆರಿಕದ ಸಂಸ್ಥೆಗಳ ಅತ್ಯಂತ ಸುಧಾರಿತ ಎ.ಐ ಮಾದರಿಗೆ ಸಡ್ಡು ಹೊಡೆಯುವ ಮಾದರಿಯನ್ನು ಕಟ್ಟಿ ಸಿಲಿಕಾನ್ ವ್ಯಾಲಿಯ ದೈತ್ಯರನ್ನು ನಡುಗಿಸಿತು.

ಮನುಕುಲದ ಈವರೆಗಿನ ತಿಳಿವಳಿಕೆಯನ್ನೆಲ್ಲ ಬಸಿದು, ಎ.ಐ ನುಡಿಮಾದರಿಗಳನ್ನು ಕಟ್ಟುವುದು ಅಂದರೆ ಭಾರಿ ಮೊತ್ತದ ಹೂಡಿಕೆ ಬೇಕು ಅನ್ನುವ ನಂಬಿಕೆಯನ್ನು ಪ್ರಶ್ನಿಸುವಂತೆ ಮಾಡಿದ ಈ ಬೆಳವಣಿಗೆ ಭಾರತಕ್ಕಂತೂ ಒಂದು ಹೊಸ ಭರವಸೆ ನೀಡಿತು. ಎ.ಐ ತಂತ್ರಜ್ಞಾನ ಕುರಿತ ಚರ್ಚೆ ಶುರುವಾದಾಗಿನಿಂದಲೂ ಭಾರತದಲ್ಲಿ ನಾವು ನಮ್ಮದೇ ನುಡಿಮಾದರಿಗಳನ್ನು ಕಟ್ಟಿಕೊಳ್ಳಬೇಕೇ ಅಥವಾ ಇತರರು ಕಟ್ಟಿದ ಮಾದರಿಯನ್ನು ಬಳಸಿಕೊಂಡು ಅದರ ಮೇಲೆ ನಮ್ಮ ಅಗತ್ಯಗಳಿಗೆ ಬೇಕಾದ ಉತ್ಪನ್ನ, ಸೇವೆಗಳನ್ನು ಕಟ್ಟಿಕೊಳ್ಳುವುದೇ ಅನ್ನುವ ಚರ್ಚೆ ನಡೆಯುತ್ತಲಿತ್ತು. ಭಾರತದ ಸಾಫ್ಟ್‌ವೇರ್ ಸೇವಾ ವಲಯದ ದೊಡ್ಡ ಸಂಸ್ಥೆಗಳೆಲ್ಲ ‘ನಾವು ಬಳಸುಗರಾದರೆ ಸಾಕು, ನಮ್ಮದೇ ನುಡಿಮಾದರಿ ಕಟ್ಟುವುದು ಆರ್ಥಿಕವಾಗಿ ಕಷ್ಟ, ಅದಕ್ಕೆ ಬೇಕಾದ ಪ್ರತಿಭೆಯ ಪೂರೈಕೆಯೂ ನಮ್ಮಲ್ಲಿಲ್ಲ’ ಅನ್ನುವ ಅನುಮಾನದ ಮಾತುಗಳನ್ನಾಡುತ್ತಿದ್ದವು. ಆದರೆ ಚೀನಾದ ಡೀಪ್‌ಸೀಕ್ ಯಶಸ್ಸು ಭಾರತದಲ್ಲೂ ಒಂದಿಷ್ಟು ಗಟ್ಟಿಯಾದ ನಿರ್ಧಾರಗಳಿಗೆ ಕಾರಣವಾಯಿತು.

ಈ ಬಾರಿಯ ಬಜೆಟ್‌ನಲ್ಲಿ ಇಂಡಿಯಾ ಎ.ಐ ಮಿಷನ್ ಅನ್ನುವ ಯೋಜನೆಯಡಿ ಸರ್ಕಾರವೇ ಜಿಪಿಯು ಚಿಪ್‌ಗಳನ್ನು ಖರೀದಿಸಿ, ಸ್ಟಾರ್ಟ್ ಅಪ್ ಮತ್ತು ಸಂಶೋಧಕರಿಗೆ ಅಗ್ಗದ ಬೆಲೆಯಲ್ಲಿ ವಿಶ್ಲೇಷಣಾ ಶಕ್ತಿಯನ್ನು ಒದಗಿಸಲು ₹2,000 ಕೋಟಿ ನಿಗದಿ ಮಾಡುವುದಾಗಿ ಘೋಷಿಸಿದೆ. ಇದೊಂದು ಒಳ್ಳೆಯ ಹೆಜ್ಜೆಯೇ ಆಗಿದ್ದರೂ ಚೀನಾದ ಉದಾಹರಣೆಯನ್ನು ಸ್ವಲ್ಪ ಆಳವಾಗಿ ಗಮನಿಸಿದರೆ, ತಂತ್ರಜ್ಞಾನ ಲೋಕದಲ್ಲಿನ ಅವರ ಈಗಿನ ಯಶಸ್ಸೆಲ್ಲವೂ ಕೆಲ ದಶಕಗಳಿಂದ ಶಿಕ್ಷಣ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಸರ್ಕಾರ ಮಾಡುತ್ತಾ ಬಂದಿರುವ ನಿರಂತರವಾದ ಹೂಡಿಕೆಯ ಫಲವೆಂದು ಕಾಣಬಹುದು. ಇಂದು ಜಗತ್ತಿನ ಅರ್ಧಕ್ಕೂ ಹೆಚ್ಚು ಎ.ಐ ಸಂಶೋಧಕರು ಚೀನಾದಿಂದ ಬರುತ್ತಿದ್ದರೆ, ಅದಕ್ಕೆ 2030ರ ಹೊತ್ತಿಗೆ ಈ ವಿಷಯದಲ್ಲಿ ಜಾಗತಿಕ ನಾಯಕತ್ವವನ್ನು ಪಡೆಯಬೇಕು ಅನ್ನುವ ದೂರಾಲೋಚನೆಯಿಂದ ಚೀನಾ ಮಾಡಿರುವ ಹೂಡಿಕೆಯೇ ಕಾರಣವಾಗಿದೆ.

ಜೆರೋದಾ ಸಂಸ್ಥೆಯ ಕೈಲಾಶ್ ನಾದ್ ಅವರು ಹೇಳುವಂತೆ, ಈ ಚರ್ಚೆಯನ್ನು ಎ.ಐ ನುಡಿಮಾದರಿ, ಜಿಪಿಯು ವಿಷಯದಲ್ಲಿ ನಮ್ಮ ದೇಶಕ್ಕೂ ಸಾರ್ವಭೌಮತ್ವ ಇರಬೇಕು ಅನ್ನುವ ಸೀಮಿತ ದೃಷ್ಟಿಯಿಂದ ಮಾತ್ರ ನೋಡಬಾರದು. ಮೂಲಭೂತವಾಗಿ ಉದ್ಯಮ ಮತ್ತು ಉನ್ನತ ಶಿಕ್ಷಣದ ವಲಯದಲ್ಲಿ ವಿಜ್ಞಾನ, ಗಣಿತ, ತತ್ವಶಾಸ್ತ್ರ, ಸಮಾಜಶಾಸ್ತ್ರ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳ ಪರಿಣತಿಯನ್ನು ಬುಡದಿಂದ ಕಟ್ಟುತ್ತ, ಯಾವೆಲ್ಲ ಕಾರಣಗಳಿಗಾಗಿ ಇಂದು ಹೊರದೇಶಗಳಿಗೆ ಈ ಕ್ಷೇತ್ರಗಳಲ್ಲಿ ಪ್ರತಿಭಾ ಪಲಾಯನವಾಗುತ್ತಿದೆಯೋ ಅದನ್ನು ತಡೆದು ನಿಲ್ಲಿಸುವ ದೂರಗಾಮಿ ಯೋಜನೆಗೂ ವಿಸ್ತರಿಸಿದರೆ ಹತ್ತು ವರ್ಷಗಳಲ್ಲಿ ನಾವು ನಿಜಕ್ಕೂ ಇದಕ್ಕೆ ಸರಿಯಾಗಿ ಸಜ್ಜಾಗುತ್ತೇವೆ.



ದೂರಗಾಮಿ ನೆಲೆಯಲ್ಲಿ ಏನಾಗಬೇಕು ಅನ್ನುವುದು ಒಂದು ಚರ್ಚೆಯಾದರೆ, ಮುಂದಿನ ಐದು ವರ್ಷಗಳಲ್ಲಿ ಈ ತಂತ್ರಜ್ಞಾನದ ಅಲೆಯು ಭಾರತದಂತಹ ಇನ್ನೂ ಮಧ್ಯಮ ಆದಾಯದ ಮಟ್ಟಕ್ಕೂ ತಲುಪದ ದೇಶದಲ್ಲಿ ಯಾವ ಬಗೆಯ ತಲ್ಲಣಗಳನ್ನು ಸೃಷ್ಟಿಸಲಿದೆ ಮತ್ತು ಅದಕ್ಕೆ ಹೇಗೆ ತಯಾರಾಗಬೇಕು ಅನ್ನುವ ಬಗ್ಗೆ ಈಗ ತುರ್ತಾಗಿ ಚರ್ಚಿಸಬೇಕಾದ ಅಗತ್ಯವಿದೆ. ಇತ್ತೀಚಿನ ಆರ್ಥಿಕ ಸಮೀಕ್ಷೆ ಈ ಕುರಿತು ಮಾತನಾಡಿದೆ. ಹಿಂದಿನ ಮೂವತ್ತು ವರ್ಷಗಳಲ್ಲಿ ಭಾರತದ ಐಟಿ ಸೇವಾ ವಲಯ ಗಳಿಸಿದ ಯಶಸ್ಸು ನಮ್ಮ ನಗರಗಳಲ್ಲಿ ದೊಡ್ಡ ಮಟ್ಟದಲ್ಲಿ ಉದ್ಯೋಗ ಸೃಷ್ಟಿಗೆ ಕಾರಣವಾಗಿತ್ತು. ಇದು ಸೃಷ್ಟಿಸಿದ ಉಪಭೋಗದ ಆರ್ಥಿಕತೆ ಐಟಿಯೇತರ ವಲಯಗಳಲ್ಲಿ ಹತ್ತಾರು ಪಟ್ಟು ಉದ್ಯೋಗಗಳನ್ನು ಸೃಷ್ಟಿಸಿ, ಭಾರತವು ಜಗತ್ತಿನ ಐದನೆಯ ದೊಡ್ಡ ಆರ್ಥಿಕತೆಯಾಗುವುದಕ್ಕೆ ಕೊಡುಗೆ ನೀಡಿದೆ. ಐಟಿ ಸೇವಾ ವಲಯದಲ್ಲಿನ ಹಲವಾರು ರೀತಿಯ ಕೆಲಸಗಳನ್ನು ಈಗ ಎ.ಐ ತಂತ್ರಜ್ಞಾನ ಅತ್ಯಂತ ಸುಲಭವಾಗಿ ತಾನೇ ಮಾಡುವ ಶಕ್ತಿ ಪಡೆದುಕೊಳ್ಳುತ್ತಿರುವುದರಿಂದ ಇಲ್ಲಿನ ಬಹುತೇಕ ಕಡಿಮೆ ನೈಪುಣ್ಯದ ಕೆಲಸಗಳು ಇನ್ನಿಲ್ಲವಾಗುವ ದಿನಗಳು ಹತ್ತಿರದಲ್ಲಿವೆ.

ಈಗಾಗಲೇ ನಿರುದ್ಯೋಗದ ಸಮಸ್ಯೆ ಆಳವಾಗಿರುವ ನಮ್ಮ ದೇಶದಲ್ಲಿ ಇದರಿಂದಾಗಿ ಇನ್ನಷ್ಟು ಸಮಸ್ಯೆಗಳು ಎದುರಾಗುವ ಸಾಧ್ಯತೆಯಿದೆ. ಎ.ಐ ಬಳಕೆಯ ಕುರಿತು ಒಂದು ಜವಾಬ್ದಾರಿಯುತ ನೀತಿ ರೂಪಿಸುವ ತುರ್ತಿದೆ ಎಂದು ಸಮೀಕ್ಷೆ ಹೇಳುತ್ತದೆ. ಆದರೆ ಈ ತಂತ್ರಜ್ಞಾನದ ಕ್ರಾಂತಿ ಒಂದು ಜಾಗತಿಕ ಬೆಳವಣಿಗೆಯಾಗಿರುವುದರಿಂದ ಇದನ್ನು ನಿರ್ದಿಷ್ಟವಾಗಿ ನಿಯಂತ್ರಿಸುವುದು ಯಾವುದೇ ದೇಶಕ್ಕೂ ಕಷ್ಟ. ಈ ಬಗ್ಗೆ ಒಂದು ಜಾಗತಿಕ ಸಹಮತ ರೂಪಿಸುವ ಅಗತ್ಯವಿದೆಯಾದರೂ ಸದ್ಯಕ್ಕಂತೂ ಈ ತಂತ್ರಜ್ಞಾನದ ಮೇಲೆ ಪಾರಮ್ಯ ಸಾಧಿಸುವ ಪೈಪೋಟಿಯಲ್ಲಿರುವ ಅಮೆರಿಕ ಮತ್ತು ಚೀನಾ ಈ ಪ್ರಯತ್ನಗಳಿಗೆ ಕೈ ಜೋಡಿಸದೇ ಇದು ಸಾಧ್ಯವಾಗದು. ಅಲ್ಲಿಯವರೆಗೆ ನಮಗೆ ಇರುವ ಆಯ್ಕೆಯೆಂದರೆ ಇಂತಹ ತಂತ್ರಜ್ಞಾನದ ಕಟ್ಟುವಿಕೆ, ಬಳಕೆ ಮತ್ತು ವಿಕಾಸದಲ್ಲಿ ಚೀನಾದಂತೆಯೇ ನಾವು ಸ್ವಾವಲಂಬಿಯಾಗುವ ಪ್ರಯತ್ನದ ಜೊತೆ ನಮ್ಮ ಸಂದರ್ಭ, ನಮ್ಮ ಅಗತ್ಯಗಳಿಗೆ ಪೂರಕವಾಗಿ ಈ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ನಮ್ಮ ಶಿಕ್ಷಣ, ಆರೋಗ್ಯ ಸೇವೆ ಮತ್ತು ಆಡಳಿತಯಂತ್ರದಲ್ಲಿ ಚುರುಕುತನ ಹಾಗೂ ಪಾರದರ್ಶಕತೆ ತರುವತ್ತ ಬಳಸಿಕೊಳ್ಳುವುದಾಗಿದೆ.

ಈ ಕ್ರಾಂತಿಯ ಆರಂಭದ ದಿನಗಳಲ್ಲಿ ನಾವಿದ್ದೇವೆ. ಇದು ಮನುಕುಲದ ನಾಗರಿಕತೆಯ ಚಹರೆಯನ್ನೇ ಬದಲಾಯಿಸುವ ಶಕ್ತಿ ಹೊಂದಿದೆ. ಇದಕ್ಕೆ ಮುಖ ತಿರುಗಿಸದೇ ಇದನ್ನು ನಮ್ಮೊಳಿತಿಗೆ ಬಳಸಿಕೊಳ್ಳುವುದು ಹೇಗೆ ಅನ್ನುವ ಕುರಿತು ಯುದ್ಧೋಪಾದಿಯಲ್ಲಿ ಕೆಲಸ ಮಾಡುವುದೊಂದೇ ಈಗಿರುವ ದಾರಿಯಾಗಿದೆ.

ಚುರುಮುರಿ



ದುಡಿ ಕೈಗಾರಿಕೆ

• ಮಣ್ಣೆ ರಾಜು

‘ಸುಂಕದವರ ಮುಂದೆ ಸುಖದುಃಖ ಹೇಳಿಕೊಳ್ಳಬಾರದಂತೆ...’ ಸುಮಿ ಗೊಣಗಿಕೊಂಡಳು.

‘ನಮ್ಮ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದ ದುಡ್ಡಣ್ಣನ ಬಗ್ಗೆ ಹೇಳ್ತಿದ್ದೀಯಾ? ನಮ್ಮ ಪಿ.ಎಂ, ದುಡ್ಡಣ್ಣ ಗುಡ್ ಫ್ರೆಂಡ್ಸ್ ಗೊತ್ತಾ?’ ಅಂದ ಶಂಕ್ರಿ.

‘ಏನು ಫ್ರೆಂಡ್ಸೋ, ನಮ್ಮ ವಲಸಿಗರ ಅಕ್ರಮವನ್ನು ಸಕ್ರಮ ಮಾಡದೆ ಅವರಿಗೆ ಬೇಡಿ ತೊಡಿಸಿ, ಕೋಳ ಹಾಕಿ ವಾಪಸ್ ತಂದುಬಿಟ್ರು ಆ ದುಡ್ಡಣ್ಣ’.

‘ಭಾರತದ ಪ್ರತಿಭೆಗಳು ಪರದೇಶಕ್ಕೆ ಪಲಾಯನ ಮಾಡಿ, ಆ ದೇಶಗಳಲ್ಲಿ ದುಡಿದು ಅವುಗಳ ಸಂಪತ್ತು ಹೆಚ್ಚಿಸುವ ಬದಲು, ಸ್ವದೇಶದಲ್ಲೇ ದುಡಿದು ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯದಂತೆ ಕಾಪಾಡಿಕೊಳ್ಳಲಿ ಅಂತ ದುಡ್ಡಣ್ಣ ನಮ್ಮವರ ಅಮೆರಿಕ ಅಮಲಿಗೆ ತಣ್ಣೀರು ಸುರಿದಿದ್ದಾರೆ’.

‘ನಮ್ಮಲ್ಲಿ ದುಡಿಮೆಗೆ ತಕ್ಕ ಸಂಪಾದನೆ ಇಲ್ಲವಂತೆ ಕಣ್ರೀ’.

‘ಅವಕಾಶವಾಗಲೆಂದು ‘ಇನ್ವೆಸ್ಟ್ ಕರ್ನಾಟಕ’ ಎಂದು ಜಾಗತಿಕ ಬಂಡವಾಳಗಾರರನ್ನು ಆಹ್ವಾನಿಸಲಾಗ್ತಿದೆ. ಕೈಗಾರಿಕೆ ಬೆಳೆಯಲು ನಮ್ಮ ನೆಲ ಫಲವತ್ತಾಗಿದೆಯಂತೆ. ಕೈಗಾರಿಕೆ ಸ್ಥಾಪನೆಗೆ ನಾವು ನೆಲ ಕೊಡ್ತೀವಿ, ನೀವು ನಮ್ಮವರಿಗೆ ಉದ್ಯೋಗ ಕೊಡಿ ಅನ್ನೋ ರಿಕ್ವೆಸ್ಟ್ ಮಾಡ್ತಾರಂತೆ’.

‘ಕನ್ನಡಿಗರಿಗೇ ಕಡ್ಡಾಯ ಉದ್ಯೋಗ ಕೊಡಿ ಅಂತ ಕಂಡೀಷನ್ ಹಾಕಬೇಕು’.

‘ಕೌಶಲ, ಪರಿಣತಿ ಇರುವವರು ಉದ್ಯೋಗ ದಕ್ಕಿಸಿಕೊಳ್ತಾರೆ’.

‘ನಮ್ಮ ಗುಡಿ ಕೈಗಾರಿಕೆಗಳಿಗೆ ಪುನಶ್ಚೇತನ ನೀಡಿ, ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ, ನಮ್ಮವರನ್ನು ‘ಉದ್ಯಮಿ ಕನ್ನಡಿಗ’ ಮಾಡಿ ಅಂತ ಯಾರೂ ಒತ್ತಾಯ ಮಾಡಿಲ್ವಾ?’

‘ಗುಡಿ ಕೈಗಾರಿಕೆ ಅಂದರೆ ಕಂಪನಿ ಕೆಲಸದ ಜೊತೆ ಮನೆ ಕೆಲಸ ಮಾಡುವ ವರ್ಕ್ ಫ್ರಂ ಹೋಂ ಅಲ್ಲ, ಅದಕ್ಕೂ ಬಂಡವಾಳ ಬೇಕು’.

‘ಹೋಗ್ಲಿಬಿಡಿ, ಉದ್ಯಮಿಯೊ, ಉದ್ಯೋಗಿಯೊ, ‘ದುಡಿ ಕೈಗಾರಿಕೆ’ಯಿಂದ ನಮ್ಮ ರೂಪಾಯಿ ಮೌಲ್ಯ, ಬದುಕಿನ ಮೌಲ್ಯ ಹೆಚ್ಚಾದರೆ ಸಾಕು’ ಎಂದಳು ಸುಮಿ.

ಸಂಗತ

ಅಲ್ಲೂ ಪರಕೀಯ... ಇಲ್ಲೂ

ನಾವೆಲ್ಲಾ ಇರುವಲ್ಲಿ ಪರಕೀಯರಾಗಿ ಇದ್ದುಕೊಂಡೇ ನಮ್ಮ ನಮ್ಮ ಮೂಲನೆಲೆಯ ಬೇರುಗಳನ್ನು ಮರೆಯುತ್ತಿರುವ ಕಾಲಘಟ್ಟ ಇದು

• ಮಂಜು ಕೊಡಗು

ಆಧುನಿಕ ವಲಸೆ ಇಂದಿನ ತುರ್ತು ಮತ್ತು ಈ ಕಾಲದ ದುರಂತ. ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದ ಭಾರತೀಯರನ್ನು ಇತ್ತೀಚೆಗೆ ದೇಶದಿಂದ ಹೊರದಬ್ಬಲಾಯಿತು. ಈ ಬೆಳವಣಿಗೆ ಇತರ ದೇಶಗಳಿಗೂ ಹಬ್ಬಬಹುದು. ಆಗ ಅಲ್ಲಿದ್ದ ಅನಿವಾಸಿಗಳು ತಾಯ್ನಾಡಿಗೆ ಮರಳುತ್ತಾರೆ. ಹೊಸ ಬದುಕು ಆರಂಭಿಸುತ್ತಾರೆ. ಪ್ರಕ್ರಿಯೆ ಇಷ್ಟೇ ಆಗಿದ್ದರೆ ಹೆಚ್ಚು ಸಮಸ್ಯಾತ್ಮಕ ಆಗುತ್ತಿರಲಿಲ್ಲ. ಆದರೆ ಸಮಸ್ಯೆ ಇರುವುದು ಮರಳಿ ಬದುಕು ಕಟ್ಟಿಕೊಳ್ಳುವ ಪ್ರಯತ್ನದಲ್ಲಿ.

ವಲಸೆ ಬದುಕು ಅನಾದಿಕಾಲದಿಂದಲೂ ಇದ್ದೇ ಇದೆ. ಪ್ರಾಣಿ– ಪಕ್ಷಿಗಳೂ ಇದರಿಂದ ಹೊರತಲ್ಲ. ಆದರೆ ಅವಕ್ಕೆ ದೇಶ, ಗಡಿ, ವರ್ಣ, ಮತದ ಹಂಗಿಲ್ಲ. ನಮಗೆ ಇದೆ. ನಾವು ನಮ್ಮ ತೋಟಕ್ಕೆ ಬೇಲಿ ಕಟ್ಟದ್ದೇವೆ. ಅಲ್ಲಿ ನಾವು ಬೆಳೆಸಿದ ಕಾಯಿಪಲ್ಲೆಗಳಿವೆ. ಹೊರಗಿನವರೋ ಅವರ ಸಾಕುಪ್ರಾಣಿಗಳೋ ಕಾಡುಮೃಗಗಳೋ ಬಂದು ಮೇಯ್ದುಬಿಡಬಹುದು. ಆಗ, ನಮಗಾಗಿ ನಾವು ಬೆಳೆದ ಫಲ ಅನ್ಯರ ಪಾಲಾಗುತ್ತದಲ್ಲ? ಇದು ನಮ್ಮ ತೋಟದ ಕಥೆ. ಹಾಗೆಯೇ ದೇಶದೇಶಗಳ ಕಥೆಯೂ.

ನಾನು 28 ವರ್ಷಗಳ ಹಿಂದೆ ಕೊಡಗಿನಲ್ಲಿದ್ದೆ. ಈಗ ಶಿವಮೊಗ್ಗದಲ್ಲಿದ್ದೇನೆ. ಹೀಗಾಗಿ, ನಾನು ಕೊಡಗಿನವನೂ ಹೌದು, ಶಿವಮೊಗ್ಗದ ನಿವಾಸಿಯೂ ಹೌದು. ಅಲ್ಲಿ ನನ್ನ ಕುಟುಂಬ ಮತ್ತು ಬಂಧುಗಳ ಆಳವಾದ ಬೇರುಗಳಿವೆ. ಆದರೆ ನನಗೆ ಪರಿಚಿತರೆಂದು ಇರುವವರು ಕುಟುಂಬದ ನೇರ ಸಂಬಂಧಿಕರು ಮಾತ್ರ. ನನ್ನ ಮತ್ತು ನನ್ನ ಬಂಧುಗಳ ನಡುವೆ ಕಳೆದುಹೋದ ಕೊಂಡಿಗಳು ಅನೇಕ. ನಾನು ಶಿವಮೊಗ್ಗದ ನಿವಾಸಿಯಾದರೂ ನನ್ನನ್ನು ಗುರುತಿಸುವುದು ಕೊಡಗಿನವನೆಂದು. ಒಂದರ್ಥದಲ್ಲಿ ಇಲ್ಲೇ ಇದ್ದು ಪರಕೀಯ. ಕೊಡಗಿಗೂ ನಾನು ಪರಕೀಯನೇ. ಇದು ನನ್ನೊಬ್ಬನದೇ ಕತೆಯಲ್ಲ. ಈ ಕಾಲದ ನಾವೆಲ್ಲಾ ಇರುವಲ್ಲಿ ಪರಕೀಯರಾಗಿ ಇದ್ದುಕೊಂಡೇ ನಮ್ಮ ನಮ್ಮ ಮೂಲನೆಲೆಯ ಬೇರುಗಳನ್ನು ಅನಿವಾರ್ಯವಾಗಿ ಮರೆಯುತ್ತಿರುವ ಕಾಲಘಟ್ಟದಲ್ಲಿ ಇದ್ದೇವೆ.

ಉದ್ಯೋಗಕ್ಕಾಗಿ ವಲಸೆ– ಜೀವನಕ್ಕಾಗಿ ವಲಸೆ ಇದಿಷ್ಟೇ ಆಗಿದ್ದರೆ ಯಾರಿಗೂ ಬಾಧಕವಾಗಿ ಕಾಣುತ್ತಿರಲಿಲ್ಲ. ‘ಪರರ ವಲಸೆ’ ಎಂದು ಕರೆಸಿಕೊಳ್ಳುವ ಆಧುನಿಕ ವ್ಯಾಧಿಯು ದೇಶಬಾಂಧವರಿಗೆ ತೊಡಕಾಗಿ ಕಾಣುತ್ತದೆ. ನಮ್ಮಲ್ಲಿನ ಬಾಂಗ್ಲಾ ನುಸುಳುಕೋರರದ್ದು ಅಕ್ರಮ ಪ್ರವೇಶವಷ್ಟೇ ಆಗಿದ್ದರೆ ಅವರನ್ನು ಮರಳಿ ಕಳಿಸಬಹುದು ಅಥವಾ ವಿಚಾರಣೆಗೆ ಒಳಪಡಿಸಿ ಸಮಸ್ಯೆ ಪರಿಹರಿಸಬಹುದು. ರಾಜತಾಂತ್ರಿಕ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಕೆಲವು ವರ್ಷಗಳ ಹಿಂದೆ ಶ್ರೀಲಂಕಾ ಪ್ರಜೆಗಳಿಗೆ ಭಾರತವು ಸುಭದ್ರ ಮತ್ತು ಸುಭಿಕ್ಷ ರಾಷ್ಟ್ರವಾಗಿ ಕಂಡಿತ್ತು. ಅಲ್ಲಿನ ಮೀನುಗಾರರು ಭಾರತದ ಸಮುದ್ರ ಸೀಮೆಯೊಳಗೂ ಬಲೆ ಬೀಸಿದ್ದರು, ನಮ್ಮವರು ಪೂರ್ವ ಆಫ್ರಿಕಾದ ಸಾಗರದಲ್ಲಿ ಮತ್ಸ್ಯ-ಬೇಟೆಯಲ್ಲಿ ತೊಡಗಿದ್ದರು. ಇಂಥ ಮುಕ್ತ ಜೀವನಕ್ಕೆ ಅವಕಾಶ ಸಾಧ್ಯವಾಗಬೇಕು.

ನೇಪಾಳದ ಬೌದ್ಧ ಬಿಕ್ಕುಗಳಿಗೆ ಭಾರತ ಇಂದಿಗೂ ಆಶ್ರಯ ನೀಡಿರುವುದು ಅವರು ನಿರುಪದ್ರವಿಗಳೆಂದೇ? ಅದಷ್ಟೇ ಅಲ್ಲ, ಅಲ್ಲಿ ಸಹಬಾಳ್ವೆಯ ಔದಾರ್ಯ ಇದೆ. ಇಂಥ ಸಹಬಾಳ್ವೆಯ ಸಮಗ್ರ ಮುನ್ನೋಟವನ್ನು ನಾವು ನಮ್ಮ ತೋಟಕ್ಕೆ ಹಾಕಿದ ಬೇಲಿ, ದೇಶದ ಗಡಿರೇಖೆ ಛಿದ್ರ ಮಾಡಿವೆ. ಅಕ್ರಮ ವಲಸಿಗರನ್ನು ಹೊರಹಾಕುವ ಕೆಲಸ ಭಾರತದಲ್ಲೂ ನಡೆಯಬಹುದು. ಆದರೆ ಅದು ಹೊರದಬ್ಬುವ ಅಥವಾ ಬರಮಾಡಿಕೊಳ್ಳುವ ಇಚ್ಛೆಯಾಗಿ ಮಾತ್ರ ಉಳಿದಿಲ್ಲ. ಕಾರಣ, ಇಂದು ನಾವು ಕೂಡ ಅತಿಯಾದ ರಾಷ್ಟ್ರಭಕ್ತಿ, ಸ್ವದೇಶಿ ಮೋಹದಲ್ಲಿ ಪಕ್ಕದ ಊರಿನವರನ್ನೂ ಪರಕೀಯರಂತೆ ಕಾಣುತ್ತಿದ್ದೇವೆ. ನಮ್ಮ ಧರ್ಮ, ನಮ್ಮ ಸಂಸ್ಕೃತಿ, ನಮ್ಮ ಭಾಷೆ ಎಂಬೆಲ್ಲವನ್ನೂ ಎದುರಿಗಿರಿಸಿಕೊಂಡು ಒಂದರ್ಥದಲ್ಲಿ ದಿನನಿತ್ಯ ಯುದ್ಧಸನ್ನದ್ಧರಾಗಿದ್ದೇವೆ. ಭೌತಿಕವಾಗಿ ನಮ್ಮಲ್ಲಿ ಆಯುಧಗಳಿಲ್ಲ. ಬದಲಾಗಿ ನಮ್ಮ ಮನಸ್ಸಿನಲ್ಲಿ ಮರ್ಮಾಘಾತದ ಕೊಡಲಿ ಇದೆ.



ಒಬ್ಬ ಜವಾಬ್ದಾರಿಯುತ ತಂದೆ, ವಿವೇಕಿಯಾದ ತಾಯಿ ಪ್ರತಿ ಮನೆಯಲ್ಲೂ ಇದ್ದರೆ ಅಥವಾ ಉತ್ತಮ ಶಿಕ್ಷಕ ಶಾಲೆಯಲ್ಲಿದ್ದರೆ ಮುಂದೆ ಸಹಬದುಕು ನಡೆಸುವ ಯುವಕರನ್ನು ಈ ಯುಗ ಪಡೆಯಬಹುದು. ಅಂತರಿಕ್ಷದಲ್ಲಿ ಅನ್ವೇಷಣೆಯ ಉಪಗ್ರಹಗಳನ್ನು ಹಾರಿಸುತ್ತಾ ವಿಶ್ವರೂಪ ನೋಡಬಯಸುತ್ತಿದ್ದೇವೆ. ಜತೆಜತೆಗೆ ನಮ್ಮ ತೋಟದ ಬೇಲಿಗೆ ಮುಳ್ಳುತಂತಿ ಪೋಣಿಸುತ್ತಲೂ ಇದ್ದೇವೆ. ಅಲ್ಲಿ ಪರರು ಬರಕೂಡದು. ಇದು ಇಂದಿನ ಬಿಕ್ಕಟ್ಟು. ವಲಸೆ ನಿಗ್ರಹದಂಥ ದೇಶದೇಶಗಳ ವ್ಯಾಧಿಯಲ್ಲಿ ಇರುವುದು ತಾನು ಮಾತ್ರ ಇರಬೇಕು, ಅನ್ಯ ಇರಬಾರದೆನ್ನುವ ಧೋರಣೆ ಮಾತ್ರ ಅಲ್ಲ. ಅದರೊಳಗೆ ರಾಜಕೀಯ, ಬಂಡವಾಳ, ಧರ್ಮ, ತನ್ನದು ಎನ್ನುವ ಅತಿವ್ಯಾಮೋಹ ಎಲ್ಲವೂ ಸೇರಿಕೊಂಡಿವೆ.

ಸಮಗ್ರ ಭಾರತ, ಬಹುತ್ವ ಭಾರತಕ್ಕೆ ಪೂರಕವಾದ ವಾತಾವರಣ ನಮ್ಮ ಮನೆಯಿಂದಲೇ ಆರಂಭವಾಗಬೇಕು. ಇದು ನನ್ನ ಮನೆ, ಇಲ್ಲಿ ಅವರೂ ಬಂದು ಹೋಗುವಂತಿರಲಿ. ಅತಿಕ್ರಮಿಸಿದರೆ ಹೊರದಬ್ಬುವ ನಿಷ್ಠುರ ನಡೆ ನಮಗೆ ಬರಲಿ, ತಪ್ಪಲ್ಲ. ಆಗ ಸಮಾಜ ಸಹಿಷ್ಣು ಭಾವದಲ್ಲಿ ಇರುತ್ತದೆ.

ನಮ್ಮೂರಿನ ಕೆರೆಗಳಲ್ಲಿ ಬೀಡುಬಿಡುವ ಪಕ್ಷಿಗಳಿಗೆ ಯಾವ ಗಡಿ? ಯಾವುದೋ ದೇಶದಿಂದ ಹಾರಿಬಂದು ನಮ್ಮೂರಿನ ಮೀನು, ಕಪ್ಪೆಯನ್ನು ತಿಂದು, ಗೂಡು ಕಟ್ಟಿ ಮರಿ ಮಾಡಿ ಮರಳಿ ಹಾರುವ ಅವನ್ನು ಯಾರ ಬೇಲಿ ತಡೆದಿದೆ? ನಾವು ಮಾತ್ರ ಮೂಲನಿವಾಸಿಗಳೇ? ಎಲ್ಲಿದೆ ನಮ್ಮ ಮೂಲ ಆವಾಸ? ಈ ಪ್ರಶ್ನೆ ಅಮೆರಿಕದ ಟ್ರಂಪ್ ಅವರಿಗೂ ಅನ್ವಯಿಸುತ್ತದೆ, ಇಲ್ಲಿ ಬದುಕುವ ನಮಗೂ.

ಲೇಖಕ: ಅಧ್ಯಾಪಕ, ನೀನಾಸಂ, ಹೆಗ್ಗೋಡು

ವಾಚಕರ ವಾಣಿ

‘ನಮ್ಮ ಮೆಟ್ರೊ’ ಅಲ್ಲ ‘ನಿಮ್ಮ ಮೆಟ್ರೊ’

ನಿನ್ನೆ ಮೊನ್ನೆಯ ತನಕ ‘ನಮ್ಮ ಮೆಟ್ರೊ’ ಆಗಿದ್ದುದನ್ನು ಇನ್ನು ಮುಂದೆ ‘ನಿಮ್ಮ ಮೆಟ್ರೊ’ ಎಂದು ಬದಲಿಸಿ ಎನ್ನುವಂತಾಗಿದೆ ಬೆಂಗಳೂರಿನ ಜನಸಾಮಾನ್ಯರ ಪರಿಸ್ಥಿತಿ. ಈ ಮಹಾನಗರದಲ್ಲಿ ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಜನ ಬಿಎಂಟಿಸಿ ಬಸ್, ಮೆಟ್ರೊದಂತಹ ಸಾರ್ವಜನಿಕ ಸಾರಿಗೆಯನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಇದನ್ನು ಚೆನ್ನಾಗಿ ಅರಿತಿರುವ ಆಡಳಿತಾರೂಢರು ಜಿದ್ದಿಗೆ ಬಿದ್ದಂತೆ ಟಿಕೆಟ್ ದರ ಏರಿಸುತ್ತಿರುವುದು ವಿಷಾದನೀಯ.

ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಈಗಾಗಲೇ ಏರಿಸಲಾಗಿದೆ. ಇದರ ಬೆನ್ನಲ್ಲೇ ಮೆಟ್ರೊ ಪ್ರಯಾಣ ದರವನ್ನು ವಿಪರೀತ ಅನ್ನಿಸುವಷ್ಟು ಏರಿಸಿರುವುದು ಎಷ್ಟು ಸರಿ? ದಿನನಿತ್ಯ ಮೆಟ್ರೊದಲ್ಲಿ ಓಡಾಡುವ ಪ್ರಯಾಣಿಕರಿಗಂತೂ ಇದು ಆರ್ಥಿಕ ಹೊರೆಯೇ ಹೌದು. ಟಿಕೆಟ್ ದರವನ್ನು ಒಮ್ಮೆಲೇ ಎರಡು ಪಟ್ಟು ಏರಿಸಿದರೆ ಜನಸಾಮಾನ್ಯರ ಪಾಡು ಏನಾಗಬೇಕು? ವೆಚ್ಚ ಸರಿದೂಗಿಸಿಕೊಳ್ಳಲು ಪ್ರಯಾಣ ದರ ಹೆಚ್ಚಳವೊಂದೇ ಮಾರ್ಗ ಅಲ್ಲ. ಬಿಎಂಆರ್‌ಸಿಎಲ್‌ನಲ್ಲಿ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುವ ದಿಸೆಯಲ್ಲೂ ಯೋಚನೆ ಮಾಡಬೇಕಿತ್ತು.

ಪ್ರಗತಿ ಎಸ್. ಕೆರಾಡಿ, ಕುಂದಾಪುರ

ಚುನಾವಣಾ ಆಯೋಗ ನೈತಿಕ ಹೊಣೆ ಅರಿಯಲಿ

ನಾವು ವ್ಯಕ್ತಿಯನ್ನು ಆಧರಿಸಿ ಮತ ನೀಡಬೇಕೊ ಅಥವಾ ನಿರ್ದಿಷ್ಟ ಪಕ್ಷವನ್ನು ಆಧರಿಸಿ ಮತ ನೀಡಬೇಕೊ ಎಂದು ಒಬ್ಬರು ಕೇಳಿದರು. ಉತ್ತರಿಸಲು ಹೋದಾಗ ಅದರ ಸಂಕೀರ್ಣತೆ ತಲೆಕೆಡಿಸಿತು! ತಾತ್ವಿಕವಾಗಿ ವ್ಯಕ್ತಿಯ ಅರ್ಹತೆ ಮತ್ತು ಬದ್ಧತೆಯನ್ನು ಆಧರಿಸಿಯೇ ಮತ ನೀಡಬೇಕು. ಸಂವಿಧಾನದ ಮೂಲ ಆಶಯ ಸಹ ಇದೇ ಆಗಿರುತ್ತದೆ. ಆ ಅಭ್ಯರ್ಥಿಯು ನೀತಿ ಮತ್ತು ಪ್ರಾಮಾಣಿಕತೆಗೆ ಬದ್ಧನಾಗಿರುತ್ತಾನೆ ಎಂಬುದು ನಮ್ಮ ಪ್ರಜ್ಞಾತೀತ ತೀರ್ಮಾನವಾಗಿರುತ್ತದೆ. ಪಕ್ಷ ಸಿದ್ಧಾಂತ ಎನ್ನುವುದು ಇದಕ್ಕಿರುವ ಅನೇಕ ಆಯಾಮಗಳಲ್ಲಿ ಒಂದು ಅಷ್ಟೆ. ಆದರೆ ಪ್ರಸ್ತುತದ ಪ್ರಕ್ರಿಯೆಗಳನ್ನು ಗಮನಿಸಿದರೆ, ಬಹುಶಃ ಚುನಾವಣಾ ಆಯೋಗ ಈ ಅಂಶವನ್ನು ಅಧಿಕೃತವಾಗಿ ಒಪ್ಪಿಕೊಂಡಿಲ್ಲ ಎನಿಸುತ್ತದೆ!

ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಎಲ್ಲ ಹುರಿಯಾಳುಗಳೂ ಚುನಾವಣೆಗೆ ಸಂಬಂಧಿಸಿದಂತೆ ತಮ್ಮ ಬದ್ಧತೆಗಳನ್ನೆಲ್ಲಾ ದೃಢೀಕರಿಸಿರುತ್ತಾರೆ. ಆದರೂ ಅದೀಗ ಬರೀ ಕಾಟಾಚಾರಕ್ಕೆ ಎನಿಸುವಂತಾಗಿದೆ. ಈ ಹಂತದಲ್ಲಿ ಅಧಿಕೃತವಾಗಿ ಮಾಡಿದ ಯಾವುದೇ ಶಪಥವನ್ನು ಅವರು ಯಾವ ಸಂದರ್ಭದಲ್ಲಿ ಮುರಿದರೂ ಚುನಾವಣಾ ಆಯೋಗ ಅದನ್ನು ನಿರ್ಭಾವದಿಂದ ನೋಡಿಕೊಂಡಿರುತ್ತದೆಯೇ ವಿನಾ ಗಂಭೀರವಾಗಿ ಪರಿಗಣಿಸುವುದಿಲ್ಲ. ಅದೊಂದು ನೈತಿಕ ಜವಾಬ್ದಾರಿ ಎಂಬ ಅರಿವು ಅದಕ್ಕೆ ಬರುವುದು ಯಾವಾಗ?

ಆರ್.ಕೆ.ದಿವಾಕರ, ಬೆಂಗಳೂರು

ಲಿಪಿ ಸಮಸ್ಯೆ: ಮನೆಯ ವಾತಾವರಣ ಬದಲಾಗಲಿ

ಕನ್ನಡ ಲಿಪಿಯನ್ನು ಉಳಿಸಲು ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಪ್ರಯತ್ನ ನಡೆಸಬೇಕು ಎಂಬ ಡಿ.ಜಿ. ಮಂಜುನಾಥ ಅವರ ಅಭಿಪ್ರಾಯ (ವಾ.ವಾ., ಫೆ. 10) ಸರಿಯಾಗಿದೆ. ಕನ್ನಡವನ್ನು ಓದುವಲ್ಲಿ ಮತ್ತು ಅರ್ಥ ಮಾಡಿಕೊಳ್ಳುವಲ್ಲಿ ವಿಶೇಷವಾಗಿ ಮಕ್ಕಳು ಸಮಸ್ಯೆ ಎದುರಿಸುತ್ತಿದ್ದಾರೆ. ಮನೆಯಲ್ಲಿ ಇದಕ್ಕೆ ಪೂರಕ ವಾತಾವರಣ ಇಲ್ಲದಿರುವುದೇ ಪ್ರಮುಖ ಕಾರಣ. ಮನೆಯಲ್ಲಿ ಕನ್ನಡ ಪತ್ರಿಕೆಗಳು ಮತ್ತು ನಿಯತಕಾಲಿಕಗಳನ್ನು ತರಿಸುವುದು, ಓದಲು ಮಕ್ಕಳನ್ನು ಪ್ರೋತ್ಸಾಹಿಸುವುದು ಪೋಷಕರ ಹೊಣೆ. ಒತ್ತಕ್ಷರ, ದೀರ್ಘಾಕ್ಷರದಂತಹವು ಇರುವುದರಿಂದ ಕನ್ನಡ ಓದಲು, ಬರೆಯಲು ಕಷ್ಟ ಎಂದು ಪೋಷಕರೇ ಉದ್ಗರಿಸಿದರೆ ಅದು ಮಕ್ಕಳ ಮನಸ್ಸಿನಲ್ಲಿ ಉಳಿದುಬಿಡುತ್ತದೆ.

ಶಾಲೆಯಲ್ಲಿ ಕಲಿಯುವ ಮಾಧ್ಯಮವೊಂದೇ ಇಂತಹ ಸ್ಥಿತಿಗೆ ಕಾರಣ ಎಂದು ಹೇಳಲಾಗದು. ಇಂಗ್ಲಿಷ್ ಮಾಧ್ಯಮದಲ್ಲಿ ಓದಿಯೂ ಕನ್ನಡವನ್ನು ಸುಲಭವಾಗಿ ಓದಿ, ಬರೆಯುವ ಕೆಲವು ಮಕ್ಕಳನ್ನು ಹಾಗೂ ಕನ್ನಡ ಮಾಧ್ಯಮದಲ್ಲಿ ಓದಿದರೂ ಕನ್ನಡ ಓದಲು ಕಷ್ಟಪಡುವ ವಿದ್ಯಾರ್ಥಿಗಳನ್ನು ಶಿಕ್ಷಕಿಯಾಗಿ ನಾನು ನೋಡಿದ್ದೇನೆ. ಎಲ್ಲಕ್ಕಿಂತ ಮೊದಲು ಮನೆಯ ವಾತಾವರಣದಲ್ಲಿ, ನಂತರ ಶಿಕ್ಷಕರ ಪಾತ್ರದಲ್ಲಿ ಸುಧಾರಣೆ ಉಂಟಾದರೆ ಈ ಸಮಸ್ಯೆಯನ್ನು ತಕ್ಕಮಟ್ಟಿಗೆ ನಿವಾರಿಸಬಹುದು.

ಆಶಾ ಅಪ್ರಮೇಯ, ದಾವಣಗೆರೆ

ಕುತೂಹಲ ತಣಿಸದ ಪರೀಕ್ಷಾ ಪೇ ಚರ್ಚಾ

ವಿದ್ಯಾರ್ಥಿಗಳಲ್ಲಿ ಪರೀಕ್ಷೆಗೆ ಸಂಬಂಧಿಸಿದ ಭಯವನ್ನು ಹೋಗಲಾಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿಕೊಂಡು ಬರುತ್ತಿರುವ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದ ಎಂಟನೇ ಆವೃತ್ತಿಯು ಪೂರ್ವನಿಯೋಜಿತ ಕಾರ್ಯಕ್ರಮದ ಪಟ್ಟಿಯಂತೆ ನಡೆಯದ ಕಾರಣ, ಕೋಟ್ಯಂತರ ಮಕ್ಕಳಲ್ಲಿ ನಿರಾಸೆ ಮೂಡಿಸಿತು. ಈ ಮೊದಲು ಸ್ವತಃ ಪ್ರಧಾನಿ ‘ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಲು ಈ ಬಾರಿ ವಿಭಿನ್ನ ಕ್ಷೇತ್ರಗಳ ಹಲವಾರು ಗಣ್ಯರು ತಮ್ಮ ಜೀವನಕಥೆಯನ್ನು ಹಂಚಿಕೊಳ್ಳಲಿದ್ದಾರೆ’ ಎಂದು ಟ್ವೀಟ್ ಮಾಡಿ ಎಲ್ಲರಲ್ಲೂ ಭಾರಿ ಕುತೂಹಲ ಮತ್ತು ನಿರೀಕ್ಷೆಯನ್ನು ಮೂಡಿಸುತ್ತಿದ್ದರು. ಆದರೆ ಈ ಬಾರಿ ಮೋದಿಯವರು ಒಂದು ಉದ್ಯಾನದಲ್ಲಿ ಕುಳಿತುಕೊಂಡು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವ ಪ್ರೀ ರೆಕಾರ್ಡಿಂಗ್ ವಿಡಿಯೊವನ್ನು ಪ್ರಸಾರ ಮಾಡಲಾಯಿತೇ ವಿನಾ ಹಿಂದಿನ ಬಾರಿಯ ಹಾಗೆ ನೇರ ಸಂವಾದ ಜರುಗಲಿಲ್ಲ. ಬಹುಶಃ ದೆಹಲಿ ಚುನಾವಣೆಯಲ್ಲಿ ತೊಡಗಿದ್ದರ ಕಾರಣವೋ ಏನೋ ಪರೀಕ್ಷಾ ಪೇ ಚರ್ಚಾ ಕುರಿತಾದ ಅಬ್ಬರದ ಪ್ರಚಾರ ಮಾತ್ರ ನಡೆಯಿತು.

ಸುರೇಂದ್ರ ಪೈ, ಭಟ್ಕಳ

ಪುಸ್ತಕ ಖರೀದಿ: ಸಾಹಿತಿಗಳು ದನಿ ಎತ್ತಲಿ

ಬರಗೂರು ರಾಮಚಂದ್ರಪ್ಪ ಅವರು ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಪುಸ್ತಕ ಪ್ರಕಾಶಕರ ಪರವಾಗಿ ಆಡಿದ ಮಾತು ಪ್ರಕಾಶಕರ ಪಾಲಿಗೆ ಒಂದಿಷ್ಟು ಆಶಾಕಿರಣವಾಗಿ ಪರಿಣಮಿಸಿದೆ. ಆದರೆ ಹಿಂದೆಲ್ಲ ಪುಸ್ತಕೋದ್ಯಮದ ಕುರಿತು ಮಾತನಾಡುತ್ತಿದ್ದ ಅನೇಕ ಹಿರಿಯ, ಕಿರಿಯ ಸಾಹಿತಿಗಳು ಈಗ ಈ ವಿಷಯದ ಕುರಿತು ಬಾಯಿ ಬಿಚ್ಚದಿರುವುದು ಅಚ್ಚರಿಯ ವಿಷಯ. ಹಿಂದೆ ಸಮಸ್ಯೆ ಇದ್ದಾಗ ಪುಸ್ತಕೋದ್ಯಮದ ಕುರಿತು ಮಾತನಾಡಿ ಸರ್ಕಾರದ ವಿರುದ್ಧ ರೊಚ್ಚಿಗೆದ್ದಿದ್ದ ಬಹುತೇಕ ಸಾಹಿತಿಗಳು, ಈಗ ಆಯಕಟ್ಟಿನ ಜಾಗಗಳಲ್ಲಿ ಕುಳಿತಿದ್ದಾರೆ. ಸರ್ಕಾರದಿಂದ ಉಪಕೃತರಾದ ನಂತರ ತಮ್ಮ ಹೊಣೆಗಾರಿಕೆಯನ್ನು ಮರೆತಿರುವುದು ವಿಷಾದಕರ. ಸರ್ಕಾರವು ಐದು ವರ್ಷಗಳಿಂದ ಪುಸ್ತಕ ಖರೀದಿಗೆ ಬೇಕಾದ ಅಗತ್ಯ ಕ್ರಮ ಕೈಗೊಳ್ಳದೆ ಪ್ರಕಾಶಕರು ತೊಂದರೆ ಅನುಭವಿಸುವಂತಾಗಿದೆ. ಈ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ ಸಾಹಿತಿಗಳು ಇನ್ನಾದರೂ ಮಾತನಾಡಲಿ.

ಸೃಷ್ಟಿ ನಾಗೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕ್ರೆಡಿಟ್ ಸ್ಕೋರ್ ಬ್ಯಾಂಕಿಂಗ್ ಕ್ಷೇತ್ರದ ಬಹಳ ಮುಖ್ಯ ವ್ಯವಸ್ಥೆ. ಒಬ್ಬ ವ್ಯಕ್ತಿಯ ಕ್ರೆಡಿಟ್ ಸ್ಕೋರ್ ಚಾಲನೆಗೊಳ್ಳುವುದೇ ಸಾಲ ಪಡೆಯುವುದರಿಂದ. ಇಂದು ಯಾವುದೇ ವೃತ್ತಿಯ ಯಾವುದೇ ವ್ಯಕ್ತಿ ಆಗಿರಲಿ, ಸಾಲ ಪಡೆಯಬೇಕೆಂದರೆ ಉತ್ತಮ ಕ್ರೆಡಿಟ್ ಸ್ಕೋರ್ ಹೊಂದಿರುವುದು ಕಡ್ಡಾಯವಾಗಿದೆ. ಅತಿ ಕಡಿಮೆ ಆದಾಯದ, ಇಲ್ಲವೇ ಆದಾಯವೇ ಇಲ್ಲದ ರೈತರು, ಕಾರ್ಮಿಕರಿಗೂ ಇದನ್ನು ಕಡ್ಡಾಯ ಮಾಡಿರುವುದಕ್ಕೆ ವಿರೋಧವೂ ವ್ಯಕ್ತವಾಗಿದೆ. ಈ ಕ್ರೆಡಿಟ್ ಅಂಕಗಳ ಲೆಕ್ಕಾಚಾರವನ್ನು ಯಾರು ಮಾಡುತ್ತಾರೆ? ಯಾವ ಆಧಾರದಲ್ಲಿ ಮಾಡುತ್ತಾರೆ ಎನ್ನುವುದರ ಕುರಿತ ವಿವರಗಳು ಇಲ್ಲಿವೆ



ಕ್ರೆಡಿಟ್ ಸ್ಕೋರ್ ಬ್ಯಾಂಕಿಂಗ್ ಕ್ಷೇತ್ರಕ್ಕೆ ಅನಿವಾರ್ಯ ಏಕೆ?

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದಲ್ಲಿ ಒಂದು ಘಟನೆ ನಡೆದಿದೆ. ಯುವಕನೊಬ್ಬನ ಮದುವೆ ನಿಶ್ಚಯವಾಗಿ, ಮುಹೂರ್ತಕ್ಕೆ ಕೆಲವೇ ದಿನಗಳಷ್ಟೇ ಬಾಕಿ ಇರುವಾಗ ವರನ ಕ್ರೆಡಿಟ್ ಸ್ಕೋರ್ ಕಡಿಮೆ ಇದೆ ಎಂದು ವಧುವಿನ ಕುಟುಂಬಸ್ಥರು ಮದುವೆಯನ್ನು ರದ್ದುಪಡಿಸಿದ್ದಾರೆ. ಕ್ರೆಡಿಟ್ ಸ್ಕೋರ್, ಮದುವೆಯನ್ನು ಮುರಿದಿದೆ. ಕ್ರೆಡಿಟ್ ಲೆಕ್ಕಾಚಾರವು ಬ್ಯಾಂಕ್‌ನ ಗೋಡೆಗಳನ್ನು ದಾಟಿ ಮನೆ–ಮನಗಳನ್ನೂ ಪ್ರಭಾವಿಸುತ್ತಿದ್ದು, ಸಂಬಂಧಗಳ ಪಲ್ಲಟಗಳಿಗೂ ಕಾರಣವಾಗುತ್ತಿದೆ ಎಂಬುದಕ್ಕೆ ಈ ಘಟನೆ ನಿದರ್ಶನವಾಗಿದೆ.

ಕ್ರೆಡಿಟ್ ಸ್ಕೋರ್ ಎನ್ನುವುದು ಆಧುನಿಕ ಸಾಲ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಅದು ಇಲ್ಲದೆ ಬ್ಯಾಂಕ್‌ಗಳಿಂದ ಆಗಲಿ, ಬ್ಯಾಂಕ್‌ಯೇತರ ಹಣಕಾಸು ಸಂಸ್ಥೆಗಳಿಂದ (ಎನ್‌ಬಿಎಫ್‌ಸಿ) ಆಗಲಿ ಸಾಲವೇ ಸಿಗುವುದಿಲ್ಲ. ಒಬ್ಬ ವ್ಯಕ್ತಿಯ ಕ್ರೆಡಿಟ್ ಸ್ಕೋರ್ ಎಷ್ಟು ಎನ್ನುವುದನ್ನು ಲೆಕ್ಕಾಚಾರ ಹಾಕುವುದು ಖಾಸಗಿ ವ್ಯವಸ್ಥೆ. ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ಪಡೆದಿರುವ ನಾಲ್ಕು ಖಾಸಗಿ ಕಂಪನಿಗಳು ಗ್ರಾಹಕರ ಮಾಹಿತಿಯನ್ನು ಬ್ಯಾಂಕ್‌ಗಳಿಂದ ಪಡೆದು ಕ್ರೆಡಿಟ್ ಸ್ಕೋರ್ ಲೆಕ್ಕಾಚಾರ ಹಾಕುತ್ತವೆ.


ಯಾವುದೇ ವ್ಯಕ್ತಿಗೆ ಆಗಲಿ ಕ್ರೆಡಿಟ್ ಸ್ಕೋರ್ ಸೃಷ್ಟಿಯಾಗಬೇಕು ಎಂದರೆ, ಆತ/ಆಕೆ ಒಮ್ಮೆಯಾದರೂ ಸಾಲ ಮಾಡಿರಲೇಬೇಕು ಇಲ್ಲವೇ ಕ್ರೆಡಿಟ್ ಕಾರ್ಡ್ ಹೊಂದಿರಬೇಕು. ಸಾಲ ಮಾಡಿದ ನಂತರವೇ ಅವರ ಕ್ರೆಡಿಟ್ ಅಂಕಗಳ ಖಾತೆ ಚಾಲನೆಗೊಳ್ಳುತ್ತದೆ. ಒಬ್ಬರು ಎಷ್ಟು ಸಾಲ ಮಾಡಿದ್ದಾರೆ, ಅವರ ಮರುಪಾವತಿ ಹೇಗಿದೆ ಮುಂತಾದ ಮಾಹಿತಿ ಇರುವ ಸಾಲ ಇತಿಹಾಸವನ್ನು (ಕ್ರೆಡಿಟ್ ಹಿಸ್ಟರಿ) ಸೂಚಿಸುವ 300–900ರ ನಡುವಿನ ಅಂಕಗಳೇ ಕ್ರೆಡಿಟ್ ಸ್ಕೋರ್. 750ರ ನಂತರ ಸ್ಕೋರ್ ಹೆಚ್ಚು ಇದ್ದಷ್ಟೂ ಅವರಿಗೆ ಸಾಲ ಸಿಗುವ ಸಾಧ್ಯತೆ ಹೆಚ್ಚುತ್ತದೆ. ಅತಿ ಕಡಿಮೆ ಇದ್ದರೆ ಅವರಿಗೆ ಸಾಲವೇ ಸಿಗುವುದಿಲ್ಲ. ಗ್ರಾಹಕರಿಗೆ ಸಾಲ ಕೊಡಬೇಕೋ ಬೇಡವೋ ಎನ್ನುವುದರಿಂದ ಹಿಡಿದು ಎಷ್ಟು ಸಾಲ ಕೊಡಬೇಕು ಎನ್ನುವವರೆಗೆ ಬ್ಯಾಂಕ್‌ಗಳು, ವಿಮಾ ಕಂಪನಿಗಳು, ಎನ್‌ಬಿಎಫ್‌ಸಿಗಳು ನಿರ್ಧರಿಸಲು ಕ್ರೆಡಿಟ್ ಸ್ಕೋರ್ ಆಧಾರವಾಗಿದೆ. ಸಾಲ ಪಡೆದವರು ಸಾಲದ ಕಂತುಗಳನ್ನು ಕಟ್ಟುವಲ್ಲಿ ವಿಫಲವಾದರೂ ಕ್ರೆಡಿಟ್ ಸ್ಕೋರ್ ಕುಸಿಯುತ್ತದೆ.

> ಗ್ರಾಹಕರು ವರ್ಷಕ್ಕೆ ಒಂದು ಬಾರಿ ಈ ನಾಲ್ಕೂ ಕಂಪನಿಗಳಿಂದ ಉಚಿತವಾಗಿ ತಮ್ಮ ಕ್ರೆಡಿಟ್ ಸ್ಕೋರ್ ತಿಳಿಯಬಹುದು. ಸ್ಕೋರ್ ಪಡೆಯುವುದಕ್ಕೆ ಮಿತಿ ಏನಿಲ್ಲ. ಹೆಚ್ಚು ಬಾರಿ ಬೇಕಾದರೆ ಕಂಪನಿಗಳಿಗೆ ಶುಲ್ಕ ಪಾವತಿಸಬೇಕಾಗಬಹುದು. ಇದಲ್ಲದೆ, ಖಾತೆ ಹೊಂದಿರುವ ಬ್ಯಾಂಕುಗಳ ಮೂಲಕವೂ ಕ್ರೆಡಿಟ್ ಸ್ಕೋರ್ ತಿಳಿದುಕೊಳ್ಳಬಹುದು.

ವ್ಯಕ್ತಿ ಪಡೆದ ಒಟ್ಟು ಸಾಲಗಳು, ಅದರ ಬಡ್ಡಿ, ಮರುಪಾವತಿ ಇತ್ಯಾದಿ ಮಾಹಿತಿ ಒಳಗೊಂಡ ವರದಿಯನ್ನು ಕ್ರೆಡಿಟ್ ಇನ್‌ಫರ್ಮೇಷನ್ ರಿಪೋರ್ಟ್ (ಸಿಐಆರ್) ಎನ್ನುತ್ತಾರೆ. ಸಿಐಆರ್, ಬ್ಯಾಂಕ್ ದಾಖಲೆಗಳಲ್ಲಿ ನಮೂದಾಗಿರುವ ಹೆಸರು, ಪ್ಯಾನ್ ನಂಬರ್, ಹುಟ್ಟಿದ ದಿನಾಂಕ ಮುಂತಾದ ವೈಯಕ್ತಿಕ ಮಾಹಿತಿ, ಖಾತೆದಾರನ ವಿಳಾಸ, ಫೋನ್ ನಂಬರ್, ಇ–ಮೇಲ್ ಐಡಿ, ಖಾತೆದಾರನ ಉದ್ಯೋಗ ಮಾಹಿತಿ (ಕೆಲಸದ ಸ್ವರೂಪ, ಆದಾಯ) ಮತ್ತು ಖಾತೆದಾರನ ಸಾಲದ ಸ್ಥಿತಿಗತಿ (ಗೃಹ ಸಾಲ, ವಾಹನ ಸಾಲ ಇತ್ಯಾದಿ ಯಾವ ಮೂಲಗಳಿಂದ ಎಷ್ಟು ಸಾಲ ಪಡೆದಿದ್ದಾರೆ, ಮರುಪಾವತಿ ಹೇಗಿದೆ) ಮಾಹಿತಿಯನ್ನು ಒಳಗೊಂಡಿರುತ್ತದೆ.

ಕಂಪನಿಗಳಿಗೂ ಕ್ರೆಡಿಟ್ ಸ್ಕೋರ್ (ಸಿಸಿಆರ್) ಲೆಕ್ಕ ಹಾಕಲಾಗುತ್ತದೆ. ಕಂಪನಿಗಳ ಸ್ಕೋರ್ 1–10ರವರೆಗಿನ ಅಂಕಿಗಳನ್ನು ಒಳಗೊಂಡಿದ್ದು 1 ಅತ್ಯುತ್ತಮ ಸ್ಕೋರ್ ಆಗಿದ್ದರೆ, 10 ಅತಿ ಕಳಪೆ ಸ್ಕೋರ್ ಎಂದು ಪರಿಗಣಿತವಾಗಿದೆ.

ಕ್ರೆಡಿಟ್ ಸ್ಕೋರ್, ಇಂದು ಬ್ಯಾಂಕಿಂಗ್ ಕ್ಷೇತ್ರದ ಅನಿವಾರ್ಯ ವ್ಯವಸ್ಥೆ. ಬ್ಯಾಂಕ್/ಹಣಕಾಸು ಸಂಸ್ಥೆಗಳ ಸಾಲ ವ್ಯವಸ್ಥೆಯ ಆರೋಗ್ಯ ಕಾಪಾಡಲು ನೆರವಾಗುತ್ತಿರುವ ಈ ವ್ಯವಸ್ಥೆ, ಕೆಲವು ಗ್ರಾಹಕರಿಗೆ ಚಕ್ರವ್ಯೂಹವಾಗಿಯೂ ಮಾರ್ಪಟ್ಟಿದೆ. ರೈತರು, ಕಾರ್ಮಿಕರು ಮುಂತಾದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೂ ಸಾಲ ನೀಡಲು ಬ್ಯಾಂಕುಗಳು ಕ್ರೆಡಿಟ್ ಸ್ಕೋರ್ ಪರಿಗಣಿಸುತ್ತಿರುವುದರ ವಿರುದ್ಧ ಟೀಕೆ, ವಿರೋಧ ವ್ಯಕ್ತವಾಗುತ್ತಲೇ ಇದೆ.



- **ಕಳಪೆ:** ಸಾಲ/ಕ್ರೆಡಿಟ್ ಕಾರ್ಡ್ ಮರುಪಾವತಿ ವಿಳಂಬ, ಸುಸ್ತಿ ಸಾಲ ಇರುವುದನ್ನು ಬಿಂಬಿಸುತ್ತದೆ
- **ಸಾಧಾರಣ:** ಸಾಲದ ಕಂತಿನ ಮರುಪಾವತಿಗೆ ಕಷ್ಟಪಡುವುದನ್ನು ತೋರಿಸುತ್ತದೆ
- **ಉತ್ತಮ:** ಸಾಲ/ಕ್ರೆಡಿಟ್ ಕಾರ್ಡ್ ಕಂತನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡಿರುವುದನ್ನು ಖಚಿತ ಪಡಿಸುತ್ತದೆ
- **ಅತ್ಯುತ್ತಮ:** ಸಾಲದ ಮರಪಾವತಿಯನ್ನು ಸಮಯಕ್ಕೆ ಸರಿಯಾಗಿ ಮತ್ತು ಪೂರ್ಣವಾಗಿ ಮಾಡಿರುವುದನ್ನು ದೃಢಪಡಿಸುತ್ತದೆ

ಬ್ಯಾಂಕುಗಳು ಸಾಲ ನೀಡುವಾಗ ಗ್ರಾಹಕನ ಕ್ರೆಡಿಟ್ ಸ್ಕೋರ್ **750**ಕ್ಕಿಂತಲೂ ಹೆಚ್ಚು ಇರುವುದನ್ನು ಬಯಸುತ್ತವೆ.

ದೇಶದಲ್ಲಿವೆ ನಾಲ್ಕು ಕಂಪನಿಗಳು

ಭಾರತದಲ್ಲಿ ನಾಲ್ಕು ಕಂಪನಿಗಳು ಕ್ರೆಡಿಟ್ ರೇಟಿಂಗ್ ನೀಡುತ್ತವೆ. ಈ ನಾಲ್ಕೂ ಸಂಸ್ಥೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಪರವಾನಗಿ ನೀಡಿದೆ.

1. **ಟ್ರಾನ್ಸ್‌ಯೂನಿಯನ್ ಕ್ರೆಡಿಟ್ ಇನ್ಫರ್ಮೇಷನ್ ಬ್ಯೂರೊ (ಇಂಡಿಯಾ) ಲಿಮಿಟೆಡ್ (ಸಿಬಿಲ್)**
2. **ಈಕ್ವಿಫಾಕ್ಸ್ ಕ್ರೆಡಿಟ್ ಇನ್ಫರ್ಮೇಷನ್ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್**
3. **ಎಕ್ಸ್‌ಪೀರಿಯನ್ ಕ್ರೆಡಿಟ್ ಇನ್ಫರ್ಮೇಷನ್ ಕಂಪನಿ ಆಫ್ ಇಂಡಿಯಾ ಪ್ರೈವೆಟ್ ಲಿಮಿಟೆಡ್**
4. **ಸಿಆರ್‌ಐಎಫ್ ಹೈ ಮಾರ್ಕ್ ಇನ್ಫರ್ಮೇಷನ್ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್**

ಕ್ರೆಡಿಟ್ ಇನ್ಫರ್ಮೇಷನ್ ಕಂಪನಿಗಳ (ನಿಯಂತ್ರಣ) ಕಾಯ್ದೆ –2005 ಮತ್ತು ಕ್ರೆಡಿಟ್ ಇನ್ಫರ್ಮೇಷನ್ ಕಂಪನಿಗಳ ನಿಯಮಗಳು–2006ರ ಅನುಸಾರ ಆರ್‌ಬಿಐ ಈ ಕಂಪನಿಗಳನ್ನು ನಿಯಂತ್ರಿಸುತ್ತದೆ.

ಈ ನಾಲ್ಕು ಕಂಪನಿಗಳ ಪೈಕಿ ಹೆಚ್ಚು ಜನಪ್ರಿಯತೆ ಗಳಿಸಿರುವುದು ಸಿಬಿಲ್. ಕ್ರೆಡಿಟ್ ಸ್ಕೋರ್ ನೀಡಲು ಆರಂಭಿಸಿದ ದೇಶದ ಮೊದಲ ಸಂಸ್ಥೆ ಇದು. 2000ದಲ್ಲಿ ಸ್ಥಾಪನೆಗೊಂಡಿದೆ. ಇದು ಎಷ್ಟು ಜನಪ್ರಿಯ ಎಂದರೆ, ಕ್ರೆಡಿಟ್ ಸ್ಕೋರ್‌ಗೆ ಅನ್ವರ್ಥವಾಗಿ ‘ಸಿಬಿಲ್ ಸ್ಕೋರ್’ ಎಂಬ ಪದವೇ ಬಳಕೆಯಲ್ಲಿದೆ. 2003ರಲ್ಲಿ ಕಂಪನಿಯು ಷಿಕಾಗೊದ ಕ್ರೆಡಿಟ್ ಬ್ಯೂರೊ ಸಂಸ್ಥೆ ಟ್ರಾನ್ಸ್‌ಯೂನಿಯನ್ ಜೊತೆ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿತ್ತು. ಉಳಿದ ಮೂರನ್ನೂ ಅಮೆರಿಕದ ಕಂಪನಿಗಳು ನಿಯಂತ್ರಿಸುತ್ತಿವೆ.

ಕ್ರೆಡಿಟ್ ಸ್ಕೋರ್‌ನ ಲೆಕ್ಕಾಚಾರ ಹೇಗೆ?

ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಗ್ರಾಹಕರ ಸಾಲ ಮತ್ತು ಕ್ರೆಡಿಟ್ ಕಾರ್ಡ್ ಪಾವತಿ ವಿವರಗಳನ್ನು ತಿಂಗಳಿಗೊಮ್ಮೆ (ಇನ್ನು 15 ದಿನಗಳಿಗೊಮ್ಮೆ ನೀಡಬೇಕು ಎಂದು ಆರ್‌ಬಿಐ ಇತ್ತೀಚೆಗೆ ಆದೇಶ ಹೊರಡಿಸಿದೆ) ಕ್ರೆಡಿಟ್ ಇನ್ಫರ್ಮೇಷನ್ ಕಂಪನಿಗಳಿಗೆ ನೀಡುತ್ತವೆ. ಈ ಮಾಹಿತಿಯ ಆಧಾರದಲ್ಲಿ ಕಂಪನಿಗಳು ಆಯಾ ಗ್ರಾಹಕರ ಕ್ರೆಡಿಟ್ ಸ್ಕೋರ್ ಅನ್ನು ಲೆಕ್ಕಹಾಕಿ ಕ್ರೆಡಿಟ್ ಇನ್ಫರ್ಮೇಷನ್ ವರದಿಯನ್ನು (ಸಿಐಆರ್) ಬ್ಯಾಂಕುಗಳು/ಹಣಕಾಸು ಸಂಸ್ಥೆಗಳಿಗೆ ನೀಡುತ್ತವೆ. ಗ್ರಾಹಕರ ಸಾಲದ ಅರ್ಜಿಯನ್ನು ಪರಿಶೀಲಿಸುವಾಗ ಬ್ಯಾಂಕುಗಳು ಈ ಕ್ರೆಡಿಟ್ ಸ್ಕೋರ್ ಪರಿಗಣಿಸುತ್ತವೆ.

ಕ್ರೆಡಿಟ್ ಸ್ಕೋರ್ ಲೆಕ್ಕ ಹಾಕುವಾಗ ಕಂಪನಿಗಳು ಹಲವು ಮಾನದಂಡಗಳನ್ನು ಪರಿಗಣಿಸುತ್ತವೆ.

ವ್ಯಕ್ತಿಯೊಬ್ಬರ ಸಾಲ/ಕ್ರೆಡಿಟ್ ಕಾರ್ಡ್ ಕಂತಿನ ಮರುಪಾವತಿಯ ವಿವರ, ಸಾಲ ಬಳಕೆ ಅನುಪಾತ (ಆದಾಯ ಮತ್ತು ಸಾಲದ ಅನುಪಾತ), ಹಲವು ಸಾಲಗಳು, ಕ್ರೆಡಿಟ್ ಕಾರ್ಡ್ ಬಳಕೆ, ಅಡಮಾನ ಇಲ್ಲದೆ ಪಡೆದಿರುವ ಸಾಲಗಳು ಮುಂತಾದ ವಿಚಾರಗಳನ್ನು ಅವಲೋಕಿಸಿ ಕ್ರೆಡಿಟ್ ಸ್ಕೋರ್ ಅನ್ನು ಲೆಕ್ಕಹಾಕಲಾಗುತ್ತದೆ. ಪ್ರತಿ ಕಂಪನಿ ನೀಡುವ ಸ್ಕೋರ್‌ನಲ್ಲಿ ವ್ಯತ್ಯಾಸ ಇರುತ್ತದೆ.

ಪಾರದರ್ಶಕತೆಯ ಕೊರತೆ: ಆಕ್ಷೇಪ

ದೇಶದಲ್ಲಿರುವ ನಾಲ್ಕು ಕ್ರೆಡಿಟ್ ರೇಟಿಂಗ್ ಕಂಪನಿಗಳು ಖಾಸಗಿಯವು. ಒಂದನ್ನು ಬಿಟ್ಟು ಉಳಿದ ಮೂರು ಕಂಪನಿಗಳು ನೇರವಾಗಿ ಅಮೆರಿಕದ ಕಂಪನಿಗಳ ಹಿಡಿತದಲ್ಲಿವೆ. ಇವುಗಳು ನೀಡುವ ಕ್ರೆಡಿಟ್ ರೇಟಿಂಗ್‌ನಲ್ಲಿ ಪಾರದರ್ಶಕತೆಯ ಕೊರತೆ ಇದೆ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಸಂಸತ್ತಿನಲ್ಲೇ ಈ ಬಗ್ಗೆ ಚರ್ಚೆ ನಡೆದಿದೆ. ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರು ಇದರ ಬಗ್ಗೆ ಹಲವು ಬಾರಿ ಧ್ವನಿ ಎತ್ತಿದ್ದಾರೆ.

ಹಣಕಾಸಿನ ವ್ಯವಹಾರಗಳಿಗೆ ಈಗ ಕ್ರೆಡಿಟ್ ಸ್ಕೋರ್ ಬಹಳ ಮುಖ್ಯ. ಗ್ರಾಹಕರು ಸಕಾಲದಲ್ಲಿ ಸಾಲ, ಕ್ರೆಡಿಟ್ ಕಾರ್ಡ್‌ನ ಕಂತು ಪಾವತಿಸಿದ್ದರೂ ಬ್ಯಾಂಕುಗಳ ನಿರ್ಲಕ್ಷ್ಯ ಅಥವಾ ಕ್ರೆಡಿಟ್ ರೇಟಿಂಗ್ ಸಂಸ್ಥೆಗಳು ಲೆಕ್ಕ ಹಾಕುವಾಗ ಆಗುವ ತಪ್ಪುಗಳಿಂದಾಗಿ ಕಡಿಮೆ ಕ್ರೆಡಿಟ್ ಸ್ಕೋರ್ ದೊರೆತು ಅವರಿಗೆ ಸಾಲ ಸಿಗದಿರುವ ನಿದರ್ಶನಗಳೂ ಇವೆ (ನೀಡಿರುವ ಕ್ರೆಡಿಟ್ ಸ್ಕೋರ್ ಬಗ್ಗೆ ಆಕ್ಷೇಪ ಇದ್ದರೆ ಕಾನೂನು ಹೋರಾಟಕ್ಕೆ ಅವಕಾಶ ಇದೆ). ಕ್ರೆಡಿಟ್ ಇನ್ಫರ್ಮೇಷನ್ ವರದಿ ಸಿದ್ಧಪಡಿಸುವಾಗ ಕ್ರೆಡಿಟ್ ರೇಟಿಂಗ್ ಸಂಸ್ಥೆಗಳು ಪಾರದರ್ಶಕತೆ ಕಾಪಾಡುತ್ತಿಲ್ಲ ಎನ್ನುವ ಆರೋಪವೂ ಇದೆ.

ಮೊದಲೆಲ್ಲ ಬ್ಯಾಂಕುಗಳು, ಇತರ ಹಣಕಾಸು ಸಂಸ್ಥೆಗಳು ತಿಂಗಳಿಗೊಮ್ಮೆ ಕ್ರೆಡಿಟ್ ರೇಟಿಂಗ್ ಸಂಸ್ಥೆಗಳಿಗೆ ಗ್ರಾಹಕರ ಸಾಲ ಪಾವತಿ ವಿವರಗಳನ್ನು ನೀಡುತ್ತಿದ್ದವು. ಇನ್ನು ಮುಂದೆ ತಿಂಗಳಿಗೆ ಎರಡು ಸಲ ನೀಡಬೇಕು ಎಂದು ಆರ್‌ಬಿಐ ಆದೇಶಿಸಿದೆ. ರೇಟಿಂಗ್‌ನಲ್ಲಿ ಪಾರದರ್ಶಕತೆ ತರುವ ದಿಸೆಯಲ್ಲಿ ಆರ್‌ಬಿಐ ಈ ನಿರ್ಧಾರ ಕೈಗೊಂಡಿದೆ ಎಂದು ಹೇಳಲಾಗುತ್ತಿದೆ.

ರೈತರಿಗೆ ಸಂಕಷ್ಟ

ಬ್ಯಾಂಕುಗಳು ಸಾಲ ನೀಡುವಾಗ ಕ್ರೆಡಿಟ್ ಸ್ಕೋರ್ ಪರಿಗಣಿಸುವುದರಿಂದ ಕರ್ನಾಟಕ ಸೇರಿದಂತೆ ದೇಶದ ಹಲವೆಡೆ ಲಕ್ಷಾಂತರ ರೈತರಿಗೆ ತೊಂದರೆಯಾಗುತ್ತಿದೆ. ರೈತರು ಕೃಷಿ ಸಾಲ ಪಡೆಯುದಕ್ಕಾಗಿ ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಿದಾಗ ಅವರ ಕ್ರೆಡಿಟ್ ಸ್ಕೋರ್ ಕಡಿಮೆ ಇದೆ ಎಂಬ ಕಾರಣಕ್ಕೆ ಸಾಲ ತಿರಸ್ಕರಿಸಲಾಗುತ್ತಿದೆ. ಬರ, ಅತಿವೃಷ್ಟಿಯಿಂದಾಗಿ ಬೆಳೆ ನಷ್ಟ ಅನುಭವಿಸಿದ ಸಂದರ್ಭದಲ್ಲಿ ಸಕಾಲದಲ್ಲಿ ರೈತರಿಗೆ ಸಾಲ ಮರುಪಾವತಿಸಲು ಆಗದೇ ಇದ್ದಾಗ, ಅವರ ಕ್ರೆಡಿಟ್ ಸ್ಕೋರ್ ಕಡಿಮೆಯಾಗುತ್ತದೆ. ಇದು ಮತ್ತೆ ಅವರಿಗೆ ಸಾಲ ಸಿಗದಂತೆ ಮಾಡುತ್ತದೆ.

ಕರ್ನಾಟಕದಲ್ಲಿ ಇದರ ವಿರುದ್ಧ ರೈತ ಸಂಘಟನೆಗಳು ಹೋರಾಟ ನಡೆಸುತ್ತಿದ್ದು, ರೈತರಿಗೆ ಸಾಲ ನೀಡುವಾಗ ಕ್ರೆಡಿಟ್ ಸ್ಕೋರ್ ಅನ್ನು ಬ್ಯಾಂಕುಗಳು ಪರಿಗಣಿಸಬಾರದು ಎಂದು ಆಗ್ರಹಿಸುತ್ತಲೇ ಬಂದಿವೆ. ಕಳೆದ ವರ್ಷ ಮಹಾರಾಷ್ಟ್ರದಲ್ಲೂ ಈ ವಿಚಾರ ಚರ್ಚೆ ಹುಟ್ಟುಹಾಕಿತ್ತು. ರೈತರ ಒತ್ತಡಕ್ಕೆ ಮಣಿದಿದ್ದ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕುಗಳು ಕೃಷಿ ಸಾಲ ನೀಡುವಾಗ ಕ್ರೆಡಿಟ್ ರೇಟ್ ಪರಿಗಣಿಸಿದರೆ ಎಫ್‌ಐಆರ್ ದಾಖಲಿಸುವ ಎಚ್ಚರಿಕೆಯನ್ನು ನೀಡಿತ್ತು.


ಆಧಾರ: ಪಿಟಿಐ, ಸಿಬಿಲ್ ವೆಬ್‌ಸೈಟ್, ಆರ್‌ಬಿಐ ವೆಬ್‌ಸೈಟ್

ಶ್ರೀಕಾಂತ್ ಜೊತೆ ಪ್ರಣಮ್ ಮತ್ತೊಂದು ಸಿನಿಮಾ

ನಟ ದೇವರಾಜ್ ಅವರ ಕಿರಿಯ ಪುತ್ರ ಪ್ರಣಮ್ ದೇವರಾಜ್ ಸದ್ಯ ‘ಸನ್ ಆಫ್ ಮುತ್ತಣ್ಣ’ ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಈ ಸಿನಿಮಾ ಮಾರ್ಚ್‌ನಲ್ಲಿ ತೆರೆಕಾಣಲಿದೆ. ಇದೇ ಸಂದರ್ಭದಲ್ಲಿ ಮತ್ತೊಂದು ಸಿನಿಮಾವನ್ನು ಅವರು ಒಪ್ಪಿಕೊಂಡಿದ್ದಾರೆ.

‘ಸನ್ ಆಫ್ ಮುತ್ತಣ್ಣ’ ಸಿನಿಮಾ ನಿರ್ದೇಶಿಸಿರುವ ಶ್ರೀಕಾಂತ್ ಹುಣಸೂರು ಅವರೇ ಪ್ರಣಮ್ ನಟನೆಯ ಹೊಸ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ‘ಸನ್ ಆಫ್ ಮುತ್ತಣ್ಣ’ ಸಿನಿಮಾ ನಿರ್ಮಾಣ ಮಾಡಿದ್ದ ಪುರಾತನ ಫಿಲಂಸ್ ಸಂಸ್ಥೆಯೇ ಈ ಸಿನಿಮಾವನ್ನು ನಿರ್ಮಾಣ ಮಾಡಲಿದೆ. ಇದು ಪುರಾತನ ಫಿಲಂಸ್‌ನ ಎರಡನೇ ಸಿನಿಮಾವಾಗಿದ್ದು, ಸದ್ಯ ಚಿತ್ರಕ್ಕೆ ‘ಪ್ರೊಡಕ್ಷನ್ ನಂ.2’ ಎಂಬ ಶೀರ್ಷಿಕೆ ಇಡಲಾಗಿದೆ. ಶ್ರೀಕಾಂತ್ ಹುಣಸೂರು ಅವರೇ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದಾರೆ.

‘ಸನ್ ಆಫ್ ಮುತ್ತಣ್ಣ’ ಚಿತ್ರದಲ್ಲಿ ತಂದೆ-ಮಗನ ಬಾಂಧವ್ಯದ ಕಥೆ ಹೇಳ ಹೊರಟಿರುವ ಶ್ರೀಕಾಂತ್, ಈ ಚಿತ್ರದ ಮೂಲಕ ಆ್ಯಕ್ಷನ್ ಹಿನ್ನೆಲೆಯಲ್ಲಿ ನಡೆಯುವ ಪ್ರೇಮ ಕಥೆಯನ್ನು ಹೇಳಿದ್ದಾರಂತೆ. ಮಾರ್ಚ್‌ನಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ.


ಪ್ರಣಮ್ ದೇವರಾಜ್

‘ಕಲ್ಟ್’ಗೆ ಕೆ.ವಿ.ಎನ್. ಸಾಥ್

‘ಬನಾರಸ್’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟ ಝೈದ್ ಖಾನ್ ನಟನೆಯ ‘ಕಲ್ಟ್’ ಸಿನಿಮಾದ ಚಿತ್ರೀಕರಣ ಅಂತಿಮ ಹಂತದಲ್ಲಿದೆ. ಇದೇ ಸಂದರ್ಭದಲ್ಲಿ ಕೆ.ವಿ.ಎನ್. ಪ್ರೊಡಕ್ಷನ್ಸ್ ಸಂಸ್ಥೆ ‘ಕಲ್ಟ್’ ಚಿತ್ರವನ್ನು ಪ್ರಸ್ತುತಪಡಿಸುತ್ತಿರುವುದಾಗಿ ಚಿತ್ರತಂಡ ತಿಳಿಸಿದೆ.

ಈ ಸಿನಿಮಾದಲ್ಲಿ ಝೈದ್ ಖಾನ್‌ಗೆ ‘ಉಪಾಧ್ಯಕ್ಷ’ ಚಿತ್ರದ ನಿರ್ದೇಶಕ ಅನಿಲ್ ಕುಮಾರ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಮಂಗಳವಾರ(ಫೆ.11) ಝೈದ್ ಖಾನ್ ಜನ್ಮದಿನದ ಸಂದರ್ಭದಲ್ಲಿ ಚಿತ್ರದ ತುಣುಕು ಬಿಡುಗಡೆಯಾಗಿದೆ. ಇದರಲ್ಲಿ ಮೂರು ಶೇಡ್‌ಗಳಲ್ಲಿ ಝೈದ್ ಕಾಣಿಸಿಕೊಂಡಿದ್ದಾರೆ. ಝೈದ್‌ಗೆ ರಚಿತಾ ರಾಮ್ ಜೋಡಿಯಾಗಿದ್ದು, ಅದ್ದೂರಿಯಾಗಿ ಸಿನಿಮಾ ನಿರ್ಮಾಣವಾಗುತ್ತಿದೆ.

ಲೋಕಿ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದ್ದು, ಚಿತ್ರದ ಕಥೆಯನ್ನು ಅನಿಲ್ ಕುಮಾರ್ ಬರೆದಿದ್ದಾರೆ. ಜೆ.ಎಸ್ ವಾಲಿ ಛಾಯಾಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕೆ.ಎಂ. ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ.



ಝೈದ್ ಖಾನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಾಕುಂಭ ಮೇಳ ನಡೆಯುತ್ತಿರುವ ಪ್ರಯಾಗ್‌ರಾಜ್‌ನಲ್ಲಿ ಮತ್ತೆ ಭಾರಿ ಅಗ್ನಿ ಅನಾಹುತ ಸಂಭವಿಸಿದೆ ಎಂದು ಹೇಳಿಕೊಳ್ಳುತ್ತಾ ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು ವಾಹನಗಳು ಹೊತ್ತಿ ಉರಿಯುತ್ತಿರುವ ವಿಡಿಯೊ ಅನ್ನು ಪೋಸ್ಟ್ ಮಾಡಿದ್ದಾರೆ. ‘ಮಹಾ ಕುಂಭದಲ್ಲಿ 3ನೇ ಬಾರಿಗೆ ಬೆಂಕಿ ಅನಾಹುತ ಸಂಭವಿಸಿದೆ. ಮಹಾಕುಂಭ ಬಸ್ ನಿಲ್ದಾಣದಲ್ಲಿ ಬೆಂಕಿ ಕಂಡುಬಂದಿದ್ದು, 40ರಿಂದ 50 ವಾಹನಗಳು ಸುಟ್ಟು ಭಸ್ಮವಾಗಿವೆ ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ಗ್ಲೋಬಲ್ ನ್ಯೂಸ್ ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ 2020ರ ಜುಲೈ 15ರಂದು ಅಪ್‌ಲೋಡ್ ಮಾಡಿದ ಇದೇ ವಿಡಿಯೊ ಸಿಕ್ಕಿತು. ‘ಈಜಿಪ್ಟ್‌ನ ಪೈಪ್‌ಲೈನ್‌ನಲ್ಲಿ ಬೆಂಕಿ ಅನಾಹುತ ಸಂಭವಿಸಿದ್ದು, ಕಾರುಗಳು ಸುಟ್ಟು ಕರಕಲಾಗಿವೆ’ ಎಂದು ಅದರಲ್ಲಿ ಹೇಳಲಾಗಿತ್ತು. ಅದೇ ದೃಶ್ಯಗಳಿರುವ ಮತ್ತೊಂದು ವಿಡಿಯೊ ಕೂಡ ಯೂಟ್ಯೂಬ್‌ನಲ್ಲಿ ಸಿಕ್ಕಿತು.‘ಕೈರೋ–ಇಸ್ಲಾಮಿಯಾ ಮರುಭೂಮಿ ರಸ್ತೆಯಲ್ಲಿ ಭೂಗತ ಅನಿಲ ಪೈಪ್‌ಲೈನ್ ಸ್ಫೋಟ’ ಎಂಬ ತಲೆಬರಹವನ್ನು ಅದಕ್ಕೆ ನೀಡಲಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಈಜಿಪ್ಟ್‌ನಲ್ಲಿ ನಡೆದ ದುರ್ಘಟನೆಯ ಕುರಿತ ವರದಿಗಳು ಸಿಕ್ಕಿದವು. 2020ರಲ್ಲಿ ಈಜಿಪ್ಟ್‌ನಲ್ಲಿ ನಡೆದ ಘಟನೆಯನ್ನು ಮಹಾಕುಂಭದಲ್ಲಿ ನಡೆದ ಅಗ್ನಿ ಅವಘಡ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ಮಾಡಿದೆ.

ಗುಂಡಣ್ಣ



ಅಹಿಂಸಾ ಪರಮೋಧರ್ಮ

ನುಡಿ ಬೆಳಗು — ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 130



ಅವರನ್ನು ಮುಗಿಸಿಬಿಡ್ತೀವಿ, ಇವರನ್ನು ಮುಗಿಸಿಬಿಡ್ತೀವಿ ಅಂತಿರ್ತೀವಿ. ಆದರೆ ಒಂದು ತಿಳಕೋಬೇಕು. ಯಾರೂ ಈ ಭೂಮಿಯ ಮೇಲೆ ಶಾಶ್ವತ ಅಲ್ಲ. ಎಲ್ಲರೂ ಒಂದಲ್ಲ ಒಂದು ದಿನ ಸಾಯುವವರೆ. ಆದರೆ ಸಾಯಿಸುವವರು ಯಾವತ್ತೂ ಹೀರೊಗಳಾಗಲ್ಲ. ಸಾಯುವ ವ್ಯಕ್ತಿಗಳನ್ನು ಬದುಕಿಸುವವರು ಹೀರೊಗಳಾಗುತ್ತಾರೆ. ಅದಕ್ಕೆ ನಾವು ಬದುಕಿಸೋದನ್ನು ಕಲಿಯಬೇಕು. ಈ ಜಗತ್ತೇನಿದೆ ಇದು ದೇವನ ಜಗತ್ತು. ಇದನ್ನು ತಿಳಕೊಂಡು ಅದನ್ನು ಗೌರವಿಸಬೇಕು, ಪ್ರೀತಿಸಬೇಕು, ಆದರಿಸಬೇಕು.

ಕಾಡು ಐತಿ. ಮರಗಿಡಗಳು, ಪ್ರಾಣಿ ಪಕ್ಷಿಗಳು ಕಾಣುತ್ತವೆ. ಆದರೆ, ಕಾಡು ಎಲ್ಲಿ ಕಾಣತೈತಿ. ನದಿ ತೊರೆ ಎಲ್ಲಾ ಕಾಣುತ್ತವೆ. ಆದರೆ ಕಾಡು ಕಾಣೋದಿಲ್ಲ. ಮರಗಿಡ, ಪ್ರಾಣಿ ಪಕ್ಷಿ, ನೀರು ತೊರೆ ಎಲ್ಲ ಸೇರಿ ಕಾಡು ಆಗೈತಿ. ಕಾಡು ಅನ್ನೋದನ್ನು ಪ್ರತ್ಯೇಕವಾಗಿ ತೋರಿಸು ಎಂದರೆ ಸಾಧ್ಯವಾಗೋದಿಲ್ಲ. ಹಾಗೆಯೇ ದೇವರನ್ನು ಪ್ರತ್ಯೇಕವಾಗಿ ತೋರಿಸೋಕೆ ಆಗೋದಿಲ್ಲ. ಈ ಜಗತ್ತನ್ನು ನೋಡಿದರೆ ಅದೇ ದೇವರು. ಇದು ದೇವನ ಜಗತ್ತು ಎಂದು ಪ್ರೀತಿಸಿದರೆ ಅದನ್ನೇ ಅಹಿಂಸೆ ಎಂದು ಕರೆಯುತ್ತಾರೆ. ದೇಹ ಕೆಡಿಸಬೇಡ, ಮನಸ್ಸು ಕೆಡಿಸಬೇಡ, ಜಗತ್ತು ಕೆಡಿಸಬೇಡ. ಇವುಗಳನ್ನೆಲ್ಲ ಕೆಡಿಸದಂತೆ ಬದುಕುವುದೇ ಅಹಿಂಸೆ ಎಂದು ಪತಂಜಲಿ ಮಹರ್ಷಿ ಹೇಳುತ್ತಾರೆ. ಇವುಗಳನ್ನು ಪ್ರೀತಿಸುವುದು ಅಹಿಂಸೆ, ಗೌರವಿಸುವುದು ಅಹಿಂಸೆ. ಅಹಿಂಸೆ ಎಷ್ಟು ದೊಡ್ಡ ಶಬ್ದ ಎಂದರೆ ಅದನ್ನು ಕೇಳದ ಕಿವಿಗಳಿಲ್ಲ, ಅದನ್ನು ತಿಳಿಯದ ಹೃದಯಗಳಿಲ್ಲ. ಅದನ್ನು ಗೌರವಿಸದ ಧರ್ಮಗಳಿಲ್ಲ. ಅದಕ್ಕೆ ಅಹಿಂಸೆ ಪರಮೋಧರ್ಮ. ಧರ್ಮ ತಿಳಿಯಬೇಕಾದರೆ ನಮ್ಮ ಎದೆಯಲ್ಲಿ ಅಹಿಂಸೆ ಇರಬೇಕು. ಅಹಿಂಸೆಯ ಅರ್ಥ ಏನೆಂದರೆ ಈ ಜಗತ್ತಿನಲ್ಲಿ ಏನಿದೆಯೋ ಅದೆಲ್ಲವನ್ನೂ ಪ್ರೀತಿಸುವುದು, ಅದನ್ನು ಗೌರವಿಸುವುದು. ಅಹಿಂಸೆ ಎಂದರೆ ಯಾರನ್ನೂ ಕೊಲ್ಲದಿರುವುದು, ಯಾರಿಗೂ ನೋವು ಮಾಡದಿರುವುದು.

ಬಸವಣ್ಣನವರು ಸುಂದರ ಮಾತು ಹೇಳ್ತಾರೆ. ‘ನಡೆಯಲರಿಯದೆ, ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು? ಅವರ ಸುಖವೇ ಎನ್ನ ಸುಖ, ಅವರ ದುಃಖವೇ ಎನ್ನ ದುಃಖ ಕೂಡಲಸಂಗನ ಶರಣರ ಮನ ನೊಂದಡೆ ಆನು ಬೆಂದೆನಯ್ಯಾ’ ಎನ್ನುತ್ತಾರೆ ಅವರು. ಪೂಜೆ ಎಂದರೆ ಏನು? ನಾವು ಗಿಡಗಳನ್ನು ಹರಿದು ಬಂದು ಕೊಡಗಟ್ಟಲೆ ನೀರು ಸುರಿದು ಪೂಜೆ ಮಾಡುತ್ತೀವಿ. ಆದರೆ ಬಸವಣ್ಣನವರು ಪೂಜೆ ಅಂದರೆ ಬೇರೆಯದೇ ಅಂತಾರೆ. ‘ನಿನ್ನ ನಡೆ ನುಡಿಗಳಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಬದುಕಿದೆ ಎಂದರೆ ಅದೇ ನಿಜವಾದ ಪೂಜೆ’ ಎಂದು ಅವರು ಹೇಳುತ್ತಾರೆ.

ಮನುಷ್ಯನ ಗುಣ ಏನು ಅಂದರೆ, ಇನ್ನೊಬ್ಬರ ದುಃಖ ಕಂಡರೆ ಅವನಿಗೆ ಸಂತೋಷವಾಗುತ್ತದೆ. ಇನ್ನೊಬ್ಬರ ಸಂತೋಷ ಕಂಡು ದುಃಖ ಆಗುತ್ತದೆ. ಮನುಷ್ಯ ಇದನ್ನು ಬಿಡಬೇಕು. ಶಿಶುನಾಳ ಷರೀಫರು ಒಂದು ಬಾರಿ ‘ನಾನು ಬಹಳ ತಪ್ಪು ಮಾಡಿದ್ದೀನಿ. ನನಗೆ ಶಿಕ್ಷೆ ಕೊಡಿ’ ಎಂದರು. ಅದಕ್ಕೆ ಜನರು ಬಾರುಕೋಲು ತಗಂಡು ಅವರಿಗೆ ಹೊಡೆದರು. ಆದರೆ ಅದು ತಾಗಿದ್ದು ಗುರು ಗೋವಿಂದ ಭಟ್ಟರಿಗೆ. ಗೋವಿಂದ ಭಟ್ಟರ ಬೆನ್ನಿನ ಮೇಲೆ ಬಾಸುಂಡೆಗಳು ಮೂಡಿದ್ದವು, ಇದು ಗುರು ಕರುಣೆ. ಅದಕ್ಕೆ ಮನುಷ್ಯ, ಇನ್ನೊಬ್ಬರ ದುಃಖಕ್ಕೆ ಕಣ್ಣೀರು ಹಾಕೋದು ಮತ್ತು ಇನ್ನೊಬ್ಬರ ಸುಖಕ್ಕೆ ಸಂತೋಷ ಪಡೋದು ಕಲಿಯಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 12, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪೂರ್ಣಿಮಾ ಗಂ. 19-23 ನಕ್ಷತ್ರ: ಆಶ್ಲೇಷ ಗಂ. 19-36 ಯೋಗ: ಸೌಭಾಗ್ಯ ಗಂ. 08-07 ಕರಣ: ವಿಷ್ಟಿ ಗಂ. 07-06, ಮಕರ ಮಾಸದ 29 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 2.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ : 06-58 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 13 ಶಬನ್
ಅದೃಷ್ಟ ಸಂಖ್ಯೆ : 3, 6

ಮೇಷ: ರಾಜಕೀಯ ವಲಯದ ಕಾರ್ಯಕರ್ತರಿಗೆ ಮುನ್ನಡೆಯುವ ಅವಕಾಶಗಳು ಕೈ ತಪ್ಪುವ ಸಾಧ್ಯತೆ ಹೆಚ್ಚಿದೆ. ಪೊಲೀಸ್ ಅಧಿಕಾರಿಗಳಿಗೆ ಅಧಿಕ ಕೆಲಸದ ಒತ್ತಡ ಇರಲಿದೆ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಸ್ಥರಿಗೆ ಲಾಭ.

ವೃಷಭ: ಹಣಕಾಸು ಸಂಸ್ಥೆಗೆ ಪಾಲುದಾರರಾಗುವುದು ದಾರಿಯಲ್ಲಿ ಹೋಗುವ ಸಮಸ್ಯೆಯನ್ನು ಮನೆಗೆ ಕರೆತಂದಂತೆ ಆಗುತ್ತದೆ. ಹೊಲದ ಅಥವಾ ಜಮೀನಿನ ಕೆಲಸಕ್ಕೆ ಆಳನ್ನು ಗೊತ್ತು ಮಾಡಿಕೊಳ್ಳುವುದು ಉತ್ತಮ.

ಮಿಥುನ: ವ್ಯವಹಾರಕ್ಕೆ ಸಂಬಂಧಿಸಿದಂತೆ ಮನೆಯಲ್ಲಿ ಹಿರಿಯರ ಮತ್ತು ಮಡದಿಯಲ್ಲಿದ್ದ ನಕಾರಾತ್ಮಕ ಪ್ರತಿಕ್ರಿಯೆಯು ಬದಲಾಗಿ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಉಡುಗೊರೆ ಲಭ್ಯವಾಗಬಹುದು.

ಕರ್ಕಾಟಕ: ಸಂಘ-ಸಂಸ್ಥೆಗಳ ಅಧಿಕಾರ ಪಡೆದುಕೊಳ್ಳುವ ವಿಚಾರದಲ್ಲಿ ಯಾವುದೇ ವಾಮಮಾರ್ಗವನ್ನು ಅನುಸರಿಸಬೇಡಿ. ಸರಿಯಾದ ಮಾರ್ಗವನ್ನು ಮೀನ-ಮೇಷ ಎಣಿಸದೆ ರೂಪಿಸಿ. ಆಭರಣ ವ್ಯಾಪಾರಿಗಳಿಗೆ ಧನಲಾಭ ಪ್ರಾಪ್ತಿ.

ಸಿಂಹ: ಸಂತೋಷ ಕೂಟಗಳಲ್ಲಿ ಭಾಗವಹಿಸುವಾಗ ಗೌರವವನ್ನು ಕಾಪಾಡಿಕೊಳ್ಳುವ ಮತ್ತು ಹೆಚ್ಚಿಸಿಕೊಳ್ಳುವ ಬಗ್ಗೆ ಗಮನವಿರಲಿ. ನಿರೀಕ್ಷಿಸಿದ ಉದ್ಯಮದಲ್ಲಿ ಅಲ್ಲದೆ ಬೇರೆ ಕಡೆ ಅವಕಾಶ ದೊರೆಯಲಿದೆ.

ಕನ್ಯಾ: ಅಭಿವೃದ್ಧಿಯನ್ನು ನೋಡಿ ಬಂಧುಗಳು ಶತ್ರುಗಳಂತೆ ಮನೋಭಾವ ಹೊಂದುವರು. ಸಾಫ್ಟ್‌ವೇರ್ ಕ್ಷೇತ್ರದ ಉದ್ಯೋಗಿಗಳಿಗೆ ಕೆಲಸದಲ್ಲಿ ಉನ್ನತಸ್ಥಾನ ಸಿಗಲಿದೆ. ಗುಣಾತ್ಮಕ ಕಾರ್ಯಗಳಿಗೆ ಮಹತ್ವ ನೀಡುವುದು ಉತ್ತಮ.

ತುಲಾ: ಮನೋಭಿಲಾಷೆಯಂತೆ ನಿಶ್ಚಯಿಸಿದ ಕಾರ್ಯ ಸಾಗುವುದು. ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬೇಡಿ. ಔದ್ಯೋಗಿಕ ವ್ಯವಹಾರದಲ್ಲಿ ನಿರೀಕ್ಷೆಗೆ ತಕ್ಕ ಫಲಗಳು ಪಡೆದುಕೊಳ್ಳುವುದು ಕಷ್ಟವಾಗಬಹುದು.

ವೃಶ್ಚಿಕ: ಅವಕಾಶವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪ್ರಯತ್ನಪಡುವುದು ಅಗತ್ಯ. ಸಾರ್ವಜನಿಕ ಸ್ಥಳದಲ್ಲಿ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ. ಆರೋಗ್ಯ ವೃದ್ಧಿಯಾಗಲಿದೆ.

ಧನು: ವಿನಾಕಾರಣ ಅಲೆದಾಟದಿಂದ ಬೇಸರಪಡುವ ಅವಶ್ಯಕತೆ ಇಲ್ಲ. ಇಂದಿನ ಶ್ರಮ ಮುಂದಿನ ದಿನಕ್ಕೆ ಅಡಿಪಾಯವಾಗಲಿದೆ. ಯಾವುದೇ ಸಮಯದಲ್ಲೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬೇಡಿ.

ಮಕರ: ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯತೆಯ ಸನ್ನಿವೇಶ ಎದುರಾಗುವುದು. ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ.

ಕುಂಭ: ಅಧಿಕಾರಸ್ಥರು ಹಾಗೂ ಹಿರಿಯ ನೌಕರರ ಜತೆ ಸ್ನೇಹ ಸಂಬಂಧ ಬೆಳೆದು ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ. ಉದ್ಯೋಗದ ಸಂದರ್ಶನದಲ್ಲಿ ಧೈರ್ಯದಿಂದ ಮುನ್ನುಗ್ಗಿ, ಶುಭಫಲವನ್ನು ಹೊಂದುವಿರಿ.

ಮೀನ: ಎದುರಾಗಿರುವ ಸದ್ಯದ ಸಮಸ್ಯೆಗಳು ಪರಿಹಾರ ಕಾಣಲಿವೆ. ಅದರ ಫಲಿತಾಂಶ ಸಂತಸವನ್ನು ತರಲಿದೆ. ರಕ್ತದ ಒತ್ತಡ, ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ಬಿಳಿ ಅಥವಾ ಕೆಂಪು ಬಣ್ಣ ಶುಭ ತರಲಿದೆ.

ಪದಬಂಧ 5951

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರವನ್ನೂ ಕೊಚ್ಚಿಕೊಂಡು ಹೋದ ದೊಡ್ಡ ಪ್ರವಾಹ (4)
3.ಸೋಲು ಈ ರೀತಿ ಬಂದಿದೆ (4)
5.ಕೊನೆಗೆ ಬೆಲೆಯನ್ನಿಟ್ಟು ನೀಡಿದ ಸಲುಗೆ! (3)
6.ಭ್ರೂಣವನ್ನು ಆವರಿಸಿರುವ ಪೊರೆ (3)
8.ಸಂಗನ ಬದುಕಿನಲ್ಲಾದ ಘಟನೆ (3)
10.ಆಶ್ರಯವನ್ನು ಹೀಗೆನ್ನಿ (3)
11.ಪಾಯಸ ನೆಕ್ಕುತ್ತಿರುವ ಕಾಗೆ (3)
13.ಅಳುವಿನೊಂದಿಗೆ ಕಾಣಿಸಿರುವ ಹೆದರಿಕೆ (3)
15.ಪೂರ್ವದ ಸ್ಥಿತಿಯಿದು (4)
16.ಯುದ್ಧದ ನಗಾರಿಯಿದು (4)

ಮೇಲಿಂದ ಕೆಳಕ್ಕೆ

1.ಮಜವಾಗಿ ಆಳ್ವಿಕೆ ನಡೆಸಿದ ಚಕ್ರವರ್ತಿ (4)
2.ರಸದಲ್ಲಿನ ಜೋರು! (3)
3.ಮಡಿಕೆ ಅಥವಾ ಸ್ತರ (3)
4.ಕಾಡುಪ್ರಾಣಿ ಇಲ್ಲಿದೆ (4)
7.ಇದು ರಜೋಗುಣಕ್ಕೆ ಸಂಬಂಧಪಟ್ಟದ್ದು (3)
9.ದಾಯಾದಿ ಮಾಡಿರುವ ಪಾವತಿ (3)
10.ಖರ್ಚು ಮತ್ತು ವೆಚ್ಚ (4)
12.ಒಳ್ಳೆಯ ಆಚಾರವುಳ್ಳವನು (4)
13.ದೇವತೆಗಳ ಜನನಿ (3)
14.ಅಷ್ಟ ದಿಕ್ಪಾಲಕರೊಲ್ಲಬ್ಬನಾಗಿರುವ ಅತೀ ಶ್ರೀಮಂತ (3)

1			2	■	3			4
	■	■		■		■	■	
	■	■	5			■	■	
6	7		■	■	■	8	9	
■		■	■	■	■	■		■
10			■	■	■	11		12
	■	■	13		14	■	■	
	■	■		■		■	■	
15				■	16			

5950ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊತ್ತುಗುರಿ 3.ಅನುಭಾವಿ 5.ವಲೀಮುಖ 7.ವಿನ್ಯಾಸ 8.ಅಂತರ್ದೇಶಿಯ 11.ಬಲಿಷ್ಠ 12.ರಸಹೀನ 15.ಕುರುಕ್ಷೇತ್ರ 16.ಅಪಘಾತ

ಮೇಲಿಂದ ಕೆಳಕ್ಕೆ:
1.ಗೊತ್ತುವಳಿ 2.ಗುದಾಮು 3.ಅಗ್ಗ 4.ವಿರಸ 6.ಖಚಿತ 7.ವಿಜಯ 8.ಅಂಗುಷ್ಠ 9.ಶೀಕರ 10.ಜನಹಿತ 11.ಬದುಕು 13.ಸಲ್ಲಾಪ 14.ಪತ್ರ

ಸುಡೊಕು 6336


	8			9		5		3
6	7	5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6335 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಷೇರುಪೇಟೆ ವಹಿವಾಟು 1018



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,381
ಇಂದಿನ ಅಂತ್ಯ	23,071
▼	309
ದಿನದ ಕನಿಷ್ಠ	22,986

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹400-682
ದ್ವಿತಳಿ (ಬಿ.ವಿ)	₹126-820

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14000-14000
ದಾವಣಗೆರೆ	₹12000-12000
ತುರುವೇಕೆರೆ	₹13800-14000

4 ತಿಂಗಳಿನಲ್ಲಿ ಶೇ 3.3ರಷ್ಟು ಕುಸಿತ

ನವದೆಹಲಿ (ಪಿಟಿಐ): ಕಳೆದ ವರ್ಷದ ಅಕ್ಟೋಬರ್‌ನಿಂದ ಪ್ರಸಕ್ತ ವರ್ಷದ ಜನವರಿ ಅಂತ್ಯದವರೆಗೆ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶೇ 3.3ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

ಏಷ್ಯಾದ ಇತರೆ ದೇಶಗಳ ಕರೆನ್ಸಿಗೆ ಹೋಲಿಸಿದರೆ ರೂಪಾಯಿ ಮೌಲ್ಯ ಕುಸಿತದ ಪ್ರಮಾಣ ಕಡಿಮೆಯಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಇದೇ ಅವಧಿಯಲ್ಲಿ ಡಾಲರ್ ಮೌಲ್ಯವು ಶೇ 7ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸಿದ್ದಾಪುರ			
ಕೋಕ	20000-27500	ಬಿಳಿಗೋಟು	21509-23899	ಚಾಲಿ	32099-39281
ಹೊಸತು	30000-36000	ಚಾಲಿ	32569-37899	ಕೆಂಪುಗೋಟು	15609-25009
ಹಳತು	45500-49500	ಕೋಕ	12799-21609	ರಾಶಿ	40099-46991
ಕಾರ್ಕಳ		ಹೊಸಚಾಲಿ	23699-31859	ಯಲ್ಲಾಪುರ	
ಹೊಸತು	25000-36500	ಕೆಂಪುಗೋಟು	19619-21609	ಅಪಿ	61679-65777
ಹಳತು	30000-45500	ರಾಶಿ	42099-48109	ಬಿಳಿಗೋಟು	12899-27161
ಶಿವಮೊಗ್ಗ		ತಟ್ಟಿಬೆಟ್ಟೆ	29099-47009	ಚಾಲಿ	27869-39099
ಬೆಟ್ಟೆ	47529-56800	ಶಿರಸಿ		ಕೋಕ	4600-17399
ಗೊರಬಲು	17000-29716	ಬೆಟ್ಟೆ	27899-40061	ಕೆಂಪುಗೋಟು	14899-28299
ರಾಶಿ	32009-51589	ಬಿಳಿಗೋಟು	13400-28323	ರಾಶಿ	40289-58999
ಸರಕು	54400-93896			ತಟ್ಟಿಬೆಟ್ಟೆ	29099-39189

ವಿನಿಮಯ ದರ

$ ಡಾಲರ್	86.79
£ ಪೌಂಡ್	107.35
€ ಯುರೊ	89.57
¥ ಯೆನ್ (100ಕ್ಕೆ)	58

66 ಪೈಸೆ ಹೆಚ್ಚಳ: ಎರಡು ವರ್ಷದಲ್ಲಿ ದಿನವೊಂದರ ಗರಿಷ್ಠ ಚೇತರಿಕೆ

ರೂಪಾಯಿ ದಾಖಲೆ ಏರಿಕೆ



ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ಇಳಿಕೆಯ ಹಾದಿ ಹಿಡಿದಿದ್ದ ರೂಪಾಯಿ ಮೌಲ್ಯವು, ಮಂಗಳವಾರದ ವಹಿವಾಟಿನಲ್ಲಿ 66 ಪೈಸೆ ಏರಿಕೆ ಆಗಿ ದಾಖಲೆ ಬರೆದಿದೆ.

ಕಳೆದ ಎರಡು ವರ್ಷದಲ್ಲಿ ರೂಪಾಯಿಯು ಗರಿಷ್ಠಮಟ್ಟದಲ್ಲಿ ಏರಿಕೆ ಕಂಡ ದಿನ ಇದಾಗಿದೆ. 2023ರ ಮಾರ್ಚ್ 3ರಂದು 63 ಪೈಸೆ ಏರಿಕೆ ಕಂಡಿತ್ತು. ಪ್ರತೀ ಡಾಲರ್ ಮೌಲ್ಯ ₹86.79 ಆಗಿದೆ.

ಅಮೆರಿಕದ ಸುಂಕ ನೀತಿಯಿಂದಾಗಿ ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ತಲೆದೋರಿದೆ. ಹಾಗಾಗಿ, ಕರೆನ್ಸಿ ವಿನಿಮಯ ಮಾರುಕಟ್ಟೆಯು ಏರಿಳಿತ ಕಾಣುತ್ತಿದೆ. ಬ್ಯಾಂಕ್‌ಗಳು ಡಾಲರ್ ಮಾರಾಟಕ್ಕೆ ಮುಂದಾಗಿರುವುದರಿಂದ ರೂಪಾಯಿ ಮೌಲ್ಯ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಹಿವಾಟಿನ ಆರಂಭದಲ್ಲಿ ₹87.45 ಇದ್ದ ರೂಪಾಯಿ ಮೌಲ್ಯವು, ದಿನದ ವಹಿವಾಟಿನಲ್ಲಿ ₹86.61ಕ್ಕೆ ತಲುಪಿತ್ತು.

ಸೋಮವಾರದ ಆರಂಭಿಕ ವಹಿವಾಟಿನಲ್ಲಿ 45 ಪೈಸೆ ಇಳಿಕೆ ಕಂಡು ₹88ರ ಸಮೀಪಕ್ಕೆ ತಲುಪಿತ್ತು. ದ್ವಿತೀಯಾರ್ಧದ ವಹಿವಾಟಿನಲ್ಲಿ ಅಲ್ಪ ಏರಿಕೆ ಕಂಡಿತು.

ಬ್ಯಾಂಕ್‌ಗಳು ಡಾಲರ್‌ಗಳ ಮಾರಾಟಕ್ಕೆ ಮುಂದಾಗಿವೆ. ಇದರಿಂದ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದ್ದ ರೂಪಾಯಿ ಮತ್ತಷ್ಟು ಚೇತರಿಕೆ ಕಾಣುವ ನಿರೀಕ್ಷೆಯಿದೆ ಎಂದು ತಜ್ಞರು ಹೇಳಿದ್ದಾರೆ.

'ಡಾಲರ್ ಸದೃಢಗೊಳ್ಳುವಿಕೆ ಹಾಗೂ ಅಮೆರಿಕದ ಸುಂಕ ನೀತಿಯಿಂದಾಗಿ ರೂಪಾಯಿ ಮತ್ತೆ ಒತ್ತಡಕ್ಕೆ ಸಿಲುಕುವ ಸಾಧ್ಯತೆಯಿದೆ. ಆದರೆ, ಮುಂದಿನ ದಿನಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಧ್ಯಪ್ರವೇಶದಿಂದಾಗಿ ರೂಪಾಯಿ ಮತ್ತಷ್ಟು ಬಲಗೊಳ್ಳಬಹುದು' ಎಂದು ಮಿರೇ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಸೆನ್ಸೆಕ್ಸ್: 5 ದಿನದಲ್ಲಿ 2,290 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಮಂಗಳವಾರವೂ ಕರಡಿ ಕುಣಿತ ಮುಂದುವರಿದಿದ್ದು, ಸೂಚ್ಯಂಕಗಳು ಶೇ 1ರಷ್ಟು ಇಳಿಕೆ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣದ ಮುಂದುವರಿಕೆ ಹಾಗೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯಿಂದಾಗಿ ದೇಶೀಯ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,018 ಅಂಶ ಇಳಿಕೆ ಕಂಡು (ಶೇ 1.32) ಎರಡು ವಾರಗಳ ಕನಿಷ್ಠ ಮಟ್ಟವಾದ 76,293 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,281 ಅಂಶ ಇಳಿಕೆಯಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 309 ಅಂಶ ಇಳಿಕೆ ಕಂಡು (ಶೇ 1.32) 23,017 ಅಂಶಗಳಲ್ಲಿ ವಹಿವಾಟು ಮುಕ್ತಾಯ ಕಂಡಿತು. ಬಿಎಸ್‌ಇ ಸ್ಮಾಲ್‌ಕ್ಯಾಪ್ ಶೇ 3.40ರಷ್ಟು ಹಾಗೂ ಮಿಡ್‌ಕ್ಯಾಪ್ ಶೇ 2.88ರಷ್ಟು ಕುಸಿದಿದೆ.

ಸತತ ಐದು ದಿನಗಳಲ್ಲಿ ಸೆನ್ಸೆಕ್ಸ್ 2,290 ಅಂಶ ಹಾಗೂ ನಿಫ್ಟಿ 667 ಅಂಶ ಇಳಿಕೆಯಾಗಿದೆ. ಹೂಡಿಕೆದಾರರ ಸಂಪತ್ತು ₹16.97 ಲಕ್ಷ ಕೋಟಿ ಕರಗಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಜೊಮಾಟೊ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಇಳಿಕೆಯಾಗಿದೆ. ಟಾಟಾ ಸ್ಟೀಲ್, ಬಜಾಜ್ ಫೈನಾನ್ಸ್, ಟಾಟಾ ಮೋಟರ್ಸ್, ಪವರ್ ಗ್ರಿಡ್, ಎಲ್ ಆ್ಯಂಡ್ ಟಿ, ಕೋಟಕ್ ಮಹೀಂದ್ರ ಬ್ಯಾಂಕ್, ಎಚ್‌ಸಿಎಲ್, ಐಟಿಸಿ ಷೇರಿನ ಮೌಲ್ಯ ಕುಸಿದಿದೆ. ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯ ಏರಿಕೆಯಾಗಿದೆ.

ಸೋಮವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,463 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಸುದ್ದಿ 2 ನಿಮಿಷ

ತೆಲಂಗಾಣದಲ್ಲಿ ಬಿಯರ್ ತುಟ್ಟಿ



ಹೈದರಾಬಾದ್ (ಪಿಟಿಐ): ತೆಲಂಗಾಣ ರಾಜ್ಯ ಸರ್ಕಾರವು ಬಿಯರ್ ಬೆಲೆಯನ್ನು ಶೇ 15ರಷ್ಟು ಏರಿಕೆ ಮಾಡಿದೆ.

2019ರಿಂದ ಬಿಯರ್ ದರವನ್ನು ಸರ್ಕಾರವು ಪರಿಷ್ಕರಣೆ ಮಾಡಿರಲಿಲ್ಲ.

ಬಿಯರ್ ಪೂರೈಕೆಯ ಬಾಕಿ ಮೊತ್ತ ಕೂಡ ಪಾವತಿಸಿಲ್ಲ. ಇದರಿಂದ ನಷ್ಟ ಅನುಭವಿಸುವಂತಾಗಿದೆ. ಹಾಗಾಗಿ, ತೆಲಂಗಾಣ ಪಾನೀಯ ನಿಗಮಕ್ಕೆ (ಟಿಜಿಬಿಸಿಎಲ್) ಬಿಯರ್ ಪೂರೈಕೆ ಸ್ಥಗಿತಗೊಳಿಸಲಾಗುವುದು ಎಂದು ಯುನೈಟೆಡ್ ಬ್ರುವರಿಸ್ ಕಂಪನಿಯು (ಯುಬಿಎಲ್) ಹೇಳಿತ್ತು. ಆದರೆ, ಸರ್ಕಾರದ ಮಧ್ಯಪ್ರವೇಶದಿಂದ ಮತ್ತೆ ಪೂರೈಕೆ ಆರಂಭಿಸಿತ್ತು.

ಬಿಯರ್ ದರ ಹೆಚ್ಚಳ ಮಾಡಿರುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿರುವ ಬ್ರುವರಿಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ), ಶೀಘ್ರವೇ ಬಾಕಿ ಮೊತ್ತ ಪಾವತಿಸುವಂತೆ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರಿಗೆ ಒತ್ತಾಯಿಸಿದೆ.


ಹತ್ತು ವರ್ಷಗಳಲ್ಲಿ 10 ಲಕ್ಷ ನವೋದ್ಯಮ ನೋಂದಣಿ ನಿರೀಕ್ಷೆ

ನವದೆಹಲಿ (ಪಿಟಿಐ): 'ದೇಶದಲ್ಲಿ ಮುಂದಿನ ಹತ್ತು ವರ್ಷಗಳಲ್ಲಿ ಸರ್ಕಾರದ ಅಡಿ ನೋಂದಣಿಯಾಗುವ ನವೋದ್ಯಮಗಳ ಸಂಖ್ಯೆ 10 ಲಕ್ಷ ದಾಟುವ ನಿರೀಕ್ಷೆಯಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ಹೂಡಿಕೆಗೆ ಸಂಬಂಧಿಸಿದಂತೆ ಮಂಗಳವಾರ ಇಸ್ರೇಲ್ ನಿಯೋಗದ ಜೊತೆ ಚರ್ಚಿಸಿದ ಬಳಿಕ ಮಾತನಾಡಿದ ಅವರು, ಸರ್ಕಾರವು ನವೋದ್ಯಮಿಗಳ ಬೆಳವಣಿಗೆಗೆ ಉತ್ತೇಜನ ನೀಡಲು ಹಲವು ಕ್ರಮಕೈಗೊಂಡಿದೆ. ಇದರಿಂದ ನವೋದ್ಯಮಗಳ ಸಂಖ್ಯೆ ಹೆಚ್ಚಳವಾಗಲಿದೆ ಎಂದು ಹೇಳಿದರು.

2016ರಲ್ಲಿ ಸರ್ಕಾರವು ನವೋದ್ಯಮಗಳಿಗೆ ಉತ್ತೇಜನ ನೀಡಲು ಸ್ಟಾರ್ಟ್‌ಅಪ್ ಇಂಡಿಯಾಕ್ಕೆ ಚಾಲನೆ ನೀಡಿತ್ತು. ಆ ವರ್ಷದಲ್ಲಿ ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯಡಿ (ಡಿಪಿಐಐಟಿ) 450 ನವೋದ್ಯಮಗಳು ನೋಂದಣಿಯಾಗಿದ್ದವು. ಸದ್ಯ ಅವುಗಳ ಸಂಖ್ಯೆ 1.57 ಲಕ್ಷಕ್ಕೆ ಮುಟ್ಟಿದೆ.

ಚಿನ್ನದ ದರ ಅಲ್ಪ ಇಳಿಕೆ



ನವದೆಹಲಿ (ಪಿಟಿಐ): ಸತತ ಏಳು ದಿನಗಳಿಂದ ಏರಿಕೆ ಕಂಡಿದ್ದ ಚಿನ್ನದ ದರವು ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹200 ಇಳಿಕೆಯಾಗಿ, ₹88,300ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ, ₹87,900ಕ್ಕೆ ಮುಟ್ಟಿದೆ.

ಕಳೆದ ಏಳು ದಿನಗಳಲ್ಲಿ ಹಳದಿ ಲೋಹದ ದರವು ₹5,660 ಹೆಚ್ಚಳವಾಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹900 ಕಡಿಮೆಯಾಗಿ, ₹96,600 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಭ್ರಷ್ಟಾಚಾರ: ಅದಾನಿ ನಿರಾಳ?

ಒಂದನೇ ಪುಟದಿಂದ...

ಸೌರ ವಿದ್ಯುತ್ ಗುತ್ತಿಗೆ ಪಡೆಯಲು ಭಾರತದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ₹2,100 ಕೋಟಿ ಲಂಚ ನೀಡಿದ ಆರೋಪವು ಅದಾನಿ ಗ್ರೀನ್ ಎನರ್ಜಿ ಲಿಮಿಟೆಡ್‌ನ (ಎಜಿಇಎಲ್) ಮೇಲಿದೆ. ಈ ಸಂಬಂಧ ಗೌತಮ್ ಅದಾನಿ, ಅವರ ಅಣ್ಣನ ಮಗ ಸಾಗರ್ ಅದಾನಿ ಸೇರಿ ಕಂಪನಿಯ ನಿರ್ದೇಶಕರ ವಿರುದ್ಧ ದೂರು ದಾಖಲಾಗಿದೆ.

ಅಮೆರಿಕದ ಷೇರುಪೇಟೆಯಲ್ಲಿ ಲಿಸ್ಟಿಂಗ್ ಆದ, ಅಮೆರಿಕದ ಹೂಡಿಕೆದಾರರು ಅಥವಾ ಜಂಟಿ ಸಹಭಾಗಿತ್ವ ಹೊಂದಿದ ಕಂಪನಿ ಅಥವಾ ವ್ಯಕ್ತಿಯು ತಮ್ಮ ಕಾರ್ಯಾನುಕೂಲಕ್ಕಾಗಿ ಸರ್ಕಾರಿ ಅಧಿಕಾರಿಗೆ ಲಂಚ ಅಥವಾ ಉಡುಗೊರೆ ನೀಡುವುದಕ್ಕೆ ಈ ಕಾಯ್ದೆ ನಿರ್ಬಂಧ ವಿಧಿಸುತ್ತದೆ. ಅದಾನಿ ಸಮೂಹವು ಅಮೆರಿಕದಲ್ಲಿ ಯಾವುದೇ ವಹಿವಾಟು ನಡೆಸುತ್ತಿಲ್ಲ. ಆದರೆ, ಅಲ್ಲಿನ ಹೂಡಿಕೆದಾರರು ಎಜಿಇಎಲ್‌ನ ಈಕ್ವಿಟಿ ಅಥವಾ ಡೆಬ್ಟ್‌ನಲ್ಲಿ ಹೂಡಿಕೆ ಮಾಡಿದ್ದಾರೆ ಎಂದು ಹೇಳಲಾಗಿದೆ.

ಈ ಕಾಯ್ದೆಯಡಿ ಪ್ರಮುಖ ಪ್ರಕರಣಗಳ ವಿಚಾರಣೆ ನಡೆಸುವ ಅಧಿಕಾರವು ನ್ಯಾಯಾಂಗ ಇಲಾಖೆಗೆ ಇದೆ. ಗೌತಮ್ ಅದಾನಿ ವಿರುದ್ಧದ ತನಿಖೆಯನ್ನೂ ಇದು ನಡೆಸುತ್ತಿದೆ. ಕಾಯ್ದೆಗೆ ತಾತ್ಕಾಲಿಕ ತಡೆ ನೀಡುವುದಕ್ಕೆ ಸಂಬಂಧಿಸಿದಂತೆ ಅಟಾರ್ನಿ ಜನರಲ್ ಪಾಮ್ ಬೋಂಡಿ ಅವರಿಗೆ, ಟ್ರಂಪ್ ನಿರ್ದೇಶನ ನೀಡಿದ್ದಾರೆ.

ಗುತ್ತಿಗೆ ಪಡೆಯಲು ಅದಾನಿ ಕಂಪನಿಯು ಅಧಿಕಾರಿಗಳಿಗೆ ಲಂಚ ನೀಡಿದೆ ಎಂದು ಕಳೆದ ವರ್ಷ ಜೋ ಬೈಡನ್ ಅಧಿಕಾರಾವಧಿಯಲ್ಲಿ ನ್ಯಾಯಾಂಗ ಇಲಾಖೆಯು ದೂರು ದಾಖಲಿಸಿತ್ತು

ಆದೇಶದಲ್ಲಿ ಏನಿದೆ?: ಕಾಯ್ದೆ ಅಡಿಯ ಮಾರ್ಗಸೂಚಿ, ತನಿಖೆ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಕ್ಕೆ ಸಂಬಂಧಿಸಿದಂತೆ ಇರುವ ನಿಯಮಾವಳಿಗಳನ್ನು ಪರಾಮರ್ಶೆ ನಡೆಸಲು 180 ದಿನಗಳ ಕಾಲಾವಕಾಶ ನೀಡಲಾಗಿದೆ.


ಟ್ರಂಪ್ ಅವರ ನಿಲುವಿನಿಂದ ಗೌತಮ್ ಅದಾನಿಗೆ ಸದ್ಯ ನಿರಾಳತೆ ಸಿಗಲಿದೆ. ಆದರೆ, ಈ ಕಾಲಾವಧಿ ಮುಗಿದ ಬಳಿಕ ನ್ಯಾಯಾಂಗ ಇಲಾಖೆಯು ಕೈಗೊಳ್ಳುವ ಕ್ರಮದ ಮೇಲೆ ಅದಾನಿ ಪ್ರಕರಣದ ಭವಿಷ್ಯ ನಿಂತಿದೆ ಎಂದು ಹೇಳಲಾಗಿದೆ.

ಭ್ರಷ್ಟಾಚಾರ ಪ್ರಕರಣ ಕುರಿತು ನಡೆಯುತ್ತಿರುವ ತನಿಖೆ ಅಥವಾ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಮಾರ್ಗಸೂಚಿಯಲ್ಲಿ ಅಟಾರ್ನಿ ಜನರಲ್‌ಗೆ ಹೆಚ್ಚಿನ ಅಧಿಕಾರ ನೀಡುವ ಸಾಧ್ಯತೆ ಇದೆ.

ಪ್ರಕರಣದ ಋಜುವಾತುಗೊಳಿಸುವಿಕೆ ಅಥವಾ ಕಠಿಣ ಕ್ರಮ ಜರುಗಿಸುವುದು ಅಥವಾ ಅಂತಹ ಕ್ರಮಗಳ ಬಗ್ಗೆ ಅಧ್ಯಕ್ಷರಿಗೆ ಶಿಫಾರಸು ಮಾಡುವುದನ್ನು ಅಟಾರ್ನಿ ಜನರಲ್ ಅವರ ವಿವೇಚನೆಗೆ ಬಿಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

'ಕರ್ನಾಟಕಕ್ಕೆ ಅನ್ಯಾಯವಾಗಿಲ್ಲ'

ಪ್ರಜಾವಾಣಿ ವಾರ್ತೆ




ನವದೆಹಲಿ: ಅನುದಾನ ಹಾಗೂ ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರದಿಂದ ಕರ್ನಾಟಕಕ್ಕೆ ಯಾವುದೇ ಅನ್ಯಾಯವಾಗಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಮಂಗಳವಾರ ಸಂಜೆ ಉತ್ತರ ನೀಡಿದ ಅವರು, 'ರಾಜ್ಯದಲ್ಲಿ 2014ರ ಬಳಿಕ 5,123 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಏಳು ವಿಮಾನ ನಿಲ್ದಾಣಗಳು ಕಾರ್ಯಾಚರಣೆ ಆರಂಭಿಸಿವೆ. 1,652 ಕಿ.ಮೀ. ಉದ್ದದ ರೈಲ್ವೆ ಜಾಲ ಸೇರ್ಪಡೆಯಾಗಿದೆ. ಇದು ಹಿಂದಿನ ಯುಪಿಎ ಅವಧಿಗಿಂತ ಹೆಚ್ಚು' ಎಂದರು.

ಇದಕ್ಕೂ ಮುನ್ನ ಮಾತನಾಡಿದ ಮೈಸೂರಿನ ಸಂಸದ ಯದುವೀರ್ ಒಡೆಯರ್, 'ಅನುದಾನ ಹಂಚಿಕೆಯಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಸುಳ್ಳು ಅಂಕಿ ಅಂಶಗಳನ್ನು ನೀಡಿ ಜನರ ದಿಕ್ಕು ತಪ್ಪಿಸುತ್ತಿದೆ' ಎಂದರು.

ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, 'ರಾಜ್ಯದಿಂದ ತೆರಿಗೆ ರೂಪದಲ್ಲಿ ಕೇಂದ್ರಕ್ಕೆ ಪ್ರತಿ ವರ್ಷ ₹4.30 ಲಕ್ಷ ಕೋಟಿ ಪಾವತಿ ಆಗುತ್ತಿದೆ. ಪಾವತಿಯಾದ ಮೊತ್ತದಲ್ಲಿ ವಾಪಸ್ ಬರುತ್ತಿರುವುದು 13 ಪೈಸೆ ಮಾತ್ರ. ನಬಾರ್ಡ್ ಸಾಲ ಪ್ರಮಾಣವನ್ನು ಕಡಿತ ಮಾಡಿರುವುದು ಇದಕ್ಕೆ ನಿದರ್ಶನ' ಎಂದರು.

'ಮಾತಿನ ನಂತರ ಹೊರನಡೆದರೆ ರೂಲಿಂಗ್'



ಜಗದೀಪ್ ಧನಕರ್

ನವದೆಹಲಿ (ಪಿಟಿಐ): 'ಸದನದಲ್ಲಿ ತಾವು ಮಾತನಾಡಿದ ನಂತರ, ಮತ್ತೊಬ್ಬರ ಮಾತುಗಳನ್ನು ಆಲಿಸದೆ ಹೊರಹೋಗುವ ಸದಸ್ಯರಿಗೆ ರೂಲಿಂಗ್ ನೀಡಲಾಗುವುದು' ಎಂದು ಸಭಾಪತಿ ಜಗದೀಪ್ ಧನಕರ್ ಮಂಗಳವಾರ ಹೇಳಿದರು.

ಕೇಂದ್ರ ಬಜೆಟ್ ಕುರಿತಂತೆ ರಾಜ್ಯಸಭೆಯ ಪಕ್ಷೇತರ ಸಂಸದ ಕಪಿಲ್ ಸಿಬಲ್ ಅವರು ಮಾತನಾಡಿದ ನಂತರ ಸದನದಿಂದ ಹೊರಹೋಗಿದ್ದನ್ನು, ಬಿಜೆಪಿಯ ಸಂಸದ ಘನಶ್ಯಾಮ್ ತಿವಾರಿ ಅವರು ಪ್ರಸ್ತಾಪಿಸಿದ್ದಕ್ಕೆ ಸಭಾಪತಿ ಈ ರೀತಿ ಪ್ರತಿಕ್ರಿಯಿಸಿದರು.

ಸಂಸತ್ತಿನಲ್ಲಿ ಸುದೀರ್ಘ ಅನುಭವ ಹೊಂದಿರುವ ತಿವಾರಿ ಅವರು, 'ತಮ್ಮ ಮಾತು ಮುಗಿದೊಡನೆ ಸದನದಿಂದ ಹೊರಹೋಗಬಹುದೇ? ತಮ್ಮ ಅಭಿಪ್ರಾಯ ಹೇಳಲು ಮಾತ್ರ ಸಂಸತ್ತಿಗೆ ಬರಬೇಕೇ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ' ಎಂದು ಧನಕರ್ ಹೇಳಿದರು.

ಕಪಿಲ್ ಸಿಬಲ್ ಮಾತುಗಳಿಗೆ ಶ್ಲಾಘನೆ ವ್ಯಕ್ತಪಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಹಿರಿಯ ಸದಸ್ಯರ ಉಪಸ್ಥಿತಿಯನ್ನು ಸದನ ಬಯಸುತ್ತದೆ ಎಂದರು.

ಗಂಭೀರ ಲೋಪ: ಆಯಾ ಕಾಲಘಟ್ಟದಲ್ಲಿ ಸಂಸತ್ತು ಮಾಡಿದ ತಿದ್ದುಪಡಿಗಳನ್ನು ಒಳಗೊಂಡಿರುವ ಸಂವಿಧಾನವೇ ಅಧಿಕೃತ. ಇವುಗಳಲ್ಲಿ ಕೆಲವನ್ನು ಕೈಬಿಟ್ಟು ಮುದ್ರಿಸುವುದು ಲೋಪ. ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಧನಕರ್ ಹೇಳಿದರು.

ಲೋಕಸಭಾ ಕಲಾಪದ ಸಂಸ್ಕೃತ ಅನುವಾದಕ್ಕೆ ಡಿಎಂಕೆ ಆಕ್ಷೇಪ



ದಯಾನಿಧಿ ಮಾರನ್

ನವದೆಹಲಿ (ಪಿಟಿಐ): ಲೋಕಸಭೆಯ ಕಲಾಪಗಳನ್ನು ಆರ್‌ಎಸ್‌ಎಸ್ ಸಿದ್ಧಾಂತದ ಕಾರಣದಿಂದಾಗಿ ಸಂಸ್ಕೃತದಲ್ಲಿಯೂ ಅನುವಾದಿಸಿ ನೀಡುವ ಮೂಲಕ ತೆರಿಗೆದಾರರ ಹಣವನ್ನು ಪೋಲು ಮಾಡಲಾಗುತ್ತಿದೆ ಎಂದು ಡಿಎಂಕೆ ಸದಸ್ಯ ದಯಾನಿಧಿ ಮಾರನ್ ಅವರು ಲೋಕಸಭೆಯಲ್ಲಿ ಮಂಗಳವಾರ ಆಕ್ಷೇಪ ವ್ಯಕ್ತಪಡಿಸಿದರು.

ಮಾರನ್ ಮಾತಿಗೆ ತಿರುಗೇಟು ನೀಡಿದ ಸ್ಪೀಕರ್ ಓಂ ಬಿರ್ಲಾ ಅವರು, ಸಂಸ್ಕೃತವು ಈ ದೇಶದ ಮೂಲ ಭಾಷೆ ಎಂದರು. ಲೋಕಸಭಾ ಕಲಾಪಗಳನ್ನು ಸಂಸ್ಕೃತ ಮಾತ್ರವಲ್ಲದೆ ದೇಶದಲ್ಲಿ ಮಾನ್ಯತೆ ನೀಡಲಾಗಿರುವ ಇತರ ಭಾಷೆಗಳಿಗೂ ಏಕಕಾಲದಲ್ಲಿ ಅನುವಾದಿಸಲಾಗುತ್ತದೆ ಎಂದು ತಿಳಿಸಿದರು.

ಪ್ರಶ್ನೋತ್ತರ ಅವಧಿ ಪೂರ್ಣಗೊಂಡ ನಂತರ ಬಿರ್ಲಾ ಅವರು, ಸದನದ ಸದಸ್ಯರಿಗೆ ಹೆಚ್ಚುವರಿಯಾಗಿ ಆರು ಭಾಷೆಗಳಲ್ಲಿ ಕಲಾಪವನ್ನು ಏಕಕಾಲಕ್ಕೆ ಅನುವಾದಿಸುವ ವ್ಯವಸ್ಥೆ ಶುರುವಾಗಿದೆ ಎಂದು ತಿಳಿಸಿದರು. ಬೋಡೊ, ಡೊಗ್ರಿ, ಮೈಥಿಲಿ, ಮಣಿಪುರಿ, ಸಂಸ್ಕೃತ ಮತ್ತು ಉರ್ದು ಆ ಆರು ಭಾಷೆಗಳು ಎಂದರು.

ಇಂಗ್ಲಿಷ್ ಮತ್ತು ಹಿಂದಿ ಮಾತ್ರವಲ್ಲದೆ, ಅಸ್ಸಾಮಿ, ಬಾಂಗ್ಲಾ, ಗುಜರಾತಿ, ಕನ್ನಡ, ಮಲಯಾಳ, ಮರಾಠಿ, ಒಡಿಯಾ, ಪಂಜಾಬಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಕೂಡ ಈ ಸೌಲಭ್ಯ ಇದೆ ಎಂದು ಬಿರ್ಲಾ ತಿಳಿಸಿದರು.

ಅಧಿಕೃತ ರಾಜ್ಯ ಭಾಷೆಗಳಲ್ಲಿ ಕಲಾಪವನ್ನು ಅನುವಾದಿಸಿ ಹೇಳುವ ವ್ಯವಸ್ಥೆಯನ್ನು ತಾವು ಸ್ವಾಗತಿಸುವುದಾಗಿಯೂ ಸಂಸ್ಕೃತವು ಸಂವಹನದಲ್ಲಿ ಬಳಕೆಯಲ್ಲಿ ಇಲ್ಲ ಎಂಬ ಕಾರಣಕ್ಕೆ ಸಂಸ್ಕೃತದಲ್ಲಿ ಅನುವಾದಿಸುವುದನ್ನು ವಿರೋಧಿಸುವುದಾಗಿಯೂ ಮಾರನ್ ಹೇಳಿದರು.

ಅಮೆರಿಕ ಸುಂಕ: ಐರೋಪ್ಯ ಒಕ್ಕೂಟದಿಂದ ಕಠಿಣ ಕ್ರಮದ ಎಚ್ಚರಿಕೆ

ಬ್ರಸೆಲ್ಸ್ (ಎಪಿ): ಉಕ್ಕು ಮತ್ತು ಅಲ್ಯೂಮಿನಿಯಂಗೆ ಸುಂಕ ವಿಧಿಸುವ ಅಮೆರಿಕದ ನಿರ್ಧಾರಕ್ಕೆ ಪ್ರತಿಕ್ರಿಯಿಸದೆ ಇರಲಾರೆವು ಎಂದು ಐರೋಪ್ಯ ಒಕ್ಕೂಟದ ಮುಖ್ಯಸ್ಥೆ ಉರ್ಸುಲಾ ವನ್ ಡೆರ್ ಲೆಯೆನ್ ಮಂಗಳವಾರ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧಾರಕ್ಕೆ 27 ರಾಷ್ಟ್ರಗಳನ್ನೊಳಗೊಂಡ ಒಕ್ಕೂಟವು ಕಠಿಣ ಪ್ರತಿಕ್ರಿಯೆ ನೀಡುವ ಬಗ್ಗೆ ಮುನ್ಸೂಚನೆ ನೀಡಿದ್ದಾರೆ.

'ಐರೋಪ್ಯ ಒಕ್ಕೂಟವು ತನ್ನ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತದೆ. ಸುಂಕಗಳು ತೆರಿಗೆಗಳಾಗಿವೆ. ಇದು ವ್ಯಾಪಾರ ಮತ್ತು ಗ್ರಾಹಕರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ನ್ಯಾಯಸಮ್ಮತವಲ್ಲದ ಸುಂಕಕ್ಕೆ ಒಕ್ಕೂಟವು ಪ್ರತಿಕ್ರಿಯಿಸದೆ ಇರಲಾರದು' ಎಂದು ಎಚ್ಚರಿಸಿದ್ದಾರೆ.

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ 'ಎಐ ಆ್ಯಕ್ಷನ್' ಶೃಂಗಸಭೆಯ ಸಹ ಅಧ್ಯಕ್ಷತೆ

'ಎಐ' ನಿಯಂತ್ರಣಕ್ಕೆ ವ್ಯವಸ್ಥೆ: ಮೋದಿ ಇಂಗಿತ

ಪ್ಯಾರಿಸ್ (ಪಿಟಿಐ/ರಾಯಿಟರ್ಸ್): ಮೌಲ್ಯಗಳನ್ನು ಎತ್ತಿಹಿಡಿಯುವ ಮತ್ತು ಅಪಾಯಗಳನ್ನು ತಡೆಯುವ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ(ಎಐ)ಯ ನಿರ್ವಹಣಾ ವ್ಯವಸ್ಥೆ ಮತ್ತು ಮಾನದಂಡಗಳನ್ನು ರಚಿಸಲು ಜಾಗತಿಕ ಮಟ್ಟದಲ್ಲಿ ಎಲ್ಲರೂ ಒಟ್ಟಾಗಿ ಪ್ರಯತ್ನಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಪ್ರತಿಪಾದಿಸಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಜೊತೆ 'ಎಐ ಆ್ಯಕ್ಷನ್' ಶೃಂಗದ ಸಹ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ರಾಜಕೀಯ, ಆರ್ಥಿಕತೆ, ಭದ್ರತೆ ಮತ್ತು ಸಮಾಜಕ್ಕೆ ಎಐ ದೊಡ್ಡ ಸವಾಲಾಗಿದೆ. ಈ ಶತಮಾನದಲ್ಲಿ ಎಐ ಮಾನವೀಯತೆಯ ನಿಯಮಗಳನ್ನು (ಕೋಡಿಂಗ್) ಬರೆಯುತ್ತಿದೆ' ಎಂದು ಹೇಳಿದರು.

ಎಐ ತಂತ್ರಜ್ಞಾನದಿಂದಾಗಿ ಉದ್ಯೋಗ ನಷ್ಟವಾಗುತ್ತಿದೆ ಎಂಬ ಆತಂಕಗಳ ಬಗ್ಗೆ ಪ್ರಸ್ತಾಪಿಸಿದ ಮೋದಿ ಅವರು, 'ತಂತ್ರಜ್ಞಾನದಿಂದ ಉದ್ಯೋಗಗಳ ನಷ್ಟವಾಗುವುದಿಲ್ಲ. ಬದಲಾಗಿ ಉದ್ಯೋಗದ ಸ್ವರೂಪ ಬದಲಾಗುತ್ತದೆ ಮತ್ತು ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತವೆ' ಎಂದರು.

'ಎಐ ಚಾಲಿತ ಭವಿಷ್ಯಕ್ಕಾಗಿ ನಮ್ಮ ಜನರನ್ನು ಕೌಶಲಯುತರನ್ನಾಗಿ ಮಾಡಬೇಕಿದೆ' ಎಂದೂ ಅವರು ಪ್ರತಿಪಾದಿಸಿದರು.



ಪ್ಯಾರಿಸ್‌ನಲ್ಲಿ ನಡೆದ 'ಎಐ ಆ್ಯಕ್ಷನ್' ಶೃಂಗದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಭಾಗಿಯಾಗಿದ್ದರು — ಎಪಿ ಚಿತ್ರ

ಅನ್ವೇಷಣೆ ಮತ್ತು ಆಡಳಿತದ ಬಗ್ಗೆ ನಾವು ಆಳವಾಗಿ ಚರ್ಚಿಸಬೇಕು. ವಿಶೇಷವಾಗಿ, ಭೌಗೋಳಿಕವಾಗಿ ದಕ್ಷಿಣದಲ್ಲಿರುವ ರಾಷ್ಟ್ರಗಳಲ್ಲಿ ಕಂಪ್ಯೂಟರ್, ಶಕ್ತಿ, ಪ್ರತಿಭೆ ಮತ್ತು ಆರ್ಥಿಕ ಸಂಪನ್ಮೂಲಗಳಿದ್ದರೂ ಸಾಮರ್ಥ್ಯದ ಕೊರತೆ ಇದೆ' ಎಂದು ವಿಶ್ಲೇಷಿಸಿದರು.

ಸಹಿ ಹಾಕದ ಅಮೆರಿಕ, ಬ್ರಿಟನ್

'ಎಲ್ಲರನ್ನು ಒಳಗೊಂಡ ಮತ್ತು ಸುಸ್ಥಿರ ಕೃತಕ ಬುದ್ಧಿಮತ್ತೆ' ಎಂಬ ಪ್ಯಾರಿಸ್ 'ಎಐ' ಶೃಂಗದ ಘೋಷಣೆಗೆ ಅಮೆರಿಕ ಮತ್ತು ಬ್ರಿಟನ್ ಸಹಿ ಮಾಡಿಲ್ಲ.

ಮುಂದಿನ ಶೃಂಗ ಭಾರತದಲ್ಲಿ

'ಎಐ' ಬಗೆಗಿನ ಮುಂದಿನ ಅಂತರರಾಷ್ಟ್ರೀಯ ಶೃಂಗವು ಭಾರತದಲ್ಲಿ ನಡೆಯಲಿದೆ ಎಂದು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರ ಕಚೇರಿ ತಿಳಿಸಿದೆ.

ಪ್ಯಾರಿಸ್‌ನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಪ್ರಧಾನಿ ಮೋದಿ ಅವರು,' ಮುಂದಿನ 'ಎಐ' ಶೃಂಗದ ಆತಿಥ್ಯವನ್ನು ಭಾರತ ವಹಿಸಲಿದೆ ಎಂದು ತಿಳಿಸಲು ಸಂತೋಷ ಆಗುತ್ತಿದೆ' ಎಂದಿದ್ದರು.

"'ಎಐ' ಅನ್ನು ಮುಕ್ತ, ಪಾರದರ್ಶಕ, ನೈತಿಕ, ಸುರಕ್ಷಿತ ಮತ್ತು ನಂಬಿಕಾರ್ಹ ವ್ಯವಸ್ಥೆಯನ್ನಾಗಿಸುವುದು. 'ಎಐ' ಅಭಿವೃದ್ಧಿಯ ವೇಳೆ ಅಂತರರಾಷ್ಟ್ರೀಯ ಚೌಕಟ್ಟುಗಳನ್ನು ಪರಿಗಣಿಸುವುದು. ಜನರಿಗೆ ಮತ್ತು ಜಗತ್ತಿಗಾಗಿ ಎಐ ಅನ್ನು ಸುಸ್ಥಿರಗೊಳಿಸುವುದು' ಶೃಂಗದ ಘೋಷಣೆಯಾಗಿದೆ.

ಈ ಬಗ್ಗೆ ಅಮೆರಿಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ಎಐ ಶೃಂಗದ ಘೋಷಣೆ ಕುರಿತು ಚರ್ಚೆ ನಡೆಸುತ್ತಿದ್ದೇವೆ' ಎಂದು ಬ್ರಿಟನ್ ವಕ್ತಾರರು ತಿಳಿಸಿದ್ದಾರೆ.

ಏಕದಿನ ಕ್ರಿಕೆಟ್ ಸರಣಿ: ಕ್ಲೀನ್‌ಸ್ವೀಪ್ ಮೇಲೆ ಭಾರತ ಕಣ್ಣು: ರೋಹಿತ್ ಮೇಲೆ ಎಲ್ಲರ ಚಿತ್ತ

ಕೊಹ್ಲಿಗೆ ಲಯಕ್ಕೆ ಮರಳುವ ಸವಾಲು



ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ


ಅಹಮದಾಬಾದ್ (ಪಿಟಿಐ): ಇಂಗ್ಲೆಂಡ್ ತಂಡದ ವಿರುದ್ಧ ಬುಧವಾರ ಇಲ್ಲಿ ನಡೆಯಲಿರುವ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರು ಲಯಕ್ಕೆ ಮರಳುವರೇ ಎಂಬ ಕುತೂಹಲ ಈಗ ಮೂಡಿದೆ.

ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಗಳಿಸಿರುವ ಭಾರತ ತಂಡವು ಕ್ಲೀನ್‌ಸ್ವೀಪ್ ಫಲಿತಾಂಶ ಸಾಧಿಸುವ ಛಲದಲ್ಲಿದೆ. ಇದೇ ಹೊತ್ತಿನಲ್ಲಿ ವಿರಾಟ್ ಫಾರ್ಮ್‌ಗೆ ಮರಳಿದರೆ, ಚಾಂಪಿಯನ್ಸ್ ಟ್ರೋಫಿ ಆಡಲಿರುವ ತಂಡದ ಆತ್ಮವಿಶ್ವಾಸ ನೂರ್ಮಡಿಯಾಗುವುದು ಖಚಿತ.

ಎರಡನೇ ಪಂದ್ಯದಲ್ಲಿ ನಾಯಕ ರೋಹಿತ್ ಶರ್ಮಾ (119; 90ಎಸೆತ) ಅಬ್ಬರದ ಶತಕ ಹೊಡೆದರು. ಅವರು ಕೂಡ ಕಳೆದ ಹಲವು ಪಂದ್ಯಗಳಿಂದ ಲಯ ಕಂಡುಕೊಳ್ಳಲು ಪರದಾಡುತ್ತಿದ್ದರು. ಕಟಕ್‌ನಲ್ಲಿ ಚೆಂದದ ಬ್ಯಾಟಿಂಗ್ ಮೂಲಕ ತಾವಿನ್ನೂ ಸೋತಿಲ್ಲ ಎಂಬ ಸಂದೇಶ ರವಾನಿಸಿದರು.

ಸರಣಿಯ ಮೊದಲ ಪಂದ್ಯದಲ್ಲಿ ಕೊಹ್ಲಿ ಮಂಡಿನೋವಿನಿಂದಾಗಿ ಆಡಿರಲಿಲ್ಲ. ಎರಡನೇ ಪಂದ್ಯದಲ್ಲಿ ಕಣಕ್ಕಿಳಿದರು. ಆದರೆ 5 ರನ್ ಗಳಿಸಿ ಔಟಾದರು. ಒಂದೊಮ್ಮೆ ಈ ಪಂದ್ಯದಲ್ಲಿ ವಿರಾಟ್ 89 ರನ್ ಗಳಿಸಿದರೆ ಏಕದಿನ ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಪೇರಿಸಿದ ಬ್ಯಾಟರ್‌ಗಳ ಕ್ಲಬ್ ಸೇರಲಿದ್ದಾರೆ. ಸಚಿನ್ ತೆಂಡೂಲ್ಕರ್ ಮತ್ತು ಶ್ರೀಲಂಕಾದ ಕುಮಾರ ಸಂಗಕ್ಕಾರ ಅವರ ನಂತರ ಈ ಸಾಧನೆ ಮಾಡುವ ಅವಕಾಶ ಕೊಹ್ಲಿಗೆ ಇದೆ. ರೋಹಿತ್, 13 ರನ್ ಗಳಿಸಿದರೆ 11000 ರನ್‌ಗಳ ಮೈಲಿಗಲ್ಲು ಮುಟ್ಟಲಿದ್ದಾರೆ.

ವರುಣ್ ಚಕ್ರವರ್ತಿ ಅವರನ್ನು ಸೇರ್ಪಡೆ ಮಾಡಿರುವುದರಿಂದ ಸ್ಪಿನ್ ವಿಭಾಗವು ಉತ್ತಮಗೊಂಡಿದೆ. ಗಾಯದಿಂದಾಗಿ ದೀರ್ಘ ಸಮಯ ಆಟದಿಂದ ದೂರವಿದ್ದ ಮೊಹಮ್ಮದ್ ಶಮಿ ತಂಡಕ್ಕೆ ಮರಳಿದ್ದು, ಲಯ ಕಂಡುಕೊಳ್ಳುತ್ತಿರುವುದು ಆತಿಥೇಯ ಬಳಗದಲ್ಲಿ ಸಮಾಧಾನ ಮೂಡಿಸಿದೆ. ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಗೈರುಹಾಜರಿಯಲ್ಲಿ ಶಮಿ ಜವಾಬ್ದಾರಿ ಹೆಚ್ಚಿದೆ.



ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ –ಪಿಟಿಐ ಚಿತ್ರ

ಕಳೆದ ಪಂದ್ಯದಲ್ಲಿ ಇದ್ದ ಹನ್ನೊಂದರ ಬಳಗವನ್ನೇ ಮತ್ತೆ ಕಣಕ್ಕಿಳಿಸುವ ಎಲ್ಲ ಸಾಧ್ಯತೆಗಳೂ ಇವೆ. ಆದ್ದರಿಂದ ಯಶಸ್ವಿ ಜೈಸ್ವಾಲ್ ವಿಶ್ರಾಂತಿ ಪಡೆಯುವುದು ಖಚಿತ. ಅಲ್ಲದೇ ಕೆ.ಎಲ್. ರಾಹುಲ್ ವಿಕೆಟ್‌ಕೀಪಿಂಗ್ ಪಾತ್ರದಲ್ಲಿ ಮುಂದುವರಿಯುವುದರಿಂದ ರಿಷಭ್ ಪಂತ್ ಕೂಡ ಬೆಂಚ್‌ನಲ್ಲಿರುವ ಸಾಧ್ಯತೆ ಹೆಚ್ಚು.

2023ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯ ನಡೆದಿದ್ದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಯೇ ಭಾರತ–ಇಂಗ್ಲೆಂಡ್ ಮುಖಾಮುಖಿಯಾಗಲಿವೆ. ಇಲ್ಲಿಯ ಪಿಚ್ ಸ್ಪಿನ್‌ಗೆ ಹೆಚ್ಚು ಅನುಕೂಲವಾಗುವ ಸಾಧ್ಯತೆಗಳು ಇವೆ.

ಇಂಗ್ಲೆಂಡ್ ತಂಡವು ಸಮಾಧಾನಕರವಾದ ಗೆಲುವಿನೊಂದಿಗೆ ಮರಳುವ ಹಂಬಲದಲ್ಲಿದೆ. ಟಿ20 ಸರಣಿಯಲ್ಲಿಯೂ ಸೋತಿದ್ದ, ಪ್ರವಾಸಿ ಬಳಗಕ್ಕೆ ಏಕದಿನ ಸರಣಿ ಕೂಡ ಕೈಜಾರಿದೆ. ಆದರೆ ಪ್ರವಾಸದ ಕೊನೆಯ ಪಂದ್ಯದಲ್ಲಿ ಗೆಲುವಿನೊಂದಿಗೆ ಮರಳುವತ್ತ ಜೋಸ್ ಬಟ್ಲರ್ ಬಳಗ ಚಿತ್ತ ನೆಟ್ಟಿದೆ. ಬೆನ್ ಡಕೆಟ್, ಜೋ ರೂಟ್, ಬಟ್ಲರ್ ಮತ್ತು ಬ್ಯಾಟರ್‌ಗಳು ಸ್ಪರ್ಧಾತ್ಮಕ ಮೊತ್ತ ಗಳಿಸುವಲ್ಲಿ ಸಮರ್ಥರಾಗಿದ್ದಾರೆ. ಆದರೆ ಬೌಲಿಂಗ್ ಪಡೆ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಡುವ ಸವಾಲು ಇದೆ.

ವಿರಾಟ್ ವಿಶ್ವಶ್ರೇಷ್ಠ ಆಟಗಾರ: ಕ್ರಿಸ್ ಗೇಲ್



ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಅವರು ಪ್ರಸ್ತುತ ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸುತ್ತಿದ್ದಾರೆ. ಆದರೆ ಅವರು ವಿಶ್ವಶ್ರೇಷ್ಠ ಆಟಗಾರರಾಗಿಯೇ ಮುಂದುವರಿದಿದ್ದಾರೆ. ಇದರಲ್ಲಿ ಎರಡು ಮಾತಿಲ್ಲ ಎಂದು ವೆಸ್ಟ್ ಇಂಡೀಸ್ ತಂಡದ ಮಾಜಿ ಆಟಗಾರ ಕ್ರಿಸ್ ಗೇಲ್ ಹೇಳಿದ್ದಾರೆ.

ಕಟಕ್‌ನಲ್ಲಿ ಈಚೆಗೆ ನಡೆದ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿ ವಿರಾಟ್ ದೊಡ್ಡ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಕಳೆದ ಕೆಲವು ತಿಂಗಳುಗಳಿಂದ ಅವರು ಎಲ್ಲ ಮಾದರಿಗಳಲ್ಲಿಯೂ ವಿಫಲರಾಗುತ್ತಿದ್ದಾರೆ.

‘ಕೊಹ್ಲಿ ಅವರು ಫಾರ್ಮ್‌ನಲ್ಲಿ ಇರಲಿ, ಬಿಡಲಿ ಜಗತ್ತಿನ ಶ್ರೇಷ್ಠ ಕ್ರಿಕೆಟಿಗ ಅವರೇ. ಅವರು ಇದುವರೆಗೆ ಎಲ್ಲ ಮಾದರಿಗಳಲ್ಲಿ ಗಳಿಸಿದ ಶತಕಗಳು, ರನ್‌ಗಳು ಅವರನ್ನು ಸಾರ್ವಕಾಲಿಕ ಶ್ರೇಷ್ಠ ಆಟಗಾರನನ್ನಾಗಿ ರೂಪಿಸಿವೆ’ ಎಂದು ಗೇಲ್ ಅವರು ಮಂಗಳವಾರ ಇಲ್ಲಿ ನಡೆದ ಸಮಾರಂಭದಲ್ಲಿ ಹೇಳಿದರು.

‘ನಾವು ಕ್ರಿಕೆಟಿಗರೆಲ್ಲರೂ ಇಂತಹ ಕೆಟ್ಟ ಸಮಯವನ್ನು ಎದುರಿಸಿರುತ್ತೇವೆ. ಕೊಹ್ಲಿ ಕೂಡ ಅದೇ ರೀತಿಯ ಸವಾಲನ್ನು ಎದುರಿಸುತ್ತಿ ದ್ದಾರೆ. ಅವರ ವೃತ್ತಿಜೀವನದ ಅಂತಿಮ ಹಂತದ ವರ್ಷಗಳಿವು. ಇಂತಹ ಸಂದರ್ಭದಲ್ಲಿ ಅವರು ಈ ಸವಾಲು ಎದುರಿಸುತ್ತಿದ್ದಾರೆ. ಅವರು ಎದೆಗುಂದದೇ ತಮ್ಮ ಸಾಮರ್ಥ್ಯವನ್ನು ತೋರಿಸಲು ಸಿದ್ಧರಾಗಬೇಕು ಅಷ್ಟೇ’ ಎಂದು ಗೇಲ್ ಅಭಿಪ್ರಾಯಪಟ್ಟಿದ್ದಾರೆ.

‘ರೋಹಿತ್ ಶರ್ಮಾ ಅವರು ಊರಿನ ಹೊಸ ರಾಜ. ನನ್ನ ಸಿಕ್ಸರ್ ದಾಖಲೆಯನ್ನು ಮುರಿದಿರುವ ಅವರಿಗೆ ಅಭಿನಂದನೆಗಳು. ಅವರು ಇನ್ನಷ್ಟು, ಮಗದಷ್ಟು ಸಿಕ್ಸರ್‌ಗಳನ್ನು ಹೊಡೆಯುವುದು ಖಚಿತ’ ಎಂದು ಗೇಲ್ ವಿಶ್ವಾಸ ವ್ಯಕ್ತಪಡಿಸಿದರು.

ಸೆಮಿಫೈನಲ್‌ಗೆ ಮುಂಬೈ

ರಣಜಿ ಟ್ರೋಫಿ: ಅಜಿಂಕ್ಯ ಶತಕ, ಡಯಾಸ್‌ಗೆ 5 ವಿಕೆಟ್

ಕೋಲ್ಕತ್ತ (ಪಿಟಿಐ): ನಾಯಕ ಅಜಿಂಕ್ಯ ರಹಾನೆ ಎಚ್ಚರಿಕೆಯಿಂದ ಶತಕ ಪೋಣಿಸಿದ ನಂತರ ಎಡಗೈ ವೇಗಿ ರಾಯ್‌ಸ್ಟನ್ ಡಯಾಸ್ ಅವರು ಐದು ವಿಕೆಟ್‌ಗಳ ಗೊಂಚಲು ಪಡೆದರು. ಹಾಲಿ ಚಾಂಪಿಯನ್ ಮುಂಬೈ ತಂಡ, ರಣಜಿ ಟ್ರೋಫಿ ಪಂದ್ಯದ ನಾಲ್ಕನೇ ದಿನವಾದ ಮಂಗಳವಾರವೇ ಹರಿಯಾಣ ತಂಡವನ್ನು 152 ರನ್‌ಗಳಿಂದ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.

ಸೋಮವಾರ 88 ರನ್ ಗಳಿಸಿ ಅಜೇಯರಾಗುಳಿದಿದ್ದ ರಹಾನೆ ಎಂದಿನ ಶೈಲಿಯಲ್ಲೇ ಆಟ ಮುಂದುವರಿಸಿ 108 ರನ್ (180ಎ, 4x13) ಗಳಿಸಿದರು. 4 ವಿಕೆಟ್‌ಗೆ 278 ರನ್‌ಗಳೊಡನೆ ಆಟ ಮುಂದುವರಿಸಿದ ಮುಂಬೈ ಎರಡನೇ ಇನಿಂಗ್ಸ್‌ನಲ್ಲಿ 339 ರನ್‌ಗಳಿಗೆ ಆಲೌಟ್ ಆಯಿತು. ತಂಡ 314 ರನ್ ಗಳಿಸಿದ್ದಾಗ ರಹಾನೆ ನಿರ್ಗಮಿಸಿದರು. ನಂತರ ಮುಂಬೈ ಕೊನೆಯ 5 ವಿಕೆಟ್‌ಗಳನ್ನು 25 ರನ್ನಿಗೆ ಕಳೆದುಕೊಂಡಿತು.

ಗೆಲುವಿಗೆ 354 ರನ್‌ಗಳ ಸವಾಲು ಎದುರಿಸಿದ ಹರಿಯಾಣ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡು 201 ರನ್‌ಗಳಿಗೆ ಸರ್ವಪತನ ಕಂಡಿತು. ಡಯಾಸ್ 39 ರನ್ನಿಗೆ 5 ವಿಕೆಟ್ ಪಡೆದರೆ, ಶಾರ್ದೂಲ್ ಠಾಕೂರ್ 26 ರನ್ನಿಗೆ 3 ವಿಕೆಟ್ ಪಡೆದು ಮುಂಬೈ ಗೆಲುವನ್ನು ತ್ವರಿತಗೊಳಿಸಿದರು.

ಆರಂಭ ಆಟಗಾರ ಲಕ್ಷ್ಯ ದಲಾಲ್ (64) ಮತ್ತು ಸುಮಿತ್ ಕುಮಾರ್ (62) ಆರನೇ ವಿಕೆಟ್‌ಗೆ 90 ರನ್ ಸೇರಿಸಿದ್ದು ಬಿಟ್ಟರೆ ಹರಿಯಾಣ ಇನಿಂಗ್ಸ್‌ನಲ್ಲಿ ಪ್ರತಿರೋಧ ಕಂಡುಬರಲಿಲ್ಲ.

ಸಂಕ್ಷಿಪ್ತ ಸ್ಕೋರು:

ಕೋಲ್ಕತ್ತದಲ್ಲಿ: ಮುಂಬೈ: 315 ಮತ್ತು 85.3 ಓವರುಗಳಲ್ಲಿ 339 (ಅಜಿಂಕ್ಯ ರಹಾಎ 108, ಸೂರ್ಯಕುಮಾರ್ ಯಾದವ್ 70, ಶಿವಂ ದುಬೆ 48; ಅನ್ಶುಲ್ ಕಾಂಬೋಜ್ 57ಕ್ಕೆ2, ಅನುಜ್ ಠಕ್ರಾಲ್ 70ಕ್ಕೆ 4); ಹರಿಯಾಣ: 301 ಮತ್ತು 57.3 ಓವರುಗಳಲ್ಲಿ 201 (ಲಕ್ಷ್ಯ ದಲಾಲ್ 64, ಸುಮಿತ್ ಕುಮಾರ್ 62; ರಾಯ್‌ಸ್ಟನ್ ಡಯಾಸ್ 39ಕ್ಕೆ5, ಶಾರ್ದೂಲ್ ಠಾಕೂರ್ 26ಕ್ಕೆ3).

ರಾಜಕೋಟ್‌ನಲ್ಲಿ: ಸೌರಾಷ್ಟ್ರ: 216 ಮತ್ತು 62.1 ಓವರುಗಳಲ್ಲಿ 197 (ಹರ್ವಿಕ್ ದೇಸಾಯಿ 54, ಚಿರಾಗ್ ಜಾನಿ 26, ಶೆಲ್ಡನ್ ಜಾಕ್ಸನ್ 27, ಜಯದೇವ ಉನದ್ಕತ್ 29; ಅರ್ಜಾನ್ ನಾಗ್ವಾಸ್ವಲ್ಲ 54ಕ್ಕೆ3, ಪ್ರಿಯಜಿತ್ ಸಿಂಗ್ ಜಡೇಜ 32ಕ್ಕೆ4); ಗುಜರಾತ್ 511. ಗುಜರಾತ್‌ಗೆ ಇನಿಂಗ್ಸ್ ಮತ್ತು 98 ರನ್ ಜಯ.

ನಾಗ್ಪುರದಲ್ಲಿ: ವಿದರ್ಭ: 353 ಮತ್ತು 92.3 ಓವರುಗಳಲ್ಲಿ 272 (ಯಶ್ ರಾಥೋಡ್ 112, ಹರ್ಷ ದುಬೆ 64; ಸಾಯಿ ಕಿಶೋರ್ 78ಕ್ಕೆ5, ಅಜಿತ್ ರಾಮ್ 33ಕ್ಕೆ2); ತಮಿಳುನಾಡು: 225 ಮತ್ತು 61.1 ಓವರುಗಳಲ್ಲಿ 202 (ಪ್ರದೋಶ್ ರಂಜನ್ ಪಾಲ್ 53, ಸೋನು ಯಾದವ್ 57; ನಚಿಕೇತ್ ಭೂತೆ 19ಕ್ಕೆ3, ಹರ್ಷ ದುಬೆ 40ಕ್ಕೆ3). ವಿದರ್ಭಕ್ಕೆ 198 ರನ್ ಜಯ.



ಅಜಿಂಕ್ಯ ರಹಾನೆ

ಮುಖ್ಯಾಂಶಗಳು

- ವಿದರ್ಭಕ್ಕೆ ಇನಿಂಗ್ಸ್ ಜಯ
- ಯಶ್ ರಾಥೋಡ್ ಶತಕ
- ಸೆಮಿಫೈನಲ್‌ಗೆ ಗುಜರಾತ್

ಕೇರಳಕ್ಕೆ 399 ರನ್ ಗುರಿ

ಪುಣೆಯಲ್ಲಿ ನಡೆಯುತ್ತಿರುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಗೆಲ್ಲಲು 399 ರನ್‌ಗಳ ಗುರಿ ಎದುರಿಸಿರುವ ಕೇರಳ ನಾಲ್ಕನೇ ದಿನದಾಟ ಮುಗಿದಾಗ 2 ವಿಕೆಟ್‌ಗೆ 100 ರನ್ ಗಳಿಸಿ ಹೋರಾಟ ನಡೆಸುತ್ತಿದೆ.

ಸೋಮವಾರ 3 ವಿಕೆಟ್‌ಗೆ 180 ರನ್ ಗಳಿಸಿದ್ದ ಜಮ್ಮು ಮತ್ತು ಕಾಶ್ಮೀರ ತಂಡ 100 ಓವರುಗಳ ಆಟದ ನಂತರ 9 ವಿಕೆಟ್‌ಗೆ 399 ರನ್‌ಗಳಾಗಿದ್ದಾಗ ಎರಡನೇ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ನಾಯಕ ಪರಾಸ್ ದೋಗ್ರ (ಸೋಮವಾರ ಅಜೇಯ 73) ಬೆಳಿಗ್ಗೆ ಶತಕ ಪೂರೈಸಿದರು. ಅವರು 132 ರನ್ (232ಎ, 4x13, 6x2) ಗಳಿಸಿದರು. ಅವರು ಕನ್ಹಯ್ಯ ವಾದ್ವಾನ್ (64) ಜೊತೆ ನಾಲ್ಕನೇ ವಿಕೆಟ್‌ಗೆ 146 ರನ್ ಸೇರಿಸಿದ್ದರಿಂದ ತಂಡ ಚೇತರಿಸಿತು.ಕೇರಳ ಮೊದಲ ಇನಿಂಗ್ಸ್‌ನಲ್ಲಿ ಒಂದು ರನ್ ಮುನ್ನಡೆ ಪಡೆದಿತ್ತು.

ಪುಣೆಯಲ್ಲಿ: ಜಮ್ಮು ಮತ್ತು ಕಾಶ್ಮೀರ: 280 ಮತ್ತು 100.2 ಓವರುಗಳಲ್ಲಿ 9 ವಿಕೆಟ್‌ಗೆ 399 ಡಿ (ಪರಾಸ್ ಡೋಗ್ರ 132, ಕನ್ಹಯ್ಯ ವಾಧ್ವಾನ್ 64, ಸಾಹಿಲ್ ಲೂತ್ರ 59; ಎಂ.ಡಿ.ನಿಧೀಶ್ 59ಕ್ಕೆ4); ಕೇರಳ: 281 ಮತ್ತು 36 ಓವರುಗಳಲ್ಲಿ 2 ವಿಕೆಟ್‌ಗೆ 100 (ರೋಹನ್ 36, ಅಕ್ಷಯ್ ಚಂದ್ರನ್ ಬ್ಯಾಟಿಂಗ್ 32, ಸಚಿನ್ ಬೇಬಿ ಬ್ಯಾಟಿಂಗ್ 19; ಯುದ್ಧವೀರ್ ಸಿಂಗ್ 31ಕ್ಕೆ2).

ಗುಜರಾತ್ ಟೈಟನ್ಸ್ ಒಡೆತನ ಬದಲು?

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ತಂಡವಾದ ಗುಜರಾತ್ ಟೈಟನ್ಸ್ ಫ್ರಾಂಚೈಸಿಯು ಹೊಸ ಒಡೆತನಕ್ಕೆ ಒಳಪಡಲು ಸಜ್ಜಾಗುತ್ತಿದೆ. ಈ ಫ್ರಾಂಚೈಸಿಯ ಬಹುಪಾಲು ಷೇರುಗಳನ್ನು ಕೊಳ್ಳಲು ಅಹಮದಾಬಾದ್ ಮೂಲದ ಟೊರೆಂಟ್ ಗ್ರೂಪ್ ಸಿದ್ಧತೆ ನಡೆಸಿದೆ.

ಹಾಲಿ ಮಾಲಕರಾದ ಸಿವಿಸಿ ಕ್ಯಾಪಿಟಲ್ ಪಾರ್ಟ್ನರ್ಸ್ (ಐರೇಲಿಯಾ ಕಂಪನಿ)ನಿಂದ ಶೇ 67 ರಷ್ಟು ಷೇರುಗಳನ್ನು ಟೊರೆಂಟ್ ಗ್ರೂಪ್ ಖರೀದಿಸುತ್ತಿದೆ.

ಮುಂದಿನ ಐಪಿಎಲ್ ಋತುವಿಗೆ ಮೊದಲೇ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ಒಪ್ಪಂದಕ್ಕೆ ಐಪಿಎಲ್ ಆಡಳಿತ ಮಂಡಳಿಯ ಸಮ್ಮತಿಯ ಮುದ್ರೆ ಬೀಳಬೇಕಾಗಿದೆ.

ಐಪಿಎಲ್ ಮುಂದಿನ ಆವೃತ್ತಿ ಮಾರ್ಚ್ 21ರಂದು ಆರಂಭವಾಗಲಿದೆ.

ಸಿವಿಸಿ ಮಾರಾಟ ಮಾಡುತ್ತಿರುವ ಷೇರು ಮೌಲ್ಯ ಎಷ್ಟೆಂಬುದು ಖಚಿತವಾಗಿಲ್ಲ.

ಈ ಕಂಪನಿ 2021ರಲ್ಲಿ ತಂಡವನ್ನು ಖರೀದಿಸುವಾಗ ₹5,625 ಕೋಟಿ ಹೂಡಿಕೆ ಮಾಡಿತ್ತು.

2022ರಲ್ಲಿ ಗುಜರಾತ್ ಟೈಟನ್ಸ್ ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ತನ್ನ ಮೊದಲ ಯತ್ನದಲ್ಲೇ ಚಾಂಪಿಯನ್ ಆಗಿತ್ತು. ಮರು ವರ್ಷ ರನ್ನರ್ ಅಪ್ ಆಗಿತ್ತು. ಕಳೆದ ಋತುವಿನಲ್ಲಿ ಶುಭಮನ್ ಗಿಲ್ ನೇತೃತ್ವದ ತಂಡ ಎಂಟನೇ ಸ್ಥಾನ ಗಳಿಸಿತ್ತು. ಶುಭಮನ್ ಗಿಲ್ ಬಿಟ್ಟರೆ, ಅಫ್ಗಾನಿಸ್ತಾನದ ಸ್ಪಿನ್ನರ್ ರಶೀದ್ ಖಾನ್, ಇಂಗ್ಲೆಂಡ್‌ನ ಬ್ಯಾಟರ್ ಜೋಸ್ ಬಟ್ಲರ್, ಭಾರತ ತಂಡದ ವೇಗಿ ಮೊಹಮ್ಮದ್ ಶಮಿ ಈ ತಂಡದಲ್ಲಿರುವ ಪ್ರಮುಖ ಆಟಗಾರರು.

ರಾಷ್ಟ್ರೀಯ ಸ್ನೂಕರ್: ಪಂಕಜ್‌ಗೆ ಕಿರೀಟ

ಫೈನಲ್‌ನಲ್ಲಿ ಬ್ರಿಜೇಶ್ ದಮಾನಿ ವಿರುದ್ಧ ಗೆಲುವು



ಇಂದೋರ್ (ಪಿಟಿಐ): ಕೌಶಲ ಮತ್ತು ಛಲದ ಆಟವಾಡಿದ ದೇಶದ ಯಶಸ್ವಿ ಆಟಗಾರ, ಕರ್ನಾಟಕದ ಪಂಕಜ್ ಅಡ್ವಾನಿ ಅವರು ಇಲ್ಲಿನ ಯಶವಂತ್ ಕ್ಲಬ್‌ಲ್ಲಿ ನಡೆದ 10ನೇ ರಾಷ್ಟ್ರೀಯ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಇದು ಅವರಿಗೆ ಒಟ್ಟಾರೆ 36ನೇ ರಾಷ್ಟ್ರೀಯ ಪ್ರಶಸ್ತಿ.

ಒಎನ್‌ಜಿಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಕಜ್ ಅವರು ಫೈನಲ್‌ನಲ್ಲಿ ಬ್ರಿಜೇಶ್ ದಮಾನಿ ವಿರುದ್ಧ ಆರಂಭಿಕ ಹಿನ್ನಡೆ ಅನುಭವಿಸಿದರು. ಆದರೆ ಮೊದಲ ಫ್ರೇಮ್ ಗೆದ್ದ ನಂತರ ದಮಾನಿ ಆಟ ನಡೆಯಲಿಲ್ಲ. ಬೆಂಗಳೂರಿನ ಅಧಿಕಾರಯುತ ಪ್ರದರ್ಶನ ನೀಡಿದರು.

ಅಡ್ವಾನಿ ಸ್ಥಿರ ಮತ್ತು ಕರಾರುವಾಕ್ ಆಟ ಪ್ರದರ್ಶಿಸಿದರು. ಏಕಾಗ್ರತೆಯನ್ನು ಕಾಪಾಡಿಕೊಂಡ ಅವರು ಟೇಬಲ್ ಮೇಲಿನ ಹಿಡಿತ ಸಾಧಿಸಿ, ತಪ್ಪುಗಳಾಗದಂತೆ ಎಚ್ಚರಿಕೆ ವಹಿಸಿದರು. ಅಂತಿಮ ಫ್ರೇಮ್‌ನಲ್ಲಿ 84ರ ಸ್ಫೂರ್ತಿಯುತ ಬ್ರೇಕ್ ಪಡೆದರು. ಈ ಚಾಂಪಿಯನ್‌ಷಿಪ್ ಏಷ್ಯಾ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ಏಕೈಕ ಆಯ್ಕೆ ಟ್ರಯಲ್ಸ್ ಆಗಿದೆ.

ಏಷ್ಯನ್‌ಸ್ನೂಕರ್‌ಚಾಂಪಿಯನ್‌ಷಿಪ್‌ಇದೇ15ರಿಂದದೋಹಾದಲ್ಲಿ ನಡೆಯಲಿದ್ದು, ಅಲ್ಲಿ ಅಡ್ವಾನಿ ಮತ್ತು ದಮಾನಿ ಅವರು ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಶೆಲ್ಡನ್ ಜಾಕ್ಸನ್ ವಿದಾಯ



ಶೆಲ್ಡನ್ ಜಾಕ್ಸನ್

ನವದೆಹಲಿ (ಪಿಟಿಐ): ಸೌರಾಷ್ಟ್ರದ ಪ್ರಮುಖ ಬ್ಯಾಟರ್ ಶೆಲ್ಡನ್ ಜಾಕ್ಸನ್ 15 ವರ್ಷಗ: ವೃತ್ತಿಪರ ಕ್ರಿಕೆಟ್ ಜೀವನಕ್ಕೆ ಮಂಗಳವಾರ ವಿದಾಯ ಹೇಳಿದರು. ಸೌರಾಷ್ಟ್ರ ತಂಡ ರಣಜಿ ಟ್ರೋಫಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಂಗಳವಾರ ಗುಜರಾತ್ ಎದುರು ಇನಿಂಗ್ಸ್ ಸೋಲು ಅನುಭವಿಸಿತ್ತು.

38 ವರ್ಷ ವಯಸ್ಸಿನ ಜಾಕ್ಸನ್ 105 ಪ್ರಥಮ ದರ್ಜೆ ಪಂದ್ಯಗಳಲ್ಲಿ 45ಕ್ಕೂ ಹೆಚ್ಚಿನ ಸರಾಸರಿಯಲ್ಲಿ 7,200ಕ್ಕೂ ಹೆಚ್ಚಿನ ರನ್ ಗಳಿಸಿದ್ದಾರೆ. ಅವರ ಅತ್ಯಧಿಕ ಗಳಿಕೆ 186. ಅವರು 21 ಶತಕ ಮತ್ತು 39 ಅರ್ಧ ಶತಕಗಳನ್ನು ಬಾರಿಸಿದ್ದಾರೆ.

2011ರಲ್ಲಿ ಪದಾರ್ಪಣೆ ಮಾಡಿದ್ದ ಅವರು ಉಪಯುಕ್ತ ಬ್ಯಾಟರ್ ಜೊತೆಗೆ ಅಮೋಘ ಫೀಲ್ಡರ್ ಕೂಡ ಆಗಿದ್ದರು. ನಿಯಮಿತ ಓವರುಗಳ ಪಂದ್ಯದಲ್ಲಿ ಅವರು ಸೌರಾಷ್ಟ್ರ ತಂಡಕ್ಕೆ ವಿಕೆಟ್ ಕೀಪರ್ ಕೂಡ ಆಗಿದ್ದರು.

ಗುಜರಾತ್ ವಿರುದ್ಧ ಕೊನೆಯ ರಣಜಿ ಪಂದ್ಯದಲ್ಲಿ ಅವರು 14 ಮತ್ತು 27 ರನ್ ಗಳಿಸಿದ್ದರು.



ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ ಸಭೆಯ ಬಳಿಕ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಶಾಸಕರ ಜೊತೆಗೂಡಿ ಹೊರಬಂದರು – ಪಿಟಿಐ ಚಿತ್ರ

ವದಂತಿ ತಳ್ಳಿಹಾಕಿದ ಮುಖ್ಯಮಂತ್ರಿ ಭಗವಂತ ಮಾನ್

ಭಿನ್ನಮತ: ಕೇಜ್ರಿವಾಲ್ ಸಭೆ

ಪ್ರಜಾವಾಣಿ ವಾರ್ತೆ

> **ಪಂಜಾಬ್‌ನಲ್ಲಿಯೂ ಅಧಿಕಾರ ಎಎಪಿ ಹಿಡಿತದಿಂದ ತ್ವರಿತಗತಿಯಲ್ಲಿ ಜಾರುತ್ತಿದೆ. ದಿನ ಕಳೆದಂತೆ ಅಲ್ಲಿಯೂ ಬಿಜೆಪಿಯ ನೆಲೆ ಭದ್ರವಾಗುತ್ತಿದೆ**
> **ತರುಣ್ ಚುಗ್,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> **ಕೇಜ್ರಿವಾಲ್ ಅವರು ತುರ್ತಾಗಿ ಸಭೆ ಕರೆದಿದ್ದರ ಸಂದೇಶ ಪಂಜಾಬ್‌ನಲ್ಲಿ ಆ ಪಕ್ಷ ವಿಭಜನೆ ಆಗಲಿದೆ, ಮಧ್ಯಂತರ ಚುನಾವಣೆ ನಡೆಯಲಿದೆ ಎಂಬುದೇ ಆಗಿದೆ**
> **ಸುಖ್‌ಜಿಂದರ್ ಸಿಂಗ್ ರಾಂಧವ,** ಕಾಂಗ್ರೆಸ್ ಹಿರಿಯ ಮುಖಂಡ

ನವದೆಹಲಿ: ದೆಹಲಿ ಚುನಾವಣೆಯಲ್ಲಿ ತೀವ್ರ ಹಿನ್ನಡೆಯಾದ ಹಿಂದೆಯೇ, ಆಮ್ ಆದ್ಮಿ ಪಕ್ಷದ (ಎಎಪಿ) ಪಂಜಾಬ್ ರಾಜ್ಯ ಘಟಕದಲ್ಲೂ ಭಿನ್ನಮತ ಕಾಣಿಸಿದೆ ಎಂಬ ವದಂತಿ ಹಬ್ಬಿದ್ದು, ಇದನ್ನು ಅಲ್ಲಗಳೆದು ಒಗ್ಗಟ್ಟು ಪ್ರದರ್ಶಿಸುವ ಕ್ರಮವಾಗಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್, ಇಲ್ಲಿ ಶಾಸಕರ ಸಭೆಯನ್ನು ನಡೆಸಿದರು.

ಮುಖ್ಯಮಂತ್ರಿ ಭಗವಂತ ಮಾನ್ ಮತ್ತು ಪಂಜಾಬ್‌ನ ಪಕ್ಷದ ಸಚಿವರು, ಶಾಸಕರು ಸಭೆಯಲ್ಲಿ ಭಾಗವಹಿಸಿದ್ದರು. ಬಳಿಕ ಮಾತನಾಡಿದ ಭಗವಂತ ಮಾನ್, ‘ಪಕ್ಷಾಂತರ ಕಾಂಗ್ರೆಸ್‌ನ ಸಂಸ್ಕೃತಿ, ಆಮ್ ಆದ್ಮಿ ಪಕ್ಷದ್ದಲ್ಲ. ಕಾಂಗ್ರೆಸ್‌ಗೆ ಪಕ್ಷಾಂತರದ ಇತಿಹಾಸವೇ ಇದೆ’ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

‘ಎಎಪಿ ಶಾಸಕರಿಗೆ ಬದ್ಧತೆ ಇದೆ. ಅವರಿಗೆ ಅಧಿಕಾರದ ದಾಹವಿಲ್ಲ. ಕಾಂಗ್ರೆಸ್‌ನವರು ಎಎಪಿ ಬಗ್ಗೆ ಚಿಂತಿಸದೆ ದೆಹಲಿಯಲ್ಲಿ ಅವರ ಪಕ್ಷದ ಎಷ್ಟು ಶಾಸಕರಿದ್ದಾರೆ ಎಂದು ಗಮನಿಸಲಿ’ ಎಂದು ಮಾನ್ ತಿರುಗೇಟು ನೀಡಿದರು.

‘ಎಎಪಿಯ 30 ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ’ ಎಂದು ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಪ್ರತಾಪ್ ಸಿಂಗ್ ಬಜ್ವಾ ಅವರು ನೀಡಿದ್ದ ಹೇಳಿಕೆಗೆ, ‘ಬಾಜ್ವಾ ಅವರು ಈಗ ನಮ್ಮ ಶಾಸಕರ ಲೆಕ್ಕ ಇಡುವುದು ಬೇಡ. ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಎಷ್ಟಿದ್ದಾರೆ ಎಂದು ಎಣಿಸಿಕೊಳ್ಳಲಿ’ ಎಂದರು.

‘ಬಾಜ್ವಾ, ಸಿ.ಎಂ ಅಭ್ಯರ್ಥಿಯಲ್ಲ’ ಎಂದು ಘೋಷಿಸಿದ ದಿನ ಅವರೇ ಬಿಜೆಪಿಗೆ ಸೇರಲಿದ್ದಾರೆ’ ಎಂದರು.

ದೆಹಲಿ ಚುನಾವಣೆಯಲ್ಲಿ ಪ್ರಚಾರ ನಡೆಸಿದ್ದಕ್ಕಾಗಿ ಕೇಜ್ರಿವಾಲ್ ಅವರು ಪಂಜಾಬ್‌ನ ಪಕ್ಷದ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿದರು. ಇಡೀ ದೇಶಕ್ಕೆ ಮಾದರಿ ಆಗುವಂತೆ ನಾವು ಪಂಜಾಬ್ ಅನ್ನು ರೂಪಿಸಲಿದ್ದೇವೆ’ ಎಂದರು.

ಮಣಿಪುರದಲ್ಲಿ ಬಿಜೆಪಿ ಶಾಸಕರ ಜೊತೆ ಚರ್ಚಿಸಿದ ಉಸ್ತುವಾರಿ ಸಂಬಿತ್ ಪಾತ್ರಾ

‘ನೂತನ ಮುಖ್ಯಮಂತ್ರಿ ವರಿಷ್ಠರ ತೀರ್ಮಾನ’



ಸಂಬಿತ್ ಪಾತ್ರಾ

ಇಂಫಾಲ್ (ಪಿಟಿಐ): ಮಣಿಪುರದ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ ಎಂದು ಬಿಜೆಪಿ ಶಾಸಕರಾದ ಸಪಮ್ ಕೇಬಾ ಮತ್ತು ಕೆ. ಇಬೊಮ್‌ಚಾ ಮಂಗಳವಾರ ಹೇಳಿದರು.

ಬಿಜೆಪಿ ಈಶಾನ್ಯ ರಾಜ್ಯಗಳ ಉಸ್ತುವಾರಿ ಸಂಬಿತ್ ಪಾತ್ರಾ ಅವರ ಜೊತೆ ಮಾತುಕತೆ ನಡೆಸಿದ ಈ ಇಬ್ಬರು ಶಾಸಕರು, ರಾಜ್ಯದಲ್ಲಿ ಶಾಂತಿ ನೆಲಸುವಂತೆ ಮಾಡಲು ಪ್ರಯತ್ನ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ತಾವು ಮನವಿ ಮಾಡಿದ್ದಾಗಿ ತಿಳಿಸಿದರು.

ಹೊಸ ಮುಖ್ಯಮಂತ್ರಿ ಆಯ್ಕೆಗೆ ಕಾಲಮಿತಿ ಇದೆಯೇ ಎಂಬ ಪ್ರಶ್ನೆಗೆ ಕೇಬಾ ಅವರು, ‘ಆ ಕುರಿತು ನಾವು ಚರ್ಚೆ ನಡೆಸಲಿಲ್ಲ’ ಎಂದರು. ‘ಎಲ್ಲವೂ ಕೇಂದ್ರದ ಕೈಯಲ್ಲಿದೆ. ನಾವು ಯಾವುದೇ ಹೇಳಿಕೆ ನೀಡಲಾಗದು. ನಾವು ಸೌಜನ್ಯದ ಭೇಟಿಗಾಗಿ ಇಲ್ಲಿದ್ದೇವೆ’ ಎಂದು ಇಬೊಮ್‌ಚಾ ಹೇಳಿದರು.

ಬಿರೇನ್ ಸಿಂಗ್ ಅವರು ಮಣಿಪುರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಪಾತ್ರಾ ಅವರು ಮಣಿಪುರದಲ್ಲೇ ಠಿಕಾಣಿ ಹೂಡಿದ್ದಾರೆ. ಪಕ್ಷದ ಹಲವು ಶಾಸಕರು, ಸಚಿವರು ಮತ್ತು ಸ್ಪೀಕರ್ ಜೊತೆ ಸಭೆ ನಡೆಸಿದ್ದಾರೆ.

ಸಂಘರ್ಷಕ್ಕೆ ತುತ್ತಾಗಿರುವ ರಾಜ್ಯದಲ್ಲಿ ಶಾಂತಿ ಮತ್ತೆ ನೆಲಸುವಂತೆ ಮಾಡುವ ಬಗ್ಗೆ ಸೋಮವಾರದ ಸಭೆಗಳಲ್ಲಿ ಚರ್ಚೆಯಾಗಿದೆ. ಹೊಸ ಮುಖ್ಯಮಂತ್ರಿ ಆಯ್ಕೆಯ ಬಗ್ಗೆ ಹೆಚ್ಚು ಮಾತುಕತೆ ನಡೆದಿಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

ರಾಜ್ಯಪಾಲರ ಭೇಟಿ: ಸಂಬಿತ್ ಪಾತ್ರಾ ಅವರು ಬಿಜೆಪಿ ಮಣಿಪುರ ಘಟಕದ ಅಧ್ಯಕ್ಷೆ ಎ. ಶಾರದಾದೇವಿ ಅವರೊಂದಿಗೆ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿ ಮಾಡಿ, ಸುಮಾರು ಅರ್ಧ ಗಂಟೆ ಚರ್ಚೆ ನಡೆಸಿದರು.

ಗಾಳಿಸುದ್ದಿ ನಂಬದಿರಿ ಮಣಿಪುರ ಸರ್ಕಾರ

ರಾಜ್ಯದ ಶಾಂತಿ ಮತ್ತು ಸೌಹಾರ್ದವನ್ನು ಕೆಡಿಸುವಂತಹ ಗಾಳಿಸುದ್ದಿಗಳನ್ನು ಅಥವಾ ತಪ್ಪು ಮಾಹಿತಿಗಳನ್ನು ನಂಬಬಾರದು ಎಂದು ಮಣಿಪುರ ಸರ್ಕಾರವು ಸಾರ್ವಜನಿಕರಿಗೆ ಮಂಗಳವಾರ ಮನವಿ ಮಾಡಿದೆ.

ತಪ್ಪು ಮಾಹಿತಿ, ಪ್ರಚೋದನಕಾರಿ ಮಾಹಿತಿ ಮತ್ತು ತಿರುಚಿದ ವಿವರಗಳನ್ನು ಬಳಸಿಕೊಂಡು ಕೆಲವು ನೀತಿಗೆಟ್ಟ ವ್ಯಕ್ತಿಗಳು ಹಾಗೂ ಗುಂಪುಗಳು ರಾಜ್ಯದಲ್ಲಿ ಅಶಾಂತಿ ಸೃಷ್ಟಿಸಲು, ಸೌಹಾರ್ದವನ್ನು ಕೆಡಿಸಲು, ಸಾರ್ವಜನಿಕರಿಗೆ ಭೀತಿ ಮೂಡಿಸಲು ಉದ್ದೇಶಪೂರ್ವಕವಾಗಿ ಯತ್ನಿಸಬಹುದು ಎಂಬ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ಕೆ. ಸಿಂಗ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜನರಿಗೆ ನಿಖರವಾದ ಮಾಹಿತಿ ಸಿಗುವಂತೆ ಆಗಬೇಕು ಎಂಬ ಉದ್ದೇಶದಿಂದ ಸರ್ಕಾರವು ನಿಯಂತ್ರಣ ಕೇಂದ್ರ ಆರಂಭಿಸಿದೆ. ಸಾರ್ವಜನಿಕರು ತಮಗೆ ಬರುವ ಯಾವುದೇ ಸುದ್ದಿಯ, ಸಿಗುವ ಮಾಹಿತಿಯ ಸತ್ಯಾಸತ್ಯತೆಯನ್ನು ಅಲ್ಲಿ ಪರಿಶೀಲಿಸಬಹುದು ಎಂದು ಸಿಂಗ್ ಹೇಳಿದ್ದಾರೆ.

ಪತ್ರಕರ್ತನ ಅಪಹರಣ, ಬಿಡುಗಡೆ

ಮಣಿಪುರದ ಹಿರಿಯ ಪತ್ರಕರ್ತ ಯಾಂಬೆನ್ ಲಾಬಾ ಅವರನ್ನು ಮಂಗಳವಾರ ನಸುಕಿನಲ್ಲಿ ಅಪಹರಿಸಿದ ನಿಷೇಧಿತ ಸಂಘಟನೆಯೊಂದು, ಅವರು ಕ್ಷಮೆ ಯಾಚಿಸಿದ ನಂತರ ಬಿಡುಗಡೆ ಮಾಡಿದೆ ಎನ್ನಲಾಗಿದೆ.

ಈ ಸಂಘಟನೆಯನ್ನು ಲಾಬಾ ಅವರು ‘ಶರಣಾಗಿರುವ ಗುಂಪು’ ಎಂದು ಕರೆದಿದ್ದರು. ಮಾಧ್ಯಮ ಚರ್ಚೆಯೊಂದರಲ್ಲಿ ಭಾಗಿಯಾಗಿದ್ದ ಲಾಬಾ ಅವರು ಈ ಮಾತು ಹೇಳಿದ್ದರು ಎನ್ನಲಾಗಿದೆ.

ನಸುಕಿನ 3 ಗಂಟೆಯ ಸಮಯದಲ್ಲಿ ಲಾಬಾ ಮನೆ ಬಳಿಗೆ ಬಂದ ಶಸ್ತ್ರಧಾರಿಗಳ ಗುಂಪು, ಅವರನ್ನು ಬಲವಂತವಾಗಿ ತಮ್ಮೊಂದಿಗೆ ಕರೆದೊಯ್ಯಿತು. ಘಟನೆ ಕುರಿತು ಲಾಬಾ ಅವರ ಕುಟುಂಬದ ಸದಸ್ಯರು ಪೊಲೀಸರಿಗೆ ದೂರು ನೀಡಿದ್ದಾರೆ.

‘ಸಂವಿಧಾನ ಉಲ್ಲಂಘಿಸುತ್ತಿರುವ ರಾಜ್ಯಪಾಲ’



ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ವಿಧಾನಸಭೆಯ ಎರಡು ಅಧಿವೇಶನಗಳ ನಡುವೆ ಆರು ತಿಂಗಳುಗಳಿಗಿಂತ ಹೆಚ್ಚಿನ ಅಂತರ ಇರುವಂತಿಲ್ಲ ಎಂದು ಸಂವಿಧಾನದ 174(1)ನೇ ವಿಧಿಯು ಹೇಳುತ್ತದೆ ಯಾದರೂ, ಸಾಂವಿಧಾನಿಕವಾಗಿ ಕಡ್ಡಾಯವಾಗಿರುವ ಅಧಿವೇಶನವನ್ನು ಕರೆಯದೆ ಇರುವ ಮೂಲಕ ಮಣಿಪುರ ರಾಜ್ಯಪಾಲರು ಈ ವಿಧಿಯನ್ನು ಉಲ್ಲಂಘಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

‘ಸಂವಿಧಾನದ ಪ್ರಕಾರ ಕಡ್ಡಾಯವಾಗಿ ನಡೆಯಲೇಬೇಕಿರುವ ಮಣಿಪುರ ವಿಧಾನಸಭೆಯ ಅಧಿವೇಶನಕ್ಕೆ ಇಂದು (ಮಂಗಳವಾರ) ಕಡೆಯ ದಿನ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಹಿಂದಿನ ಅಧಿವೇಶನದ ಕಡೆಯ ದಿನ ಹಾಗೂ ನಂತರದ ಅಧಿವೇಶನದ ಮೊದಲ ದಿನದ ನಡುವೆ ಆರು ತಿಂಗಳುಗಳಿಗಿಂತ ಹೆಚ್ಚಿನ ಅಂತರ ಇರುವಂತಿಲ್ಲ ಎಂದು 174(1)ನೆಯ ವಿಧಿಯು ಹೇಳುತ್ತದೆ ಎಂದು ರಮೇಶ್ ವಿವರಿಸಿದ್ದಾರೆ. ‘ಮಣಿಪುರ ವಿಧಾನಸಭಾ ಅಧಿವೇಶನ ಕರೆಯದೆ ಇರುವ ಮೂಲಕ ರಾಜ್ಯಪಾಲರು 174(1)ನೆಯ ವಿಧಿಯನ್ನು ಉಲ್ಲಂಘಿಸುತ್ತಿರುವುದು ಏಕೆ’ ಎಂದು ಪ್ರಶ್ನಿಸಿದ್ದಾರೆ.

ಮಣಿಪುರ ಮುಖ್ಯಮಂತ್ರಿ ಸ್ಥಾನಕ್ಕೆ ಎನ್. ಬಿರೇನ್ ಸಿಂಗ್ ಅವರು ರಾಜೀನಾಮೆ ನೀಡಿದ ಎರಡು ದಿನಗಳ ನಂತರ ರಮೇಶ್ ಅವರು ಈ ಪ್ರಶ್ನೆ ಎತ್ತಿದ್ದಾರೆ.

ಮಣಿಪುರದಲ್ಲಿ ಬಜೆಟ್ ಅಧಿವೇಶನ ಸೋಮವಾರದಿಂದ ಆರಂಭ ಆಗಬೇಕಿತ್ತು. ಆದರೆ, ಸಿಂಗ್ ರಾಜೀನಾಮೆ ನೀಡಿದ ನಂತರ, ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರು ಅಧಿವೇಶನ ಆರಂಭಕ್ಕೆ ನೀಡಿದ್ದ ಆದೇಶವನ್ನು ಹಿಂಪಡೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಿಆರ್‌ಪಿಎಫ್ ಯೋಧರಿಗೆ ಗಾಯ

ದಾಂತೇವಾಡ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಕಚ್ಚಾ ಬಾಂಬ್ ಸ್ಫೋಟಿಸಿ ಮಂಗಳವಾರ ಸಿಆರ್‌ಪಿಎಫ್‌ನ ಇಬ್ಬರು ಯೋಧರು ಗಾಯಗೊಂಡಿದ್ದಾರೆ.

‘ಇಲ್ಲಿನ ಜಗರ್‌ಗುಂಡಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಅರೆಸೇನಾ ಪಡೆ ಶಿಬಿರದ ಸಮೀಪ, ಯೋಧರು ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಈ ಸ್ಫೋಟ ಸಂಭವಿಸಿದೆ’ ಎಂದು ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಕೆ. ಬರ್ಮನ್ ತಿಳಿಸಿದರು.

ಕಮಾಂಡೊ ಬಲಿ

ಗಡ್‌ಚಿರೋಲಿ (ಪಿಟಿಐ): ಮಹಾರಾಷ್ಟ್ರದ ಗಡ್‌ಚಿರೋಲಿ ಜಿಲ್ಲೆಯಲ್ಲಿ ಮಂಗಳವಾರ ನಕ್ಸಲರ ಜತೆ ನಡೆದ ಗುಂಡಿನ ಚಕಮಕಿಯಲ್ಲಿ ಸಿ– 60 ಕಮಾಂಡೊ ಘಟಕದ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ.

ಫೈರಂಗಿ ಮತ್ತು ಫುಲ್ನರ್ ಗ್ರಾಮಗಳ ನಡುವೆ ನಕ್ಸಲರು ಶಿಬಿರ ಹೂಡಿರುವ ಬಗ್ಗೆ ಲಭಿಸಿದ ಗುಪ್ತಚರ ಮಾಹಿತಿ ಆಧರಿಸಿ ಸೋಮವಾರ 18 ಸಿ -60 ಘಟಕಗಳು ಮತ್ತು ಸಿಆರ್‌ಪಿಎಫ್‌ನ 2 ಕ್ಯುಎಟಿ ಘಟಕಗಳು ಕಾರ್ಯಾಚರಣೆ ನಡೆಸಿದವು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಧಿಕಾರಿ ಸೇರಿ ಇಬ್ಬರು ಯೋಧರು ಹುತಾತ್ಮ

ಶ್ರೀನಗರ: ಜಮ್ಮುವಿನ ಅಖನೂರ್‌ನಲ್ಲಿ ಮಂಗಳವಾರ ಸುಧಾರಿತ ಕಚ್ಚಾ ಬಾಂಬ್ ಸ್ಫೋಟಿಸಿ ಸೇನಾಧಿಕಾರಿ ಸೇರಿದಂತೆ ಇಬ್ಬರು ಯೋಧರು ಮೃತಪಟ್ಟಿದ್ದಾರೆ.

‘ಅಖನೂರ್‌ನ ಲಲೆಅಲಿಯಲ್ಲಿ ಸುಧಾರಿತ ಬಾಂಬ್ ಸ್ಫೋಟಿಸಿ ಗಸ್ತು ತಿರುಗುತ್ತಿದ್ದ ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ’ ಎಂದು ಸೇನೆಯ ವೈಟ್ ಕೋರ್ ‘ಎಕ್ಸ್’ನಲ್ಲಿ ತಿಳಿಸಿದೆ.

‘ಸೇನಾ ನೆಲೆಯ ಸಮೀಪವೇ ಈ ಸ್ಫೋಟ ಸಂಭವಿಸಿದ್ದು, ಮೂವರು ಯೋಧರು ಗಾಯಗೊಂಡಿದ್ದಾರೆ. ಕಾರ್ಯಾಚರಣೆ ಮುಂದುವರಿದಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಕ್ರಿಯಿಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ

ಇವಿಎಂ ದತ್ತಾಂಶ ಅಳಿಸಬೇಡಿ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಖ್ಯಾಂಶಗಳು

- ಎಡಿಆರ್ ಸಲ್ಲಿಸಿರುವ ಅರ್ಜಿಯ ವಿಚಾರಣೆ
- ಆಯೋಗದ ಎಸ್‌ಒಪಿ ‘ಸುಪ್ರೀಂ’ ತೀರ್ಪಿಗೆ ಅನುಗುಣವಾಗಿಲ್ಲ: ವಾದ
- ಎಡಿಆರ್ ಪರ ಹಾಜರಾದ ವಕೀಲ ಪ್ರಶಾಂತ ಭೂಷಣ್

ನವದೆಹಲಿ: ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಪರಿಶೀಲನಾ ಪ್ರಕ್ರಿಯೆ ಸಂದರ್ಭದಲ್ಲಿ ಅದರಲ್ಲಿನ ದತ್ತಾಂಶಗಳನ್ನು ಅಳಿಸಬೇಡಿ ಅಥವಾ ರಿಲೋಡ್ ಮಾಡಬೇಡಿ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಇವಿಎಂನ ಮೈಕ್ರೋಕಂಟ್ರೋಲರ್ ಮತ್ತು ‘ಸಿಂಬಲ್ ಲೋಡಿಂಗ್‌ಯೂನಿಟ್’ಗಳನ್ನು (ಎಸ್‌ಎಲ್‌ಯು) ಪರಿಶೀಲಿಸಲು ಅನುಮತಿ ನೀಡುವಂತೆ ಕೋರಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಯು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಅವರನ್ನೊಳಗೊಂಡ ಪೀಠವು ಈ ಸೂಚನೆ ನೀಡಿದೆ.

ಇವಿಎಂಗಳ ಪರಿಶೀಲನೆಗೆ ಆಯೋಗವು ರೂಪಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನವು (ಎಸ್‌ಒಪಿ), ಸುಪ್ರೀಂ ಕೋರ್ಟ್ 2024ರ ಏಪ್ರಿಲ್ 26ರಂದು ನೀಡಿರುವ ತೀರ್ಪಿಗೆ ಅನುಗುಣವಾಗಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದ್ದು, ಆ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿದೆ.



ಎಡಿಆರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಶಾಂತ ಭೂಷಣ್, ಇವಿಎಂಗಳ ಪರಿಶೀಲನೆಗೆ ಸಂಬಂಧಿಸಿದ ಆಯೋಗದ ಎಸ್‌ಒಪಿಗಳು ನ್ಯಾಯಾಲಯದ ತೀರ್ಪಿನ ಪ್ರಕಾರ ಇಲ್ಲ. ಆಯೋಗವು 2024ರ ಜೂನ್ 1 ಮತ್ತು ಜು.16ರಂದು ಹೊರಡಿಸಿರುವ ಎಸ್‌ಒಪಿಗಳು ಇವಿಎಂಗಳ ಬರ್ನ್ಟ್ ಮೆಮೊರಿ ಅಥವಾ ಮೈಕ್ರೋಕಂಟ್ರೋಲರ್ ಮತ್ತು ಎಸ್‌ಎಲ್‌ಯುಗಳನ್ನು ಪರಿಶೀಲಿಸಲು ಸಾಕಷ್ಟು ಮಾರ್ಗಸೂಚಿಗಳನ್ನು ಹೊಂದಿಲ್ಲ ಎಂದು ಪೀಠಕ್ಕೆ ತಿಳಿಸಿದರು.

‘ಮತದಾನದ ದತ್ತಾಂಶವನ್ನು ಅಳಿಸುವುದು ತನ್ನ ತೀರ್ಪಿನಲ್ಲಿರುವ ನಿರ್ದೇಶನ ಅಲ್ಲ’ ಎಂದು ಪೀಠವು ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ಮಣಿಂದರ್ ಸಿಂಗ್ ಅವರಿಗೆ ತಿಳಿಸಿತು.

‘ಫಲಿತಾಂಶದ ಬಗ್ಗೆ ಅಭ್ಯರ್ಥಿಗಳಿಗೆ ತಕರಾರು ಇದ್ದರೆ, ಇವಿಎಂಗಳಲ್ಲಿನ ಬರ್ನ್ಟ್ ಮೆಮೊರಿಯನ್ನು ಇವಿಎಂ ತಯಾರಕ ಕಂಪನಿಯ ಎಂಜಿನಿಯರ್‌ಗಳು ಅಭ್ಯರ್ಥಿಗಳ ಎದುರು ಪರಿಶೀಲಿಸಬೇಕು. ನೀವು ದತ್ತಾಂಶವನ್ನು ಏಕೆ ಅಳಿಸುತ್ತೀರಿ’ ಎಂದು ಪ್ರಶ್ನಿಸಿದ ಪೀಠ, ಮುಂದಿನ ವಿಚಾರಣೆಯನ್ನು ಮಾರ್ಚ್ 3ರ ಬಳಿಕ ಕೈಗೆತ್ತಿಕೊಳ್ಳುವುದಾಗಿ ಹೇಳಿತು.

ಮಣಿಪುರ: 9 ಉಗ್ರರ ಬಂಧನ, ಶಸ್ತ್ರಾಸ್ತ್ರ ವಶ

ಇಂಫಾಲ್ (ಪಿಟಿಐ): ಮಣಿಪುರದ ಪಶ್ಚಿಮ ಇಂಫಾಲ್ ಮತ್ತು ಟೆಂಗ್‌ನೌಪಾಲ್ ಜಿಲ್ಲೆಗಳಿಂದ ಒಂಬತ್ತು ಭಯೋತ್ಪಾದಕರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ನಿಷೇಧಿತ ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷದ (ಅಪುನ್‌ಬಾ) ಸಂಘಟನೆಗೆ ಸೇರಿದ ಇಬ್ಬರು ಉಗ್ರರನ್ನು ಪಶ್ಚಿಮ ಇಂಫಾಲ್ ಜಿಲ್ಲೆಯ ರೂಪಮಹಲ್ ಟ್ಯಾಂಕ್ ಎಂಬಲ್ಲಿ ಸೋಮವಾರ ಬಂಧಿಸಲಾಗಿದೆ. ಈ ಉಗ್ರರು ರೂಪಮಹಲ್ ಟ್ಯಾಂಕ್ ಪ್ರದೇಶದಲ್ಲಿ ಸುಲಿಗೆ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಟೆಂಗ್‌ನೌಪಾಲ್ ಜಿಲ್ಲೆಯಲ್ಲಿ ಭಾನುವಾರ ನಡೆದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್ (ಕೊಯಿರೆಂಗ್) ಮತ್ತು ಪ್ರೀಪಾಕ್ ಸಂಘಟನೆಗೆ ಸೇರಿದ ಇಬ್ಬರನ್ನು ಹಾಗೂ ನಿಷೇಧಿತ ಕೆಸಿಪಿ (ತಾಯ್‌ಬಂಗನ್‌ಬಾ) ಗುಂಪಿನ ಐವರು ಸದಸ್ಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರ ಬಳಿಯಿದ್ದ ಒಂದು ಎಲ್‌ಎಂಜಿ ರೈಫಲ್, ಒಂದು ಎಸ್‌ಎಲ್‌ಆರ್ ರೈಫಲ್, ಎರಡು ಐಎನ್‌ಎಸ್‌ಎಸ್ ರೈಫಲ್‌ಗಳು, ಒಂದು ಎಕೆ–47 ರೈಫಲ್ ಜೊತೆಗೆ 14 ಸುತ್ತಿನ ಮ್ಯಾಗಜಿನ್‌ಗಳು, ಸ್ಫೋಟಕಗಳು ಮತ್ತು ಇತರ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ.

ಜ್ಯೋತಿಗೆ ಚಿನ್ನ, ಕನ್ನಡತಿ ಉನ್ನತಿಗೆ ಬೆಳ್ಳಿ

ಡೆಹ್ರಾಡೂನ್ (ಪಿಟಿಐ): ಒಲಿಂಪಿಯನ್ ಜ್ಯೋತಿ ಯರಾಜಿ ಮತ್ತು ಕರ್ನಾಟಕದ ಉದಯೋನ್ಮುಖ ಅಥ್ಲೀಟ್ ಉನ್ನತಿ ಅಯ್ಯಪ್ಪ ಅವರು 38ನೇ ರಾಷ್ಟ್ರೀಯ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ ಮಹಿಳೆಯರ 200 ಮೀಟರ್ಸ್ ಓಟದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಜಯಿಸಿದರು.

ಮಂಗಳವಾರ ಇಲ್ಲಿ ನಡೆದ ಸ್ಪರ್ಧೆಯಲ್ಲಿ ಆಂಧ್ರಪ್ರದೇಶದ 25 ವರ್ಷ ವಯಸ್ಸಿನ ಜ್ಯೋತಿ 23.35 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಜಯಿಸಿದರು. ಉನ್ನತಿ ಅಯ್ಯಪ್ಪ (23.70ಸೆ) ಮತ್ತು ತೆಲಂಗಾಣದ ನಿತ್ಯಾ ಗಂಧೆ (23.76ಸೆ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಈ ಕೂಟದಲ್ಲಿ ಜ್ಯೋತಿ ಅವರಿಗೆ ಇದು ಎರಡನೇ ಚಿನ್ನದ ಪದಕ. ಈ ಸಾಧನೆ ಮಾಡಿದ 3ನೇ ಅಥ್ಲೀಟ್ ಕೂಡ ಅವರಾಗಿದ್ದಾರೆ. 2023ರಲ್ಲಿ ಗೋವಾದಲ್ಲಿ ನಡೆದಿದ್ದ ಕೂಟದಲ್ಲಿ ಜ್ಯೋತಿ ಕಂಚು ಜಯಿಸಿದ್ದರು.

ಉನ್ನತಿ ಅವರು ಅನುಭವಿ ಅಥ್ಲೆಟಿಕ್ ಕೋಚ್ ಅಯ್ಯಪ್ಪ ಮತ್ತು ಒಲಿಂಪಿಯನ್ ಅಥ್ಲೀಟ್ ಪ್ರಮೀಳಾ ದಂಪತಿಯ ಮಗಳು. ಉನ್ನತಿಗೂ ತಂದೆ ಅಯ್ಯಪ್ಪ ಅವರೇ ತರಬೇತಿ ನೀಡುತ್ತಿದ್ದಾರೆ.

ಅನಿಮೇಶ್ ಹ್ಯಾಟ್ರಿಕ್: ಒಡಿಶಾದ ಅನಿಮೇಶ್ ಕುಜೂರ್ ಅವರು ಕೂಟದಲ್ಲಿ 3ನೇ ಚಿನ್ನದ ಪದಕ ಜಯಿಸಿದರು. ಪುರುಷರ 200 ಮೀಟರ್ಸ್ ಓಟದಲ್ಲಿ 20.58 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲಿಗರಾದರು. ಆದರೆ ಅವರಿಗೆ ರಾಷ್ಟ್ರೀಯ ಕ್ರೀಡಾಕೂಟದ ದಾಖಲೆ (20.55ಸೆ) ಸ್ವಲ್ಪದರಲ್ಲಿ ಕೈತಪ್ಪಿತು. ಈ ದಾಖಲೆಯನ್ನು 2022ರ ಕೂಟದಲ್ಲಿ ಅಸ್ಸಾಂ ರಾಜ್ಯದ ಅಮ್ಲನ್ ಬೋರ್ಗೋಹೈನ್ ನಿರ್ಮಿಸಿದ್ದರು.

ಈ ಕೂಟದಲ್ಲಿ ಶನಿವಾರ ನಡೆದಿದ್ದ 100 ಮೀ ಓಟ ಮತ್ತು ಭಾನುವಾರ 4X100) ಮೀ ರಿಲೆ ಓಟಗಳಲ್ಲಿಯೂ ಅನಿಮೇಶ್ ಮೊದಲಿಗರಾಗಿದ್ದರು.

ತಮಿಳುನಾಡಿನ ರಾಘುಲ್ ಕುಮಾರ್ ಜಿ (21.06ಸೆ) ಮತ್ತು ನಿತಿನ್ ಬಿ (21.07ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಚಂದಾಗೆ ಬಂಗಾರ: ದೆಹಲಿ ಮಧ್ಯಮ ಅಂತರದ ಓಟಗಾರ್ತಿ ಕೆ.ಎಂ. ಚಂದಾ ಅವರು ಮಹಿಳೆಯರ 800 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಜಯಿಸಿದರು. 2ನಿಮಿಷ, 00.82 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅವರು 2022ರಲ್ಲಿ ತಾವೇ ನಿರ್ಮಿಸಿದ್ದ ದಾಖಲೆ (2ನಿ,01.58ಸೆ) ಉತ್ತಮ ಪಡಿಸಿಕೊಂಡರು. ಚಂದಾ ಅವರು 1500 ಮೀಟರ್ಸ್ ವಿಭಾಗದಲ್ಲಿಯೂ ಚಿನ್ನದ ಪದಕ ಜಯಿಸಿದರು.



ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ಮಹಿಳೆಯರ 200 ಮೀ ಓಟದಲ್ಲಿ ಪದಕ ಗೆದ್ದವರು ;ಕರ್ನಾಟಕದ ಉನ್ನತಿ ಅಯ್ಯಪ್ಪ (ಬೆಳ್ಳಿ), ಆಂಧ್ರಪ್ರದೇಶದ ಜ್ಯೋತಿ ಯರಾಜಿ (ಚಿನ್ನ) ಮತ್ತು ತೆಲಂಗಾಣದ ನಿತ್ಯಾ ಗಂಧೆ (ಕಂಚು)

ರೇಸ್ ವಾಕ್: ಒಂಬತ್ತೂ ಅಥ್ಲೀಟ್‌ಗಳ ದಾಖಲೆ

ಬೆಳಿಗ್ಗೆ ನಡೆದ ಮಹಿಳೆಯರ ವಿಭಾಗದ 10 ಕಿ.ಮೀ ರೇಸ್ ವಾಕ್ ಸ್ಪರ್ಧೆಯಲ್ಲಿ ಸ್ಪರ್ಧಿಸಿದ್ದ 9 ಅಥ್ಲೀಟ್‌ಗಳು ದಾಖಲೆ ಬರೆದರು. 26 ವರ್ಷಗಳ ಹಿಂದೆ ನಿರ್ಮಾಣವಾಗಿದ್ದ ದಾಖಲೆಯನ್ನು ಅವರು ಉತ್ತಮಪಡಿಸಿಕೊಂಡರು.

ಒಟ್ಟು 11 ಅಥ್ಲೀಟ್‌ಗಳು ರೇಸ್ ವಾಕ್‌ನಲ್ಲಿ ಸ್ಪರ್ಧಿಸಿದ್ದರು. ಆದರೆ ಅದರಲ್ಲಿ ಇಬ್ಬರು ಅಂತಿಮ ಗೆರೆ ಮುಟ್ಟುವಲ್ಲಿ ಸಫಲರಾಗಲಿಲ್ಲ. ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರಿಯಾಂಕಾ ಗೋಸ್ವಾಮಿ ಅವರು ಹೆಸರು ನೋಂದಾಯಿಸಿದ್ದರು. ಆದರೆ, ಕಣಕ್ಕಿಳಿಯಲಿಲ್ಲ.

ಸ್ಪರ್ಧೆಯಲ್ಲಿ ಹರಿಯಾಣದ ರವೀನಾ ಅವರು 45.52 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಜಯಿಸಿದರು. ಇದರೊಂದಿಗೆ 1999ರಲ್ಲಿ ಇಂಫಾಲ್‌ದಲ್ಲಿ ನಡೆದಿದ್ದ ಕೂಟದಲ್ಲಿ ಮಣಿಪುರದ ವೈ. ಬಾಲಾದೇವಿ (51.56ಸೆ) ದಾಖಲೆಯನ್ನು ಅವರು ಮೀರಿದರು. ಇನ್ನೂ ಎಂಟು ಅಥ್ಲೀಟ್‌ಗಳೂ ರವೀನಾ ಅವರನ್ನು ಅನುಸರಿಸಿ ಹಳೆಯ ದಾಖಲೆಯನ್ನು ಮೀರಿದರು.

ಉತ್ತರಾಖಂಡದ ಶಾಲಿನಿ (46.12ಸೆ), ಉತ್ತರಪ್ರದೇಶದ ಮುನೀತಾ ಪ್ರಜಾಪತಿ (46.23ಸೆ), ತಮಿಳುನಾಡಿನ ಮೊಕಾವಿ ಮುತ್ತುರಥಿನಮ್ (46.23), ಉತ್ತರಾಖಂಡದ ಪಾಯಲ್ (47.36ಸೆ), ಉತ್ತರಾಖಂಡದ ರೇಷ್ಮಾ ಪಟೇಲ್ (48.16ಸೆ), ಉತ್ತರಾಖಂಡದ ಮಾನ್ಸಿ ನೇಗಿ (48.32ಸೆ), ಮಹಾರಾಷ್ಟ್ರದ ಸೇಜಲ್ ಸಿಂಗ್ (49.33ಸೆ) ಮತ್ತು ಹರಿಯಾಣದ ಮೋನಿಕಾ (51.45ಸೆ) ಅವರೂ ದಾಖಲೆ ಬರೆದರು.

ಮೇಘಾಲಯದಲ್ಲಿ ಮುಂದಿನ ಕೂಟ

ನವದೆಹಲಿ (ಪಿಟಿಐ): ಮೇಘಾಲಯವು 39ನೇ ವರ್ಷದ ರಾಷ್ಟ್ರೀಯ ಕ್ರೀಡೆಗಳ ಆತಿಥ್ಯವನ್ನು ವಹಿಸಲಿದೆ. ಇದು 2027ರ ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಯಬೇಕಾಗಿದೆ. ಈ ಬಗ್ಗೆ ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರು ಮೇಘಾಲಯದ ಮುಖ್ಯಮಂತ್ರಿ ಕೊನ್ರಾರ್ಡ್ ಸಂಗ್ಮಾ ಅವರಿಗೆ ಮಾಹಿತಿ ನೀಡಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ಬೂಮ್ರಾ ಅಲಭ್ಯ

ನವದೆಹಲಿ: ಬೆನ್ನು ನೋವಿನಿಂದ ಬಳಲಿರುವ ಭಾರತದ ತಾರಾ ವೇಗಿ ಜಸ್‌ಪ್ರೀತ್ ಬೂಮ್ರಾ ಮುಂಬರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಯಿಂದ ಹೊರ ನಡೆದಿದ್ದಾರೆ. ಬೂಮ್ರಾ ಬದಲು ಯುವ ಆಟಗಾರ ಹರ್ಷಿತ್ ರಾಣಾ ಅವರಿಗೆ ಆಯ್ಕೆ ಸಮಿತಿ ಮಣೆ ಹಾಕಿದೆ.

2022ರಲ್ಲಿ ಬೂಮ್ರಾ ಬೆನ್ನು ನೋವಿನ ಕಾರಣ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದರು. ಇತ್ತೀಚೆಗೆ ಸಿಡ್ನಿ ಟೆಸ್ಟ್‌ನ ಅಂತಿಮ ಪಂದ್ಯದಲ್ಲಿ ಬೌಲಿಂಗ್ ಮಾಡುವ ವೇಳೆ ಮತ್ತೆ ಬೆನ್ನು ನೋವಿಗೆ ಅವರು ಗುರಿಯಾಗಿದ್ದರು.

ಎನ್‌ಸಿಎ ನೀಡಿರುವ ವರದಿಯಲ್ಲಿ ಬೂಮ್ರಾ ಪುನಶ್ಚೇತನ ಶಿಬಿರ ಪೂರೈಸಿದ್ದಾರೆ ಆದರೆ ಟೂರ್ನಿ ವೇಳೆಗೆ ಫಿಟ್ ಆಗುತ್ತಾರೋ ಇಲ್ಲವೋ ಎನ್ನುವುದರ ಬಗ್ಗೆ ಮಾಹಿತಿ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಆಯ್ಕೆ ಸಮಿತಿ ಈ ನಿರ್ಧಾರಕ್ಕೆ ಬಂದಿದೆ ಎಂದು ತಿಳಿದು ಬಂದಿದೆ. ಆಯ್ಕೆ ಸಮಿತಿ ಬಿಡುಗಡೆ ಮಾಡಿರುವ ಸಂಭಾವ್ಯರ ಪಟ್ಟಿಯಲ್ಲಿ ವರುಣ್ ಚಕ್ರವರ್ತಿ ಮತ್ತು ಯಶಸ್ವಿ ಜೈಸ್ವಾಲ್ ಸ್ಥಾನ ಪಡೆದಿದ್ದಾರೆ.

ಕ್ರಿಕೆಟ್:ಸಂಕಷ್ಟದಲ್ಲಿ ಕರ್ನಾಟಕ

ಬೆಂಗಳೂರು: ಹಾಲಿ ಚಾಂಪಿಯನ್ ಕರ್ನಾಟಕ ತಂಡ, ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿ ಕ್ವಾರ್ಟರ್‌ಫೈನಲ್ ಪಂದ್ಯದ ಎರಡನೇ ದಿನ ಆತಿಥೇಯ ಪಂಜಾಬ್ ತಂಡದ ಕೊನೆಯ 6 ವಿಕೆಟ್‌ಗಳನ್ನು 84 ರನ್ನಿಗೆ ಪಡೆದರೂ ಆ ಸಂತಸ ಹೆಚ್ಚು ಕಾಲ ಉಳಿಯಲಿಲ್ಲ. ಪಂಜಾಬ್‌ನ 380 ರನ್ನಿಗೆ ಉತ್ತರವಾಗಿ ಮಂಗಳವಾರ ದಿನದಾಟದ ಕೊನೆಗೆ ಕರ್ನಾಟಕ 9 ವಿಕೆಟ್‌ಗೆ 172 ರನ್ ಗಳಿಸಿ ಶೋಚನೀಯ ಸ್ಥಿತಿಯಲ್ಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಂಜಾಬ್: 118.1 ಓವರುಗಳಲ್ಲಿ 380 (ಜಸ್ಕರಣ್‌ವೀರ್ ಸಿಂಗ್ 61, ಉದಯ್ ಸಹಾರನ್ 75, ಸಲೀಲ್ ಅರೋರಾ 52, ರಾಹುಲ್ ಕುಮಾರ್ 122; ಮನ್ವಂತ್ ಕುಮಾರ್ 48ಕ್ಕೆ2, ಯಶೋವರ್ಧನ ಪರಂತಾಪ್ 56ಕ್ಕೆ3, ಪಾರಸ್ ಗುರಭಕ್ಷ್ ಆರ್ಯ 63ಕ್ಕೆ3, ಕಾರ್ತಿಕೇಯ 74ಕ್ಕೆ2); ಕರ್ನಾಟಕ: 60 ಓವರುಗಳಲ್ಲಿ 9 ವಿಕೆಟ್‌ಗೆ 172 (ಮೆಕ್ನಿಲ್ 78, ಅನೀಶ್ವರ 35, ಕಾರ್ತಿಕೇಯ ಕೆ.ಪಿ. 26, ಆರ್ಯಮನ್ ಧಾಲಿವಾಲ್ 52ಕ್ಕೆ3, ಹರ್ಜಾಸ್ ಸಿಂಗ್ ಟಂಡನ್ 31ಕ್ಕೆ3).

ಮೈಸೂರು ರೇಸ್

‘ಆಶೀರ್ವಾದ್’ ಗೆಲ್ಲುವ ನಿರೀಕ್ಷೆ

ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಶೀರ್ವಾದ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಗೆನ್ಸ್ಟ್ ಆಲ್ ಆಡ್ಸ್ 2, ಅಂಕುಶ್ 4, ಅರಿಗಾಟೊ 7
2ನೇ ರೇಸ್: ಬ್ರೇಕ್ ಅವೇ 4, ಜಸ್ಟ್ ಬ್ಲೂಸ್ 8, ಎಲಿವಾಡೊ 5
3ನೇ ರೇಸ್: ಇಗ್ನೊರೆನ್ಸ್ ಈಸ್ ಬ್ಲಿಸ್ 4, ಟೂ ಹಾಟ್ ಟು ಟಚ್ 9, ಇನ್‌ಎಫ್ಫೆಬಲ್ 7
4ನೇ ರೇಸ್: ಕೋಡ್ ಆಫ್ ಹಾನರ್ 2, ಕ್ಲೈಡ್ ಸ್ಟಾರ್ 6, ಒನ್ ಡೈಮಂಡ್ 1
5ನೇ ರೇಸ್: ವರ್ದಾನ್ 8, ಸ್ಕ್ವೇರ್ ಕಟ್ 4, ಸರ್ ಕ್ಯಾಲ್ಯುಲಸ್ 2
6ನೇ ರೇಸ್: ಆಶೀರ್ವಾದ್ 3, ಎಟರ್ನಲ್ ಗ್ಲೋರಿ 4, ಪ್ರೆಟ್ಟಿ ಮೂವ್ 5
7ನೇ ರೇಸ್: ಸ್ಟ್ರೀಟ್ ಸೆನ್ಸ್ 12, ಹೀರೊಯಿಸ್ಮ್ 10, ಸ್ಟಾಗ್ಸ್ ಲೀಪ್ 7
8ನೇ ರೇಸ್: ಡಾಲೀಸ್ ಗೋಲ್ಡ್ 8, ಶೆರ್ಪಾ 3, ಡೆವಿಲ್ಸ್ ಡಿಲೈಟ್ 5

ಉತ್ತಮ ಬೆಟ್: ಡಾಲೀಸ್ ಗೋಲ್ಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ರೇಸ್:
4,5,6,7,8	1,2,3	3,4,5	6,7,8

ನಿಕಿ – ಸೋಹಾ ಜೋಡಿಗೆ ಬೆಳ್ಳಿ

ಡೆಹ್ರಾಡೂನ್: ಕರ್ನಾಟಕದ ನಿಕಿ ಪೂಣಚ್ಚ ಮತ್ತು ಸೋಹಾ ಸಾದಿಕ್ ಜೋಡಿ, ರಾಷ್ಟ್ರೀಯ ಕ್ರೀಡೆಗಳ ಟೆನಿಸ್ ಸ್ಪರ್ಧೆಗಳ ಮಿಶ್ರ ಡಬಲ್ಸ್‌ನಲ್ಲಿ ಮಂಗಳವಾರ ಬೆಳ್ಳಿ ಪದಕ ಗೆದ್ದುಕೊಂಡಿತು.

ತಮಿಳುನಾಡಿನ ಲೋಹಿತ್ ಅಕ್ಷ್ ಬದ್ರೀನಾಥ್ ಮತ್ತು ಲಕ್ಷ್ಮಿಪ್ರಭಾ ಅರುಣಕುಮಾರ್ ಅವರು ಚಿನ್ನ ಗೆದ್ದುಕೊಂಡರು.

ತಮಿಳುನಾಡಿನ ಜೋಡಿ 6–4, 6–1 ರಲ್ಲಿ ನೇರ ಸೆಟ್‌ಗಳಿಂದ ನಿಕಿ ಪೂಣಚ್ಚ– ಸೋಹಾ ಸಾದಿಕ್ ಜೋಡಿಯನ್ನು ಮಣಿಸಿತು.

ಹರಿಯಾಣದ ಸುನೀಲ್ ಕುಮಾರ್ ಮತ್ತು ಅದಿತಿ ರಾವತ್, ಪಶ್ಚಿಮ ಬಂಗಾಳದ ನಿತಿನ್ ಕುಮಾರ್ ಸಿನ್ಹಾ ಮತ್ತು ಯುವರಾಣಿ ಬ್ಯಾನರ್ಜಿ ಕಂಚಿನ ಪದಕ ಹಂಚಿಕೊಂಡರು.

ವೈದೇಹಿಗೆ ಎರಡನೇ ಸ್ವರ್ಣ: ಮಹಿಳೆಯರ ಸಿಂಗಲ್ಸ್‌ನಲ್ಲಿ ವೈದೇಹಿ ಚೌಧರಿ ಅವರು ಮಹಿಳಾ ಸಿಂಗಲ್ಸ್ ಚಿನ್ನವನ್ನೂ ಗೆದ್ದರು. ಮಂಗಳವಾರ ನಡೆದ ಫೈನಲ್‌ನಲ್ಲಿ ಅವರು ಮಹಾರಾಷ್ಟ್ರದ ವೈಷ್ಣವಿ ಅಡ್ಕರ್ ಅವರನ್ನು 6-4, 6-4 ರಲ್ಲಿ ನೇರ ಸೆಟ್‌ಗಳಿಂದ ಸೋಲಿಸಿದರು.

ಪುರುಷರ ಸಿಂಗಲ್ಸ್ ಸ್ವರ್ಣ ಸರ್ವಿಸಸ್‌ನ ಇಶಾಕ್ ಇಕ್ಬಾಲ್ ಪಾಲಾಯಿತು. ಅವರು ಫೈನಲ್‌ನಲ್ಲಿ ಹಿನ್ನಡೆಯಿಂದ ಚೇತರಿಸಿ ಗುಜರಾತ್‌ನ ದೇವ್ ಜೇವಿಯಾ ಅವರನ್ನು 3-6, 6-4, 7-6 (5) ರಿಂದ ಸೋಲಿಸಿದರು.

ಕರ್ನಾಟಕಕ್ಕೆ ಕಂಚು:

ಅಕ್ರೊಬ್ಯಾಟಿಕ್ ಮಿಶ್ರ ಪೇರ್ (ಸೀನಿಯರ್) ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ರಿಧ್ಧಿ ಸಚಿನ್ ಜೈಸ್ವಾಲ್ - ಶುಭಂ ಸರ್ಕತೆ ಚಿನ್ನ (64.650) ಗೆದ್ದುಕೊಂಡರು.

ಕೇರಳ (61.210) ಬೆಳ್ಳಿ ಮತ್ತು ಕರ್ನಾಟಕ (53.740) ಕಂಚಿನ ಪದಕ ಗಳಿಸಿದವು.